ಶನಿವಾರ, ಏಪ್ರಿಲ್ 26, 2025 | ₹ 7.00
www.prajavani.net


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

ಬೆಂಗಳೂರಿನಲ್ಲಿ ಚೆಪ್ಟೆಗಿ

ಬೆಂಗಳೂರಿನಲ್ಲಿ ಭಾನುವಾರ ನಡೆಯಲಿರುವ ಟಿಸಿಎಸ್ ವಿಶ್ವ 10ಕೆ ಓಟದಲ್ಲಿ ಭಾಗವಹಿಸಲು ಬಂದಿರುವ ಒಲಿಂಪಿಕ್ಸ್ ಅವಳಿ ಚಿನ್ನ ವಿಜೇತ, ಯುಗಾಂಡಾದ ದೂರ ಅಂತರದ ಓಟಗಾರ ಜೋಷುವಾ ಚೆಪ್ಟೆಗಿ ಶುಕ್ರವಾರ ಮಾಧ್ಯಮ ಸಂವಾದದಲ್ಲಿ ಪಾಲ್ಗೊಂಡರು





ಎಚ್‌ಡಿಕೆ ಟೌನ್‌ಶಿಪ್ ಪಿತಾಮಹ: ಡಿಕೆಶಿ

ಪ್ರಜಾವಾಣಿ ವಾರ್ತೆ

ಮೈಸೂರು/ ಮಂಡ್ಯ: 'ಬಿಡದಿ ಸೇರಿದಂತೆ ಏಳು ಕಡೆ ಟೌನ್‌ಶಿಪ್ ಮಾಡಲು ಹೊರಟಿದ್ದವರು ಹಾಗೂ ಆ ಯೋಜನೆಯ ಪಿತಾಮಹರೇ ಎಚ್.ಡಿ. ಕುಮಾರಸ್ವಾಮಿ. ಈಗ ಅವರ ಕುಟುಂಬದವರೇ ವಿರೋಧಿಸಿದರೆ ಯಾವ ನ್ಯಾಯ?' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

ಮೈಸೂರು ಹಾಗೂ ಮಂಡ್ಯದ ಕೆಆರ್‌ಎಸ್‌ನಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಎಚ್.ಡಿ.ದೇವೇಗೌಡರು ದೊಡ್ಡವರು, ಪಾಪ ಅವರು ಮರೆತಿರಬೇಕು. ಬಿಡದಿ, ಸಾತನೂರು, ನಂದಗುಡಿ ಈ ಭಾಗದಲ್ಲಿ ಟೌನ್‌ಶಿಪ್‌ಗೆ ಅಧಿಸೂಚನೆ ಹೊರಡಿಸಿದ್ದೇ ಅವರ ಸುಪುತ್ರ ಕುಮಾರಸ್ವಾಮಿ. ಅವರೇ ಈ ಬಗ್ಗೆ ತೀರ್ಮಾನಿಸಿ ಡಿ.ಎಲ್.ಎಫ್. ಅವರಿಂದ ₹300 ಕೋಟಿ ಕಟ್ಟಿಸಿಕೊಂಡಿದ್ದರು. ಆನಂತರ ಬಿಜೆಪಿ ಸರ್ಕಾರ ಬಂದಾಗ ಯೋಜನೆ ಸಾಧ್ಯವಿಲ್ಲವೆಂದು ಹೇಳಿ ಹಣ ವಾಪಸ್ ನೀಡಿದ್ದರು' ಎಂದು ನೆನಪಿಸಿದರು.

'ನಾನು ಈಗ ಯಾವುದೇ ಜಮೀನನ್ನೂ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು (ಡಿನೋಟಿಫಿಕೇಷನ್) ತಯಾರಿಲ್ಲ. ಹೀಗೆ ಮಾಡಿದ ತಕ್ಷಣ ದುಡ್ಡು-ಕಾಸು ಹೊಡೆದರು ಎನ್ನುವ ಆರೋಪ ಬರುತ್ತದೆ. ಈಗಾಗಲೇ ನಾನು ಕೋರ್ಟ್–ಕಚೇರಿ ಅಲೆದು, ಜೈಲು ವಾಸವನ್ನೂ ಅನುಭವಿಸಿದ್ದೇನೆ. ನನ್ನ ಸ್ವಂತ ಜಮೀನಿನ ಬಗ್ಗೆಯೂ ಇವರೇ ಆರೋಪ ಮಾಡಿದ್ದಾರೆ. ದೇವೇಗೌಡರೇ, ನಿಮ್ಮ ಮಗ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ, ಅವರೇ ಯಾಕೆ ಈ ಜಮೀನು ಡಿನೋಟಿಫಿಕೇಷನ್ ಮಾಡಲಿಲ್ಲ. ಈಗೇಕೆ ಮಾತನಾಡುತ್ತಿದ್ದೀರಿ' ಎಂದು ಪ್ರಶ್ನಿಸಿದರು. 'ಆಗ ನೀವು ಮಾಡಿದ್ದನ್ನು ನಾನೀಗ ಮುಂದುವರಿಸುತ್ತಿದ್ದೇನೆ' ಎಂದರು.

'ಗ್ರೇಟರ್ ಬೆಂಗಳೂರು ಪ್ರದೇಶ'ಕ್ಕೆ ಕೈಗಾರಿಕಾ ಪ್ರದೇಶಗಳು • 86ರಲ್ಲಿ ಶೇ 50ರಷ್ಟು ಗ್ರಾಮ ಪಂಚಾಯಿತಿಗಳ ಸೇರ್ಪಡೆ

ಗ್ರೇಟರ್: ಐದು ನಗರ ಪಾಲಿಕೆಗಳತ್ತ ಚಿತ್ತ

• ಆರ್. ಮಂಜುನಾಥ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿ ಬಿಬಿಎಂಪಿ ವ್ಯಾಪ್ತಿಗಿಂತ ದ್ವಿಗುಣಗೊಳ್ಳುವ ನಿರೀಕ್ಷೆಯಿದ್ದು, ನಗರದ ಸುತ್ತಮುತ್ತಲಿರುವ ಕೈಗಾರಿಕಾ ಪ್ರದೇಶಗಳನ್ನು ಒಳಗೊಳ್ಳುವ ಐದು ನಗರ ಪಾಲಿಕೆಗಳನ್ನು ರಚಿಸುವತ್ತ ಸರ್ಕಾರ ಚಿತ್ತಹರಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024 ಜಾರಿಯಾಗಿದ್ದು, ಸರ್ಕಾರ ಶೀಘ್ರವೇ ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯನ್ನು ಘೋಷಿಸಬೇಕಾಗಿದೆ. ರಾಜ್ಯಪಾಲರಿಂದ ಅಂಕಿತ ಸಿಗುವುದಕ್ಕಾಗಿ ಕಾಯುತ್ತಿದ್ದ ಸರ್ಕಾರ, ಈಗಾಗಲೇ ಬಹುತೇಕ ಅಂತಿಮಗೊಳಿಸಿರುವ ಗ್ರೇಟರ್ ಬೆಂಗಳೂರು ಪ್ರದೇಶಗಳ ಕುರಿತು ಆದಷ್ಟು ಬೇಗ ಅಧಿಸೂಚನೆ ಹೊರಡಿಸಲು ಸಜ್ಜಾಗುತ್ತಿದೆ.

'ಎಲೆಕ್ಟ್ರಾನಿಕ್ ಸಿಟಿ ಸೇರಿದಂತೆ ನಗರದ ಹೊರಭಾಗದ ಕೈಗಾರಿಕೆ ಪ್ರದೇಶಗಳು, ಅಭಿವೃದ್ಧಿ ಹೊಂದಿದ ಪ್ರದೇಶಗಳು ಪಾಲಿಕೆ ವ್ಯಾಪ್ತಿಗೆ ಬಂದರೆ ಆದಾಯ ವೃದ್ಧಿಯಾಗುತ್ತದೆ. ಆ ನಿಟ್ಟಿನಲ್ಲಿ ಆಲೋಚನೆ ನಡೆಸಲಾಗುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಒಂದೂವರೆ ವರ್ಷದ ಹಿಂದೆಯೇ ಹೇಳಿದ್ದರು. ಅದು ಈಗ 'ಗ್ರೇಟರ್ ಬೆಂಗಳೂರು ಪ್ರದೇಶ'ದಲ್ಲಿ ಸಾಕಾರಗೊಳ್ಳಲಿದೆ.

ಬೆಂಗಳೂರು ನಗರ ಜಿಲ್ಲೆ ಸೇರಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರದೇಶಗಳು ಹಾಗೂ ಸರ್ಕಾರ ಅಧಿಸೂಚಿಸುವ ಪ್ರದೇಶಗಳು 'ಗ್ರೇಟರ್ ಬೆಂಗಳೂರು ಪ್ರದೇಶ' ಎಂದಾಗುತ್ತವೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 86 ಗ್ರಾಮ ಪಂಚಾಯಿತಿಗಳು ಅಸ್ತಿತ್ವದಲ್ಲಿದ್ದು, ಇದರಲ್ಲಿ ಶೇ 50ರಷ್ಟು ಗ್ರಾಮ ಪಂಚಾಯಿತಿಗಳು ಸೇರಿದಂತೆ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಕೆಲವು ಪ್ರದೇಶಗಳೂ 'ಗ್ರೇಟರ್ ಬೆಂಗಳೂರು' ವ್ಯಾಪ್ತಿಗೆ ಸೇರಲಿವೆ ಎನ್ನಲಾಗಿದೆ.

ಬೆಂಗಳೂರು ನಗರದ ಸುತ್ತ ಆರು ಉಪ ನಗರಗಳನ್ನು ಅಭಿವೃದ್ಧಿಪಡಿಸುವ 'ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಅಭಿವೃದ್ಧಿ ಯೋಜನೆ'ಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1970 ಸೆಕ್ಷನ್ 15(1)(ಬಿ)ಯಂತೆ ಸಚಿವ ಸಂಪುಟ ಜನವರಿ 30ರಂದು ಸಮ್ಮತಿ ನೀಡಿದೆ. ಅದರಂತೆ, ಬಿಡದಿ ಸಮಗ್ರ ಉಪನಗರದ ಯೋಜನೆ ಜಾರಿಯಾಗಿದ್ದು, 10 ಸಾವಿರ ಎಕರೆ ಭೂ ಸ್ವಾಧೀನಕ್ಕೆ ಅಧಿಸೂಚನೆಯೂ ಆಗಿದೆ. ದೇವನಹಳ್ಳಿ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ, ಮಾಗಡಿ ಸಮಗ್ರ ಉಪ ನಗರ ಯೋಜನೆಗಳ ಪ್ರಕ್ರಿಯೆಗೆ ಚಾಲನೆ ಸಿಗಬೇಕಿದೆ.

ಈ ಆರು ಉಪ ನಗರಗಳ ನಡುವಿನ ಬಹುತೇಕ ಪ್ರದೇಶವನ್ನು 'ಗ್ರೇಟರ್ ಬೆಂಗಳೂರು ಪ್ರದೇಶ' ಎಂದು ಪರಿಗಣಿಸಿಯೇ, ಉಪ ನಗರಗಳ ಅಭಿವೃದ್ಧಿಗೆ ಸರ್ಕಾರ ಸಮ್ಮತಿ ನೀಡಿತ್ತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೂ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024'ಯಡಿಯೇ ಬರುವುದರಿಂದ ಬಿಡಿಎಯ ಎಲ್ಲ ಪ್ರದೇಶಗಳೂ 'ಗ್ರೇಟರ್ ಬೆಂಗಳೂರು ಪ್ರದೇಶ'ದ ವ್ಯಾಪ್ತಿಗೆ ಬರಲಿವೆ.

ಬಿಬಿಎಂಪಿ ಈಗ 708 ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿದ್ದು, ಇದಕ್ಕೆ 250 ಚದರ ಕಿಲೋಮೀಟರ್ ಪ್ರದೇಶ ಸೇರಿಸಿ ಸುಮಾರು 1050 ಚದರ ಕಿ.ಮೀ. ವ್ಯಾಪ್ತಿಯ 'ಗ್ರೇಟರ್ ಬೆಂಗಳೂರು' ಮಾಡಹುದು. 5 ಪಾಲಿಕೆ, ಪ್ರತಿ ಪಾಲಿಕೆಯಲ್ಲಿ ಎರಡು ವಲಯ, ಒಟ್ಟು 400 ವಾರ್ಡ್, ಪ್ರತಿ ಪಾಲಿಕೆಗೆ 80 ವಾರ್ಡ್‌ನಂತೆ ನಗರ ಪಾಲಿಕೆಗಳನ್ನು ರಚಿಸಬಹುದು ಎಂದು ಬಿಬಿಎಂಪಿ ಪುನರ್‌ರಚನೆ ಸಮಿತಿಯು (ಬ್ರ್ಯಾಂಡ್ ಬೆಂಗಳೂರು ಸಮಿತಿ) ವರದಿ ನೀಡಿತ್ತು. ಆದರೆ, ಗ್ರೇಟರ್ ಬೆಂಗಳೂರು ವ್ಯಾಪ್ತಿ ಇದಕ್ಕಿಂತ ಹೆಚ್ಚಾಗುವ ಸಾಧ್ಯತೆ ಇದೆ.

ಐದು ಉಪ ನಗರಗಳ ನಡುವಿನ ಸುಮಾರು 1,500 ಚದರ ಕಿ.ಮೀ. ವ್ಯಾಪ್ತಿ 'ಗ್ರೇಟರ್ ಬೆಂಗಳೂರು ಪ್ರದೇಶ' ಎಂದಾಗಲಿದೆ. ನಗರ ಪಾಲಿಕೆಗಳ ಗಡಿಗೆ ಐದು ಉಪ ನಗರಗಳು ಹೊಂದಿಕೊಂಡಂತೆ ರಚನೆಯಾಗುವುದರಿಂದ ನಗರ ಜಿಲ್ಲೆಯೊಂದಿಗೆ ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳೂ ಅತಿಹೆಚ್ಚು ಅಭಿವೃದ್ಧಿ ಕಾಣಲಿವೆ ಎಂದು ನಿರೀಕ್ಷಿಸಲಾಗಿದೆ.

6 ಉಪ ನಗರಗಳ ನಡುವೆ 'ಗ್ರೇಟರ್ ಬೆಂಗಳೂರು ಪ್ರದೇಶ'



ಅಸ್ತಿತ್ವ ಕಳೆದುಕೊಳ್ಳಲಿರುವ ಬಿಬಿಎಂಪಿ, ಗ್ರಾ.ಪಂ

ನಗರ ಪಾಲಿಕೆಗಳ ಗಡಿಯನ್ನು ಗುರುತಿಸಿ ಸರ್ಕಾರ ಕರಡು ಅಧಿಸೂಚನೆಯನ್ನು ಹೊರಡಿಸಿ, 30 ದಿನಗಳ ಆಕ್ಷೇಪಣೆಗೆ ಅವಕಾಶ ಮಾಡಿಕೊಡಬೇಕು. ಅಂತಿಮ ಅಧಿಸೂಚನೆ ಹೊರಡಿಸಿದ ಕೂಡಲೇ ಹೊಸ ನಗರ ಪಾಲಿಕೆಗಳ ವ್ಯಾಪ್ತಿಯ ಬಿಬಿಎಂಪಿ ಹಾಗೂ ಗ್ರಾಮ ಪಂಚಾಯಿತಿಗಳು ಅಸ್ತಿತ್ವ ಕಳೆದುಕೊಳ್ಳಲಿವೆ. ಹೊಸ ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬರುವವರೆಗೂ ಸರ್ಕಾರವೇ ಎಲ್ಲ ಹೊಣೆಗಾರಿಕೆಯನ್ನು ನಿರ್ವಹಿಸಲಿದೆ. ಮುಖ್ಯಮಂತ್ರಿ ನೇತೃತ್ವದಲ್ಲಿರುವ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ಎಲ್ಲ ಜವಾಬ್ದಾರಿ ಹೊಂದಲಿದೆ.

'ಗ್ರೇಟರ್ ಬೆಂಗಳೂರು ಪ್ರದೇಶ' ಗಡಿ ವ್ಯಾಪ್ತಿ

ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ ಕೈಗಾರಿಕೆ ಪ್ರದೇಶ, ಬೊಮ್ಮಸಂದ್ರ, ಸರ್ಜಾಪುರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ, ಮಾಕಳಿ, ತಾವರೆಕೆರೆ, ಕುಂಬಳಗೋಡು, ಕಗ್ಗಲಿಪುರ, ಹಾರೋಹಳ್ಳಿ.



30 ಲಕ್ಷ ಜನಸಂಖ್ಯೆಗೆ ಒಂದು ಪಾಲಿಕೆ

ನಗರದಲ್ಲಿ ಸುಮಾರು 1.50 ಕೋಟಿ ಜನಸಂಖ್ಯೆಯಿದ್ದು, 'ಗ್ರೇಟರ್ ಬೆಂಗಳೂರು ಪ್ರದೇಶ'ದಲ್ಲಿ ಸುಮಾರು 30 ಲಕ್ಷ ಜನಸಂಖ್ಯೆಗೊಂದು ನಗರ ಪಾಲಿಕೆಯನ್ನು ರಚಿಸುವ ಸಾಧ್ಯತೆಯಿದೆ. ಕಾಯ್ದೆಯಂತೆ 'ಬೆಂಗಳೂರು ಕೇಂದ್ರ ನಗರ ಪಾಲಿಕೆ', 'ಬೆಂಗಳೂರು ಉತ್ತರ ನಗರ ಪಾಲಿಕೆ', 'ಬೆಂಗಳೂರು ದಕ್ಷಿಣ ನಗರ ಪಾಲಿಕೆ', 'ಬೆಂಗಳೂರು ಪೂರ್ವ ನಗರ ಪಾಲಿಕೆ', 'ಬೆಂಗಳೂರು ಪಶ್ಚಿಮ ನಗರ ಪಾಲಿಕೆ' ಎಂದು ಹೆಸರಿಸಲಾಗುತ್ತದೆ.

ಮೂರು ನಗರ ಪಾಲಿಕೆಗಳನ್ನು ರಚಿಸಬೇಕು ಎಂಬ ಆಲೋಚನೆ ಇತ್ತು. ಆದರೆ, ಪಾಲಿಕೆ ವ್ಯಾಪ್ತಿ ಹೆಚ್ಚಾಗಲಿದೆ ಎಂಬ ಕಾರಣಕ್ಕೆ ಚಿಕ್ಕ ನಗರ ಪಾಲಿಕೆಗೆ ಒಲವು ತೋರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

'ಗ್ರೇಟರ್ ಬೆಂಗಳೂರು ಪ್ರದೇಶ'ದಲ್ಲಿ ರಚಿಸಲಾಗುವ ಪ್ರತಿ ನಗರ ಪಾಲಿಕೆಯಲ್ಲಿ ಕನಿಷ್ಠ 10 ಲಕ್ಷ ಜನಸಂಖ್ಯೆ ಇರಬೇಕು ಎಂದು ಕಾಯ್ದೆಯಲ್ಲಿ ಹೇಳಲಾಗಿದೆ. ಒಂದು ಚದರ ಕಿ.ಮೀ.ನಲ್ಲಿ ಐದು ಸಾವಿರ ನಿವಾಸಿಗಳಿರಬೇಕು, ಪ್ರತಿ ನಗರ ಪಾಲಿಕೆಯ ವಾರ್ಷಿಕ ಆದಾಯವು ₹300 ಕೋಟಿಗಿಂತ ಕಡಿಮೆ ಇರಬಾರದು, ಕೃಷಿಯೇತರ ಚಟುವಟಿಕೆಯಲ್ಲಿರುವ ಉದ್ಯೋಗಗಳ ಪ್ರಮಾಣ ಒಟ್ಟು ಉದ್ಯೋಗಳಲ್ಲಿ ಶೇ 50ಕ್ಕಿಂತ ಕಡಿಮೆಯಾಗಿರಬೇಕು ಎಂಬ ಷರತ್ತು ವಿಧಿಸಲಾಗಿದೆ.



ಚಿತ್ರಾವಳಿ



ಸುಪ್ರೀಂ ಕೋರ್ಟ್ ಕುರಿತು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿಕೆ ಖಂಡಿಸಿ ಅಖಿಲ ಭಾರತ ವಕೀಲರ ಒಕ್ಕೂಟದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು



ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ಕೃತ್ಯ ಖಂಡಿಸಿ ಬೆಂಗಳೂರು ಜಿಲ್ಲಾ ಕಾಂಗ್ರೆಸ್ ವತಿಯಿಂದ ಫ್ರೀಡಂ ಪಾರ್ಕ್‌ನಲ್ಲಿ ಆಯೋಜಿಸಿದ್ದ 'ಕ್ಯಾಂಡಲ್ ಲೈಟ್ ಮೌನ ಶ್ರದ್ಧಾಂಜಲಿ ಸಭೆ'ಯಲ್ಲಿ ಸಚಿವ ಜಮೀರ್ ಅಹಮದ್ ಖಾನ್ ಪಾಲ್ಗೊಂಡಿದ್ದರು. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಶಾಸಕ ಹ್ಯಾರಿಸ್, ಮುಖಂಡ ಮೊಹಮ್ಮದ್ ನಲಪಾಡ್ ಉಪಸ್ಥಿತರಿದ್ದರು.

ಮ್ಯಾರಥಾನ್: ರಸ್ತೆ ಸಂಚಾರ ನಿರ್ಬಂಧ

ಬೆಂಗಳೂರು: ನಗರದಲ್ಲಿ ಏ.27ರಂದು ಟಿಸಿಎಸ್ ವರ್ಲ್ಡ್ 10ಕೆ ಮ್ಯಾರಥಾನ್ ಆಯೋಜನೆಗೊಂಡಿದ್ದು, ಅಂದು ಬೆಳಿಗ್ಗೆ 5ರಿಂದ 10ರ ವರೆಗೆ ಕೆಲವು ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಲಾಗಿದೆ. ವಾಹನಗಳ ಸುಗಮ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ ಎಂದು ಸಂಚಾರ ಪೊಲೀಸರು ಕೋರಿದ್ದಾರೆ.

27ಕ್ಕೆ ಬೆಳಿಗ್ಗೆ 3.30ರಿಂದ ಮೆಟ್ರೊ ಸಂಚಾರ

ಬೆಂಗಳೂರು: ಟಿಸಿಎಸ್ ವಿಶ್ವ 10ಕೆ-2025 ಮ್ಯಾರಾಥನ್ ಓಟದ 17ನೇ ಆವೃತ್ತಿಯಲ್ಲಿ ಭಾಗವಹಿಸುವವರಿಗೆ ಅನುಕೂಲ ಮಾಡಿಕೊಡಲು ಏ.27ರಂದು ಬೆಳಿಗ್ಗೆ 3.30ಕ್ಕೆ 'ನಮ್ಮ ಮೆಟ್ರೊ' ರೈಲು ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ಈ ಅವಧಿಯಲ್ಲಿ ನಾಲ್ಕು ಮೆಟ್ರೊ ಟರ್ಮಿನಲ್‌ಗಳಾದ ಮಾದಾವರ, ರೇಷ್ಮೆ ಸಂಸ್ಥೆ, ಚಲ್ಲಘಟ್ಟ, ವೈಟ್‌ಫೀಲ್ಡ್‌ಗಳಿಂದ ಮತ್ತು ನಾಡಪ್ರಭು ಕೆಂಪೇಗೌಡ ನಿಲ್ದಾಣ ಮೆಜೆಸ್ಟಿಕ್ ನಿಲ್ದಾಣದಿಂದ ರೈಲುಗಳು 12 ನಿಮಿಷಗಳಿಗೊಮ್ಮೆ ಸಂಚರಿಸಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಮಾರ್ಟ್ ಮೀಟರ್: ಉಚಿತ ಗ್ಯಾರಂಟಿ ಪರಿಣಾಮವೇ: ನ್ಯಾ.ನಾಗಪ್ರಸನ್ನ ಪ್ರಶ್ನೆ

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಚಿತವಾಗಿ ವಿದ್ಯುತ್ ಕೊಡಿ ಎಂದು ನಿಮ್ಮನ್ನು ಯಾರು ಕೇಳಿದ್ದರು' ಎಂದು ರಾಜ್ಯ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, ಹೊಸದಾಗಿ ನಿರ್ಮಾಣಗೊಂಡಿರುವ ಮನೆಯೊಂದಕ್ಕೆ ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳುವಂತೆ ಒತ್ತಾಯಿಸಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ನೀಡಿದ್ದ ಪತ್ರಕ್ಕೆ ಮಧ್ಯಂತರ ತಡೆ ನೀಡಿ ಆದೇಶಿಸಿದೆ.

ದೊಡ್ಡಬಳ್ಳಾಪುರದ ಟಿ.ಬಿ.ನಾರಾಯಣಪ್ಪ ಲೇಔಟ್ ನಿವಾಸಿ ಎಂ.ಜಯಲಕ್ಷ್ಮಿ ಅವರು ಹೊಸದಾಗಿ ನಿರ್ಮಿಸಿರುವ ತಮ್ಮ ಮನೆಗೆ ಸಿಂಗಲ್ ಫೇಸ್‌ನಿಂದ ತ್ರೀ ಫೇಸ್‌ಗೆ ಮೀಟರ್ ಪರಿವರ್ತನೆ ಮಾಡಿಕೊಳ್ಳುವುದಕ್ಕೆ ಮನವಿ ಸಲ್ಲಿಸಿದ್ದರು. ಇದಕ್ಕೆ ಪ್ರತಿಯಾಗಿ ಬೆಸ್ಕಾಂ ಅಧಿಕಾರಿಗಳು, 'ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳಬೇಕು' ಎಂದು ತಾಕೀತು ಮಾಡಿ ಪತ್ರವೊಂದನ್ನು ನೀಡಿದ್ದರು. ಈ ಸಂಬಂಧ ದೊಡ್ಡಬಳ್ಳಾಪುರ ನಗರ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನೀಡಿದ್ದ ಸಂವಹನ ಪತ್ರವನ್ನು ಪ್ರಶ್ನಿಸಿ ಜಯಲಕ್ಷ್ಮಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿ, ಸ್ಮಾರ್ಟ್ ಮೀಟರ್‌ಗಳ ಬೆಲೆ ನಿಗದಿಗೆ ಸಂಬಂಧಿಸಿದ ಸರ್ಕಾರದ ಕ್ರಮಕ್ಕೆ ಚಾಟಿ ಬೀಸಿತು.

ಅರ್ಜಿಯಲ್ಲಿ ಏನಿದೆ?

'ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪ್ರೀ ಪೇಯ್ಡ್ ಸ್ಮಾರ್ಟ್ ಮೀಟರ್) ನಿಯಮಗಳು-2024ರ ಅನ್ವಯ ಎಲ್ಲ ವರ್ಗದ ಗ್ರಾಹಕರೂ ಪ್ರೀ ಪೇಯ್ಡ್ ಮೀಟರ್‌ಗಳನ್ನು ಪಡೆಯಲು ಅವಕಾಶ ಇದೆ. ಈ ಕ್ರಮ 2025ರ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ನಿಯಮ ರೂಪಿಸಲಾಗಿದೆ.

ಈ ಪ್ರಕ್ರಿಯೆ ತಾತ್ಕಾಲಿಕ ಸಂಪರ್ಕಕ್ಕೆ ಮಾತ್ರ ಎಂದೂ ತಿಳಿಸಲಾಗಿದೆ. ನಮ್ಮ ಸಂಪರ್ಕ ಶಾಶ್ವತವಾದದ್ದು. ಆದರೆ, ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸಂವಹನಾ ಪತ್ರವೊಂದನ್ನು ನೀಡಿದ್ದಾರೆ. ಈ ಮೀಟರ್‌ಗಳನ್ನು ಹೊರಗುತ್ತಿಗೆ ಆಧಾರದಲ್ಲಿರುವ ಹೊರಗಿನ ಏಜೆನ್ಸಿಗಳ ಮುಖಾಂತರ ಖರೀದಿಸಬೇಕಿದೆ. ಈ ಏಜೆನ್ಸಿಗಳು ₹2 ಸಾವಿರ ಬೆಲೆಯ ಮೀಟರ್ ಅನ್ನು ₹10 ಸಾವಿರಕ್ಕೆ ಖರೀದಿಸುವಂತೆ ಒತ್ತಾಯಿಸುತ್ತಿವೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.



'ಎಲ್ಲರೂ ಹೆಚ್ಚು ಹಣ ಕೊಟ್ಟು ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳಬೇಕು ಎಂದರೆ ಬಡವರು ಏನು ಮಾಡಬೇಕು? ಏಕಾಏಕಿ ಈ ರೀತಿ ಬೆಲೆ ಏರಿಕೆ ಮಾಡಿದರೆ ಹೇಗೆ? ಅಷ್ಟಕ್ಕೂ ಉಚಿತವಾಗಿ ವಿದ್ಯುತ್ ಕೊಡಿ ಎಂದು ನಿಮ್ಮನ್ನು ಯಾರು ಕೇಳಿದ್ದರು? ಇದೆಲ್ಲವೂ ಉಚಿತ ಗ್ಯಾರಂಟಿಗಳಿಂದ ಎದುರಾಗಿರುವ ಸಮಸ್ಯೆಯೇ' ಎಂದು ಸರ್ಕಾರದ ನಿಲುವನ್ನು ಖಾರವಾಗಿ ಪ್ರಶ್ನಿಸಿತು.

'ತಾತ್ಕಾಲಿಕ ಸಂಪರ್ಕಕ್ಕೆ ಮಾತ್ರ ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯ ಎಂದು ತಿಳಿಸಿ, ಇದೀಗ ಶಾಶ್ವತ ಸಂಪರ್ಕಕ್ಕೂ ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳು ವಂತೆ ಒತ್ತಾಯ ಮಾಡುವುದು ಕಠಿಣ ಕ್ರಮವಲ್ಲವೇ? ಅದರಲ್ಲೂ, ಈ ಸ್ಮಾರ್ಟ್ ಮೀಟರ್‌ಗಳನ್ನು ಹೊರ ಗುತ್ತಿಗೆದಾರರ ಮೂಲಕ ಖರೀದಿ ಮಾಡುವಂತೆ ಸೂಚಿಸಿರುವುದು ಅತ್ಯಂತ ಅಪಾಯಕಾರಿ ಹೆಜ್ಜೆಯಲ್ಲವೇ? ಇದು ಗ್ರಾಹಕರಿಗೆ ದೊಡ್ಡ ಹೊರೆಯಾಗುವುದಿಲ್ಲವೇ? ಇದು ಯಾವ ನ್ಯಾಯ?' ಎಂದು ಮೌಖಿಕವಾಗಿ ಅಸಮಾಧಾನ ವ್ಯಕ್ತಪಡಿಸಿತು.

ರಾಜ್ಯ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪರ ವಕೀಲರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಜೂನ್ 4ಕ್ಕೆ ಮುಂದೂಡಿತು.



ಶನಿವಾರ, ಏಪ್ರಿಲ್ 26, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 115 | ಪುಟ 24
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಾಫಿ ಸ್ವಾದ
ಬೆಂಗಳೂರಿನಲ್ಲಿ ನಡೆಯುತ್ತಿರುವ 'ಭಾರತ–ಅಂತರರಾಷ್ಟ್ರೀಯ ಕಾಫಿ ಉತ್ಸವ–2025'ರಲ್ಲಿ ಕಾಫಿ ಸೇವಿಸಿದ ಮಹಿಳೆಯರು



ಸಮಾವೇಶಕ್ಕೆ ಕುಲಪತಿಗಳ ಗೈರು 13
1 ಲಕ್ಷ ನಿವಾಸಿಗಳಿಗೆ ಡಿಜಿಟಲ್ ಹಕ್ಕುಪತ್ರ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,212	24,039	₹1.01 ಲಕ್ಷ (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	85.41



ಇನ್ನು ಪಿಎಫ್ ಖಾತೆ ವರ್ಗಾವಣೆ ಸುಲಭ

ನವದೆಹಲಿ (ಪಿಟಿಐ): ಉದ್ಯೋಗಿಯ ಭವಿಷ್ಯ ನಿಧಿ (ಪಿಎಫ್) ಖಾತೆ ವರ್ಗಾವಣೆಗೆ ಸಂಬಂಧಿತ ನಿಯಮಗಳನ್ನು ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಸರಳೀಕರಣಗೊಳಿಸಿದೆ. ಇನ್ನು ಮುಂದೆ ಪಿಎಫ್ ಮೊತ್ತದ ವರ್ಗಾವಣೆಯು ಸುಲಭವಾಗಲಿದೆ. 14

ವಕ್ಫ್ ಕಾಯ್ದೆ ತಡೆಗೆ ಕೇಂದ್ರ ವಿರೋಧ

ನವದೆಹಲಿ(ಪಿಟಿಐ): ಕೇಂದ್ರ ಸರ್ಕಾರ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಶುಕ್ರವಾರ ಬಲವಾಗಿ ಸಮರ್ಥಿಸಿಕೊಂಡಿದೆ. 12

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಪಾಕ್ ಪ್ರಜೆಗಳನ್ನು ಹೊರಹಾಕಿ: ಶಾ

ದೇಶದಲ್ಲಿರುವ ಪಾಕಿಸ್ತಾನಿ ಪ್ರಜೆಗಳನ್ನು ಪತ್ತೆಹಚ್ಚಿ, ಗಡುವಿನೊಳಗೆ ಹೊರಗೆ ಕಳಿಸಬೇಕೆಂದು ಗೃಹ ಸಚಿವ ಅಮಿತ್ ಶಾ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ತಿಳಿಸಿದ್ದರೆ, ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾದ ಆರೋಪ ಹೊತ್ತಿರುವ ಇಬ್ಬರು ಆರೋಪಿಗಳ ಮನೆಗಳನ್ನು ಧ್ವಂಸಗೊಳಿಸಲಾಗಿದೆ. ಈ ಮಧ್ಯೆ, ದಶಕಗಳಿಂದ ಭಯೋತ್ಪಾದನೆಗೆ ಬೆಂಬಲ ನೀಡುತ್ತಾ ಬಂದಿರುವುದನ್ನು ಪಾಕಿಸ್ತಾನ ಒಪ್ಪಿಕೊಂಡಿದೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ದೇಶ ತೊರೆಯಲು ನಿಗದಿಪಡಿಸಿದ ಗಡುವು ಮೀರಿ ಪಾಕಿಸ್ತಾನದ ಯಾವುದೇ ಪ್ರಜೆಯೂ ಭಾರತದಲ್ಲಿ ಉಳಿದುಕೊಳ್ಳದಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಶುಕ್ರವಾರ ಸೂಚಿಸಿದ್ದಾರೆ.

'ವಿವಿಧ ರಾಜ್ಯಗಳಲ್ಲಿ ತಂಗಿರುವ ಪಾಕಿಸ್ತಾನಿ ಪ್ರಜೆಗಳನ್ನು ಗುರುತಿಸಿ, ನಿಗದಿತ ಗಡುವಿನ ಒಳಗಾಗಿ ಅವರು ದೇಶ ತೊರೆಯುವುದನ್ನು ಖಚಿತಪಡಿಸಿಕೊಳ್ಳುವಂತೆ ಗೃಹ ಸಚಿವರು ಸೂಚಿಸಿದ್ದಾರೆ' ಎಂದು ಮೂಲಗಳು ಹೇಳಿವೆ. ಆದರೆ, ಪಾಕಿಸ್ತಾನದ ಹಿಂದೂ ಪ್ರಜೆಗಳಿಗೆ ಈಗಾಗಲೇ ನೀಡಲಾದ ದೀರ್ಘಾವಧಿ ವೀಸಾಗಳು 'ಮಾನ್ಯವಾಗಿರುತ್ತವೆ' ಮತ್ತು ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಬಾರದು ಎಂದೂ ಹೇಳಿದ್ದಾರೆ. ಅಮಿತ್ ಶಾ ಅವರು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಕರೆಮಾಡಿ ಮಾತನಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಗಡಿಯಾಚೆಗಿನ ನಂಟು ಇದೆ ಎಂದು ಹೇಳಿರುವ ಭಾರತ, ನೆರೆಯ ದೇಶದ ಜತೆಗಿನ ರಾಜತಾಂತ್ರಿಕ ಸಂಬಂಧವನ್ನು ಕಡಿಮೆ ಮಾಡಲು ತೀರ್ಮಾನಿಸಿತ್ತು.

8ನೇ ಪುಟ ನೋಡಿ

ರಾಜ್ಯದಲ್ಲೂ ತಪಾಸಣೆ

ಬೆಂಗಳೂರು: ರಾಜ್ಯದಲ್ಲಿ ಅಧಿಕೃತವಾಗಿ, ಅನಧಿಕೃತವಾಗಿ ನೆಲಸಿರುವ ಪಾಕ್ ಪ್ರಜೆಗಳ ತಪಾಸಣೆಯನ್ನು ಕೇಂದ್ರ ಗುಪ್ತಚರ ವಿಭಾಗದ ಅಧಿಕಾರಿಗಳು ನಡೆಸಲಿದ್ದಾರೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಗುಂಡಿನ ದಾಳಿ ಭಾರತ ಪ್ರತ್ಯುತ್ತರ

2021ರ ಫೆಬ್ರುವರಿಯಿಂದಲೂ ಜಾರಿಯಲ್ಲಿದ್ದ ಕದನ ವಿರಾಮ ಒಪ್ಪಂದವನ್ನು ಉಲ್ಲಂಘಿಸಿರುವ ಪಾಕಿಸ್ತಾನ ಸೇನೆ, ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯ ಕೆಲವೆಡೆ ಗುರುವಾರ ರಾತ್ರಿ ಗುಂಡಿನ ದಾಳಿ ನಡೆಸಿದೆ. ಭಾರತೀಯ ಸೇನೆ ಈ ದಾಳಿಗೆ ತಕ್ಕ ಪ್ರತ್ಯುತ್ತರ ನೀಡಿದೆ.

8ನೇ ಪುಟ ನೋಡಿ



ಸ್ಫೋಟದಿಂದ ಧ್ವಂಸಗೊಂಡಿರುವ ಎಲ್‌ಇಟಿ ಉಗ್ರ ಆದಿಲ್ ಥೋಕರ್‌ನ ಮನೆ —ಪಿಟಿಐ ಚಿತ್ರ

ಇಬ್ಬರು ಉಗ್ರರ ಮನೆ ಧ್ವಂಸ

ಶ್ರೀನಗರ: ಪಹಲ್ಗಾಮ್‌ನಲ್ಲಿ ನಡೆದ ದಾಳಿಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಯ ಇಬ್ಬರು ಭಯೋತ್ಪಾದಕರ ಮನೆಗಳನ್ನು ದಕ್ಷಿಣ ಕಾಶ್ಮೀರದ ತ್ರಾಲ್ ಮತ್ತು ಬಿಜ್‌ಬೆಹರಾ ಪ್ರದೇಶಗಳಲ್ಲಿ ಧ್ವಂಸಗೊಳಿಸಲಾಯಿತು.

ಪುಲ್ವಾಮಾ ಜಿಲ್ಲೆಯ ತ್ರಾಲ್‌ನಲ್ಲಿ ಆಸಿಫ್ ಶೇಖ್‌ನ ಮನೆ ಹಾಗೂ ಅನಂತನಾಗ್ ಜಿಲ್ಲೆಯ ಬಿಜ್‌ಬೆಹರಾದಲ್ಲಿ ಆದಿಲ್ ಥೋಕರ್‌ನ ಮನೆಯನ್ನು ಸ್ಫೋಟಕ ಬಳಸಿ ನೆಲಸಮಗೊಳಿಸಲಾಗಿದೆ. ಆದರೆ, ಮನೆಗಳನ್ನು ಕೆಡವಿರುವ ಕುರಿತು ಭದ್ರತಾ ಪಡೆಗಳಿಂದ ಯಾವುದೇ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ.

8ನೇ ಪುಟ ನೋಡಿ

ಉಗ್ರರಿಗೆ ಬೆಂಬಲ ಒಪ್ಪಿಕೊಂಡ ಪಾಕ್

ಲಂಡನ್ (ಪಿಟಿಐ): ಪಾಕಿಸ್ತಾನವು ಹಲವು ದಶಕಗಳಿಂದ ಭಯೋತ್ಪಾದಕರಿಗೆ ತರಬೇತಿ ಮತ್ತು ಹಣಕಾಸಿನ ನೆರವು ನೀಡುತ್ತಿದೆ ಎಂಬುದನ್ನು ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಒಪ್ಪಿಕೊಂಡಿದ್ದಾರೆ.

ಸ್ಕೈ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಸಂದರ್ಶಕ ಯಾಲ್ದಾ ಹಕೀಮ್ ಕೇಳಿದ ಪ್ರಶ್ನೆಗೆ ಉತ್ತರಿಸುವ ವೇಳೆ, 'ಭಯೋತ್ಪಾದನೆಗೆ ಬೆಂಬಲ ನೀಡುವ ಮೂಲಕ ಪಾಕಿಸ್ತಾನ ತಪ್ಪು ಮಾಡಿದೆ' ಎಂದಿದ್ದಾರೆ.

'ಭಯೋತ್ಪಾದಕ ಸಂಘಟನೆಗಳಿಗೆ ಬೆಂಬಲ ನೀಡುವ ಸುದೀರ್ಘ ಇತಿಹಾಸವನ್ನು ಪಾಕಿಸ್ತಾನ ಹೊಂದಿದೆ ಎಂಬುದನ್ನು ನೀವು ಒಪ್ಪಿಕೊಳ್ಳುವಿರಾ' ಎಂದು ಹಕೀಮ್ ಪ್ರಶ್ನಿಸಿದ್ದಾರೆ.


ಅದಕ್ಕೆ ಉತ್ತರಿಸಿದ ಆಸಿಫ್, 'ಹೌದು. ಅಮೆರಿಕ ಮತ್ತು ಬ್ರಿಟನ್ ಒಳಗೊಂಡಂತೆ ಪಶ್ಚಿಮದ ರಾಷ್ಟ್ರಗಳಿಗಾಗಿ ನಾವು ಸುಮಾರು ಮೂರು ದಶಕಗಳಿಂದ ಈ ಕೊಳಕು ಕೆಲಸ ಮಾಡುತ್ತಿದ್ದೇವೆ' ಎಂದು ಹೇಳಿದ್ದಾರೆ.

8ನೇ ಪುಟ ನೋಡಿ

ಕೆ.ಕಸ್ತೂರಿರಂಗನ್ ಇನ್ನಿಲ್ಲ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಅಧ್ಯಕ್ಷ, ವಿಜ್ಞಾನಿ ಕೆ. ಕಸ್ತೂರಿರಂಗನ್ (84) ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ಬೆಳಿಗ್ಗೆ ಇಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಭಾನುವಾರ (ಏ.27) ಬೆಳಿಗ್ಗೆ 10 ಗಂಟೆಯಿಂದ 12 ಗಂಟೆವರೆಗೆ ಸದಾಶಿವನಗರದ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ (ಆರ್‌ಆರ್‌ಐ) ಅಂತಿಮ ದರ್ಶನಕ್ಕೆ ಇಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.



24.10.1940 - 25.4.2025

ನುಡಿನಮನ 7

ಪಿಯು ಮರುಮೌಲ್ಯಮಾಪನ ಆರ್. ದೀಕ್ಷಾ, ಪ್ರತೀಕ್ಷಾ ಪ್ರಥಮ



ಆರ್. ದೀಕ್ಷಾ



ಪಿ. ಪ್ರತೀಕ್ಷಾ



ಕೆ. ಅಮೃತಾ

ಬೆಂಗಳೂರು: ದ್ವಿತೀಯ ಪಿಯು ಮರು ಮೌಲ್ಯಮಾಪನದ ನಂತರ ಫಲಿತಾಂಶದಲ್ಲಿ ಹಲವು ಬದಲಾವಣೆಗಳಾಗಿದ್ದು, ವಿಜ್ಞಾನ ವಿಭಾಗದಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ವಾಗ್ದೇವಿ ಪಿಯು ಕಾಲೇಜಿನ ಆರ್. ದೀಕ್ಷಾ ಒಬ್ಬರೇ ಪ್ರಥಮ (600/600) ಸ್ಥಾನಕ್ಕೇರಿದ್ದಾರೆ.

ಇದೇ ತಿಂಗಳ ಮೊದಲ ವಾರ ಫಲಿತಾಂಶ ಪ್ರಕಟವಾದಾಗ ವಿಜ್ಞಾನ ವಿಭಾಗದಲ್ಲಿ ಮಂಗಳೂರಿನ ಎಕ್ಸ್‌ಪರ್ಟ್ ಕಾಲೇಜಿನ ಅಮೂಲ್ಯ ಕಾಮತ್ ಹಾಗೂ ಆರ್. ದೀಕ್ಷಾ ಅವರು ತಲಾ 599 ಅಂಕ ಗಳಿಸಿ ಮೊದಲ ಸ್ಥಾನ ಹಂಚಿಕೊಂಡಿದ್ದರು.

14ನೇ ಪುಟ ನೋಡಿ





ಮೇ 3ರಂದು ಉದ್ಯೋಗ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್ ವತಿಯಿಂದ ಮೇ 3ರಂದು ಶೈಕ್ಷಣಿಕ ಮತ್ತು ಉದ್ಯೋಗ ಮೇಳ ಏರ್ಪಡಿಸಿದ್ದು, ನೂರಕ್ಕೂ ಅಧಿಕ ಕಂಪನಿಗಳು ಭಾಗವಹಿಸಲಿವೆ ಎಂದು ಟ್ರಸ್ಟ್ ಅಧ್ಯಕ್ಷ ವಿಷ್ಣುಭರತ್ ಆಲಂಪಲ್ಲಿ ತಿಳಿಸಿದರು.

ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವೀಧರರು ಭಾಗವಹಿಸಬಹುದು. ಕಿರ್ಲೋಸ್ಕರ್, ಇನ್ಫೊಸಿಸ್, ಟಾಟಾ ಸೇರಿ ಹಲವು ಕಂಪನಿಗಳು ಭಾಗವಹಿಸುತ್ತಿವೆ. 25 ಸಾವಿರ ಉದ್ಯೋಗ ಅವಕಾಶ ಇದ್ದು, ಅರ್ಹರು ಸದುಪಯೋಗ ಪಡೆದು ಕೊಳ್ಳಬೇಕು. ಅಂಗವಿಕಲ ಅಭ್ಯರ್ಥಿಗಳಿಗೂ ಅವಕಾಶಗಳಿವೆ. 15 ಕಂಪನಿಗಳು ಪಾಲ್ಗೊಳ್ಳುತ್ತಿವೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಎಪಿಎಸ್ ಕ್ಯಾಂಪಸ್‌ನಲ್ಲಿ ನಡೆಯುವ ಮೇಳಕ್ಕೆ ಉಚಿತ ಪ್ರವೇಶವಿದೆ. ಅಭ್ಯರ್ಥಿಗಳು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ದಾಖಲೆಗಳನ್ನು ತರಬೇಕು. ಅನುತ್ತೀರ್ಣರಾದವರು ಸಹ ಪಾಲ್ಗೊಳ್ಳಬಹುದು. ಮಾಹಿತಿಗೆ 8660599140, 8123696310 ಸಂಪರ್ಕಿಸಬಹುದು.

ಉದ್ಯೋಗ ಮೇಳದ ಜತೆ ಶೈಕ್ಷಣಿಕ ಮೇಳ ಸಹ ಆಯೋಜಿಸಲಾಗುತ್ತಿದ್ದು, ಈವರೆಗೆ 25 ಶಿಕ್ಷಣ ಸಂಸ್ಥೆಗಳು ನೋಂದಣಿ ಮಾಡಿಕೊಂಡಿವೆ. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ನಂತರ ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳಬಹುದು ಎಂಬುದರ ಬಗ್ಗೆ ಶಿಕ್ಷಣ ತಜ್ಞರು ಮಾಹಿತಿ ನೀಡುತ್ತಾರೆ ಎಂದರು.

₹25 ಕೋಟಿ ವೆಚ್ಚದ ಬಿಲ್ ಪಾವತಿಗೆ ತಡೆ

ಬೆಂಗಳೂರು: ಬಿಬಿಎಂಪಿಯ ದಾಸರಹಳ್ಳಿ ವಿಭಾಗದ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿ ಯವರ ಅಮೃತ ನಗರೋತ್ಥಾನ ಯೋಜನೆಯಡಿ ನಡೆದಿರುವ ₹25 ಕೋಟಿ ವೆಚ್ಚದ ಕಾಮಗಾರಿಯ ಬಿಲ್ ಪಾವತಿಗೆ ತಡೆ ನೀಡಲಾಗಿದ್ದು, ತನಿಖೆ ನಡೆಸಿ ವರದ ಸಲ್ಲಿಸಲು ಸೂಚಿಸಲಾಗಿದೆ.

'ಪ್ರಜಾವಾಣಿ'ಯಲ್ಲಿ ಏ.23ರಂದು ಪ್ರಕಟವಾಗಿದ್ದ '₹25 ಕೋಟಿ ವೆಚ್ಚದ ಕಾಮಗಾರಿಯಲ್ಲಿ ಅಕ್ರಮ?' ಶೀರ್ಷಿಕೆಯ ವರದಿಯನ್ನು ಪ್ರಸ್ತಾಪಿಸಿರುವ ದಾಸರಹಳ್ಳಿ ವಲಯ ಆಯುಕ್ತರು, ಈ ವಿಷಯದ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ವಾಸ್ತವ ವರದಿ ಸಲ್ಲಿಸುವಂತೆ ದಾಸರಹಳ್ಳಿ ವಲಯದ ಮುಖ್ಯ ಆಯುಕ್ತರಿಗೆ ಸೂಚಿಸಿದ್ದಾರೆ.

28ರಿಂದ ಬಿಜೆಪಿ ಹೋರಾಟ

ಮನೆ ಮನೆಗೆ ಹೋಗಿ ಕರಪತ್ರ ಹಂಚುವ ಮೂಲಕ ಜಾಗೃತಿ: ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಬೆಲೆ ಏರಿಕೆ ವಿರುದ್ಧ ಇದೇ 28ರಿಂದ ಮೂರು ದಿನ ಎಲ್ಲ ವಲಯ ಆಯುಕ್ತರ ಕಚೇರಿ ಮುಂದೆ ಹೋರಾಟ ನಡೆಸಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹಾಲು, ವಿದ್ಯುತ್, ಆಸ್ತಿ ತೆರಿಗೆ ಹಾಗೂ ಪಾರ್ಕಿಂಗ್ ಶುಲ್ಕವನ್ನು ಏರಿಕೆ ಮಾಡಿದೆ. ಪ್ರತಿ ಮನೆಗಳಿಗೆ ಹೋಗಿ ಕರಪತ್ರ ಹಂಚುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾಗುವುದು' ಎಂದು ಹೇಳಿದರು.

ಬಿಬಿಎಂಪಿ ಚುನಾವಣೆಯನ್ನು ಸರ್ಕಾರ ಮುಂದೂಡುತ್ತಿದೆ. ಗ್ರೇಟರ್ ಬೆಂಗಳೂರು ಮಸೂದೆಯ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು ಎಂದು ಹೇಳಿದ ಅವರು, 'ರಾಜ್ಯಪಾಲರು ಸಹಿ ಹಾಕಿದರೆ ಒಳ್ಳೆಯವರು ಮತ್ತು ಕಾಂಗ್ರೆಸ್ ಪರ ಎನ್ನುತ್ತಾರೆ. ಸಹಿ ಹಾಕದೇ ಇದ್ದರೆ ರಾಜಭವನವನ್ನು ಬಿಜೆಪಿ ಕಚೇರಿ ಎಂದು ಟೀಕಿಸುತ್ತಾರೆ' ಎಂದರು.

'ದೇಶದ ಮೇಲೆ ಭಯೋತ್ಪಾದಕ ದಾಳಿ ನಡೆದಾಗ ಎಲ್ಲ ರಾಜಕೀಯ ಪಕ್ಷಗಳು ಒಗ್ಗಟ್ಟಿನಿಂದ ಇರಬೇಕು. ಆದರೆ ಕಾಂಗ್ರೆಸ್ ನಾಯಕರು ಯೋಧರ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಾರೆ. ಇವರಿಗೆ ಯಾರ ಮೇಲೆ ನಂಬಿಕೆ ಇದೆ? ಬೇಹುಗಾರಿಕೆ ಸರಿ ಇಲ್ಲ, ಯೋಧರು ಸರಿ ಇಲ್ಲ ಎಂದು ಟೀಕೆ ಮಾಡುವುದು ಸರಿಯಲ್ಲ. ಇಡೀ ದೇಶ ಏಕ ಧ್ವನಿಯಲ್ಲಿ ಭಯೋತ್ಪಾದನೆಯನ್ನು ಖಂಡಿಸಬೇಕು' ಎಂದು ಹೇಳಿದರು.

'ನಮ್ಮ ದೇಶದೊಳಗಿರುವ ಸ್ಲೀಪರ್ ಸೆಲ್‌ಗಳನ್ನು ಮಟ್ಟಹಾಕಬೇಕಿದೆ. ಭಯೋತ್ಪಾದಕರಿಗೆ ನೆರವು ಕೊಡುವುದು, ಜಾಮೀನು ಕೊಡಿಸುವುದು ಮತ್ತು ಕಾನೂನು ನೆರವು ನೀಡುವುದು ನಡೆಯುತ್ತಿದೆ. ಇಂತಹವರನ್ನು ಬಿಡಬಾರದು' ಎಂದರು.

ಕೆಪಿಎಸ್‌ಸಿ: ಮರುಪರೀಕ್ಷೆಗೆ ಅವಕಾಶ ನೀಡಿ– ಛಲವಾದಿ ನಾರಾಯಣ ಸ್ವಾಮಿ

'ಕೆಪಿಎಸ್‌ಸಿ ಪರೀಕ್ಷೆ ಬರೆದಿದ್ದ ಸುಮಾರು 70 ಸಾವಿರ ಪರೀಕ್ಷಾರ್ಥಿಗಳಿಗೆ ಕಾಲಾವಕಾಶ ನೀಡಿ ಮತ್ತೆ ಮರುಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಗ್ರಹಿಸಿದ್ದಾರೆ.

ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಲ್ಮನೆಯಲ್ಲಿ ಕೊಟ್ಟ ಮಾತಿನಂತೆ, ಪರೀಕ್ಷಾರ್ಥಿಗಳಿಗೆ ಸಹಾಯ ಮಾಡಬೇಕು ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ಒತ್ತಾಯಿಸಿದರು.

'ಕೆಪಿಎಸ್‌ಸಿ ಅವಾಂತರಗಳನ್ನು ಪ್ರಶ್ನಿಸಿ ವಿದ್ಯಾರ್ಥಿಗಳು ಬಹುಕಾಲದಿಂದ ಹೋರಾಟ ಮಾಡುತ್ತಿದ್ದಾರೆ. ಅವರಿಗೆ ಆಗಿರುವ ಅನ್ಯಾಯ, ಕನ್ನಡಕ್ಕೆ ಆದ ಅಪಮಾನ, ಪ್ರಶ್ನೆ ಪತ್ರಿಕೆಗಳಲ್ಲಿನ ದೋಷ, ಹಲವಾರು ವಿಷಯಗಳ ಕುರಿತು ಪ್ರತಿಭಟನೆ ನಡೆಸಿದ್ದರು. ಈ ಕುರಿತು ನಾವೂ ಸದನದ ಒಳಗೆ ಮತ್ತು ಹೊರಗೆ ಸರ್ಕಾರದ ಗಮನಸೆಳೆದಿದ್ದೇವೆ' ಎಂದರು.

'ಈ ವಿಚಾರವಾಗಿ 32 ಪರೀಕ್ಷಾರ್ಥಿಗಳು ನ್ಯಾಯಾಲಯದ ಮೊರೆ ಹೋಗಿದ್ದರು. 32 ಜನರಿಗೆ ಮಾತ್ರ ಪರೀಕ್ಷೆ ನಡೆಸಲು ನ್ಯಾಯಾಲಯ ಆದೇಶ ನೀಡಿದೆ. ಆದರೆ, ಸಾಕಷ್ಟು ಪರೀಕ್ಷಾರ್ಥಿಗಳಿಗೆ ಅನ್ಯಾಯವಾಗಿದೆ. ಆದ್ದರಿಂದ ಸರ್ಕಾರ ಎಲ್ಲರಿಗೂ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ಆಗ್ರಹಿಸಿದರು.

ಹೆಚ್ಚುವರಿ ಶುಲ್ಕ ಮುಂದಿನ ವರ್ಷಕ್ಕೆ ಹೊಂದಾಣಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಬಿ.ಎ ಕೋರ್ಸ್ ಪ್ರವೇಶಕ್ಕೆ ಹೆಚ್ಚುವರಿಯಾಗಿ ಸಂಗ್ರಹಿಸಿರುವ ₹88,310 ಶುಲ್ಕವನ್ನು ಎರಡನೇ ವರ್ಷದ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಶುಲ್ಕ ನಿಯಂತ್ರಣ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಬಿ.ಶ್ರೀನಿವಾಸಗೌಡ ಅವರು ವೆಂಕಟಗಿರಿಕೋಟೆಯ ರೀಜನಲ್ ಕಾಲೇಜಿಗೆ ಸೂಚಿಸಿದ್ದಾರೆ.

'ನಿಗದಿಗಿಂತ ಹೆಚ್ಚು ಶುಲ್ಕ ವಸೂಲಿ ಮಾಡಿದ್ದಾರೆ' ಎಂದು ಮೊದಲನೇ ವರ್ಷಕ್ಕೆ ಪ್ರವೇಶ ಪಡೆದ ಮೂವರು ವಿದ್ಯಾರ್ಥಿಗಳು ಸಮಿತಿಗೆ ದೂರು ನೀಡಿದ್ದರು. ಕಾಲೇಜಿನ ಆಡಳಿತ ಮಂಡಳಿಯ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಿದ ನಂತರ ಮುಂದಿನ ವರ್ಷದ ಶುಲ್ಕಕ್ಕೆ ಅದನ್ನು ಹೊಂದಾಣಿಕೆ ಮಾಡಿಕೊಳ್ಳಲು ನಿರ್ಧರಿಸಲಾಯಿತು. ಈ ಸಂಬಂಧ ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಆಡಳಿತ ಮಂಡಳಿ ಪ್ರತಿನಿಧಿಗಳು ಒಪ್ಪಂದಕ್ಕೆ ಸಹಿ ಹಾಕಿದರು.



ಐಎಎಸ್ ಬಾಬಾ: ಯುಪಿಎಸ್‌ಸಿ ಸಿಎಸ್‌ಇಯಲ್ಲಿ ಉತ್ತಮ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕ ಸೇವಾ ಆಯೋಗದ ನಾಗರಿಕ ಸೇವಾ ಪರೀಕ್ಷೆಯಲ್ಲಿ (ಯುಪಿಎಸ್‌ಸಿ ಸಿಎಸ್‌ಇ-2024) ಐಎಎಸ್ ಬಾಬಾ ಕೋಚಿಂಗ್ ಸಂಸ್ಥೆಯು ದೇಶ ಮತ್ತು ರಾಜ್ಯದಲ್ಲಿ ಅಗ್ರ ರ್‍ಯಾಂಕ್‌ಗಳನ್ನು ಪಡೆದಿದೆ.

ಐಎಎಸ್ ಬಾಬಾದ ಆರ್‌ಆರ್‌ಎಸ್ ಮತ್ತು ಇಂಟರ್‌ವ್ಯೂ ಮೆಂಟರ್‌ಶಿಪ್ ಪ್ರೋಗ್ರಾಂನ (ಐಎಂಪಿ) ವಿದ್ಯಾರ್ಥಿ ಶಕ್ತಿ ದುಬೆ ದೇಶದ ಮೊದಲನೇ ರ್‍ಯಾಂಕ್ ಪಡೆದಿದ್ದಾರೆ. ಐಎಂಪಿ ವಿದ್ಯಾರ್ಥಿ ಆರ್. ರಂಗಮಂಜು ದೇಶದ 24ನೇ ರ್‍ಯಾಂಕ್ ಪಡೆದು ರಾಜ್ಯಕ್ಕೆ ಮೊದಲನೆಯವರಾಗಿದ್ದಾರೆ.

ಅಭಿಷೇಕ್ ವಸಿಷ್ಠ 14, ಮಾಧವ್ ಅಗರ್ವಾಲ್ 16 ಮತ್ತು ಸಂಸ್ಕೃತಿ ತ್ರಿವೇದಿ 17ನೇ ರ್‍ಯಾಂಕ್ ಪಡೆದಿದ್ದಾರೆ. ಅಗ್ರ 20 ರ್‍ಯಾಂಕುಗಳಲ್ಲಿ ಐಎಎಸ್ ಬಾಬಾ 4 ರ್‍ಯಾಂಕ್‌ಗಳನ್ನು ತನ್ನದಾಗಿಸಿಕೊಂಡಿದೆ. ಅಗ್ರ ನೂರು ರ್‍ಯಾಂಕುಗಳಲ್ಲಿ 20ಕ್ಕೂ ಹೆಚ್ಚು ರ್‍ಯಾಂಕ್‌ಗಳು ಹಾಗೂ ದೇಶದಾದ್ಯಂತ 210ಕ್ಕೂ ಹೆಚ್ಚು ಆಯ್ಕೆಗಳನ್ನು ಗಳಿಸಿದೆ.

ಕರ್ನಾಟಕಕ್ಕೆ ಬಂದಿರುವ 30 ಸ್ಥಾನಗಳಲ್ಲಿ ಐಎಎಸ್ ಬಾಬಾ ಸಂಸ್ಥೆಯು 22 ರ್‍ಯಾಂಕ್‌ಗಳನ್ನು ಪಡೆದಿದೆ ಎಂದು ಐಎಎಸ್ ಬಾಬಾ ಸಂಸ್ಥಾಪಕ ಮೋಹನ್ ಕುಮಾರ್ ಎಸ್. ತಿಳಿಸಿದ್ದಾರೆ.

ಕರ್ನಾಟಕದಿಂದ ರ್‍ಯಾಂಕ್ ಪಡೆದವರು: ಆರ್. ರಂಗಮಂಜು (24ನೇ ರ್‍ಯಾಂಕ್), ಅನುಪ್ರಿಯಾ ಸಾಕ್ಯಾ (120), ಶ್ರೇಯನ್ಸ್ ಗೋಮ್ಸ್ (372), ಬಿ.ಎಂ. ಮೇಘನಾ (425), ಮಾಧವಿ ಆರ್. (446) ಮಹೇಶ್ ಆರ್. ಮಡಿವಾಳರ್ (482), ಭಾನುಪ್ರಕಾಶ್ ಜೆ. (523), ಪಾಂಡುರಂಗ ಎಸ್. ಕಂಬಳಿ (529), ಅಭಿಶೀಲ್ ಜೈಸ್ವಾಲ್ (538), ಶ್ರೇಯಸ್ ರಾವ್ ಜಿ. (552), ವರುಣ್ ಕೆ. ಗೌಡ (565), ಭರತ್ ಸಿಯರಂ (567), ಸಂಪ್ರೀತ್ ಸಂತೋಷ್ (652), ನಿತಿನ್ ಎಚ್.ಆರ್. (692), ನಿಖಿಲ್ ಎಂ.ಆರ್. (724), ತನಕಾ ಡಿ. ಆನಂದ್ (812), ಸಿದ್ದಲಿಂಗಪ್ಪ ಕೆ. ಪೂಜಾರ (826), ವಿನುತ ಜಿ.ಆರ್. (906), ಕಾರ್ತಿಕ್ ಡಿ. (918), ನವೀನ್‌ರಾಜ್ ಸಿ. (968), ಲಾವಣ್ಯ ಎಸ್.ಪಿ. (969), ಮೋಹನ್ (984).



ದೇಶದಲ್ಲಿಯೇ 20 ರ್‍ಯಾಂಕ್‌ಗಳೊಳಗೆ ಸ್ಥಾನ ಪಡೆದ ಐಎಎಸ್ ಬಾಬಾ ಕೋಚಿಂಗ್ ಸಂಸ್ಥೆ ವಿದ್ಯಾರ್ಥಿಗಳು



ಪಾಲಿಕೆ ಮಾಜಿ ಸದಸ್ಯ ಎಸ್. ಉದಯ್ ಕುಮಾರ್ ಅವರಿಗೆ 50ನೇ ಜನ್ಮದಿನ ಪ್ರಯುಕ್ತ ಅಭಿಮಾನಿಗಳು ಸೇಬಿನ ಹಾರ ಹಾಕಿ ಸನ್ಮಾನಿಸಿದರು

ಅನಾಥ ಆಶ್ರಮದ ಮಕ್ಕಳಿಗೆ ಅನ್ನದಾನ

ಕೆ.ಆರ್.ಪುರ: ಪಾಲಿಕೆ ಮಾಜಿ ಸದಸ್ಯ, ಮಹದೇವಪುರ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎಸ್.ಉದಯ್ ಕುಮಾರ್ ಅವರ 50ನೇ ಜನ್ಮದಿನ ಅನಾಥಾಶ್ರಮದ ಮಕ್ಕಳಿಗೆ ಅನ್ನದಾನ, ಬಡವರಿಗೆ ಅಡುಗೆ ಪಡಿತರ, ಮಕ್ಕಳಿಗೆ ನೋಟ್ ಬುಕ್ ವಿತರಿಸಿದರು.

ಎಸ್. ಉದಯ್ ಕುಮಾರ್ ಕುಟುಂಬ ಸಮೇತ ದೇಗುಲಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಮಾರತ್ ಹಳ್ಳಿಯಲ್ಲಿ ಬಡವರಿಗೆ ಸೌಲಭ್ಯ ವಿತರಣೆ, ವರ್ತೂರಿನಲ್ಲಿ ಬೈಕ್ ರ್‍ಯಾಲಿ, ಮಧುರಾ ನಗರದಲ್ಲಿ ಅನ್ನಸಂತರ್ಪಣೆ, ಮುತ್ಸಂದ್ರದಲ್ಲಿ ಕೇಕ್ ಕತ್ತರಿಸಿ ಜನ್ಮದಿನ ಆಚರಿಸಲಾಯಿತು. ಮಧುರಾ ನಗರದ ಕಲ್ಯಾಣಮಂಟಪಲ್ಲಿ ಉದಯ್ ಕುಮಾರ್ ಅವರಿಗೆ ಸನ್ಮಾನ ನಡೆಯಿತು.

ಶಾಸಕ ರಿಜ್ವಾನ್ ಅರ್ಷದ್, ಎಐಸಿಸಿ ಕಾರ್ಯದರ್ಶಿ ಮನ್ಸೂರ್ ಅಲಿಖಾನ್, ಶಾಸಕ ರಾಮೋಜಿಗೌಡ, ಕೆಪಿಸಿಸಿ ಸದಸ್ಯ ಜಯರಾಮ್ ರೆಡ್ಡಿ, ರೆಡ್ಡಿ ಜನಸಂಘದ ನಿರ್ದೇಶಕ ಮುತ್ಸಂದ್ರ ಕೃಷ್ಣಾರೆಡ್ಡಿ, ವೆಂಕಟೇಶ ರೆಡ್ಡಿ ಮತ್ತು ಇತರ ಹಲವು ಮುಖಂಡರು ಈ ಸಂದರ್ಭದಲ್ಲಿ ಇದ್ದರು.



ಎಸ್‌ಡಿಪಿಐನ ಮೂವರ ಬಂಧನ

ಪ್ರಜಾವಾಣಿ ವಾರ್ತೆ


ಅಬ್ದುಲ್ ಅಲೀಂ


ಮೊಹಮ್ಮದ್ ಹನೀಫ್


ಮೊಹಮ್ಮದ್ ಓವೈಸ್

ಅಪರಾಧ ಸುದ್ದಿ

ಬೆಂಗಳೂರು: ಡಿ.ಜೆ.ಹಳ್ಳಿ ಠಾಣೆಗೆ ಬೆಂಕಿ ಹಚ್ಚಿದ್ದ ಪ್ರಕರಣದ ಆರೋಪಿಯನ್ನು ಕೊಲೆ ಮಾಡಿ ಪರಾರಿ ಆಗಿದ್ದ ಮೂವರು ಆರೋಪಿಗಳನ್ನು ಗೋವಿಂದಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕಾರ್ಯಕರ್ತರಾದ ಮೊಹಮ್ಮದ್ ಓವೈಸ್, ಅಬ್ದುಲ್ ಅಲೀಮ್, ಮೊಹಮ್ಮದ್ ಹನೀಫ್ ಬಂಧಿತರು. ಹೆಚ್ಚಿನ ವಿಚಾರಣೆಗೆ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು. ಏಪ್ರಿಲ್ 22ರ ರಾತ್ರಿ ಆಟೊದಲ್ಲಿ ಬಂದಿದ್ದ ಆರೋಪಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಇರ್ಫಾನ್‌ನನ್ನು ಕೊಲೆ ಮಾಡಿ ಪರಾರಿ ಆಗಿದ್ದರು ಎಂದು ಹೇಳಿದರು.

ಇರ್ಫಾನ್ ಅಂದು ರಾತ್ರಿ ಪತ್ನಿಯನ್ನು ಬಿಟ್ಟು ಎಚ್‌ಬಿಆರ್ ಲೇಔಟ್ ಬಳಿ ನಡೆದು ಹೋಗುತ್ತಿದ್ದಾಗ ಆರೋಪಿಗಳು ಕೃತ್ಯ ಎಸಗಿದ್ದರು ಎಂದು ಹೇಳಿದರು.

ಜೈಲಿನಲ್ಲೇ ಸಂಚು: '2020ರಲ್ಲಿ ಡಿ.ಜೆ. ಹಳ್ಳಿ–ಕೆ.ಜಿ. ಹಳ್ಳಿಯಲ್ಲಿ ಗಲಭೆ ನಡೆದಿತ್ತು. ಈ ಗಲಭೆ ಪ್ರಕರಣದ ಸಂಬಂಧ ಇರ್ಫಾನ್‌ನನ್ನು ಪೊಲೀಸರು ಬಂಧಿಸಿದ್ದರು. ಈತನ ಜತೆಗೆ ಅಬ್ಬಾಸ್ ಸಹ ಜೈಲು ಸೇರಿದ್ದ. ಇಬ್ಬರೂ ಸ್ನೇಹಿತರಾಗಿದ್ದರು. ಕೆಲವು ತಿಂಗಳ ಹಿಂದೆ ಇರ್ಫಾನ್ ಜಾಮೀನು ಪಡೆದು ಬಿಡುಗಡೆಯಾಗಿದ್ದ. ಜೈಲಿನಿಂದ ಹೊರಬಂದಿದ್ದ ಇರ್ಫಾನ್, ಅಬ್ಬಾಸ್‌ನ ಪತ್ನಿಯನ್ನು ಪರಿಚಯಿಸಿಕೊಂಡಿದ್ದ. ಆಕೆಯ ಜತೆಗೆ ಸ್ನೇಹ ಬೆಳೆಸಿದ್ದ. ಅಬ್ಬಾಸ್‌ನಿಂದ ವಿಚ್ಛೇದನ ಪಡೆಯಲು ಹೇಳುತ್ತಿದ್ದ. ಈ ವಿಷಯ ಜೈಲಿನಲ್ಲಿದ್ದ ಅಬ್ಬಾಸ್‌ಗೆ ಗೊತ್ತಾಗಿತ್ತು. ಆ ನಂತರ ಜೈಲಿನಲ್ಲೇ ಇದ್ದುಕೊಂಡೇ ಕೊಲೆಗೆ ಸಂಚು ರೂಪಿಸಿದ್ದ' ಎಂದು ಮೂಲಗಳು ತಿಳಿಸಿವೆ.

'ಸ್ನೇಹಿತರಾಗಿದ್ದ ಮೂವರು ಆರೋಪಿಗಳಿಗೆ ಅಬ್ಬಾಸ್ ಸುಪಾರಿ ನೀಡಿದ್ದ. ಅವರು ಆಟೊದಲ್ಲಿ ಬಂದು ಇರ್ಫಾನ್ ಕೊಲೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಬಂಧಿತ ಆರೋಪಿಗಳೆಲ್ಲರೂ ನಿಷೇಧಿತ ಪಿಎಫ್‌ಐ ಸಂಘಟನೆ ಸದಸ್ಯರಾಗಿದ್ದರು. ಪ್ರಸ್ತುತ ಎಸ್‌ಡಿಪಿಐನಲ್ಲಿ ಇದ್ದರು. ಬಂಧಿತ ಮೂವರು ಆರೋಪಿಗಳು ಈ ಹಿಂದೆಯೂ ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಪ್ರವಾಸಕ್ಕೆ ಸ್ನೇಹಿತರನ್ನು ಕರೆತಂದು ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ರಾಮಗೊಂಡನಹಳ್ಳಿ ಮುಖ್ಯರಸ್ತೆಯ ಮನೆಯಲ್ಲಿ ಚಿನ್ನಾಭರಣ ಕಳ್ಳತನ ಮಾಡಿ ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಯಲಹಂಕ ಉಪನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಳ್ಳಾರಿಯ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ನಿವಾಸಿಗಳಾದ ಶಿವಕುಮಾರ್, ಶಿವನಾಗಪ್ಪ, ಸುದರ್ಶನ್ ಬಂಧಿತರು.

ಬಂಧಿತರಿಂದ ₹18.10 ಲಕ್ಷ ಮೌಲ್ಯದ 210 ಗ್ರಾಂ ಚಿನ್ನಾಭರಣ ಹಾಗೂ ಕಾರು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ರಾಮಗೊಂಡನಹಳ್ಳಿಯ ಮುಖ್ಯ ರಸ್ತೆಯ ನಿವಾಸಿಯೊಬ್ಬರ ಮನೆಯಲ್ಲಿ 45 ಗ್ರಾಂ ಚಿನ್ನ ಹಾಗೂ ₹6 ಲಕ್ಷ ನಗದು ಕಳ್ಳತನ ಕುರಿತ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ದೂರುದಾರರು ಮಾರ್ಚ್ 12ರಂದು ಮನೆಗೆ ಬೀಗ ಹಾಕಿಕೊಂಡು ಊರಿಗೆ ಹೋಗಿದ್ದರು. ವಾಪಸು ಬಂದಾಗ ಕಳ್ಳತನ ಆಗಿರುವುದು ಗಮನಕ್ಕೆ ಬಂದಿತ್ತು' ಎಂದರು. 'ಹಗರಿಬೊಮ್ಮನಹಳ್ಳಿ ಠಾಣಾ ವ್ಯಾಪ್ತಿಯ ದುರ್ಗಮ್ಮ ದೇವಸ್ಥಾನದ ಬಳಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಅವರ ಹೇಳಿಕೆ ಆಧರಿಸಿ ಮತ್ತೊಬ್ಬ ಆರೋಪಿಯನ್ನು ಬಂಧಿಸಲಾಯಿತು' ಎಂದು ತಿಳಿಸಿದರು.


ಶಿವಕುಮಾರ್

'ಶಿವಕುಮಾರ್ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಯಲ್ಲಿ 16 ಕಳ್ಳತನ ಪ್ರಕರಣಗಳು ದಾಖಲಾಗಿವೆ. ಶಿವನಾಗಪ್ಪ ಹಾಗೂ ಸುದರ್ಶನ್ ಅವರನ್ನು ಪ್ರವಾಸದ ನೆಪದಲ್ಲಿ ಬೆಂಗಳೂರಿಗೆ ಕರೆ ತಂದಿದ್ದ ಶಿವಕುಮಾರ್ ಬೀಗ ಹಾಕಿದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡಿದ್ದ' ಎಂದು ಮೂಲಗಳು ತಿಳಿಸಿವೆ.

'ಕದ್ದ ಚಿನ್ನಾಭರಣವನ್ನು ಸ್ನೇಹಿತರ ಮೂಲಕ ಗಂಗಾವತಿ ಹಾಗೂ ಹಗರಿಬೊಮ್ಮನಹಳ್ಳಿಯ ಚಿನ್ನದ ಅಂಗಡಿಯಲ್ಲಿ ಅಡಮಾನ ಇಟ್ಟಿದ್ದರು. ಮೂವರು ಗೋವಾಕ್ಕೆ ಹೋಗಿ ಕಳ್ಳತನ ಮಾಡಿದ್ದ ₹6 ಲಕ್ಷ ಹಣ ಉಪಯೋಗಿಸಿಕೊಂಡು ಮೋಜು–ಮಸ್ತಿ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

ಯಲಹಂಕ ಉಪನಗರ ಠಾಣೆಯ ಇನ್‌ಸ್ಪೆಕ್ಟರ್ ಎ.ಸುಧಾಕರ ರೆಡ್ಡಿ ನೇತೃತ್ವದ ತನಿಖಾ ತಂಡವು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಓಂ ಪ್ರಕಾಶ್ ಕೊಲೆ ಪ್ರಕರಣ ವಿಚಾರಣೆಗೆ ಸ್ಪಂದಿಸದ ಪಲ್ಲವಿ

ಬೆಂಗಳೂರು: ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಅವರ ಕೊಲೆ ಪ್ರಕರಣದಲ್ಲಿ ಪತ್ನಿ ಪಲ್ಲವಿ ಅವರನ್ನು ಕಸ್ಟಡಿಗೆ ಪಡೆದುಕೊಂಡಿರುವ ಸಿಸಿಬಿ ಪೊಲೀಸರು, ವಿಚಾರಣೆ ತೀವ್ರಗೊಳಿಸಿದ್ದಾರೆ.

'ನ್ಯಾಯಾಲಯದ ಅನುಮತಿ ಪಡೆದು ಏಳು ದಿನ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಶುಕ್ರವಾರ ವಿಚಾರಣೆ ನಡೆಸಲಾಯಿತು. ಆರೋಪಿಗೆ ಕೆಲ ಪ್ರಶ್ನೆಗಳನ್ನು ಕೇಳಲಾಯಿತು. ಆದರೆ, ಅವರು ವಿಚಾರಣೆಗೆ ಸ್ಪಂದಿಸುತ್ತಿಲ್ಲ' ಎಂದು ಮೂಲಗಳು ತಿಳಿಸಿವೆ. ಸಿಸಿಬಿ ಎಸಿಪಿ ಧರ್ಮೇಂದ್ರ ನೇತೃತ್ವದ ಪೊಲೀಸ್ ತಂಡವು ಆರೋಪಿಯ ವಿಚಾರಣೆ ನಡೆಸುತ್ತಿದೆ.

ಕೊಲೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಓಂ ಪ್ರಕಾಶ್ ಅವರ ಪುತ್ರಿ ಕೃತಿ ಅವರ ವಿಚಾರಣೆಗೂ ಸಿಸಿಬಿ ಪೊಲೀಸರು ಸಿದ್ಧತೆ ನಡೆಸಿದ್ದು, ಕೃತಿಗೆ ಸದ್ಯದಲ್ಲಿ ನೋಟಿಸ್ ಜಾರಿ ಮಾಡಲಾಗುವುದು. ಹತ್ಯೆ ಪ್ರಕರಣದಲ್ಲಿ ಕೃತಿ ಪಾತ್ರದ ಬಗ್ಗೆ ಸದ್ಯಕ್ಕೆ ಯಾವುದೇ ಸಾಕ್ಷ್ಯಗಳು ಸಿಕ್ಕಿಲ್ಲ. ಸಾಕ್ಷ್ಯಗಳು ಸಿಕ್ಕಲ್ಲಿ ವಶಕ್ಕೆ ಪಡೆದುಕೊಳ್ಳಲಾಗುವುದು ಎಂದು ಪೊಲೀಸರು ಹೇಳಿದರು.


ಓಂ ಪ್ರಕಾಶ್

ಏ.20ರಂದು ಎಚ್‌ಎಸ್‌ಆರ್ ಲೇಔಟ್ ಮನೆಯಲ್ಲಿ ಓಂ ಪ್ರಕಾಶ್ ಅವರ ಕೊಲೆ ನಡೆದಿತ್ತು. ಎಚ್‌ಎಸ್‌ಆರ್ ಲೇಔಟ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು. ಎಚ್‌ಎಸ್‌ಆರ್ ಠಾಣೆಯ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದ್ದರು. ನಂತರ, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಿ ಆದೇಶಿಸಿದ್ದರು.







ಶನಿವಾರ ● ಏಪ್ರಿಲ್ 26, 2025 ಪ್ರಜಾವಾಣಿ

ಹಾಡಿ, ಹಟ್ಟಿ, ತಾಂಡಾ ವಾಸಿಗಳಿಗೆ ಮೇ 20ರಂದು ವಿತರಣೆ ● ವರ್ಷಾಂತ್ಯಕ್ಕೆ 2 ಲಕ್ಷ ಹಂಚಿಕೆ ಗುರಿ: ಸಚಿವ ಕೃಷ್ಣ ಬೈರೇಗೌಡ

1 ಲಕ್ಷ ನಿವಾಸಿಗಳಿಗೆ ಡಿಜಿಟಲ್ ಹಕ್ಕುಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಗ್ರಾಮಗಳಾಗಿ ಪರಿವರ್ತನೆಗೊಂಡಿರುವ ಹಾಡಿ, ಹಟ್ಟಿ, ತಾಂಡಾಗಳಲ್ಲಿನ ನಿವಾಸಿಗಳಿಗೆ '94 ಡಿ' ಅಡಿ ಮೇ 20ರಂದು ಒಂದು ಲಕ್ಷ ಡಿಜಿಟಲ್ ಹಕ್ಕು ಪತ್ರಗಳನ್ನು ವಿತರಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಸರ್ವೆ ಇಲಾಖೆ ಮುಖ್ಯಸ್ಥರ ಜತೆ ಶುಕ್ರವಾರ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಎರಡು ವರ್ಷ ಪೂರ್ಣಗೊಳಿಸುತ್ತಿರುವ ಕಾರಣ ಅದೇ ದಿನ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಇನ್ನು ಮುಂದೆ ಕಾಗದದ ಹಕ್ಕು ಪತ್ರಗಳ ಬದಲಿಗೆ ಡಿಜಿಟಲ್ ಹಕ್ಕು ಪತ್ರಗಳನ್ನು ವಿತರಿಸಲಾಗುವುದು. ವರ್ಷದ ಅಂತ್ಯದ ವೇಳೆಗೆ ಒಟ್ಟು ಎರಡು ಲಕ್ಷ ಹಕ್ಕುಪತ್ರಗಳನ್ನು ವಿತರಿಸುವ ಗುರಿ ಇದೆ ಎಂದರು.

'ಹಲವು ಹಾಡಿ, ಹಟ್ಟಿ, ತಾಂಡಾಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ. ಆದರೆ, ಅಲ್ಲಿನ ಜನರಿಗೆ ಸರ್ಕಾರದ ವಿವಿಧ ಸೌಲಭ್ಯಗಳು ಸಿಗುತ್ತಿಲ್ಲ. ಇದರಿಂದ ಅವರು ತೊಂದರೆಗೆ ಸಿಲುಕಿದ್ದಾರೆ. ಅಲ್ಲಿನ ವಾಸಿಗಳಿಗೆ ಶಾಶ್ವತ ಹಕ್ಕುಪತ್ರ ನೀಡುವ ಉದ್ದೇಶದಿಂದ 2016ರಲ್ಲೇ ಕಾನೂನಿಗೆ ತಿದ್ದುಪಡಿ ತರಲಾಗಿತ್ತು. ಕಳೆದ ಐದು ವರ್ಷಗಳಲ್ಲಿ ಒಂದು ಲಕ್ಷ ಹಕ್ಕು ಪತ್ರಗಳನ್ನು ಮಾತ್ರ ವಿತರಿಸಲಾಗಿದೆ. ನಮ್ಮ ಸರ್ಕಾರ ಒಂದು ವರ್ಷದಲ್ಲಿ 1.30 ಲಕ್ಷ ಹಕ್ಕುಪತ್ರಗಳನ್ನು ವಿತರಿಸಿದೆ' ಎಂದು ಹೇಳಿದರು.

ಈ ಹಿಂದೆಲ್ಲ ಕಾಗದದ ಹಕ್ಕು ಪತ್ರಗಳನ್ನು ಕೊಡುತ್ತಿದ್ದಾಗ ಮೂಲ ದಾಖಲೆಗಳು ಇಲ್ಲದೇ ಸಮಸ್ಯೆ ಆಗುತ್ತಿತ್ತು, ವ್ಯಾಜ್ಯಗಳಿಗೂ ಕಾರಣವಾಗುತ್ತಿತ್ತು. ಡಿಜಿಟಲ್ ಹಕ್ಕುಪತ್ರಗಳಿಂದ ಆ ರೀತಿಯ ಸಮಸ್ಯೆಗಳು ನಿವಾರಣೆ ಆಗುತ್ತವೆ. ಡಿಜಿಟಲ್ ಮೂಲ ಕಡತಗಳು ಕಳೆದು ಹೋಗುವ ಅಥವಾ ಸ್ಥಳಾಂತರಿಸುವ ಸಾಧ್ಯತೆ ಇಲ್ಲ. ನಕಲು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ ಎಂದರು.

ಈ ರೀತಿ ಹಕ್ಕು ಪಡೆದವರಿಗೆ ಸರ್ಕಾರದ ವತಿಯಿಂದಲೇ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ನೋಂದಣಿ ಮತ್ತು ಖಾತಾಗಳನ್ನು ಮಾಡಿಸಿಕೊಡುವ ಯೋಜನೆಯೂ ಇದೆ. ರಾಜ್ಯದಲ್ಲಿ ಒಟ್ಟು 3,616 ಈ ರೀತಿಯ ಜನವಸತಿ ಪ್ರದೇಶಗಳಿದ್ದು, ಸುಮಾರು 1.46 ಲಕ್ಷ ಕುಟುಂಬಗಳು ಇರುವ ಅಂದಾಜು ಇದೆ ಎಂದು ತಿಳಿಸಿದರು.

ಆನ್‌ಲೈನ್ ಮೂಲಕ ಪೋಡಿ ದುರಸ್ತಿ: ಪೋಡಿ ದುರಸ್ತಿಯನ್ನು ಆನ್‌ಲೈನ್ ಮೂಲಕ ಮಾಡಿಕೊಡಲಾಗುತ್ತಿದೆ. ಪ್ರತಿ ತಿಂಗಳು 5,000 ಪೋಡಿ ದುರಸ್ತಿ ಮಾಡಿಕೊಡುವ ಗುರಿ ನಿಗದಿ ಮಾಡಲಾಗಿದ್ದು, ಇದನ್ನು ಆಂದೋಲನದ ರೂಪದಲ್ಲಿ ಮಾಡಿಕೊಡಲಾಗುವುದು ಎಂದು ಕೃಷ್ಣ ಬೈರೇಗೌಡ ಹೇಳಿದರು.


'ಸರಳೀಕೃತ ರೂಪದಲ್ಲಿ ಪೋಡಿ ದುರಸ್ತಿ ಮಾಡಿಕೊಡಲಾಗುವುದು. ಇದರಿಂದ ರೈತರು ಕಚೇರಿಗಳಿಗೆ ವೃಥಾ ಅಲೆಯುವುದು ತಪ್ಪುತ್ತದೆ. ನಾವೇ ಮನೆ ಮನೆಗೆ ಹೋಗಿ 1-5 ದಾಖಲೆಗಳನ್ನು ಸಿದ್ಧಪಡಿಸುತ್ತೇವೆ. ಈ ಪೈಕಿ 30,476 ಪ್ರಕರಣಗಳಲ್ಲಿ ಸರ್ವೆ ಇಲಾಖೆಯಿಂದ ಭೂಮಾಪನ ಕೆಲಸವನ್ನು ಕೈಗೆತ್ತಿಕೊಂಡಿದ್ದೇವೆ' ಎಂದರು.

ತಹಶೀಲ್ದಾರ್ ಕಚೇರಿಗಳಲ್ಲಿನ 'ಎ' ಮತ್ತು 'ಬಿ' ದರ್ಜೆಯ ಕಡತಗಳನ್ನು 'ಭೂಸುರಕ್ಷಾ ಯೋಜನೆ' ಅಡಿ ಗಣಕೀಕರಣಗೊಳಿಸಿ ಇಂಡೆಕ್ಸ್ ಕ್ಯಾಟಲಾಗ್ ಮಾಡಿ ಸ್ಕ್ಯಾನ್ ಮಾಡಲಾಗುತ್ತಿದೆ. ಈವರೆಗೆ 18.28 ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಲಾಗಿದೆ. ಇನ್ನು ಮುಂದೆ ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ ಪ್ರಮಾಣೀಕೃತ ದಾಖಲೆಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ವಿವರಿಸಿದರು.

ಮುಖ್ಯಾಂಶಗಳು

- ಕಂದಾಯ ಗ್ರಾಮ ಫಲಾನುಭವಿಗಳಿಗೆ ಡಿಜಿಟಲ್ ಹಕ್ಕುಪತ್ರ
- ಆನ್‌ಲೈನ್ ಮೂಲಕವೇ ಪೋಡಿ ದುರಸ್ತಿ
- ಭೂಸುರಕ್ಷಾ ಅಡಿ ತಹಶೀಲ್ದಾರ್ ಕಚೇರಿ ಕಡತಗಳ ಡಿಜಿಟಲೀಕರಣ

'ಹೊಸ ಅಕ್ರಮ ಬಡಾವಣೆ ಜಮೀನು ಜಪ್ತಿ'



ಕೃಷ್ಣ ಬೈರೇಗೌಡ

ಹೊಸದಾಗಿ ಯಾರಾದರೂ ಅನಧಿಕೃತ ಬಡಾವಣೆಗಳನ್ನು ನಿರ್ಮಿಸಿದರೆ ಅಂತಹ ಬಡಾವಣೆಗಳ ಜಮೀನನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಇನ್ನು ಮುಂದೆ ನೋಂದಣಿ ಮಾಡದೆ ಯಾರೂ ಬಡಾವಣೆ ನಿರ್ಮಿಸುವಂತಿಲ್ಲ. ಅನಧಿಕೃತ ಬಡಾವಣೆಗಳಿಂದ ಈಗಾಗಲೇ ಸಮಸ್ಯೆಗಳು ಸೃಷ್ಟಿ ಆಗಿವೆ. ಆದ್ದರಿಂದ ಯಾವುದೇ ಕಾರಣಕ್ಕೂ ಅನಧಿಕೃತ ಬಡಾವಣೆಗಳಿಗೆ ಅವಕಾಶ ನೀಡುವುದಿಲ್ಲ. ಸುಪ್ರೀಂ ಕೋರ್ಟ್ ಕೂಡ ಇಂತಹ ಬಡಾವಣೆಗಳಿಗೆ ಕಡಿವಾಣ ಹಾಕಲು ಕಟ್ಟುನಿಟ್ಟಾಗಿ ಸೂಚಿಸಿದೆ ಎಂದರು.

ಅನಧಿಕೃತ ಬಡಾವಣೆಗಳು ಕಿಷ್ಕಿಂಧೆ ರೀತಿ ಇರುತ್ತವೆ. ಅಲ್ಲಿ 10 ಅಡಿ ರಸ್ತೆಗಳಿರುತ್ತವೆ. ಇತರ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಆಂಬುಲೆನ್ಸ್ ಆಗಲಿ, ಅಗ್ನಿ ಶಾಮಕ ವಾಹನಗಳಾಗಲಿ ಪ್ರವೇಶಿಸಲು ಸಾಧ್ಯವಾಗುವುದಿಲ್ಲ ಎಂದರು.



ಉಡಿ ತುಂಬಿದ ಭಕ್ತರು

15 ವರ್ಷಗಳ ನಂತರ ಬೆಳಗಾವಿ ತಾಲ್ಲೂಕಿನ ಶಿಂಧೊಳ್ಳಿ ಗ್ರಾಮದಲ್ಲಿ ಶುಕ್ರವಾರ ನಡೆದ ಗ್ರಾಮದೇವತೆ ಮಹಾಲಕ್ಷ್ಮಿ ಜಾತ್ರೆಯಲ್ಲಿ ಮುಸ್ಲಿಮರು ದೇವಿಗೆ ಉಡಿ ತುಂಬಿದರು

'ನೀಟ್ ವ್ಯಾಪ್ತಿಗೆ ಫಿಸಿಯೋಥೆರಪಿ ಕೋರ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫಿಸಿಯೋಥೆರಪಿ ಕೋರ್ಸ್‌ಗಳ ಅವಧಿಯನ್ನು ಐದು ವರ್ಷಗಳಿಗೆ ವಿಸ್ತರಿಸಲಾಗುತ್ತಿದೆ. ಈ ಕೋರ್ಸ್‌ಗಳ ಪ್ರವೇಶವು ಇನ್ನು ಮುಂದೆ ನೀಟ್ ವ್ಯಾಪ್ತಿಗೆ ಬರಲಿದೆ. ಪರಿಣಾಮವಾಗಿ ಈ ಕೋರ್ಸ್‌ಗಳಿಗೆ ರಾಷ್ಟ್ರಮಟ್ಟದಲ್ಲಿ ಏಕರೂಪದ ಮನ್ನಣೆ ಸಿಗಲಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಅವರು ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ 'ಕರ್ನಾಟಕ ಫಿಸಿಯೋಕಾನ್-2025' ಫಿಸಿಯೋಥೆರಪಿ ವೃತ್ತಿಪರರ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಈ ಕೋರ್ಸ್‌ಗಳ ಪಠ್ಯಕ್ರಮ ಮತ್ತು ಮಾನ್ಯತೆಯನ್ನು ಏಕರೂಪಗೊಳಿಸಲು ಕೇಂದ್ರ ಸರ್ಕಾರವು ಕ್ರಮ ತೆಗೆದುಕೊಂಡಿದೆ. ಕೋರ್ಸ್‌ಗಳ ಅವಧಿ ವಿಸ್ತರಣೆಯ ಕಾರಣದಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಾಯೋಗಿಕ ಅನುಭವ ದೊರೆಯಲಿದೆ' ಎಂದರು.

'ಕೇಂದ್ರ ಸರ್ಕಾರದ ಈ ಕ್ರಮಕ್ಕೆ ರಾಜ್ಯ ಸರ್ಕಾರದ ಸಂಪೂರ್ಣ ಬೆಂಬಲ ಇದೆ. ಫಿಸಿಯೋಥೆರಪಿಸ್ಟ್‌ಗಳಿಗೆ ನರವಿಜ್ಞಾನ, ಮೂಳೆ-ಶಸ್ತ್ರಚಿಕಿತ್ಸೆ, ಕ್ರೀಡಾ ಕ್ಷೇತ್ರ, ಫಿಟ್‌ನೆಸ್ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ. ತರಬೇತಿ ಪಡೆದ ವೃತ್ತಿಪರರಿಗೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇದೆ. ಆ ಬೇಡಿಕೆಯನ್ನು ಪೂರೈಸಲು ಇನ್ನಷ್ಟು ಸರ್ಕಾರಿ ಕಾಲೇಜುಗಳಲ್ಲಿ ಫಿಸಿಯೋಥೆರಪಿ ಕೋರ್ಸ್‌ಗಳನ್ನು ಆರಂಭಿಸುವ ಚಿಂತನೆ ಇದೆ' ಎಂದರು.

ರಾಷ್ಟ್ರೀಯ ಅಲೈಡ್ ಮತ್ತು ಹೆಲ್ತ್‌ಕೇರ್ ವೃತ್ತಿಪರರ ಆಯೋಗದ ಅಧ್ಯಕ್ಷೆ ಡಾ.ಯಜ್ಞ ಉನ್ಮೇಶ್ ಶುಕ್ಲಾ, 'ಈ ಕೋರ್ಸ್‌ಗೆ ದೇಶದಾದ್ಯಂತ ಒಂದೇ ಪಠ್ಯಕ್ರಮವನ್ನು ರೂಪಿಸಲು ಸಿದ್ಧತೆ ನಡೆದಿದೆ' ಎಂದರು.

ಹೊಸ ಕಚೇರಿ ಕಟ್ಟಡ ಉದ್ಘಾಟನೆ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಆವರಣದಲ್ಲಿ ನಿರ್ಮಿಸಲಾಗಿರುವ 'ಕರ್ನಾಟಕ ರಾಜ್ಯ ಅಲೈಡ್ ಹೆಲ್ತ್ ಸೈನ್ಸ್ ಕೌನ್ಸಿಲ್'ನ (ಕೆಎಸ್‌ಎಎಚ್‌ಸಿ) ಹೊಸ ಕಚೇರಿಯನ್ನು ಸಚಿವ ಶರಣಪ್ರಕಾಶ ಪಾಟೀಲ ಉದ್ಘಾಟಿಸಿದರು. ಕೆಎಸ್‌ಎಎಚ್‌ಸಿ ಅಧ್ಯಕ್ಷ ಯು.ಟಿ.ಇಫ್ತಿಕಾರ್ ಫರೀದ್ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಜನಿವಾರ ಪ್ರಕರಣ: ಎನ್‌ಎಚ್‌ಆರ್‌ಸಿಗೆ ದೂರು

ಬೆಂಗಳೂರು: ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸುವ ಮೂಲಕ ಅವರ ಧಾರ್ಮಿಕ ಭಾವನೆಗಳು ಮತ್ತು ಹಕ್ಕುಗಳಿಗೆ ರಾಜ್ಯ ಸರ್ಕಾರ ಚ್ಯುತಿ ತಂದಿದೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಬರೆದ ಪತ್ರದಲ್ಲಿ ದೂರಿದ್ದಾರೆ.

ಪ್ರತಿಯೊಬ್ಬ ನಾಗರಿಕನ ಸಂವಿಧಾನದತ್ತ ಹಕ್ಕುಗಳು ಮತ್ತು ಘನತೆಯನ್ನು ರಕ್ಷಿಸುವ ಉದ್ದೇಶದಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.



ಈ ಪರೀಕ್ಷೆಯ ವೇಳೆಯಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಬುರ್ಖಾ ಮತ್ತು ಹಿಜಾಬ್ ಧರಿಸಲು ಅವಕಾಶ ನೀಡಲಾಗಿತ್ತು. ಆದರೆ ಜನಿವಾರ ಹೊಂದಿದವರನ್ನು ತಡೆದು ಪರೀಕ್ಷಿಸಿ, ತೆಗೆದು ಹಾಕಲು ತಾಕೀತು ಮಾಡಿದ್ದಾರೆ. ಎಲ್ಲ ಧರ್ಮೀಯರನ್ನು ಸಮಾನವಾಗಿ ನಡೆಸಿಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಅಶೋಕ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳಿಂದ ವ್ಯಾಪಕ ಆಕ್ರೋಶ ವ್ಯಕ್ತವಾದರೂ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಅವರು ದೂರಿದ್ದಾರೆ.

ಮುಂಗಾರು ವೇಳಾಪಟ್ಟಿ ರೈಲುಗಳ ಸಮಯ ಬದಲಾವಣೆ

ಬೆಂಗಳೂರು: ಮುಂಗಾರು ಮಳೆಯನ್ನು ಗಮನದಲ್ಲಿಟ್ಟುಕೊಂಡು ಪ್ರಯಾಣಿಕರ ಸುರಕ್ಷತೆ ಮತ್ತು ರೈಲುಗಳ ಸುಗಮ ಸಂಚಾರಕ್ಕಾಗಿ ನೈರುತ್ಯ ರೈಲ್ವೆಯ ವ್ಯಾಪ್ತಿಯಲ್ಲಿ ಸಂಚರಿಸುವ ಕೆಲವು ರೈಲುಗಳ ವೇಳಾಪಟ್ಟಿಯನ್ನು ಬದಲಾಯಿಸಲಾಗಿದೆ ಎಂದು ಕೊಂಕಣ ರೈಲ್ವೆ ನಿಗಮ ತಿಳಿಸಿದೆ.

ಪರಿಷ್ಕೃತ ವೇಳಾಪಟ್ಟಿ ಜೂನ್ 15ರಿಂದ ಅಕ್ಟೋಬರ್ 20ರವರೆಗೆ ಜಾರಿಯಲ್ಲಿರಲಿದೆ. ಕೆಎಸ್‌ಆರ್ ಬೆಂಗಳೂರು-ಕಾರವಾರ-ಕೆಎಸ್‌ಆರ್ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್, ಎಸ್‌ಎಂವಿಟಿ ಬೆಂಗಳೂರು-ಮುರ್ಡೇಶ್ವರ-ಎಸ್‌ಎಂವಿಟಿ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್, ವಾರಕ್ಕೆ ಮೂರುದಿನ ಸಂಚರಿಸುವ ಯಶವಂತಪುರ-ಕಾರವಾರ-ಯಶವಂತಪುರ ಎಕ್ಸ್‌ಪ್ರೆಸ್, ವಾರಕ್ಕೊಮ್ಮೆ ಸಂಚರಿಸುವ ವಾಸ್ಕೋ ಡ ಗಾಮಾ - ಪಾಟ್ನಾ - ವಾಸ್ಕೋ ಡ ಗಾಮಾ ಸೂಪರ್‌ಫಾಸ್ಟ್, ಪುಣೆ-ಎರ್ನಾಕುಲಂ-ಪುಣೆ ಎಕ್ಸ್ ಪ್ರೆಸ್‌ಗಳ ಸಂಚಾರ ಸಮಯ ಬದಲಾಗಲಿದೆ.

ಪ್ರಯಾಣಿಕರು ಪ್ರಯಾಣದ ದಿನಾಂಕದ ಮುಂಚಿತವಾಗಿ ಪರಿಷ್ಕೃತ ವೇಳಾಪಟ್ಟಿಯನ್ನು ಖಚಿತಪಡಿಸಿಕೊಳ್ಳಬೇಕು. ನವೀಕರಿಸಲಾದ ವೇಳಾಪಟ್ಟಿಯ ಮಾಹಿತಿಯು ಭಾರತೀಯ ರೈಲ್ವೆಯ ಅಧಿಕೃತ ಜಾಲತಾಣದಲ್ಲಿ (www.indianrail.gov.in) ಹಾಗೂ ರೈಲು ನಿಲ್ದಾಣಗಳಲ್ಲಿ ಲಭ್ಯವಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

'4,618 ಕೆರೆಗಳ ಒತ್ತುವರಿ ತೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲಾ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 9,140 ಕೆರೆಗಳು ಒತ್ತುವರಿಯಾಗಿರುವುದನ್ನು ಗುರುತಿಸಿದ್ದು, ಈ ಪೈಕಿ 4,618 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಿ, ಇಲಾಖೆಯ ವಶಕ್ಕೆ ಪಡೆಯಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 32,648 ಕೆರೆಗಳಿದ್ದು, ಇಲಾಖೆ ಕೈಗೊಂಡಿರುವ ಸಮೀಕ್ಷೆಯಲ್ಲಿ 24,497 ಕೆರೆಗಳನ್ನು ಗುರುತಿಸಲು ಸಾಧ್ಯವಾಗಿದೆ. ಇವುಗಳಲ್ಲಿ 9,140 ಕೆರೆಗಳು ಒತ್ತುವರಿಯಾಗಿವೆ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಒತ್ತುವರಿ ತೆರವುಗೊಳಿಸಿದ 4,618 ಕೆರೆಗಳ 8,697 ಎಕರೆ ಭೂಮಿಯನ್ನು ಜಿಲ್ಲಾ ಪಂಚಾಯಿತಿ ವಶಕ್ಕೆ ಪಡೆದುಕೊಳ್ಳಲಾಗಿದೆ. ಒತ್ತುವರಿ ಗುರುತಿಸಲ್ಪಟ್ಟಿರುವ ಉಳಿದ 4,522 ಕೆರೆಗಳನ್ನು ತೆರವುಗೊಳಿಸುವ ಕೆಲಸ ಪ್ರಗತಿಯಲ್ಲಿದೆ ಎಂದು ಅವರು ತಿಳಿಸಿದ್ದಾರೆ.



ಪ್ರಿಯಾಂಕ್ ಖರ್ಗೆ

ಒಟ್ಟಾರೆ 32,648 ಕೆರೆಗಳ ಪೈಕಿ, ಸಮೀಕ್ಷೆ ಬಾಕಿ ಇರುವ 8,151 ಕೆರೆಗಳ ಸಮೀಕ್ಷೆಯನ್ನು ಮುಂದಿನ 30 ದಿನಗಳ ಒಳಗೆ ಮುಗಿಸಬೇಕೆಂದು ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಪ್ರಿಯಾಂಕ್ ಸೂಚಿಸಿದ್ದಾರೆ.

ಜಿಲ್ಲಾ ಪಂಚಾಯಿತಿಗಳ ವ್ಯಾಪ್ತಿಗೆ ಬರುವ 32,648 ಕೆರೆಗಳು ಒಟ್ಟು 3,08,213 ಎಕರೆ ಪ್ರದೇಶ ಹೊಂದಿದೆ. ಇವುಗಳಲ್ಲಿ 2,15,594 ಎಕರೆಗೆ ಸಂಬಂಧಿಸಿದಂತೆ 24,497 ಕೆರೆಗಳ ಸರ್ವೆ ಕಾರ್ಯ ಪೂರ್ಣಗೊಂಡಿದೆ ಎಂದಿದ್ದಾರೆ.

ರಾಜ್ಯದಲ್ಲಿ ಹಾಸನ ಜಿಲ್ಲೆ ಅತಿ ಹೆಚ್ಚು 6,367, ಶಿವಮೊಗ್ಗ 4,354, ಮೈಸೂರು 2,805, ಕಲಬುರಗಿ 33, ಕೊಪ್ಪಳ 39 ಹಾಗೂ ಬಳ್ಳಾರಿ ಜಿಲ್ಲೆ ಅತಿ ಕಡಿಮೆ 21 ಕೆರೆಗಳನ್ನು ಹೊಂದಿರುವುದು ಸಮೀಕ್ಷೆಯಿಂದ ತಿಳಿದು ಬಂದಿದೆ ಎಂದು ಪ್ರಿಯಾಂಕ್ ತಿಳಿಸಿದ್ದಾರೆ.

ಕಾವೇರಿ ಆರತಿ: ವಾರದಲ್ಲಿ ನೀಲನಕ್ಷೆ

ಕೆಆರ್‌ಎಸ್ ಬೃಂದಾವನ ಉದ್ಯಾನದಲ್ಲಿ ಸ್ಥಳ ಪರಿಶೀಲಿಸಿದ ಉಪಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಮಂಡ್ಯ: 'ನಾಡಿನ ವಿವಿಧ ಸಂಸ್ಕೃತಿಗಳನ್ನು ಒಳಗೊಂಡಂತೆ ಕಾವೇರಿ ಆರತಿ ಕಾರ್ಯಕ್ರಮಕ್ಕಾಗಿ ಎನ್.ಚಲುವರಾಯಸ್ವಾಮಿ ನೇತೃತ್ವದ ಸಮಿತಿಯು ನೀಲನಕ್ಷೆ ರೂಪಿಸುತ್ತಿದ್ದು, ವಾರದಲ್ಲಿ ಸಿದ್ಧವಾಗಲಿದೆ. ದಸರಾಗೆ ಕಾರ್ಯಕ್ರಮ ನಡೆಸುವ ಉದ್ದೇಶವಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್.ಎಸ್ ಬೃಂದಾವನ ಉದ್ಯಾನದ ಅಣೆಕಟ್ಟೆ ಸಮೀಪ 'ಕಾವೇರಿ ಆರತಿ' ನಡೆಸುವ ಸಂಬಂಧ ಶುಕ್ರವಾರ, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜತೆ ಸ್ಥಳ ಪರಿಶೀಲನೆ ನಡೆಸಿದರು. ನಂತರ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾಧ್ಯಮದವರೊಂದಿಗೆ ಮಾತನಾಡಿದರು.



'ಕಾವೇರಿ ಆರತಿ' ನಡೆಸುವ ಸಂಬಂಧ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಸ್ಥಳ ಪರಿಶೀಲಿಸಿದರು. ಶ್ರೀರಂಗಪಟ್ಟಣ ಶಾಸಕ ರಮೇಶ ಬಂಡಿಸಿದ್ದೇಗೌಡ ಮತ್ತು ಎಂಜಿನಿಯರ್‌ಗಳು ಪಾಲ್ಗೊಂಡಿದ್ದರು

'ಕಾವೇರಿ ಆರತಿಗೆ ಸರ್ಕಾರ ₹ 92 ಕೋಟಿ ನೀಡಲು ತೀರ್ಮಾನಿಸಿದ್ದು, ವಿವಿಧ ಇಲಾಖೆಗಳು ಅಗತ್ಯ ಸಹಕಾರ ನೀಡಲಿವೆ. ಕನಿಷ್ಠ ಸುಮಾರು 10 ಸಾವಿರ ಮಂದಿಗೆ ಕಾರ್ಯಕ್ರಮ ವೀಕ್ಷಿಸಲು ಅವಕಾಶ ಕಲ್ಪಿಸಲಾಗುವುದು. ಎಷ್ಟು ದಿನ ಕಾರ್ಯಕ್ರಮ ಮಾಡಬೇಕೆಂಬುದನ್ನು ಸಮಿತಿ ತೀರ್ಮಾನಿಸಲಿದೆ' ಎಂದರು.

ಬೃಂದಾವನ ಉನ್ನತೀಕರಣ: 'ಬೃಂದಾವನ ಉದ್ಯಾನ ಉನ್ನತೀಕರಣಕ್ಕಾಗಿ (ಅಮ್ಯೂಸ್‌ಮೆಂಟ್ ಪಾರ್ಕ್) ಟೆಂಡರ್ ಕರೆಯಲಾಗಿದ್ದು, ಅಲ್ಲಿ ಯೋಜನಾ ಪ್ರಾಧಿಕಾರ ಮಾಡಲು ತೀರ್ಮಾನಿಸಲಾಗಿದೆ. ನಾಲ್ಕು ಪಂಚಾಯಿತಿ ಸೇರಿಸಲಾಗುತ್ತಿದೆ. ಪಂಚಾಯಿತಿಗಳ ಅಸ್ತಿತ್ವಕ್ಕೆ ತೊಂದರೆಯಾಗದು. ಅಧಿಕಾರ ಮೊಟಕುಗೊಳಿಸುವುದಿಲ್ಲ' ಎಂದರು.


'ಉನ್ನತೀಕರಣಕ್ಕೆ 7 ಸಂಸ್ಥೆಗಳಿಂದ ಅರ್ಜಿ ಬಂದಿದ್ದು, ಚರ್ಚೆ ನಡೆಯುತ್ತಿದೆ. ಸದ್ಯದಲ್ಲೇ ರೂಪುರೇಷೆ ಸಿದ್ಧಪಡಿಸಲಾಗುವುದು. ಉದ್ಯೋಗ ಸೃಷ್ಟಿಯಾದರೆ ಈ ಭಾಗದ ಪಂಚಾಯ್ತಿ ವ್ಯಾಪ್ತಿಯ ಜನರಿಗೆ ಆದ್ಯತೆ ನೀಡಲು ಷರತ್ತು ಹಾಕಲಾಗಿದೆ. ಸ್ಥಳೀಯ ಯುವಕರಿಗೆ ತರಬೇತಿ ಜೊತೆಗೆ ಉದ್ಯೋಗ ನೀಡುವಂತೆ ಸಂಸ್ಥೆಗಳಿಗೆ ಸೂಚಿಸಲಾಗಿದೆ" ಎಂದರು.

ಐಶ್ವರ್ಯ ಗೌಡ ಇ.ಡಿ ವಶಕ್ಕೆ

ಬೆಂಗಳೂರು: ₹9.82 ಕೋಟಿ ಮೊತ್ತದ ಚಿನ್ನಾಭರಣ ವಂಚಿಸಿದ ಪ್ರಕರಣದಲ್ಲಿ ಐಶ್ವರ್ಯ ಗೌಡ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು 14 ದಿನಗಳ ಕಸ್ಟಡಿಗೆ ಪಡೆದಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈಚೆಗೆ ಇಸಿಐಆರ್ ದಾಖಲಿಸಿಕೊಂಡಿದ್ದ ಇ.ಡಿ ಅಧಿಕಾರಿಗಳು ಗುರುವಾರ ಐಶ್ವರ್ಯ ಗೌಡ ಅವರ ಆರ್‌ಎಂಸಿ ಯಾರ್ಡ್ ನಿವಾಸ ಮತ್ತು ಮಂಡ್ಯದ ಕಿರುಗಾವಲಿನ ನಿವಾಸದ ಮೇಲೆ ದಾಳಿ ನಡೆಸಿದ್ದರು.

'ಆರ್‌ಎಂಸಿ ಯಾರ್ಡ್ ನಿವಾಸದಲ್ಲಿ ಇದ್ದ ಐಶ್ವರ್ಯ ಅವರನ್ನು ಎಂಟು ತಾಸು ವಿಚಾರಣೆ ನಡೆಸಿ ಗುರುವಾರ ರಾತ್ರಿಯ ವೇಳೆಗೆ ವಶಕ್ಕೆ ಪಡೆಯಲಾಗಿತ್ತು. ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಕರೆತಂದು ವಿಚಾರಣೆ ಮುಂದುವರಿಸಲಾಗಿತ್ತು. ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಎದುರು ಅವರನ್ನು ಶುಕ್ರವಾರ ಹಾಜರುಪಡಿಸಿ, 14 ದಿನಗಳ ಕಸ್ಟಡಿಗೆ ಪಡೆಯಲಾಯಿತು' ಎಂದು ಮೂಲಗಳು ತಿಳಿಸಿವೆ.



ಐಶ್ವರ್ಯ ಗೌಡ

'ಚಿನ್ನ ವಂಚನೆಯಿಂದ ಗಳಿಸಿದ ಹಣವನ್ನು ಐಶ್ವರ್ಯ ಗೌಡ ಯಾವ ಉದ್ದೇಶಕ್ಕೆ ಬಳಸಿದ್ದಾರೆ ಮತ್ತು ಆ ಹಣ ಯಾರಿಗೆ ತಲುಪಿದೆ ಎಂಬುದಕ್ಕೆ ಸಂಬಂಧಿಸಿದ ಮಾಹಿತಿಗಳು ದೊರೆತಿವೆ. ಈ ಬಗ್ಗೆ ವಿಸ್ತೃತ ತನಿಖೆಯ ಅಗತ್ಯವಿದೆ. ಹೀಗಾಗಿ ಆರೋಪಿಯನ್ನು ಕಸ್ಟಡಿಗೆ ನೀಡಬೇಕು ಎಂದು ಇ.ಡಿ ಪರ ವಕೀಲರು ನ್ಯಾಯಾಧೀಶರಿಗೆ ಮನವಿ ಸಲ್ಲಿಸಿದ್ದರು' ಎಂದು ಮೂಲಗಳು ಮಾಹಿತಿ ನೀಡಿವೆ.

ದಲಿತ ಉದ್ಯಮಿಗಳಿಗೆ ಅಧಿಕಾರಿಗಳಿಂದಲೇ ತೊಡಕು

ಸರ್ಕಾರದ ವಿರುದ್ಧ ಬೀದಿ ಹೋರಾಟ ನಡೆಸಬೇಕಾದ ಅನಿವಾರ್ಯ: ಹನುಮಂತಯ್ಯ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಉದ್ದಿಮೆದಾರರ ಅನುಕೂಲಕ್ಕೆ ಸರ್ಕಾರವು ನೀತಿ ಮಟ್ಟದಲ್ಲಿ ಎಲ್ಲ ರೀತಿಯ ಕ್ರಮ ತೆಗೆದುಕೊಳ್ಳುತ್ತಿದೆ. ಆದರೆ ಅವುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅಧಿಕಾರಶಾಹಿ ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿದೆ. ಇದರ ವಿರುದ್ಧ ಬೀದಿಗಿಳಿದು ಹೋರಾಟ ನಡೆಸದೆ ಬೇರೆ ದಾರಿ ಇಲ್ಲ' ಎಂದು ಕರ್ನಾಟಕ ದಲಿತ ಉದ್ದಿಮೆದಾರರ ಸಂಘದ (ಕೆಡಿಇಎ) ಅಧ್ಯಕ್ಷ ಎಲ್. ಹನುಮಂತಯ್ಯ ಹೇಳಿದರು.

ಕೆಡಿಇಎ ಶುಕ್ರವಾರ ಆಯೋಜಿಸಿದ್ದ ದಲಿತ ಉದ್ದಿಮೆದಾರರ ಸಮಾಲೋಚನಾ ಸಭೆಯನ್ನು ಉದ್ಘಾಟಿಸಿದ ಅವರು, 'ಅಹಿಂಸಾ ಮಾರ್ಗದಲ್ಲಿ ಹೋರಾಟ ಮಾಡಿದ್ದರೂ ಸರ್ಕಾರ ಪರಿಹಾರಗಳನ್ನು ಒದಗಿಸಿಲ್ಲ. ಹೀಗಾಗಿ ಬೇರೆ ರೀತಿಯಲ್ಲಿ ಹೋರಾಟ ಮಾಡಬೇಕಾದ ಅನಿವಾರ್ಯವಿದೆ' ಎಂದರು.



ದಲಿತ ಉದ್ದಿಮೆದಾರರ ಸಮಾಲೋಚನಾ ಸಭೆಯಲ್ಲಿ ಎಲ್. ಹನುಮಂತಯ್ಯ, ಸಿ.ಜಿ.ಶ್ರೀನಿವಾಸನ್ ಮತ್ತು ಉದ್ಯಮಿಗಳು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಕೆಡಿಇಎ ಕಾರ್ಯಾಧ್ಯಕ್ಷ ಎಸ್.ಜಿ. ಶ್ರೀನಿವಾಸನ್, 'ಅಧಿಕಾರಿಗಳು ದಲಿತ ಉದ್ದಿಮೆದಾರರಿಗೆ ಕೈಗಾರಿಕಾ ನಿವೇಶನ ಹಂಚಿಕೆ ಮಾಡಿದ್ದೇವೆ ಎನ್ನುತ್ತಾರೆ. ಆದರೆ ತಕರಾರು ಇರುವ, ಮೂಲಸೌಕರ್ಯ ಇಲ್ಲದ, ಹಳ್ಳ-ದಿಣ್ಣೆಗಳಿಂದ ಕೂಡಿದ ನಿವೇಶನ ನೀಡಿರುತ್ತಾರೆ. ಅವೆಲ್ಲವನ್ನೂ ಪರಿಹರಿಸಿಕೊಂಡು ಉದ್ದಿಮೆ ಆರಂಭಿಸುವಷ್ಟರಲ್ಲಿ ಆತ ಹೈರಾಣಾಗಿ ಹೋಗಿರುತ್ತಾನೆ' ಎಂದರು.

> **ದಲಿತ ಉದ್ಯಮಿಗಳು ರಾಜ್ಯ ಹಣಕಾಸು ನಿಗಮದಲ್ಲಿ ₹1 ಕೋಟಿ ಸಾಲಕ್ಕೆ ಅರ್ಜಿ ಹಾಕಿದ್ದರೆ, ₹15 ಲಕ್ಷದಿಂದ ₹20 ಲಕ್ಷ ಲಂಚ ನೀಡಬೇಕಿದೆ. ಇದೇ ಹೊರೆಯಾಗಿದೆ**
> **ಗಿರೀಶ್,** ಉದ್ಯಮಿ

'ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಸಗಟು ಮಂಜೂರಾತಿ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ನೂರಾರು ಎಕರೆ ಜಮೀನು ನೀಡುತ್ತದೆ. ದಲಿತ ಉದ್ಯಮಿಗಳಿಗೆ ನೀಡಬೇಕಿರುವ ಶೇ 24.1ರಷ್ಟು ನಿವೇಶನಗಳನ್ನು ನೀಡುವುದೇ ಇಲ್ಲ. ಈ ಸಮಸ್ಯೆಗಳ ಬಗ್ಗೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರಿಗೆ ಮನವಿ ಮಾಡಿದ್ದರೂ, ಯಾವ ಪರಿಹಾರವೂ ದೊರೆತಿಲ್ಲ' ಎಂದರು.

'ತಮಕೂರಿನ ಕೆಐಎಡಿಬಿ ಅಭಿವೃದ್ಧಿ ಅಧಿಕಾರಿ ದಲಿತರನ್ನು ತಮ್ಮ ಕಚೇರಿ ಒಳಗೆ ಬಿಟ್ಟುಕೊಳ್ಳುವುದೇ ಇಲ್ಲ' ಎಂದು ಉದ್ಯಮಿ ಚಂದ್ರಶೇಖರ್ ಆಪಾದಿಸಿದರು.

ಸಂಕ್ಷಿಪ್ತ ಸುದ್ದಿ

ರೌಫುದ್ದೀನ್ ಬಿಜೆಪಿಯಿಂದ ಉಚ್ಚಾಟನೆ

ಬೀದರ್: ವಕ್ಫ್ ತಿದ್ದುಪಡಿ ಕಾಯ್ದೆ ವಿರುದ್ಧ ಕಾಂಗ್ರೆಸ್‌ನವರು ನಡೆಸಿದ ಪ್ರತಿಭಟನೆಯಲ್ಲಿ ಕೈಗೆ ಕಪ್ಪು ಪಟ್ಟಿ ಧರಿಸಿಕೊಂಡು ಭಾಗವಹಿಸಿದ್ದ ಬಿಜೆಪಿ ರಾಷ್ಟ್ರೀಯ ಅಲ್ಪಸಂಖ್ಯಾತರ ಮೋರ್ಚಾ ಪ್ರಧಾನ ಕಾರ್ಯದರ್ಶಿ ರೌಫುದ್ದೀನ್ ಕಚೇರಿವಾಲೆ ಅವರನ್ನು ಪಕ್ಷದಿಂದ ಆರು ವರ್ಷ ಉಚ್ಚಾಟನೆ ಮಾಡಲಾಗಿದೆ.



ರೌಫುದ್ದೀನ್ ಕಚೇರಿವಾಲೆ

ಪಕ್ಷದ ವಿರುದ್ಧ ನಡೆದುಕೊಂಡಿರುವ ಕಚೇರಿವಾಲೆ ಅವರಿಗೆ ಏ.18ರಂದು ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ಅದಕ್ಕೆ ಉತ್ತರ ನೀಡದ ಕಾರಣ ಪಕ್ಷದ ಎಲ್ಲ ಜವಾಬ್ದಾರಿಗಳಿಂದ ಮುಕ್ತಗೊಳಿಸಿ ಆರು ವರ್ಷ ಪಕ್ಷದಿಂದ ಉಚ್ಚಾಟಿಸಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ ಕ್ರಮ ಕೈಗೊಂಡಿದ್ದಾರೆ ಎಂದು ಬೀದರ್ ಜಿಲ್ಲಾ ಬಿಜೆಪಿ ಅಧ್ಯಕ್ಷ ಸೋಮನಾಥ ಪಾಟೀಲ ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಚೇರಿವಾಲೆ ಅವರು ಕರ್ನಾಟಕ ರಾಜ್ಯ ಹಜ್ ಮಂಡಳಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಹಲವು ವರ್ಷಗಳಿಂದ ಬಿಜೆಪಿಯಲ್ಲಿ ಸಕ್ರಿಯರಾಗಿದ್ದರು. ಅವರು ಮೂಲತಃ ಬೀದರ್ ಜಿಲ್ಲೆಯವರು.

ಸಮೀಕ್ಷೆ: ಗಳಿಕೆ ರಜೆ, ಗೌರವಧನಕ್ಕೆ ಶಿಕ್ಷಕರ ಒತ್ತಾಯ

ಬೆಂಗಳೂರು: ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಧ್ಯಕ್ಷತೆಯ ಆಯೋಗ ಒಳ ಮೀಸಲಾತಿ ಸಮೀಕ್ಷೆಗೆ 60 ಸಾವಿರ ಶಿಕ್ಷಕರನ್ನು ಬಳಸಿಕೊಳ್ಳುತ್ತಿದ್ದು, ಅವರಿಗೆ ಗಳಿಕೆ ರಜೆ, ಗೌರವಧನ ನೀಡಬೇಕು ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಒತ್ತಾಯಿಸಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಕೆ. ನಾಗೇಶ್, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ, ಶಿಕ್ಷಕರು ಬೇಸಿಗೆ ರಜೆ ತ್ಯಾಗ ಮಾಡಿ ಗಣತಿದಾರರಾಗಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ, ಅವರಿಗೆ ನಿಯಮದ ಪ್ರಕಾರ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಕೋರಿದ್ದಾರೆ.

ಚಾಮರಾಜನಗರಕ್ಕೆ ಬಂದ ಮೇಲೆ ಕುರ್ಚಿ ಗಟ್ಟಿಯಾಯ್ತು: ಮುಖ್ಯಮಂತ್ರಿ

ಮಹದೇಶ್ವರ ಬೆಟ್ಟ (ಚಾಮರಾಜನಗರ): 'ಚಾಮರಾಜನಗರಕ್ಕೆ ಭೇಟಿ ಕೊಟ್ಟರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೌಢ್ಯವಷ್ಟೆ, ಇಲ್ಲಿಗೆ ಬಂದ ಮೇಲೆ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದೇನೆ, ಕುರ್ಚಿ ಗಟ್ಟಿಯಾಗುತ್ತಲೇ ಇದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಸಿದ್ದರಾಮಯ್ಯ

ಮಲೆ ಮಹದೇಶ್ವರ ಬೆಟ್ಟದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಜಿಲ್ಲೆಗೆ 10 ರಿಂದ 15 ಬಾರಿ ಭೇಟಿ ನೀಡಿದ್ದು ಒಳ್ಳೆಯದೇ ಆಗಿದೆ. ಸಮಾಜದ ಪ್ರಗತಿಗೆ ಮೌಢ್ಯಗಳು ಅಡ್ಡಿಯಾಗಿದ್ದು ತೊಡೆದುಹಾಕಬೇಕಿದೆ' ಎಂದರು.

ಬೆಳಿಗ್ಗೆ ಮಲೆ ಮಹದೇಶ್ವರನ ದೇಗುಲದಲ್ಲಿ ದರ್ಶನ ಪಡೆದ ಮುಖ್ಯಮಂತ್ರಿ, ಬೆಳ್ಳಿ ದಂಡುಕೋಲು ಸೇವೆಯಲ್ಲಿ ಭಾಗವಹಿಸಿ ಬೆಳ್ಳಿತೇರಿಗೆ ಪೂಜೆ ಸಲ್ಲಿಸಿದರು.

ಹನೂರು ತಾಲ್ಲೂಕಿನಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ, ಚಾಮರಾಜನಗರ ತಾಲ್ಲೂಕಿನ ಮಂಗಲದಲ್ಲಿ ಕನಕ ಭವನಕ್ಕೆ ಶಂಕುಸ್ಥಾಪನೆ ಮಾಡಿದರು. ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬಸವೇಶ್ವರರ ಪುತ್ಥಳಿ ಉದ್ಘಾಟನೆ, ಭಗೀರಥ, ವಾಲ್ಮೀಕಿ ಹಾಗೂ ಕನಕದಾಸರ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಕೆಪಿಎಸ್‌ಸಿ: ಮುಖ್ಯ ಪರೀಕ್ಷೆ ಪ್ರವೇಶಪತ್ರ ಡೌನ್‌ಲೋಡ್‌ಗೆ ಲಭ್ಯ

ಬೆಂಗಳೂರು: 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ 384 ಹುದ್ದೆಗಳಿಗೆ ನೇಮಕಾತಿಯ ಮುಖ್ಯ ಪರೀಕ್ಷೆಯ ಪ್ರವೇಶ ಪತ್ರವನ್ನು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಮೇ 3, 5, 7 ಮತ್ತು 9ರಂದು ಮುಖ್ಯ ಪರೀಕ್ಷೆಗಳು ನಡೆಯಲಿವೆ. ಪರೀಕ್ಷಾ ವೇಳಾಪಟ್ಟಿ ಆಯೋಗದ ಜಾಲತಾಣದಲ್ಲಿ ಲಭ್ಯವಿದೆ ಎಂದು ಕೆಪಿಎಸ್‌ಸಿ ಪ್ರಕಟಣೆ ತಿಳಿಸಿದೆ.

ಅರ್ಜಿ ಸಲ್ಲಿಸಲು ಅವಕಾಶ: ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಇದ್ದ ಭಾಷಾಂತರ ದೋಷದ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದ್ದ 34 ಅಭ್ಯರ್ಥಿಗಳು, ಮೇ ತಿಂಗಳಿನಲ್ಲಿ ನಡೆಯಲಿರುವ ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸಬಹುದು ಎಂದು ಕೆಪಿಎಸ್‌ಸಿ ಪ್ರಕಟಣೆ ತಿಳಿಸಿದೆ.

ಮುಖ್ಯ ಪರೀಕ್ಷೆ ಬರೆಯಲು ಈ ಅಭ್ಯರ್ಥಿಗಳಿಗೆ ಹೈಕೋರ್ಟ್ ಷರತ್ತುಬದ್ಧ ಅವಕಾಶ ಕಲ್ಪಿಸಿದೆ. ಅವರು ಆಯೋಗದ ಜಾಲತಾಣದಲ್ಲಿ ಡೌನ್‌ಲೋಡ್ ಮಾಡಿಕೊಂಡ ಅರ್ಜಿಯನ್ನು ಭರ್ತಿ ಮಾಡಿ ಮತ್ತು ಪರೀಕ್ಷಾ ಶುಲ್ಕ ಪಾವತಿಸಿ, ಇದೇ ಏಪ್ರಿಲ್ 28ರ ಒಳಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಅಕ್ಷಯ ತೃತೀಯ: ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಿಂದ ವಿಶೇಷ ಕೊಡುಗೆ

ಬೆಂಗಳೂರು: ಜ್ಯುವೆಲ್ಲರಿ ಕ್ಷೇತ್ರದ ಜವಾಬ್ದಾರಿಯುತ ಸಂಸ್ಥೆ ಮಲಬಾರ್ ಗೋಲ್ಡ್ & ಡೈಮಂಡ್ಸ್ ಈ ಬಾರಿಯ ಅಕ್ಷಯ ತೃತೀಯ ಹಬ್ಬವನ್ನು ಮತ್ತಷ್ಟು ಅವಿಸ್ಮರಣೀಯಗೊಳಿಸುವ ದಿಸೆಯಲ್ಲಿ ಹಲವು ಕೊಡುಗೆಗಳನ್ನು ಘೋಷಣೆ ಮಾಡಿದೆ. ತನ್ನ ಗ್ರಾಹಕರಿಗೆ ಮೌಲ್ಯ, ವಿಶ್ವಾಸಾರ್ಹತೆ ಮತ್ತು ಪರಿಣತಿಯನ್ನು ಒದಗಿಸುವ ಸಂಪ್ರದಾಯವನ್ನು ಮುಂದುವರಿಸುವ ಮೂಲಕ ಕೊಡುಗೆಗಳನ್ನು ನೀಡುತ್ತಲಿದೆ.

ಈ ಶುಭ ಸಂದರ್ಭದಲ್ಲಿ ಮಲಬಾರ್ ಸಂಸ್ಥೆ ಗ್ರಾಹಕರಿಗೆ ಚಿನ್ನಾಭರಣಗಳ ಮೇಕಿಂಗ್ ಶುಲ್ಕದ ಮೇಲೆ ಶೇ.25 ರವರೆಗೆ ರಿಯಾಯಿತಿ, ಪ್ರೆಷಿಯಸ್ ಸ್ಟೋನ್ ಮತ್ತು ಅನ್‌ಕಟ್ ವಜ್ರಾಭರಣಗಳ ಮೇಕಿಂಗ್ ಶುಲ್ಕದ ಮೇಲೆ ಫ್ಲಾಟ್ ಶೇ.25 ರಷ್ಟು ಹಾಗೂ ವಜ್ರದ ಮೌಲ್ಯದ ಮೇಲೆ ಶೇ.25 ರವರೆಗೆ ಡಿಸ್ಕೌಂಟ್ ನೀಡುತ್ತಲಿದೆ. ಮುಂಗಡ ಬುಕ್ಕಿಂಗ್ ಮಾಡುವ ಆಭರಣ ಪ್ರಿಯರು ಉಚಿತ ಬೆಳ್ಳಿ ನಾಣ್ಯವನ್ನು ಪಡೆಯಬಹುದಾಗಿದೆ.

ಗ್ರಾಹಕರು ಖರೀದಿಸುವ ಒಟ್ಟು ಮೌಲ್ಯದ ಕನಿಷ್ಠ ಶೇ.10 ರಷ್ಟನ್ನು ಮುಂಗಡ ಪಾವತಿಸಿ ಆಭರಣಗಳನ್ನು ಬುಕ್ ಮಾಡಿಕೊಳ್ಳುವ ಸೌಲಭ್ಯದೊಂದಿಗೆ ಚಿನ್ನದ ಬೆಲೆ ಏರಿಕೆಯಿಂದಲೂ ಸುರಕ್ಷಿತವಾಗಬಹುದು. ಬುಕ್ಕಿಂಗ್ ಸಂದರ್ಭದಲ್ಲಿ ಇರುವ ದರ ಅಥವಾ ಖರೀದಿಸುವ ಸಂದರ್ಭದಲ್ಲಿರುವ ಮಾರುಕಟ್ಟೆ ದರದಲ್ಲಿ ಯಾವುದು ಕಡಿಮೆ ಇರುತ್ತದೋ, ಆ ದರದಲ್ಲಿ ಚಿನ್ನವನ್ನು ಖರೀದಿಸಬಹುದಾಗಿದೆ.

**`ತನ್ವಿಕ' ಎಂಬ ಹೊಸ ಆಭರಣ ಸಂಗ್ರಹ:** ಅಕ್ಷಯ ತೃತೀಯದ ಶುಭ ಸಂದರ್ಭವನ್ನು ಶ್ರೇಷ್ಠಗೊಳಿಸುವ ನಿಟ್ಟಿನಲ್ಲಿ ಮಲಬಾರ್ ಗೋಲ್ಡ್ & ಡೈಮಂಡ್ಸ್ `ಡಿವೈನ್' ಎಂಬ ವಿಶೇಷ ಬ್ರ್ಯಾಂಡ್ ಅಡಿಯಲ್ಲಿ `ತನ್ವಿಕ' ಎಂಬ ಹೊಸ ಆಭರಣ ಸಂಗ್ರಹವನ್ನು ಅನಾವರಣಗೊಳಿಸಿದೆ. ಇದು ಭಕ್ತಿ ಮತ್ತು ಚೈತನ್ಯದ ವಿನ್ಯಾಸಗಳನ್ನು ಒಳಗೊಂಡಿದೆ. ದೈವತ್ವದಿಂದ ಪ್ರೇರೇಪಿತವಾಗಿ ಮತ್ತು ಅತ್ಯುತ್ತಮ ಕರಕುಶಲತೆಯ ಮೂಲಕ ಜೀವ ತುಂಬಿರುವ ಈ ಆಭರಣಗಳ ಸಂಗ್ರಹವು ಹೊಸ ವಿನ್ಯಾಸಗಳಿಂದ ಕೂಡಿದೆ. ಒಟ್ಟಾರೆ ಪ್ರತಿಯೊಂದು ಆಭರಣವೂ ಕಾಲಾತೀತ ಸಂಪ್ರದಾಯ ಮತ್ತು ಋತುವಿನ ಸಮೃದ್ಧಿಯನ್ನು ಪ್ರತಿಬಿಂಬಿಸುತ್ತದೆ.



ಹಬ್ಬದ ಕೊಡುಗೆಗಳ ಬಗ್ಗೆ ಮಾತನಾಡಿದ ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹ್ಮದ್, 'ಅಕ್ಷಯ ತೃತೀಯವು ಸಮೃದ್ಧಿ ಮತ್ತು ಆರಂಭದ ಮುನ್ನುಡಿಯ ದಿನವಾಗಿ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ನಾವು ಈ ಸಂದರ್ಭವನ್ನು ನಮ್ಮ ಗ್ರಾಹಕರಿಗೆ ಮತ್ತಷ್ಟು ವಿಶೇಷವಾಗಿಸುವ ಗುರಿ ಹೊಂದಿದ್ದೇವೆ. ಇದೇ ರೀತಿ ಸಾಟಿಯಿಲ್ಲದ ಮೌಲ್ಯ ಮತ್ತು ಕಾಲಾತೀತ ವಿನ್ಯಾಸಗಳನ್ನು ನೀಡಲಿದ್ದೇವೆ. ನಮ್ಮ ವಿಶೇಷ ಕೊಡುಗೆಗಳು ಗ್ರಾಹಕರಿಗೆ ಕೃತಜ್ಞತೆ ವ್ಯಕ್ತಪಡಿಸಲು ಮತ್ತು ನಮ್ಮ ಮೌಲ್ಯಯುತ ಗ್ರಾಹಕರೊಂದಿಗೆ ಶಾಶ್ವತ ಸಂಬಂಧ ಹೊಂದುವುದನ್ನು ಮುಂದುವರಿಸುವ ಒಂದು ಉತ್ತಮ ಮಾರ್ಗವಾಗಿದೆ' ಎಂದರು.

'ಡಿವೈನ್' ಎಂಬ ವಿಶೇಷ ಬ್ರ್ಯಾಂಡ್ ಅಡಿಯಲ್ಲಿ 'ತನ್ವಿಕ' ಹೊಸ ಆಭರಣ ಸಂಗ್ರಹ ಅನಾವರಣ

ಅಕ್ಷಯ ತೃತೀಯ ಸಮೃದ್ಧಿಯನ್ನು ಸ್ವಾಗತಿಸುವ ಮತ್ತು ಹೊಸ ಆರಂಭಗಳನ್ನು ಗುರುತಿಸುವ ಸಮಯವೆಂದು ಪರಿಗಣಿಸಲಾಗುತ್ತದೆ. ಚಿಂತನಶೀಲವಾಗಿ ವಿನ್ಯಾಸಗೊಳಿಸಲಾಗಿರುವ ಕೊಡುಗೆಗಳು ಮತ್ತು ಗ್ರಾಹಕರಿಗೆ ಅನುಕೂಲವಾಗುವ ಬುಕಿಂಗ್ ಆಯ್ಕೆಗಳೊಂದಿಗೆ ಮಲಬಾರ್ ಗೋಲ್ಡ್ & ಡೈಮಂಡ್ಸ್ ಅರ್ಥಪೂರ್ಣ ಖರೀದಿಗಳನ್ನು ಮಾಡಲು ಅನುವು ಮಾಡಿಕೊಡಲಿದೆ. ಅಲ್ಲದೆ, ಆಭರಣಗಳಲ್ಲಿ ಹೂಡಿಕೆ ಮಾಡಲು ಅಸಾಧಾರಣ ಅವಕಾಶವನ್ನು ಒದಗಿಸುತ್ತಲಿದೆ. ಆ ಮೂಲಕ ಈ ಸುಸಂದರ್ಭದ ಮಹತ್ವಕ್ಕೆ ಅನುಗುಣವಾಗಿ ಕೆಲಸ ಮಾಡುವ ಗುರಿಯನ್ನು ಸಹ ಸಂಸ್ಥೆ ಹೊಂದಿದೆ.

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ರನ್ಯಾ ರಾವ್ ವಿರುದ್ಧ ‘ಕಾಫಿಪೋಸಾ’ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನ ಕಳ್ಳಸಾಗಣೆ ಪ್ರಕರಣ ದಲ್ಲಿ ನಟಿ ರನ್ಯಾ ರಾವ್ ಅವರ ವಿರುದ್ಧ ಕೇಂದ್ರೀಯ ಆರ್ಥಿಕ ಗುಪ್ತಚರ ಬ್ಯೂರೊ (ಸಿಇಐಬಿ) ‘ಕಾಫಿಪೋಸಾ’ ಕಾಯ್ದೆ ಅಡಿ ಬಂಧನದ ಆದೇಶ ಹೊರಡಿಸಿದೆ.

ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯ (ಕಾಫಿಪೋಸಾ) 3(1) ಸೆಕ್ಷನ್ ಅಡಿಯಲ್ಲಿ ರನ್ಯಾ ವಿರುದ್ಧ ಸಿಇಐಬಿ ಜಂಟಿ ಕಾರ್ಯದರ್ಶಿ ಅನುಪಮ್ ಪ್ರಕಾಶ್ ಏಪ್ರಿಲ್ 22ರಂದು ಬಂಧನ ಆದೇಶ ಹೊರಡಿಸಿದ್ದಾರೆ.

ಕಾಫಿಪೋಸಾ ಪ್ರಕರಣದಲ್ಲಿ ಬಂಧನ ವಾದರೆ ಜಾಮೀನಿನ ಮೇಲೆ ಬಿಡುಗಡೆ ಸಾಧ್ಯವಿಲ್ಲ. ‘ಈಗಾಗಲೇ ಬಂಧನದಲ್ಲಿ ಇರುವ ಹರ್ಷವರ್ಧಿನಿ ರನ್ಯಾ ಅವರನ್ನು ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಇರಿಸಿ’ ಎಂದು ಅನುಪಮ್ ಪ್ರಕಾಶ್ ಅವರು ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದಾರೆ.



ರನ್ಯಾ ರಾವ್

ಆದೇಶದ ಪ್ರತಿಯನ್ನು ರನ್ಯಾ ರಾವ್ ಅವರಿಗೂ ಕಳುಹಿಸಿದ್ದಾರೆ.

ಚಿನ್ನ ಕಳ್ಳಸಾಗಣೆ ಮತ್ತು ಇತರ ಕಳ್ಳಸಾಗಣೆ ಚಟುವಟಿಕೆಗಳಲ್ಲಿ ತೊಡಗಿ ಕೊಂಡ ಆರೋಪ ಹೊತ್ತ ವ್ಯಕ್ತಿಗಳನ್ನು ಕಾಫಿಪೋಸಾ ಅಡಿಯಲ್ಲಿ ಬಂಧಿಸಲಾಗುತ್ತದೆ. ಕಾಫಿಪೋಸಾ ಅಡಿ ಬಂಧನಕ್ಕೆ ಒಳಗಾದವರನ್ನು ಕನಿಷ್ಠ 3 ತಿಂಗಳಿಂದ 1 ವರ್ಷದವರೆಗೂ ಸೆರೆವಾಸದಲ್ಲಿ ಇರಿಸಬಹುದು. ತೀರಾ ಗಂಭೀರ ಪ್ರಕರಣ ದಲ್ಲಿ ಸೆರೆವಾಸವನ್ನು 2 ವರ್ಷಗಳವರೆಗೂ ವಿಸ್ತರಿಸಬಹುದಾಗಿದೆ.

1ರಿಂದ ಕುದುರೆಮುಖ ಚಾರಣ ಅವಕಾಶ

ಚಿಕ್ಕಮಗಳೂರು: ಕುದುರೆಮುಖ ವನ್ಯಜೀವಿ ವಿಭಾಗದ ನೇತ್ರಾವತಿ ಪೀಕ್, ಕುದುರೆಮುಖ ಪೀಕ್, ನರಸಿಂಹ ಪರ್ವತ, ಹಿಡ್ಲುಮನೆ ಜಲಪಾತ, ಕೊಡಚಾದ್ರಿ ಚಾರಣ ಪಥಗಳನ್ನು ಮೇ 1ರಿಂದ ಪ್ರವಾಸಿಗರಿಗೆ ಮುಕ್ತ ಗೊಳಿಸಲಾಗುತ್ತಿದೆ. ಪ್ರವಾಸಿಗರು ಆನ್‌ಲೈನ್ (aranyavihara.karnataka.gov.in) ಮೂಲಕ ಕಾಯ್ದಿರಿಸಬಹುದು ಎಂದು ಕುದುರೆಮುಖ ವನ್ಯಜೀವಿ ವಿಭಾಗದ ಪ್ರಕಟಣೆ ತಿಳಿಸಿದೆ.

NMDC Limited
(A Govt. of India Enterprise)
'Khanij Bhavan', 10-3-311/A, Castle Hills, Masab Tank, Hyderabad-500028
CIN:L13100TG1958GOI001674.

CONTRACTS DEPARTMENT

Pre-Tender Meeting Notice **Dated**:25/04/2025

NMDC Limited, A "NAVARATNA" Public Sector Company under Ministry of Steel, Govt. of India, invites experienced, reputed and competent domestic bidders to participate in pre-tender meeting on 30-04-2025,1100 hours for the work of **Establishment of Integrated Control and Command Centre (ICCC) at Head Office – Hyderabad and Implementation of CCTV Surveillance System at Bacheli, Kirandul & Donimalai Complexes**

Venue of Pre-Tender Meeting: NMDC Ltd.,Masab Tank, Hyderabad

For obtaining the details such Brief agenda of the meeting, Preliminary scope of work, time schedule, project site etc. the bidders may visit NMDC website http://www.nmdc.co.in

Further, for any queries the bidders may also contact following officials directly or through e-mail:

1)Shri Ashish Kumar Pandey, SM (E) e-mail: contracts@nmdc.co.in

2)Shri Atul Kumar Tiwari, AGM (Min.) e-Mail: tiwariak@nmdc.co.in

Executive Director (Works)

ಪ್ರಶ್ನೆಪತ್ರಿಕೆ ಸೋರಿಕೆ ವೈದ್ಯಕೀಯ ಸೀಟು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್–2024ರ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದ ಆರೋಪ ಸಾಬೀತಾದ ಕಾರಣ ಇಬ್ಬರು ವಿದ್ಯಾರ್ಥಿಗಳ ವೈದ್ಯಕೀಯ ಸೀಟನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹಿಂಪಡೆದಿದೆ.

ಶ್ರುತಿ ಪಾಂಡೆ ಅವರಿಗೆ ಬೆಂಗಳೂರಿನ ಕೆಂಪೇಗೌಡ ವೈದ್ಯಕೀಯ ಕಾಲೇಜು, ಪ್ರಿಯಾಲ್ ಚೌಹಾಣ್ ಅವರಿಗೆ ಮಂಗಳೂರಿನ ಎಜೆ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಸಿಕ್ಕಿತ್ತು. ನೀಟ್–2024ರ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ತನಿಖೆ ನಡೆಸಿದ ಸಿಬಿಐ,



ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಪಡೆದ ಈ ಇಬ್ಬರು ಭಾಗಿಯಾಗಿರುವುದನ್ನು ದೃಢಪಡಿಸಿತ್ತು. ಸಿಬಿಐ ವರದಿ ಆಧಾರದಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಆಡಳಿತ ಮಂಡಳಿ ಕೋಟಾದಡಿ ಪಡೆದ ಇಬ್ಬರ ಸೀಟುಗಳನ್ನು ರದ್ದುಗೊಳಿಸಲು ಕೆಇಎಗೆ ಸೂಚಿಸಿತ್ತು.

ಈ ಇಬ್ಬರೂ ಮೊದಲ ವರ್ಷದ ಎಂಬಿಬಿಎಸ್ ಕೋರ್ಸ್ ಪೂರ್ಣಗೊಳಿಸುವ ಹಂತದಲ್ಲಿದ್ದು, ಸೀಟು ರದ್ದು ಮಾಡಿರುವ ಆದೇಶವನ್ನು ಕೆಇಎಯು ಕಾಲೇಜು ಆಡಳಿತ ಮಂಡಳಿಗಳಿಗೆ ಕಳುಹಿಸಿದೆ.

ಶ್ರೀ ಜಾನ್ ಮೈಕಲ್ ಕುನ್ಹಾ ಕೋವಿಡ್–19 ವಿಚಾರಣಾ ಆಯೋಗ

ದಿ: 03/05/2021 ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದಾಗಿ ಮರಣ ಹೊಂದಿರುವ ಘಟನೆಗೆ ಸಂಬಂಧಿಸಿದಂತೆ ಹೆಚ್ಚುವರಿ ತನಿಖೆ

ಸಾರ್ವಜನಿಕ ತಿಳುವಳಿಕೆ

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್.ಡಿ. 99 ಪಿಸಿಇ 2023 ದಿ: 26/12/2024 ರಂತೆ, ದಿ: 03/05/2021 ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದಾಗಿ ಮರಣ ಹೊಂದಿರುವ ಘಟನೆಗೆ ಸಂಬಂಧಿಸಿದಂತೆ ಹೆಚ್ಚುವರಿ ತನಿಖೆಯನ್ನು ಮೇಲ್ಕಾಣಿಸಿದ ಆಯೋಗಕ್ಕೆ ವಹಿಸಿದ್ದು, **ಈ ಮೂಲಕ ಸಾರ್ವಜನಿಕರಿಗೆ ತಿಳಿಸಬಯಸುವುದೇನೆಂದರೆ,** ವಿಚಾರಣಾ ಆಯೋಗದ ವ್ಯಾಪ್ತಿಗೆ ನಿಗಧಿಯಾದ ಈ ಕೆಳಕಂಡ ವಿಷಯಗಳ ಬಗ್ಗೆ ಮತ್ತು ಘಟನೆಯ ವಾಸ್ತವಾಂಶದ ವಿವರಗಳ ಕುರಿತು ಮಾಹಿತಿ ಮತ್ತು ಸತ್ಯ ಸಂಗತಿಗಳ ಹಾಗೂ ಸಂದರ್ಭಗಳ ವಿವರ ತಿಳಿದಿರುವವರು ಮತ್ತು ತನಿಖಾ ಆಯೋಗದ ನಡವಳಿಗಳ ಬಗ್ಗೆ ಆಸಕ್ತಿಯಿರುವ ಅಥವಾ ತನಿಖಾ ಆಯೋಗಕ್ಕೆ ಸಹಕರಿಸಲಿಚ್ಛಿಸುವವರು, ತಮ್ಮ ಹೇಳಿಕೆಗಳನ್ನು ಮತ್ತು ಸಾಕ್ಷ್ಯದಾಖಲೆಗಳನ್ನು ಎರಡು ಪ್ರತಿಗಳಲ್ಲಿ, **ಪ್ರಮಾಣಿತ ಅಫಿಡವಿಟ್‌ನೊಂದಿಗೆ** ಸಲ್ಲಿಸಲು ಅವಕಾಶವಿರುತ್ತದೆ.

ಮೇಲ್ಕಂಡ ಹೇಳಿಕೆ ಮತ್ತು ಸಾಕ್ಷ್ಯಗಳನ್ನು, ಈ ತಿಳುವಳಿಕೆ **ಪ್ರಕಟಣೆಯಾದ 30 ದಿನಗಳೊಳಗಾಗಿ,** ಈ ಕೆಳಗಡೆ ನಮೂದಿಸಿರುವ ವಿಳಾಸಕ್ಕೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆ/ ಕೊರಿಯರ್ ಸೇವೆಯ ಮೂಲಕ ಸಲ್ಲಿಸಿದ್ದಲ್ಲಿ ಅವುಗಳನ್ನು ನಿಯಮಾನುಸಾರ ಪರಿಗಣಿಸಲಾಗುವುದು.

ಸಹಿಮಾಡಿದ scanned ಅಫಿಡಾವಿಟ್ ಮತ್ತು ದಾಖಲೆಗಳ ಅಡಕಗಳನ್ನು ಮಿಂಚಂಚೆ cdinqcom@gmail.com ಗೆ ಕಳುಹಿಸತಕ್ಕದ್ದು.

ತನಿಖಾ ಅಂಶಗಳು:


1. ದಿ:03.05.2021ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಕೋವಿಡ್–19 ರ ರೋಗಿಗಳು ಆಮ್ಲಜನಕ ಕೊರತೆಯಿಂದಾಗಿ ಮರಣ ಹೊಂದಿರುವ ಕಾರಣ ಹಾಗೂ ಇದಕ್ಕೆ ಕಾರಣರಾದವರ ಬಗ್ಗೆ ತನಿಖೆ ನಡೆಸುವುದು.
2. ಕೋವಿಡ್–19 ರ ಸಮಯದಲ್ಲಿ ಆಮ್ಲಜನಕ ಕೊರತೆ ಹಾಗೂ ನಿರ್ವಹಣೆಯಲ್ಲಿ ನಿಯಮಗಳನ್ನು ಪಾಲಿಸುವಲ್ಲಿ ವಿಫಲರಾಗಿರುವ ಅಧಿಕಾರಿ/ನೌಕರರು ಯಾರು? ಹಾಗೂ ಸದರಿಯವರ ವಿರುದ್ಧ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಸಲಹೆ.
3. ಮೇಲೆ ತಿಳಿಸಿರುವ ತನಿಖೆಯನ್ನು ಪರಿಶೀಲನೆಯ ಸಂಧರ್ಭದಲ್ಲಿ ಕಂಡುಬರುವ ಲೋಪದೋಷಗಳು ಇನ್ನು ಮುಂದೆ ಜರುಗದಂತೆ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಸೂಕ್ತ ಸಲಹೆ.
4. ಕೋವಿಡ್–19 ರ ಸಮಯದಲ್ಲಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಉಂಟಾಗಿರುವ ಮರಣ ಹಾಗೂ ಇತರೆ ಅಂಶಗಳ ಬಗ್ಗೆ ಸರ್ಕಾರದಿಂದ ವಹಿಸಬಹುದಾದ ಇನ್ನಿತರೆ ವಿಷಯಗಳ ಬಗ್ಗೆ ತನಿಖೆ ಮಾಡುವುದು.

ಕಛೇರಿ ವಿಳಾಸ: **ಕೊಠಡಿ ಸಂಖ್ಯೆ. 08, ಒಂದನೇ ಮಹಡಿ, ಹಳೇ ಕಟ್ಟಡ, ಕುಮಾರ ಕೃಪ ಅಥಿತಿ ಗೃಹ, ಬೆಂಗಳೂರು–560001.**

ವಿಚಾರಣಾ ಆಯುಕ್ತರು
ನ್ಯಾಯಮೂರ್ತಿ ಶ್ರೀ ಜಾನ್ ಮೈಕಲ್ ಕುನ್ಹಾ
ಪೂರ್ವ ನ್ಯಾಯಾಧೀಶರು,
ಉಚ್ಚ ನ್ಯಾಯಾಲಯ ಕರ್ನಾಟಕ.

ಬೆಂಗಳೂರು
ದಿನಾಂಕ: 17/04/2025







ಮಕ್ಕಳನ್ನು ಕಾಡುತ್ತಿದೆ ರಕ್ತದ ಕ್ಯಾನ್ಸರ್

ಪಿಬಿಸಿಆರ್ ವಿಶ್ಲೇಷಣೆ ಪ್ರಕಾರ ವಾರ್ಷಿಕ 1,500ಕ್ಕೂ ಅಧಿಕ ಪ್ರಕರಣ ದೃಢ

● ವರುಣ ಹೆಗಡೆ

ಬೆಂಗಳೂರು: ವಾಯುಮಾಲಿನ್ಯ, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಮಕ್ಕಳೂ ಕ್ಯಾನ್ಸರ್ ಪೀಡಿತರಾಗುತ್ತಿದ್ದಾರೆ. ದೃಢ ಕ್ಯಾನ್ಸರ್ ಪ್ರಕರಣಗಳಲ್ಲಿ ಹೆಚ್ಚಿನವರು ರಕ್ತದ ಕ್ಯಾನ್ಸರ್‌ಗೆ ಒಳಪಡುತ್ತಿದ್ದಾರೆ.

ಇಲ್ಲಿನ ಜನಸಂಖ್ಯೆ ಆಧಾರಿತ ಕ್ಯಾನ್ಸರ್ ನೋಂದಣಿಯ (ಪಿಬಿಸಿಆರ್) ವಿಶ್ಲೇಷಣೆಯಿಂದ ಇದು ದೃಢಪಟ್ಟಿದೆ. ಪಿಬಿಸಿಆರ್ ಕ್ಯಾನ್ಸರ್ ದತ್ತಾಂಶಗಳನ್ನು ಸಂಗ್ರಹಿಸಿ, ಹೊಸ ಪ್ರಕರಣಗಳ ಏರಿಳಿತವನ್ನು ನಿರ್ಧರಿಸುತ್ತಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯಡಿ (ಐಸಿಎಂಆರ್) ಈ ನೋಂದಣಿಯು ಕಾರ್ಯ ನಿರ್ವಹಿಸುತ್ತಿದ್ದು, ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳು, ಚಿಕಿತ್ಸಾಲಯ, ಡಯಾಗ್ನಾಸ್ಟಿಕ್ ಸೆಂಟರ್ ಸೇರಿ ವಿವಿಧ ಮೂಲಗಳಿಂದ ಕ್ಯಾನ್ಸರ್ ಸಂಬಂಧಿತ ಮಾಹಿತಿಗಳನ್ನು ಸಂಗ್ರಹಿಸುತ್ತಿದೆ. ಇದರ ಪ್ರಕಾರ ರಾಜ್ಯದಲ್ಲಿ 14 ವರ್ಷದೊಳಗಿನ ಮಕ್ಕಳ ಕ್ಯಾನ್ಸರ್ ಪ್ರಕರಣವೂ ಏರಿಕೆಯಾಗುತ್ತಿದ್ದು, ಕಳೆದ ವರ್ಷ 1,533 ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಈ ಪ್ರಕರಣಗಳಲ್ಲಿ 876 ಗಂಡುಮಕ್ಕಳಾದರೆ, 657 ಹೆಣ್ಣುಮಕ್ಕಳಾಗಿದ್ದಾರೆ.

ದೃಢ ಪ್ರಕರಣಗಳಲ್ಲಿ ರಕ್ತದ ಕ್ಯಾನ್ಸರ್‌ಗೆ ಹೆಚ್ಚಿನ ಮಕ್ಕಳು ಒಳಪಡುತ್ತಿದ್ದರೆ, ಮಿದುಳು ಹಾಗೂ ನರಸಂಬಂಧಿ ಕ್ಯಾನ್ಸರ್ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿರುವ ಎರಡನೇ ಪ್ರಮುಖ ಕ್ಯಾನ್ಸರ್ ಪ್ರಕಾರವಾಗಿದೆ. ಶೇ 73ರಷ್ಟು ಪ್ರಕರಣಗಳಲ್ಲಿ ಕಿಮೊಥೆರಪಿ ನಡೆಸಿದರೆ, ಶೇ 12ರಷ್ಟು ಪ್ರಕರಣಗಳಲ್ಲಿ ವಿಕಿರಣ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ.

ಅಸ್ಥಿಮಜ್ಜೆ ಚಿಕಿತ್ಸೆ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಮಕ್ಕಳ ಚಿಕಿತ್ಸೆಗೆ ಪ್ರತ್ಯೇಕ ವಿಭಾಗವಿದ್ದು, ಪ್ರತಿ ವರ್ಷ 630 ಮಕ್ಕಳು ಹೊಸದಾಗಿ ದಾಖಲಾಗುತ್ತಿದ್ದಾರೆ. ರಕ್ತದ ಕ್ಯಾನ್ಸರ್ ಎದುರಿಸುತ್ತಿರುವ ಮಕ್ಕಳಿಗೆ ಅಲ್ಲಿ ಅಸ್ಥಿಮಜ್ಜೆ ಚಿಕಿತ್ಸೆಯನ್ನೂ ಒದಗಿಸಲಾಗುತ್ತಿದೆ. ಈಗಾಗಲೇ ನೂರಕ್ಕೂ ಅಧಿಕ ಮಂದಿಗೆ ಅಸ್ಥಿಮಜ್ಜೆ ಕಸಿ ಮಾಡಲಾಗಿದೆ.

‘ವಾಯುಮಾಲಿನ್ಯ, ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಸೇವನೆ, ಅನುವಂಶೀಯತೆ ಸೇರಿ ವಿವಿಧ ಕಾರಣಗಳಿಂದ ಮಕ್ಕಳಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ತಪಾಸಣೆಯೂ ಹೆಚ್ಚುತ್ತಿರುವುದರಿಂದ ಪ್ರಕರಣಗಳು ದೃಢಪಡುತ್ತಿವೆ. ಹಿಂದೆ ಎಷ್ಟೋ ಮಂದಿಗೆ ಕ್ಯಾನ್ಸರ್ ಇರುವುದೇ ತಿಳಿದಿರುತ್ತಿರಲಿಲ್ಲ. ಸಾರ್ವಜನಿಕರು ಮತ್ತು ವೈದ್ಯಕೀಯ ವೃತ್ತಿಪರರಲ್ಲಿ ಮಕ್ಕಳ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವುದು ಅತ್ಯಗತ್ಯ’ ಎಂದು ಕಿದ್ವಾಯಿ ಆಸ್ಪತ್ರೆಯ ನಿವೃತ್ತ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.



ವಯಸ್ಕರ ಜತೆಗೆ ಮಕ್ಕಳಲ್ಲಿಯೂ ಕ್ಯಾನ್ಸರ್ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ದೇಹದಲ್ಲಿ ಶಂಕಿತ ಗೆಡ್ಡೆ ಕಾಣಿಸಿಕೊಂಡರೆ ತಪಾಸಣೆಗೆ ಒಳಪಡಬೇಕು. ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದರೆ ಚಿಕಿತ್ಸೆ ಸುಲಭ

ಡಾ.ಸಿ. ರಾಮಚಂದ್ರ, ಕ್ಯಾನ್ಸರ್ ತಜ್ಞ



ಗಂಡುಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡ ಕ್ಯಾನ್ಸರ್

ಕ್ಯಾನ್ಸರ್ ವಿಧ	ಪ್ರಮಾಣ (ಶೇ)
ರಕ್ತದ ಕ್ಯಾನ್ಸರ್	45
ಲಿಂಫೊಮಾ ಕ್ಯಾನ್ಸರ್	14.5
ಮಿದುಳು, ನರ ಸಂಬಂಧಿ ಕ್ಯಾನ್ಸರ್	12.9
ಮೂಳೆ ಸಂಬಂಧಿ ಕ್ಯಾನ್ಸರ್	5.6
ಕಣ್ಣಿಗೆ ಸಂಬಂಧಿಸಿದ ಕ್ಯಾನ್ಸರ್	2.6

ಹೆಣ್ಣುಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡ ಕ್ಯಾನ್ಸರ್

ಕ್ಯಾನ್ಸರ್ ವಿಧ	ಪ್ರಮಾಣ (ಶೇ)
ರಕ್ತದ ಕ್ಯಾನ್ಸರ್	44.6
ಮಿದುಳು, ನರ ಸಂಬಂಧಿ ಕ್ಯಾನ್ಸರ್	12.1
ಲಿಂಫೊಮಾ ಕ್ಯಾನ್ಸರ್	9.5
ಮೂಳೆ ಸಂಬಂಧಿ ಕ್ಯಾನ್ಸರ್	5.8
ಅಂಗಾಂಶಕ್ಕೆ ಸಂಬಂಧಿಸಿದ ಕ್ಯಾನ್ಸರ್	3.4

‘ಕ್ಯಾನ್ಸರ್: ಮನೋಸಾಮಾಜಿಕ ಆರೈಕೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ಯಾನ್ಸರ್ ಪೀಡಿತರು ಮಾನಸಿಕವಾಗಿ ಕುಗ್ಗಿರುತ್ತಾರೆ. ಆದ್ದರಿಂದ ಕ್ಯಾನ್ಸರ್ ಪೀಡಿತರಿಗೆ ಮನೋಸಾಮಾಜಿಕ ಆರೈಕೆ ಅಗತ್ಯ’ ಎಂದು ಕ್ಯಾನ್ಸರ್ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದರು.

ವಿಶ್ವ ಸೈಕೋ-ಆಂಕಾಲಜಿ ದಿನದ ಪ್ರಯುಕ್ತ ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ (ಎಚ್‌ಸಿಜಿ) ಮತ್ತು ಸೆಂಟರ್ ಆಫ್ ಸೈಕೋ-ಆಂಕಾಲಜಿ ಫಾರ್ ಎಜುಕೇಶನ್ ಆ್ಯಂಡ್ ರಿಸರ್ಚ್ ಸಂಸ್ಥೆ ಹಮ್ಮಿಕೊಂಡಿದ್ದ ದುಂಡುಮೇಜಿನ ಸಭೆಯಲ್ಲಿ ಮನೋಸಾಮಾಜಿಕ ಆರೈಕೆಯ ಅಗತ್ಯದ ಬಗ್ಗೆ ಚರ್ಚಿಸಲಾಯಿತು. ಕ್ಯಾನ್ಸರ್ ತಜ್ಞರು, ಮನೋವೈದ್ಯಕೀಯ ತಜ್ಞರು, ವಕೀಲರು, ನೀತಿ ನಿರೂಪಕರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ಕ್ಯಾನ್ಸರ್ ಪೀಡಿತರಿಗೆ ಮನೋಸಾಮಾಜಿಕ ಆರೈಕೆ ಅಗತ್ಯವಿದೆ. ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರು ಮಾನಸಿಕವಾಗಿ ಕುಗ್ಗಿರುತ್ತಾರೆ. ಅವರಿಗೆ ಮನೋವೈದ್ಯಕೀಯ ಬೆಂಬಲ ಒದಗಿಸಬೇಕಾಗುತ್ತದೆ. ಚಿಕಿತ್ಸೆಗೆ ಸಂಬಂಧಿಸಿದಂತೆ ಸರ್ಕಾರ ಅಗತ್ಯ ಸಹಕಾರ ನೀಡಲಿದೆ’ ಎಂದು ಹೇಳಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶ ಡಾ. ನವೀನ್ ಟಿ., ‘ಆಂಕಾಲಜಿ ತರಬೇತಿಯು ಮಾನಸಿಕ ಆರೈಕೆಯನ್ನು ಒಳಗೊಂಡಿರಬೇಕು. ಈ ತರಬೇತಿಯನ್ನು ವೈದ್ಯರ ಜತೆಗೆ ಶುಶ್ರೂಷಕರಿಗೂ ನೀಡಬೇಕು’ ಎಂದರು.

ಸಾಗಣೆ ವೆಚ್ಚ ಶೇ 8ಕ್ಕೆ ಇಳಿಕೆ ಎಂ.ಬಿ. ಪಾಟೀಲ ಆಶಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಬೆಳವಣಿಗೆ, ವಿಶ್ವ ದರ್ಜೆಯ ಸರಕು ಸಾಗಣೆ, ಕೈಗಾರಿಕಾ ಕಾರಿಡಾರ್‌ಗಳ ಮೂಲಸೌಕರ್ಯ ಅಭಿವೃದ್ಧಿಗೆ ಕರ್ನಾಟಕ ಸರ್ಕಾರ ರಚನಾತ್ಮಕ ಕ್ರಮಗಳನ್ನು ತೆಗೆದುಕೊಂಡಿದೆ. ಉಕ್ಕು ವಲಯದ ಸಾಗಣೆ ವೆಚ್ಚವನ್ನು ಶೇ 14ರಿಂದ ಶೇ 8ಕ್ಕೆ ಇಳಿಸಿದರೆ ಇನ್ನಷ್ಟು ಅನುಕೂಲ ವಾಗುತ್ತದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.



ಎಂ.ಬಿ. ಪಾಟೀಲ

ಮುಂಬೈನಲ್ಲಿ ನಡೆದ ಅಂತರ ರಾಷ್ಟ್ರೀಯ ಪ್ರದರ್ಶನ ಮತ್ತು ವಾಣಿಜ್ಯ ಸಮಾವೇಶ ‘ಇಂಡಿಯಾ ಸ್ಟೀಲ್-25’ರಲ್ಲಿ ‘ಕರ್ನಾಟಕದಲ್ಲಿನ ಉಕ್ಕು ವಲಯದ ಭವಿಷ್ಯ’ ಕುರಿತು ಅವರು ಮಾತನಾಡಿದರು.

ರಾಜ್ಯದ ಬಳ್ಳಾರಿ, ಚಿತ್ರದುರ್ಗ, ಸಂಡೂರು ಪ್ರದೇಶಗಳಲ್ಲಿನ ಕಬ್ಬಿಣದ ಅದಿರಿನ ನಿಕ್ಷೇಪಗಳು ಭಾರತದ ಖನಿಜ ಆಧಾರಿತ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ದೇಶದ ಉಕ್ಕು ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇ 15ರಷ್ಟಿದೆ. ಮೂಲಸೌಕರ್ಯ, ಬಂದರು, ಕೈಗಾರಿಕಾ ವಲಯ, ಟ್ರಕ್ ಟರ್ಮಿನಲ್ ಮತ್ತು ಸಾರಿಗೆ ವ್ಯವಸ್ಥೆಯ ಸಂಪರ್ಕ ಜಾಲಗಳು ವ್ಯವಸ್ಥಿತವಾಗಿ ಇರುವ ಕಾರಣ ಕೇಂದ್ರ ಸರ್ಕಾರ ರಾಜ್ಯಕ್ಕೆ ಹೆಚ್ಚಿನ ಸಹಕಾರ ನೀಡಬೇಕು ಎಂದು ಕೋರಿದರು.

3ಕ್ಕೆ ‘ಶುಭಸ್ಯ ಶೀಘ್ರಂ’ ಕಾರ್ಯಕ್ರಮ

ಬೆಂಗಳೂರು: ಬಸವನಗುಡಿಯ ಗಾಯನ ಸಮಾಜದಲ್ಲಿ ಮೇ 3-4ರಂದು ಹಿಂದೂ ವಧು-ವರಾನ್ವೇಷಣೆ ಕಾರ್ಯಕ್ರಮ ‘ಶುಭಸ್ಯ ಶೀಘ್ರಂ’ ನಡೆಯಲಿದೆ ಎಂದು ಫ್ಯೂಸ್ ನೆಟವರ್ಕ್ ಸಿಇಒ ಜಿ.ಸ್ವಾಮೀಜಿ ಹೇಳಿದರು.

ಹಿಂದೂ ವಧು-ವರರಿಗೆ ಸಂಗಾತಿ ಆಯ್ಕೆಗೆ ಅನುವು ನೆರವಾಗಲಿದೆ. ಅಂತರ್ಜಾತಿ ವಿವಾಹದ ಆಸಕ್ತರಿಗೆ ವಿಶೇಷ ವಿಭಾಗ ತೆರೆಯಲಾಗಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಧುವಿಗೆ ₹1,000 ಹಾಗೂ ವರನಿಗೆ ₹2,000 ಪ್ರವೇಶ ಶುಲ್ಕ ವಿದೆ. ಕೃಷಿಕ ಕುಟುಂಬದ ವಧುಗಳು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬದವರಿಗೆ ಉಚಿತ ಪ್ರವೇಶ ಇದೆ. ಹೆಸರು ನೋಂದಣಿಗೆ ಮೇ 1 ಕಡೇ ದಿನ. ಮಾಹಿತಿಗೆ 9108853377 ಸಂಪರ್ಕಿಸಬಹುದು ಎಂದು ಹೇಳಿದರು.

ಬೈಕ್ ಟ್ಯಾಕ್ಸಿ ಸ್ಥಗಿತಗೊಳಿಸಿ: ಸಚಿವ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ವಾರಗಳಲ್ಲಿ ಎಲ್ಲ ತರಹದ ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆ ಸ್ಥಗಿತಗೊಳಿಸಲು ಕ್ರಮ ಜರುಗಿಸಲು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಇಲಾಖೆ ಕಾರ್ಯದರ್ಶಿ, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರಿಗೆ ಸೂಚನೆ ನೀಡಿದ್ದಾರೆ.



‘ಬೈಕ್ ಟ್ಯಾಕ್ಸಿ ಸೇವೆ ಮುಂದುವರಿಸುವ ಅನುಮತಿಗೆ ನಿರ್ದೇಶನ ನೀಡಬೇಕು’ ಎಂದು ಕೋರಿ, ‘ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್’, ‘ರೊಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್’ ಮತ್ತು ‘ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್’ ಕಂಪನಿಗಳು ರಿಟ್ ಅರ್ಜಿ ಸಲ್ಲಿಸಿದ್ದವು.

ವಿಚಾರಣೆ ನಡೆಸಿದ್ದ ಹೈಕೋರ್ಟ್, ‘ಮೋಟಾರು ವಾಹನ ಕಾಯ್ದೆ-1988ರ ಕಲಂ 93ರ ಅನುಸಾರ ರಾಜ್ಯ ಸರ್ಕಾರ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ತನಕ ಓಲಾ, ಉಬರ್, ರ‍್ಯಾಪಿಡೊಗಳು ಬೈಕ್ ಟ್ಯಾಕ್ಸಿ ಸೇವೆಯನ್ನು ಆರು ವಾರಗಳ ಒಳಗಾಗಿ ನಿರ್ಬಂಧಿಸಬೇಕು’ ಎಂದು ಇತ್ತೀಚೆಗೆ ಆದೇಶಿಸಿತ್ತು. ಈ ಆದೇಶ ಜಾರಿಗೆ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವರು ಲಿಖಿತವಾಗಿ ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

REAL ESTATE BUYING

Industrial & Factory

Out-Station

WANTED FOR Outright Purchase 2 Acre industrial converted land/ KIADB Land in Harohalli or Malur Indl Area. Contact:9880941283.

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30x40, 40x60 Anjanapura`BDA, Banashankari 6th`Stage, JCHS, BCCHS, BCMC Balaji Layout. Gubblala NarayanaNagar Vajarahalli. Call: 9663454878

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

ANJANAPURA WANTED JP Nagar, 8th and 9th Phase, Banashankari 5th & 6th Stage Viveshwaraya Layout Kempegowda Layout any measurement. Ph: 9845132011/ 9663554448

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

AVAILABLE ON RENT



MAGADI ROAD

1st FLOOR -6500 Sqft. **LOWER GROUND** - 6000 Sqft Suitable For Office/ Gym / Beauty Parlor/ Warehouse /Cloud Kitchen. **Call : 9845049000**

FOR RENT: B.G.Road, Bilekahalli, G+1, 6000.sft. 50HP. Commercial/ Industrial/ Office/ Coworking Space, near Metro, Apollo Hospital. 9845191478.

KORAMANGALA FOR Rent 35 Rooms Suitable for Hotel Rooms/ PG/ 1RK, near Prestige RMZ Startech. Call: 9845632519

TO:LET : Restaurant space 4450 sqft. 80Ft. Main Road, Koramangala 7th Block, Next to Van Huesen, Only Brands. Contact: 9964485388, 6364431666, 9742003920

200 TO 2000 Sqft Available For Rent 22K - 1Lakh Furnished office Space on JNC Road, Koramangala call Owner Rajesh 9845167755

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura, Hoskote Contact: 9341234288/ 9663224353/ 9845417487.

PERSONAL

Change of Name

I, RAMAKIRUSHNAN R/a#148/8 G.Ramadass Building Lalbagh Doddamavalli, Bangalore 560004 have`changed my`minor Daughter's Name from DHARANIKA to TARUNIKA. R. (DOB:17.9.2010) vide`affidavit dated`25.4.2025 before`Notary L. Shankaranarayana Bengaluru.

I D C SHEKAR, S/o, Dasarathan, res at 11, 4th cross, 27th Main, VGS Layout, Ejipura, Bangalore 560047, changed my name to CHANDRA SHEKAR D, wide affidavit no. IN-KA13759147088579X aft. 23 Apr 2025

BUSINESS

Business to Business

Business

FOR ALL Branding/ Digital social media marketing, hoardings, Bus back, Auto back, no parking ads, meta, Google contact venuscast Technologies pvt ltd 9538123445/ 8722123445

PUBLIC NOTICE

PUBLIC NOTICE

This is to inform the general public that my client intends to purchase the immovable property mentioned and described in the schedule here below from its owner, **Sri. A. Seetha Rama Rao**, son of Sri. Venkatappa Rao (hereafter referred to as “Owner”). The Owner represents that the Schedule Property is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/ objection(s)/demand(s) to the proposed transaction.

SCHEDULE

All that piece and parcel of the below mentioned properties situated at Kethohalli Village, Kasaba Hobli, Ramanagara Taluk, Ramanagara District:

Sl. No.	Sy. No.	Extent in Acres & Guntas	Boundaries			
			East by	West by	North by	South by
1.	123/1	00-06.4	Sy. No. 126/1	Sy. No. 123/5	Sy. No. 126/2	Sy. No. 123/4
2.	123/5	00-06.4	Sy. No. 123/1	Sy. No. 123/2	Sy. No. 126/2	Sy. No. 123/4

Vinay K. S., Advocate,
Vinay Kademane & Associates
307, 3rd Floor, Prestige Centre Point,
No.7/49, Edward Road, Bengaluru-560001
Ph.: 080 22863885
email:vinay@vinaykademane.in

Place : Bengaluru
Date : 25-04-2025

JOB OPPORTUNITIES

Accounts & Finance

REQUIRED ACCOUNTANT with tally Knowledge/ CIVIL ENGINEER with Experience in Water Supply Projects & STP Projects/ BILLING ENGINEER. Send your resume on Watsapp 9742501313 and maloocons@live.in.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

MORE Classifieds IN SUPPLEMENT

CONNECT



DH DECCAN HERALD ಪ್ರಜಾವಾಣಿ

Classifieds More value, more impact

EDUCATION

Book your Educational Related Ads in DH All Karnataka + Prajavani Bengaluru City

www.dhclassifieds.com

BOOK NOW

*Conditions apply

For more details contact:

+91 9731810277 | +91 9886213331

080- 45557163/164

‘ಎಕ್ಸ್‌ಪೊ’ದಲ್ಲಿ ಬಿಎಂಟಿಸಿಗೆ ಎರಡು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಮತ್ತು ಶುಕ್ರವಾರ ನಡೆದ ‘ಕನೆಕ್ಟೆಡ್ ಆಟೊನೊಮಸ್ ಆ್ಯಂಡ್ ಎಲೆಕ್ಟ್ರಿಕ್ ವೆಹಿಕಲ್ ಎಕ್ಸ್‌ಪೊ’ದಲ್ಲಿ ಬಿಎಂಟಿಸಿ ಎರಡು ಪ್ರಶಸ್ತಿಗಳನ್ನು ಪಡೆದಿದೆ.

ಪರಿಸರಸ್ನೇಹಿ, ವಿದ್ಯುತ್ ಆಧಾರಿತ ಎಂಜಿನ್‌ಗಳ ವಾಹನಗಳನ್ನು ಹೆಚ್ಚಿಸುವ ಕ್ರಮಗಳಿಗಾಗಿ ‘ಪಯೋನಿರಿಂಗ್ ಇನ್ ಗ್ರೀನ್ ಪಬ್ಲಿಕ್ ಟ್ರಾನ್ಸ್‌ಪೋರ್ಟ್’ ಪ್ರಶಸ್ತಿ, ಡಿಜಿಟಲ್ ಆಧಾರಿತ ಪಾವತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ್ದಕ್ಕಾಗಿ ‘ನೆಕ್ಸ್ಟ್ ಜೆನ್ ಕಮ್ಯೂಟರ್ ಕನ್ವಿನಿಯಸ್’ ಪ್ರಶಸ್ತಿಗಳನ್ನು ಪಡೆದಿದೆ.

ಬಿಎಂಟಿಸಿ ಕೇಂದ್ರೀಯ ವಲಯ ವಿಭಾಗೀಯ ನಿಯಂತ್ರಣಾಧಿಕಾರಿ ಜಗದೀಶ್ ಎಂ., ಕಾರ್ಯ ವ್ಯವಸ್ಥಾಪಕ ಶರಣ್ ಬಸವರಾಜ್ ಕೆ.ಎಂ. ಅವರು ಸಂಸ್ಥೆಯ ಪರವಾಗಿ ಪ್ರಶಸ್ತಿ ಸ್ವೀಕರಿಸಿದರು.



ಸಂಗೀತ ಕಛೇರಿ

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ವೆಂಕಟೇಶ್ ಕುಮಾರ್ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಶುಕ್ರವಾರ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

‘ಗುಲ್ಬರ್ಗ ವಿ.ವಿಗೆ ಬಸವಣ್ಣ ಹೆಸರಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರಿಡುವ ಮೂಲಕ ಸಮುದಾಯದ ಬೇಡಿಕೆಯನ್ನು ಈಡೇರಿಸಲು ಸರ್ಕಾರ ಮುಂದಾಗಬೇಕು ಎಂದು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಒತ್ತಾಯಿಸಿದರು.

ಜೆ.ಎಚ್.ಪಟೇಲ್ ಅವಧಿಯಲ್ಲಿಯೇ ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಬಸವಣ್ಣನ ಹೆಸರು ನಾಮಕರಣ ಮಾಡಬೇಕು ಎಂಬ ಚರ್ಚೆಯಾಗಿತ್ತು. ಆದರೆ, ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದ ಸಾಧ್ಯವಾಗಲಿಲ್ಲ. ಈಗಲಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರು ನಾಮಕರಣ ಮಾಡುವ ಕುರಿತು ಘೋಷಿಸಬೇಕು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ನೂತನ ಸಂಸತ್ ಭವನದ ಆವರಣದಲ್ಲಿ ಪ್ರತಿಷ್ಠಾಪಿಸಿರುವ ಬಸವೇಶ್ವರ ಮೂರ್ತಿಗೆ ಬಸವ ಜಯಂತಿ ನಿಮಿತ್ತ ಏಪ್ರಿಲ್ 30ರಂದು ಬೆಳಿಗ್ಗೆ 8ಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಗುವುದು. ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್, ಪ್ರಲ್ಹಾದ್ ಜೋಶಿ, ಎಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ ಸೇರಿ ಅನೇಕ ಸಚಿವರು ಪಾಲ್ಗೊಳ್ಳಲಿದ್ದಾರೆ ಎಂದರು.

ತೆಲಂಗಾಣ, ಆಂಧ್ರಪ್ರದೇಶ, ಅರುಣಚಲ ಪ್ರದೇಶ, ತಮಿಳುನಾಡು, ಛತ್ತೀಸಗಡ, ಜಾರ್ಖಂಡ್, ಅಸ್ಸಾಂ, ಮೇಘಾಲಯ ಸೇರಿ ಹಲವು ರಾಜ್ಯಗಳಲ್ಲಿ ಬಸವೇಶ್ವರ ಜಯಂತಿ ಆಚರಿಸುವಂತೆ ಸ್ವಾಮೀಜಿಗಳು ಕೋರಿದ್ದಾರೆ. ಈ ಬಗ್ಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಗುಂಡಿ ಮುಚ್ಚಲೂ ಆಗುತ್ತಿಲ್ಲ: ಟೀಕೆ



ವಿ.ಸೋಮಣ್ಣ

ನಗರದಲ್ಲಿ ಗುಂಡಿ ಮುಚ್ಚಲು ಆಗುತ್ತಿಲ್ಲ. ಬಿಬಿಎಂಪಿಯನ್ನು ವಿಭಜಿಸಿ ಏಳು ನಗರ ಪಾಲಿಕೆಗಳನ್ನು ಮಾಡಲಾಗುತ್ತಿದೆ. ಬಿಬಿಎಂಪಿ ಚುನಾವಣೆಯನ್ನು ಮುಂದೂಡಲು ಸರ್ಕಾರದ ತಂತ್ರವಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಬಿಬಿಎಂಪಿ ವಿಭಜನೆ ರೂವಾರಿಯಾಗಿದ್ದು, ಇದಕ್ಕೆಲ್ಲ ಅವರೆ ಮಾಸ್ಟರ್ ಎಂದು ಸೋಮಣ್ಣ ಲೇವಡಿ ಮಾಡಿದರು.

ಜಾತಿಗಣತಿ ವರದಿ ಗೊಂದಲದ ಗೂಡಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ಈ ವರದಿ ತಿರಸ್ಕರಿಸಿ, ಹೊಸದಾಗಿ ಪಾರದರ್ಶಕವಾಗಿ ವೈಜ್ಞಾನಿಕವಾಗಿ ಜಾತಿಗಣತಿ ಮಾಡಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

‘ಪಾರದರ್ಶಕ ಸಮೀಕ್ಷೆ ನಡೆಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯ ಉಪ ಜಾತಿಗಳ ಜನಸಂಖ್ಯೆಯ ಬಗ್ಗೆ ಅನುಮಾನಗಳಿಗೆ ಅವಕಾಶ ಇಲ್ಲದಂತೆ ಸಂಪೂರ್ಣ ಪಾರದರ್ಶಕವಾಗಿ ಸಮೀಕ್ಷೆ ನಡೆಸಬೇಕು’ ಎಂದು ಕರ್ನಾಟಕ ನವ ಜಾಗೃತಿ ವೇದಿಕೆ ಆಗ್ರಹಿಸಿದೆ.

‘ವಿವರ ಭರ್ತಿ ಮಾಡಿದ ನಮೂನೆಯ ಎರಡು ಪ್ರತಿ ತಯಾರಿಸಿ, ಕುಟುಂಬದ ಒಬ್ಬ ಸದಸ್ಯ ಮತ್ತು ಗಣತಿದಾರರು ಸಹಿ ಮಾಡಬೇಕು. ಒಂದು ಪ್ರತಿ ಕುಟುಂಬಕ್ಕೆ ನೀಡಬೇಕು. ದತ್ತಾಂಶಗಳ ಮಾಹಿತಿ ಎಲ್ಲರಿಗೂ ಲಭ್ಯವಾಗುವಂತೆ ವಾರ್ಡ್ ಕಚೇರಿ, ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಆಕ್ಷೇಪಣೆ, ತಿದ್ದುಪಡಿ ಬಳಿಕ ಅಂತಿಮ ಪಟ್ಟಿ ಪ್ರಕಟಿಸಿದರೆ ಉಪ ಜಾತಿಗಳ ನಿಖರ ಸಂಖ್ಯೆ ಸಿಗಲು ಸಾಧ್ಯ’ ಎಂದು ವೇದಿಕೆಯ ಅಧ್ಯಕ್ಷ ಅನಂತರಾಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಉಪ ಜಾತಿ ಜನಸಂಖ್ಯೆ ವಿವರ ಘೋಷಿಸಿದ ಬಳಿಕ ಪ್ರತಿಭಟನೆಗೆ ಅವಕಾಶವಿಲ್ಲದಂತೆ ವಸ್ತುನಿಷ್ಠ ವರದಿಯನ್ನು ನೀಡಬೇಕು’ ಎಂದೂ ಕೋರಿದ್ದಾರೆ.

ನಗರದಲ್ಲಿ ಇಂದು

‘ಧರ್ಮದರ್ಶನ’ ವಿಚಾರಸಂಕಿರಣ: ಧರ್ಮಸ್ಥಳದ ಐದು ದಶಕಗಳ ಸೇವಾ ಪಥದ ಅನಾವರಣ, ಆಯೋಜನೆ: ‘ನಿಮಿತ್ತಮಾತ್ರಂ’ ಸಿಟಿಜನ್ಸ್ ಫೋರಮ್, ಸ್ಥಳ: ದಿ ರಿಟ್ಜ್ ಕಾರ್ಟನ್ ಹೋಟೆಲ್, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 9.30ರಿಂದ

‘ನೃತ್ಯ ತರಂಗಿಣಿ’ 8ನೇ ವಾರ್ಷಿಕೋತ್ಸವ: ಮುಖ್ಯ ಅತಿಥಿಗಳು: ವಿ.ಎಸ್. ಶ್ರೀಧರ್, ರತ್ನಮಾಲಾ ಪುರಂದರ, ಕಲ್ಪನಾ ವಿ., ಎಚ್.ವಿ. ಭಾರತಿ ಶ್ರೀರಾಮ್, ಜನಾರ್ದನ್, ಉಪಸ್ಥಿತಿ: ಶ್ವೇತಾ ವಿಜಯ್, ಆಯೋಜನೆ: ನೃತ್ಯ ತರಂಗಿಣಿ ಕಲಾ ಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10:30

‘ಹಾಸಾಕ್ಯ’ ಪುಸ್ತಕ ಬಿಡುಗಡೆ: ಆನಂದ ಸಭಾಪತಿ, ಎಚ್.ಎನ್. ನರಹರಿರಾವ್, ಉಪಸ್ಥಿತಿ: ಎನ್.ಕೆ. ಮೋಹನ್‌ರಾಂ, ಮುರಳೀಧರ ಖಜಾನೆ, ಎಂ.ಕೆ. ಶಂಕರ್, ಎನ್. ವಿದ್ಯಾಶಂಕರ್, ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ಚಾರುಮತಿ ಪ್ರಕಾಶನ, ಸ್ಥಳ: ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 11

ಅಂಬೇಡ್ಕರ್ ಪ್ರತಿಮೆ ಅನಾವರಣ, ಒಳರೋಗಿಗಳ ಕಟ್ಟಡ, ವಿದ್ಯಾರ್ಥಿನಿಯರ ವಸತಿ ನಿಲಯ ಉದ್ಘಾಟನೆ: ಮಲ್ಲಿಕಾರ್ಜುನ ಖರ್ಗೆ, ಅತಿಥಿಗಳು: ದಿನೇಶ್ ಗುಂಡೂರಾವ್, ಶರಣಪ್ರಕಾಶ ಪಾಟೀಲ, ಎ.ಸಿ. ಶ್ರೀನಿವಾಸ್, ಅಧ್ಯಕ್ಷತೆ: ವಿ.ಎಸ್. ಕುಬೇರ್, ಆಯೋಜನೆ ಹಾಗೂ ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಕಾಡುಗೊಂಡನಹಳ್ಳಿ, ಬೆಳಿಗ್ಗೆ 11

ಎಸ್.ವಿ.ಎನ್. ವಾರ್ಷಿಕ ಸಂಗೀತೋತ್ಸವ ಹಾಗೂ ರಾಷ್ಟ್ರೀಯ ಪ್ರಶಸ್ತಿ ಪ್ರದಾನ: ಯತಿರಾಜ ನಾರಾಯಣ ರಾಮಾನುಜ ಜೀಯರ್, ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಎನ್.ಕುಮಾರ್, ಸತ್ಯಧ್ಯಾನಾಚಾರ್ಯ ಕಟ್ಟಿ, ಸಂಪತ್ ರಾಜು, ಸಂಗೀತ ಕಛೇರಿ: ಚಿತ್ರವೀಣಾ ಎನ್. ರವಿಕಿರಣ್, ಗಾಯತ್ರಿ ಶಿವಾನಿ, ಕೆ.ವಿ. ಪ್ರಸಾದ್, ಜಿ.ಎಸ್. ರಾಮಾನುಜಂ, ಆಯೋಜನೆ: ಶ್ರೀರಾಮಸೇವಾ ಮಂಡಳಿ ಟ್ರಸ್ಟ್, ಸ್ಥಳ: ಎಸ್‌ವಿಎನ್ ಮೆಮೋರಿಯಲ್ ಹಾಲ್, ನೆಟ್ಟಿಗೆರೆ ಗ್ರಾಮ, ಸೋಮನಹಳ್ಳಿ, ಮಧ್ಯಾಹ್ನ 3ರಿಂದ

ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಜಗದ್ಗುರು ರೇಣುಕಾ ಸಿರಿ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭ: ಸಾನ್ನಿಧ್ಯ: ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ರೇಣುಕಾ ಶಿವಾಚಾರ್ಯ ಸ್ವಾಮೀಜಿ, ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಯು.ಎಂ. ಬಸವರಾಜ, ಮುಖ್ಯ ಅತಿಥಿಗಳು: ಜಿ.ಎಸ್. ಪಾಟೀಲ, ಸೋಮಣ್ಣ ಬೇವಿನಮರದ, ಆಯೋಜನೆ ಹಾಗೂ ಸ್ಥಳ: ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ, ರೇಸ್‌ಕೋರ್ಸ್ ರಸ್ತೆ, ಆನಂದರಾವ್ ವೃತ್ತ, ಬೆಳಿಗ್ಗೆ 11

‘ಬಾರಹಮಾಸಿ’ ಅರೆ ಶಾಸ್ತ್ರೀಯ ಸಂಗೀತ: ಕನಕಶ್ರೀ ಭಟ್, ಸಾನ್ವಿ ಭಟ್, ಆಯೋಜನೆ ಹಾಗೂ ಸ್ಥಳ:ಬೆಂಗಳೂರು ಕ್ರಿಯೇಟಿವ್ ಸರ್ಕಸ್, ಯಶವಂತಪುರ, ಸಂಜೆ 6



ಕನಕಶ್ರೀ ಭಟ್ ಮತ್ತು ಸಾನ್ವಿ ಭಟ್

‘ಸಿಎಂಆರ್ ಕಲ್ಚರಾ’ ಸಾಂಸ್ಕೃತಿಕ ಹಬ್ಬ: ಅತಿಥಿಗಳು: ರೂಪಿಕಾ, ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ, ಎಇಸಿಎಸ್ ಲೇಔಟ್, ಐಟಿ ಪಾರ್ಕ್ ರಸ್ತೆ, ಮಧ್ಯಾಹ್ನ 3.30

‘ಬೇಗ್ ಬಾರೋ ಅಳಿಯ’ ಹಾಸ್ಯ ನಾಟಕ ಪ್ರದರ್ಶನ: ನಿರ್ದೇಶನ: ಹನು ರಾಮಸಂಜೀವ, ರಚನೆ: ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 5 ಹಾಗೂ ಸಂಜೆ 7.30

‘ಚುಂಚಾದ್ರಿ ಉತ್ಸವ’ ಸಮಾರೋಪ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಪ್ರಸನ್ನನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ:ಶೋಭಾ ಕರಂದ್ಲಾಜೆ, ಆಯೋಜನೆ:ರಾಜ್ಯ ಚುಂಚಾದ್ರಿ ಮಹಿಳಾ ಪ್ರತಿಷ್ಠಾನ, ಮಾತೃ ಮಿಲನ ಕ್ರೀಡೆ ಹಾಗೂ ಸಾಂಸ್ಕೃತಿಕ ಸಂಘ, ವಿಶ್ವ ಒಕ್ಕಲಿಗರ ಮಹಿಳಾ ವೇದಿಕೆ, ಸ್ಥಳ: ಬಿಜಿಎಸ್ ಪಿಯು ಕಾಲೇಜು, ಮಹಾಲಕ್ಷ್ಮಿಪುರ, ಸಂಜೆ 6

ಕೂಚಿಪುಡಿ ರಂಗಪ್ರವೇಶ: ಜಯಾ, ದೇಸ್ನಾ ಆರ್.ವಿ., ಮುಖ್ಯ ಅತಿಥಿಗಳು: ಚಂದ್ರಶೇಖರ ಕಂಬಾರ, ನಟರಾಜ್ ಹುಳಿಯಾರ್, ಹರಿಕೃಷ್ಣನ್, ಎಸ್. ಮಾಳಿಗಾಚಾರ್, ಆಯೋಜನೆ: ನೂಪುರ ನೃತ್ಯಾರ್ಪಣ ಕೂಚಿಪುಡಿ ಆರ್ಟ್ ಅಕಾಡೆಮಿ, ಸ್ಥಳ: ಕರ್ನಾಟಕ ಎಂಜಿನಿಯರ್ಸ್ ಅಕಾಡೆಮಿ, ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 6

87ನೇ ಶ್ರೀ ರಾಮನವಮಿಸಂಗೀತೋತ್ಸವ: ‘ಸೀತಾ ಕಲ್ಯಾಣಂ’ ಕಥಾ ನಿರೂಪಣೆ ಮತ್ತು ಗಾಯನ: ವಿನಯ್ ವಾರಣಾಸಿ, ವಿವೇಕ್ ಸದಾಶಿವಮ್ ಮತ್ತು ತಂಡ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ರಾಮನಗರದಲ್ಲಿ ಪಾಕ್ ಮೂಲದ ಮಹಿಳೆ ನೆಲೆ

ಪ್ರಜಾವಾಣಿ ವಾರ್ತೆ

ರಾಮನಗರ: ಪಾಕಿಸ್ತಾನ ಮೂಲದ ಮಹಿಳೆಯೊಬ್ಬರು ರಾಮನಗರದಲ್ಲಿ 20 ವರ್ಷಗಳಿಂದ ನೆಲಸಿದ್ದಾರೆ. 52 ವರ್ಷದ ಇವರು ಸ್ಥಳೀಯ ವ್ಯಕ್ತಿಯನ್ನು ವಿವಾಹವಾಗಿದ್ದಾರೆ. ಮಹಿಳೆ ನೆಲಸಿರುವುದನ್ನು ಖಚಿತಪಡಿಸಿರುವ ಪೊಲೀಸರು, ಅವರ ಹಿನ್ನೆಲೆ ಸೇರಿದಂತೆ ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಕೃತ್ಯದ ಬಳಿಕ ಪಾಕ್ ಪ್ರಜೆಗಳ ಮಾಹಿತಿ ಕಲೆ ಹಾಕಲು ಕೇಂದ್ರ ಸೂಚಿಸಿದೆ. ಮಹಿಳೆ ಯಾವ ಕಾರಣಕ್ಕೆ ಭಾರತಕ್ಕೆ ಬಂದಿದ್ದರು? ಪೌರತ್ವ ಪಡೆದಿದ್ದಾರೆಯೇ? ವೀಸಾ ಇದೆಯೇ? ಅನಧಿಕೃತವಾಗಿ ನೆಲಸಿದ್ದಾರೆಯೇ ಎಂಬ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಎಸ್‌ಪಿ ಆರ್. ಶ್ರೀನಿವಾಸಗೌಡ, 'ಪಾಕ್ ಮೂಲದ ಮಹಿಳೆ ನೆಲಸಿರುವುದು ನಿಜ. ಹೆಚ್ಚಿನ ಮಾಹಿತಿ ನೀಡಲಾಗದು' ಎಂದು ಹೇಳಿದರು.

ಗ್ರಾಹಕರಿಂದ ಉತ್ತಮ ಸ್ಪಂದನ, ತಿಂಗಳಿಗೆ ಎರಡು ಬಾರಿ ಸಂತೆ ಆಯೋಜಿಸಲು ನಿರ್ಧಾರ

ಇಂದು, ನಾಳೆ ಮತ್ತೆ 'ರೈತ ಸಂತೆ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಸಾಮೂಹಿಕ ನಾಯಕತ್ವದಲ್ಲಿ ಇತ್ತೀಚೆಗೆ ಆರ್‌.ಆರ್‌.ನಗರದಲ್ಲಿ ನಡೆದಿದ್ದ 'ರೈತ ಸಂತೆಗೆ' ದೊರೆತ ಉತ್ತಮ ಪ್ರತಿಕ್ರಿಯೆಯಿಂದ ಉತ್ತೇಜಿತರಾಗಿರುವ ರೈತರು, ಇದೇ 26 ಮತ್ತು 27ರಂದು ಮತ್ತೆ ರೈತ ಸಂತೆಯನ್ನು ಆಯೋಜಿಸುತ್ತಿದ್ದಾರೆ.

'ನೇರ ಮಾರಾಟದ ಮೂಲಕ ನಮ್ಮ ಹೋರಾಟ' – 'ನಮ್ಮ ಬೆಳೆಗೆ ನಮ್ಮದೇ ಬೆಲೆ' ಶೀರ್ಷಿಕೆಯಡಿ ರೈತರು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ಪರಿಕಲ್ಪನೆಯಡಿ ರೈತ ಸಂತೆ ಆಯೋಜಿಸಲಾಗಿತ್ತು. ಈ ಪ್ರಯೋಗ ಯಶಸ್ವಿಯಾಗಿತ್ತು. ರೈತರ ಉತ್ಪನ್ನಗಳು ಖಾಲಿಯಾಗಿದ್ದವು. ಮೂರು ದಿನಗಳ ಸಂತೆಗೆ ಐದು ಸಾವಿರಕ್ಕೂ ಹೆಚ್ಚು ಗ್ರಾಹಕರು ಭೇಟಿ ನೀಡುವ ಮೂಲಕ ಸಂತೆಯನ್ನು ಬೆಂಬಲಿಸಿದ್ದರು. ಮತ್ತೆ ಸಂತೆ ನಡೆಸುವಂತೆ ಬೇಡಿಕೆ ಇಟ್ಟಿದ್ದರು' ಎಂದು 'ರೈತ ಸಂತೆ'ಯ ಆಯೋಜಕರಲ್ಲೊಬ್ಬರಾದ ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ ತಿಳಿಸಿದರು.

ಕಳೆದ ಬಾರಿ ರೈತ ಸಂತೆ ನಡೆದಿದ್ದ ಆರ್‌.ಆರ್‌.ನಗರದ ಐಡಿಯಲ್ ಹೋಮ್ಸ್ ಲೇಔಟ್‌ನಲ್ಲಿರುವ ಮುನಿವೆಂಕಟಯ್ಯ ಸ್ಮಾರಕ ಬಯಲು ರಂಗಮಂದಿರದಲ್ಲೇ ಈ ಬಾರಿಯ ಸಂತೆಯೂ ನಡೆಯಲಿದೆ. ಈ ಬಾರಿ ಅನೇಕ ಹೊಸ ರೈತರು, ರೈತ ಮಹಿಳೆಯರು ಸಂತೆಗೆ ಬರುತ್ತಿದ್ದಾರೆ. ವಿಜಯಪುರದಿಂದ ಒಡಲದನಿ ಮಹಿಳಾ ಗುಂಪು, ಸಜ್ಜೆ ರೊಟ್ಟಿ, ಶೇಂಗಾ ಹೋಳಿಗೆ, ಚಟ್ನಿಪುಡಿಗಳನ್ನು ತರುತ್ತಿದ್ದಾರೆ. ರಾಮನಗರದ ಚನ್ನಪಟ್ಟಣದ ರೈತರು ವಿವಿಧ ತಳಿಯ ಮಾವಿನ ಹಣ್ಣುಗಳನ್ನು ಸಂತೆಗೆ ತರುತ್ತಿದ್ದಾರೆ. ಇವುಗಳ ಜೊತೆಗೆ ಎಂದಿನಂತೆ, ಹಣ್ಣು–ತರಕಾರಿ, ಬೇಳೆ–ಕಾಳು, ಮೌಲ್ಯವರ್ಧಿತ ಉತ್ಪನ್ನಗಳಿರುತ್ತವೆ' ಎಂದು ಚುಕ್ಕಿ ಅವರು ವಿವರಿಸಿದರು.

'ರೈತ ಸಂತೆ' ಪ್ರೋತ್ಸಾಹಿಸುವವರು ಮತ್ತು ಈ ಕುರಿತು ಹೆಚ್ಚಿನ ಮಾಹಿತಿಗೆ 9036654365 ಮತ್ತು 9035454365 ಸಂಖ್ಯೆಗೆ ಸಂಪರ್ಕಸಬಹುದು.

3ಂಗಳಿಗೆ ಎರಡು ಬಾರಿ ಸಂತೆ

'ಕನಿಷ್ಠ ವಾರಕ್ಕೊಮ್ಮೆ ಸಂತೆ ನಡೆಸಬೇಕೆಂದು ಗ್ರಾಹಕರ ಒತ್ತಾಯವಿದೆ. ತಿಂಗಳಿಗೆ ಎರಡು ಬಾರಿ ಸಂತೆ ಆಯೋಜಿಸಲು ರೈತ ಸಂಘ ತೀರ್ಮಾನಿಸಿದೆ. ಪ್ರತಿ ತಿಂಗಳ ಎರಡು ಮತ್ತು ನಾಲ್ಕನೇ ಶನಿವಾರ- ಭಾನುವಾರ ಸಂತೆ ಆಯೋಜಿಸಲಾಗುತ್ತದೆ. ಈ ಸಂತೆಯಲ್ಲಿ ಆರ್‌.ಆರ್‌.ನಗರದ ಗ್ರಾಹಕ ಪ್ರತಿನಿಧಿಗಳು ಮತ್ತು ರೈತ ಪ್ರತಿನಿಧಿಗಳನ್ನೊಳಗೊಂಡ ಸಮಿತಿ ರಚಿಸಲಿದ್ದು, ಈ ಸಮಿತಿಯೇ ಮುಂದೆ ಸಂತೆ ಆಯೋಜನೆಯ ಜವಾಬ್ದಾರಿ ನಿರ್ವಹಿಸಲಿದೆ' ಎಂದು ಸಂಘಟಕರು ತಿಳಿಸಿದ್ದಾರೆ.

ಇಂದು ರಂಗಪ್ರಯೋಗ

ರೈತ ಸಂತೆಗೆ ಮತ್ತಷ್ಟು ಬಲ ತುಂಬಲು ನಟಿ ಅಕ್ಷತಾ ಪಾಂಡವಪುರ, 26ರಂದು ಸಂಜೆ 6.30ಕ್ಕೆ 'ಅಡುಗೆ ಮಾತು' ಎಂಬ ಆಪ್ತರಂಗ ಪ್ರಯೋಗ ನಡೆಯಲಿದೆ.

ಅಶುತೋಷ್ ಕೆ. ಸಿಂಗ್ ಅಧಿಕಾರ ಸ್ವೀಕಾರ



ಬೆಂಗಳೂರು: ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾಗಿ ಅಶುತೋಷ್ ಕೆ. ಸಿಂಗ್ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು 1995ರ ಬ್ಯಾಚ್‌ನ ಭಾರತೀಯ ರೈಲ್ವೆ ವಿದ್ಯುತ್ ಎಂಜಿನಿಯರ್‌ಗಳ ಸೇವೆ (ಐಆರ್‌ಎಸ್‌ಇಇ) ಅಧಿಕಾರಿ.

ಕರ್ನಾಟಕ ಗೃಹ ಮಂಡಳಿ
ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, ಕಾವೇರಿ ಭವನ, ಬೆಂಗಳೂರು

ಸಂಖ್ಯೆ: ಕಗೃಮಂ/ಸಕಾಅ/ಬೆಂನಜಿಯೋಕ/315/2024-25 **ಸಾರ್ವಜನಿಕ ಪ್ರಕಟಣೆ** ದಿನಾಂಕ: 27.03.2025

ಕರ್ನಾಟಕ ಗೃಹ ಮಂಡಳಿಯಿಂದ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಬ್ಯಾಲಾಳು ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ: B2-46-EWS ನ್ನು ಶ್ರೀ. ಕೆ.ಎಸ್.ನಾಗರಾಜು ಎಂಬುವವರಿಗೆ ದಿನಾಂಕ: 17.02.2025 ರಂದು ಹಂಚಿಕೆ ಮಾಡಲಾಗಿರುತ್ತದೆ. ಸದರಿ ನಿವೇಶನದ ಹಂಚಿಕೆದಾರರಾದ ಶ್ರೀ. ಕೆ.ಎಸ್.ನಾಗರಾಜು ರವರು ದಿನಾಂಕ: 30.08.2022 ರಂದು ಮರಣ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನಿವೇಶನದ ಹಂಚಿಕೆಯನ್ನು ದಿವಂಗತರ ಮಗನಾದ ಶ್ರೀ. ಕೆ.ಎನ್.ಗೋಪಾಲ್ ರವರ ಹೆಸರಿಗೆ ನಿಯಮಾನುಸಾರ ವರ್ಗಾವಣೆ ಮಾಡಲು ಕೋರಿರುತ್ತಾರೆ. ಆದ್ದರಿಂದ ಅರ್ಜಿದಾರರ ಮನವಿಯಂತೆ ಸದರಿ ನಿವೇಶನದ ಹಂಚಿಕೆ ವರ್ಗಾವಣೆ ಪ್ರಕ್ರಿಯೆ ಆರಂಭಿಸಿದ್ದು, ಈ ಸಂಬಂಧ ಯಾವುದೇ ತಕರಾರು/ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ ದಿನಾಂಕದಿಂದ 7 (ಏಳು) ದಿನಗಳೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ತಕರಾರು ಅರ್ಜಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, 5ನೇ ಮಹಡಿ, ಕಾವೇರಿ ಭವನ, ಬೆಂಗಳೂರು – 560009 ರವರ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದೊಳಗೆ ಯಾವುದೇ ತಕರಾರು/ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರ ಮಗನಾದ ಶ್ರೀ. ಕೆ.ಎನ್.ಗೋಪಾಲ್ ರವರ ಹೆಸರಿಗೆ ವರ್ಗಾವಣೆ ಮಾಡಿ ಕ್ರಯಪತ್ರವನ್ನು ನಿರ್ವಹಿಸಿಕೊಡಲು ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದು ಪರಿಗಣಿಸಲಾಗುವುದು ಹಾಗೂ ಸದರಿಯವರಿಗೆ ಶುದ್ಧ ಕ್ರಯಪತ್ರವನ್ನು ನೀಡಲಾಗುವುದು. ನಿಗದಿತ ದಿನಾಂಕದ ನಂತರ ಬರುವ ಯಾವುದೇ ತಕರಾರು/ಆಕ್ಷೇಪಣೆ ಮನವಿಗಳನ್ನು ಪರಿಗಣಿಸುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಸಹಾಯಕ ಕಂದಾಯ ಅಧಿಕಾರಿ,
ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿ
ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, ಕಾವೇರಿ ಭವನ, ಬೆಂಗಳೂರು

ಸಂಖ್ಯೆ: ಕಗೃಮಂ/ಸಕಾಅ/ಬೆಂನಜಿಯೋಕ/314/2024-25 **ಸಾರ್ವಜನಿಕ ಪ್ರಕಟಣೆ** ದಿನಾಂಕ: 27.03.2025

ಕರ್ನಾಟಕ ಗೃಹ ಮಂಡಳಿಯಿಂದ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಬ್ಯಾಲಾಳು ಗ್ರಾಮದಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ: B1-520-EWSನ್ನು ಶ್ರೀ. ವಿ.ಬಲರಾಮ ಎಂಬುವವರಿಗೆ ದಿನಾಂಕ: 17.02.2025 ರಂದು ಹಂಚಿಕೆ ಮಾಡಲಾಗಿರುತ್ತದೆ. ಸದರಿ ನಿವೇಶನದ ಹಂಚಿಕೆದಾರರಾದ ಶ್ರೀ. ವಿ.ಬಲರಾಮ ರವರು ದಿನಾಂಕ: 11.08.2024 ರಂದು ಮರಣ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನಿವೇಶನದ ಹಂಚಿಕೆಯನ್ನು ದಿವಂಗತರ ಮಗನಾದ ಶ್ರೀ. ಬಿ. ಇಂದ್ರ ಕುಮಾರ್ ರವರ ಹೆಸರಿಗೆ ನಿಯಮಾನುಸಾರ ವರ್ಗಾವಣೆ ಮಾಡಲು ಕೋರಿರುತ್ತಾರೆ. ಆದ್ದರಿಂದ ಅರ್ಜಿದಾರರ ಮನವಿಯಂತೆ ಸದರಿ ನಿವೇಶನದ ಹಂಚಿಕೆ ವರ್ಗಾವಣೆ ಪ್ರಕ್ರಿಯೆ ಆರಂಭಿಸಿದ್ದು, ಈ ಸಂಬಂಧ ಯಾವುದೇ ತಕರಾರು/ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ ದಿನಾಂಕದಿಂದ 7 (ಏಳು) ದಿನಗಳೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ತಕರಾರು ಅರ್ಜಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, 5ನೇ ಮಹಡಿ, ಕಾವೇರಿ ಭವನ, ಬೆಂಗಳೂರು – 560009 ರವರ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದೊಳಗೆ ಯಾವುದೇ ತಕರಾರು/ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರ ಮಗನಾದ ಶ್ರೀ. ಬಿ. ಇಂದ್ರ ಕುಮಾರ್ ರವರ ಹೆಸರಿಗೆ ವರ್ಗಾವಣೆ ಮಾಡಿ ಕ್ರಯಪತ್ರವನ್ನು ನಿರ್ವಹಿಸಿಕೊಡಲು ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದು ಪರಿಗಣಿಸಲಾಗುವುದು ಹಾಗೂ ಸದರಿಯವರಿಗೆ ಶುದ್ಧ ಕ್ರಯಪತ್ರವನ್ನು ನೀಡಲಾಗುವುದು. ನಿಗದಿತ ದಿನಾಂಕದ ನಂತರ ಬರುವ ಯಾವುದೇ ತಕರಾರು/ಆಕ್ಷೇಪಣೆ ಮನವಿಗಳನ್ನು ಪರಿಗಣಿಸುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಸಹಾಯಕ ಕಂದಾಯ ಅಧಿಕಾರಿ,
ಕರ್ನಾಟಕ ಗೃಹ ಮಂಡಳಿ



ಉದ್ಘಾಟನೆ ಕೋರಮಂಗಲದಲ್ಲಿ ಆರಂಭವಾದ ಪಿ.ಸಿ.ಚಂದ್ರ ಜ್ಯೂವೆಲ್ಲರ್ಸ್ ಆಭರಣ ಕಂಪನಿಯ ನೂತನ ಮಳಿಗೆಯನ್ನು ಕಂಪನಿಯ ಸಿಇಒ ಕೌಶಿಕ್ ಚಂದ್ರ(ಎಡದಿಂದ ಮೂರನೆಯವರು) ಉದ್ಘಾಟಿಸಿದರು. ಕಂಪನಿಯ ಉಪ ವ್ಯವಸ್ಥಾಪಕ ನಿರ್ದೇಶಕ ಅಮಿತ್ವ ಚಂದ್ರ, ನಿರ್ದೇಶಕ ಉದಿಪ್ತೊ ಚಂದ್ರ, ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಸುವ್ರೊ ಚಂದ್ರ ಮತ್ತು ಪ್ರಸಾಂತೊ ಚಂದ್ರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

ಲಿಂಗರಾಜ, ಅಂಜನಾಗೆ ಫೆಲೋಶಿಪ್

ಪ್ರಜಾವಾಣಿ ವಾರ್ತೆ





ಬೆಂಗಳೂರು: ವಿನಾಯಕ ಗೋಕಾಕ್ ವಾಙ್ಮಯಟ್ರಸ್ಟ್‌ನ 'ವಿ.ಕೃ. ಗೋಕಾಕ್ ಫೆಲೋಶಿಪ್'ಗೆ ಲಿಂಗರಾಜ ಸೊಟ್ಟಪ್ಪನವರ್ ಮತ್ತು ಅಂಜನಾ ಹೆಗಡೆ ಆಯ್ಕೆಯಾಗಿದ್ದಾರೆ.

ಹೊಸ ಪ್ರತಿಭೆಗಳನ್ನು ಅಧ್ಯಯನದಲ್ಲಿ ತೊಡಗಿಸುವ ಉದ್ದೇಶದಿಂದ ಟ್ರಸ್ಟ್ ಈ ಫೆಲೋಶಿಪ್ ಪ್ರಾರಂಭಿಸಿದೆ. ಲಿಂಗರಾಜ ಸೊಟ್ಟಪ್ಪನವರ್ ಅವರ 'ಗೋಕಾಕರ ಕಾವ್ಯದಲ್ಲಿ ಪುರಾಣ' ಮತ್ತು ಅಂಜನಾ ಹೆಗಡೆ ಅವರ 'ಗೋಕಾಕರ ಕಾವ್ಯಮಯ ಸಂಗೀತಲೋಕ' ಪ್ರಬಂಧಗಳನ್ನು ಈ ಫೆಲೋಶಿಪ್‌ಗೆ ಆಯ್ಕೆ ಮಾಡಲಾಗಿದೆ. ಅನಿಲ್ ಗೋಕಾಕ್, ನರಹಳ್ಳಿ ಬಾಲಸುಬ್ರಹ್ಮಣ್ಯ, ನ. ರವಿಕುಮಾರ ಅವರನ್ನೊಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.

ಈ ಫೆಲೋಶಿಪ್ ತಲಾ ₹15 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ. ಇದೇ 28ರಂದು ಮಧ್ಯಾಹ್ನ 12.30ಕ್ಕೆ ಎನ್‌.ಎಂ.ಕೆ.ಆರ್‌.ವಿ ಮಹಿಳಾ ಕಾಲೇಜಿನಲ್ಲಿ ಟ್ರಸ್ಟ್‌ನ ಅಧ್ಯಕ್ಷ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಈ ಫೆಲೋಶಿಪ್ ವಿತರಿಸಿ, 'ಗೋಕಾಕರ ಸಾಹಿತ್ಯಯಾನ' ವಿಷಯದ ಬಗೆಗೆ ಉಪನ್ಯಾಸ ನೀಡುತ್ತಾರೆ ಎಂದು ಟ್ರಸ್ಟ್ ಕಾರ್ಯದರ್ಶಿ ನ. ರವಿಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟೆಂಡರ್ ನಂ. ಎಸ್‌ಟಿಸಿ/ಬಿಎಲ್‌ಆರ್/ಚಿಕನ್–ಮಟನ್–ಫಿಷ್–ಎಗ್ಸ್/25/

ಟೆಂಡರ್ ಆಹ್ವಾನ ಪ್ರಕಟಣೆ

ಇನ್ಸ್‌ಪೆಕ್ಟರ್ ಜನರಲ್ ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು ರವರ ಕಚೇರಿ, ಎಎಫ್‌ಎಸ್ ಯಲಹಂಕ ಅಂಚೆ, ಬೆಂಗಳೂರು–63

1. ಭಾರತದ ರಾಷ್ಟ್ರಪತಿಗಳ ಪರವಾಗಿ, ಇನ್ಸ್‌ಪೆಕ್ಟರ್ ಜನರಲ್, ಸಬ್ಸಿಡಿಯರಿ ಟ್ರೈನಿಂಗ್ ಸೆಂಟರ್ (ಎಸ್‌ಟಿಸಿ) ಬಿಎಸ್‌ಎಫ್, ಎಎಫ್‌ಎಸ್ ಯಲಹಂಕ ಅಂಚೆ, ಬೆಂಗಳೂರು 560063 ಇವರು **"ಚಿಕನ್ ಬ್ರಾಯ್ಲರ್ (ಜೀವಂತ ಪಕ್ಷಿಗಳು), ಮಟನ್, ಮೀನು (ರೊಹು / ಕಟ್ಲಾ) ಮತ್ತು ಮೊಟ್ಟೆ"** ಪೂರೈಕೆಗಾಗಿ ಆಸಕ್ತಿಯುಳ್ಳ ಪಕ್ಷಗಾರರಿಂದ/ ಮಾರಾಟಗಾರರಿಂದ / ಸಂಸ್ಥೆಗಳಿಂದ ಬಹಿರಂಗ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
2. ಸದರಿ ಟೆಂಡರ್ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಯಾವುದೇ ಕೆಲಸದ ದಿನದಂದು ಇನ್ಸ್‌ಪೆಕ್ಟರ್ ಜನರಲ್ ಎಸ್‌ಟಿಸಿ ಬಿಎಸ್‌ಎಫ್ ಬೆಂಗಳೂರು, ಎಎಫ್‌ಎಸ್ ಯಲಹಂಕ ಅಂಚೆ, ಬೆಂಗಳೂರು 560063 ಇವರಿಂದ ಟೆಂಡರ್ ನಮೂನೆಗಳನ್ನು ಪಡೆದುಕೊಳ್ಳಬಹುದು. ಟೆಂಡರ್ ನಮೂನೆಯ ಶುಲ್ಕ ರೂ.100/– (ರೂಪಾಯಿ ಒಂದು ನೂರು ಮಾತ್ರ) ಆಗಿರುತ್ತದೆ. ಆಸಕ್ತಿಯುಳ್ಳ ಪಕ್ಷಗಾರರು / ಸಂಸ್ಥೆಗಳು ಕ್ಯಾಂಪಸ್‌ಗೆ ಭೇಟಿ ಮಾಡಿ, ಈ ಕಚೇರಿಯಿಂದ ಟೆಂಡರ್ ದಸ್ತಾವೇಜುಗಳನ್ನು ಪಡೆದುಕೊಳ್ಳಬಹುದು ಹಾಗೂ **8ನೇ ಮೇ 2025 ರಂದು 1800 ಗಂಟೆಯೊಳಗೆ** ಸಲ್ಲಿಸುವುದು.
3. ಟೆಂಡರ್‌ಗಳನ್ನು **9ನೇ ಮೇ 2025 ರಂದು 1100** ಗಂಟೆಗೆ ತೆರೆಯಲಾಗುತ್ತದೆ.
4. ಇನ್ಸ್‌ಪೆಕ್ಟರ್ ಜನರಲ್‌ರವರು ಯಾವುದೇ ಕಾರಣ ನೀಡದೆಯೆ ಸಲ್ಲಿಕೆಯಾಗಿರುವ ಯಾವುದೇ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ ಮತ್ತು ಎಲ್ಲರೂ ಈ ನಿಬಂಧನೆಗೆ ಒಳಪಡುತ್ತಾರೆ.

ಡೆ.ಕಮಾಂಡಂಟ್ (ಪ್ರಾವಿ)
ಇನ್ಸ್‌ಪೆಕ್ಟರ್ ಜನರಲ್‌ರವರ ಎಸ್‌ಟಿಸಿ
ಬಿಎಸ್‌ಎಫ್ ಬೆಂಗಳೂರು

CBC 19110/11/0010/2526

'ಕೌಶಲಯುತ ಅಭ್ಯರ್ಥಿಗಳ ಕೊರತೆ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ಯಾವುದೇ ವಿಶ್ವ ವಿದ್ಯಾಲಯದ ಗುಣಮಟ್ಟವು ಅಲ್ಲಿನ ವಿದ್ಯಾರ್ಥಿಗಳಿಗೆ ದೊರೆಯಲಿರುವ ಉದ್ಯೋಗದ ಮೇಲೆ ನಿರ್ಧರಿತವಾಗಿರುತ್ತದೆ ಎಂದು ವಿಟಿಯು ಕುಲಪತಿ ಡಾ.ವಿದ್ಯಾಶಂಕರ್. ಎಸ್ ಅಭಿಪ್ರಾಯಪಟ್ಟರು.

ಎಸ್‌ಜೆಬಿಐಟಿ ಕಾಲೇಜು ವತಿಯಿಂದ ಆಯೋಜಿಸಲಾಗಿದ್ದ, 'ವರ್ಚಸ್ವ-2025 ಅಂತರ ಕಾಲೇಜು ತಾಂತ್ರಿಕ ಹಾಗೂ ಸಾಂಸ್ಕೃತಿಕ ಹಬ್ಬ'ದಲ್ಲಿ ಅವರು ಮಾತನಾಡಿದರು.

'ಉದ್ಯಮಗಳು ಕೌಶಲ ಇರುವ ಅಭ್ಯರ್ಥಿಗಳ ಹುಡುಕಾಟದಲ್ಲಿ ನಿರತವಾಗಿರುತ್ತವೆ. ವಾಸ್ತವದಲ್ಲಿ ಉದ್ಯೋಗಗಳಿಗೆ ಭರವಿಲ್ಲ. ಕೌಶಲ ಪೂರ್ಣ ಅಭ್ಯರ್ಥಿಗಳ ಕೊರತೆಯಿದೆ. ವಿದ್ಯಾರ್ಥಿಗಳಲ್ಲಿ ಕೌಶಲ ವೃದ್ಧಿಸುವಂತಹ ಕಾರ್ಯಾಗಾರಗಳನ್ನು ಶಿಕ್ಷಣ ಸಂಸ್ಥೆಗಳು ರೂಪಿಸಬೇಕು' ಎಂದು ಸಲಹೆ ನೀಡಿದರು.

2047ರ ಹೊತ್ತಿಗೆ ತಾಂತ್ರಿಕವಾಗಿ ಸ್ವತಂತ್ರವಾಗಿರುವ ರಾಷ್ಟ್ರ ನಿರ್ಮಾಣ ಮಾಡಬೇಕು. ವಿಶ್ವ ತಾಂತ್ರಿಕತೆಯಲ್ಲಿ ಸಿಂಹಪಾಲು ಹೊಂದಿರುವ ಅಮೆರಿಕ ಇಂದು ಜಗತ್ತಿನ ತೆರಿಗೆ ನೀತಿಯನ್ನು ರೂಪಿಸುತ್ತಿರುವುದು ತಾಂತ್ರಿಕತೆಯ ಬಲದಿಂದಲೇ ಎಂದು ತಿಳಿಸಿದರು.

ಬಿಜಿಎಸ್ ಮತ್ತು ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ ಮಾತನಾಡಿ, ಹತ್ತಾರು ಕಷ್ಟ ಕಾರ್ಪಣ್ಯಗಳನ್ನು ಎದುರಿಸಿ ವಿದ್ಯಾಭ್ಯಾಸ ನೀಡುವ ಪೋಷಕರ ಕನಸುಗಳನ್ನು ನೆರವೇರಿಸುವುದು ಮಕ್ಕಳ ಜವಾಬ್ದಾರಿ. ಈ ನಿಟ್ಟಿನಲ್ಲಿ ಎಲ್ಲಾ ವಿದ್ಯಾರ್ಥಿಗಳು ತಮ್ಮೆಲ್ಲ ಅಭಿಲಾಷೆಗಳೊಂದಿಗೆ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಹೇಳಿದರು.

'ಎಐ ತಂತ್ರಜ್ಞಾನ ಮಾನವನ ಕೆಲಸಗಳನ್ನು ಕಿತ್ತುಕೊಳ್ಳುವುದಿಲ್ಲ. ಕಂಪ್ಯೂಟರ್ ಬಳಕೆ ಚಾಲ್ತಿಗೆ ಬಂದಾಗಲೂ ಉದ್ಯೋಗ ಕಡಿತಗೊಳ್ಳುವ ಆತಂಕ ಎದುರಾಗಿತ್ತು. ಬದಲಾದ ಸನ್ನಿವೇಶದಲ್ಲಿ ಕಂಪ್ಯೂಟರ್ ರಹಿತ ಜೀವನ ಊಹಿಸಿಕೊಳ್ಳಲು ಅಸಾಧ್ಯ ಎಂಬ ಪರಿಸ್ಥಿತಿ ನಿರ್ಮಾಣವಾಯಿತು. ಅದೇ ರೀತಿ ಎಐ ತಂತ್ರಜ್ಞಾನ ಕೂಡ ಮಾನವನ ಬೆಳವಣಿಗೆಗೆ ಸಹಕರಿಯಾಗಲಿದೆ' ಎಂದು ಟಾಟಾ ಎಲ್ ಎಕ್ಸಿ ಮಾನವ ಸಂಪನ್ಮೂಲ ಅಧಿಕಾರಿ ನವೀನ್ ಮಂಜುನಾಥ್ ಹೇಳಿದರು.

ಡಾ.ಕಿರಣ್ ಕೆ. ರಾಜಣ್ಣ, ಧನಂಜಯ ಗುರೂಜಿ, ಎಸ್‌ಜೆಬಿಐಟಿ ಪ್ರಾಂಶುಪಾಲ ಡಾ.ಮಹೇಂದ್ರ ಪ್ರಶಾಂತ್, ಅಕಾಡೆಮಿಕ್ ಡೈರೆಕ್ಟರ್ ಪುಟ್ಟರಾಜು, ನಯನಾ, ಸುಶ್ಮಿತಾ ಹಾಗೂ ರೂಪಿಕಾ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ನಟಿ ನಯನಾ ಮಾತನಾಡಿದರು. ಪ್ರಕಾಶನಾಥ ಸ್ವಾಮೀಜಿ, ವಿದ್ಯಾಶಂಕರ್ ಎಸ್, ನವೀನ್ ಮಂಜುನಾಥ್, ಧನಂಜಯ ಗುರೂಜಿ, ಮಹೇಂದ್ರ ಪ್ರಶಾಂತ್, ಪುಟ್ಟರಾಜು, ನಟಿಯರಾದ ಸುಶ್ಮಿತಾ, ರೂಪಿಕಾ ಉಪಸ್ಥಿತರಿದ್ದರು

'ಭಾವ ಬೆಸುಗೆ', 'ಆಸೆ ಮುಗಿಲು' ಬಿಡುಗಡೆ

ಬೆಂಗಳೂರು: ಕವಿ ಮುರಳೀಕೃಷ್ಣ ಬೆಳಾಲು ಅವರ 'ಭಾವ ಬೆಸುಗೆ' ಕೃತಿ ಹಾಗೂ ಚಂದ್ರಿಕಾ ರಾಜಾರಾಮ್ ರಾಗ ಸಂಯೋಜಿಸಿ ಹಾಡಿರುವ 'ಆಸೆ ಮುಗಿಲು' ದೃಶ್ಯ ಗೀತೆಗಳ ಆಲ್ಬಮ್ ಬಿಡುಗಡೆಯಾಯಿತು.

ರಂಗ ಸಮಾಜ ಸಾಂಸ್ಕೃತಿಕ ಸಂಸ್ಥೆ ನಗರದ ಕೆಎಲ್‌ಇ ಪದವಿ ಕಾಲೇಜಿನಲ್ಲಿ ನಡೆದ ಆಲ್ಬಮ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮನುಬಳಿಗಾರ, 'ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸರ್ಕಾರ ಹೆಚ್ಚಿನ ಅನುದಾನ ನೀಡಬೇಕು' ಎಂದು ಆಗ್ರಹಪಡಿಸಿದರು.

ಸಂಗೀತ ಸಂಯೋಜಕಿ ಜಯಶ್ರೀ ಅರವಿಂದ್ ಅವರು 'ಭಾವ ಬೆಸುಗೆ' ಕೃತಿ ಪರಿಚಯಿಸಿದರು. ಕೆಎಲ್‌ಇ ಪದವಿ ಕಾಲೇಜಿನ ಪ್ರಾಂಶುಪಾಲ ಮದನ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ಇದೇ ವೇಳೆ ನೃತ್ಯ ನಿರ್ದೇಶಕಿ ಎ.ಎಸ್‌.ಆರತಿ ಸುರೇಶ್ ನಿರ್ದೇಶನದ 'ಗೋಕುಲ ಯಾನ' ನೃತ್ಯ ರೂಪಕ ಹಾಗೂ 'ವೀರಯೋಧ' ನಾಟಕ, ರಂಗ ಸಮಾಜ ಸಾಂಸ್ಕೃತಿಕ ಸಂಸ್ಥೆಯ ಎಸ್. ತಿಲಕ್ ರಾಜ್ ನಿರ್ದೇಶನದಲ್ಲಿ 'ರಾವಣನ ಮಾತೃಭಕ್ತಿ' ನಾಟಕದ ಪ್ರದರ್ಶನ ನಡೆಯಿತು.

ನೈರುತ್ಯ ರೈಲ್ವೆ

ಇ–ಟೆಂಡರ್ ಅಧಿಸೂಚನೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಹರಾಜನ್ನು ಆಹ್ವಾನಿಸಿದ್ದಾರೆ.

ಕಾರ್ಯದ ಹೆಸರು ಮತ್ತು ಸ್ಥಳ

ಲೋಡ್ ಮಾಡುವ ಪಾರ್ಸೆಲ್ ನಿರ್ವಹಣೆ ಚಟುವಟಿಕೆಗಳ ಒಪ್ಪಂದವನ್ನು ನೀಡುವುದಕ್ಕಾಗಿ ಟೆಂಡರ್. ವಿವಿಧ ಪ್ಲಾಟ್‌ಫಾರ್ಮ್‌ಗಳು ಮತ್ತು ಪಾರ್ಸೆಲ್ ಕಚೇರಿಗಳ ನಡುವೆ ಮತ್ತು ಪ್ರತಿಯಾಗಿ ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಎಸ್‌ಬಿಸಿ (ಬೆಂಗಳೂರು), ವೈಪಿಆರ್ (ಯಶವಂತಪುರ), ಎಸ್‌ಎಂವಿಬಿ (ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು) ಮತ್ತು ವೈಎನ್‌ಕೆ (ಯಲಹಂಕ) ರೈಲು ನಿಲ್ದಾಣಗಳ ನಡುವೆ ಗುತ್ತಿಗೆ ಪಡೆಯದ/ಇಲಾಖೆಯ ಪಾರ್ಸೆಲ್‌ಗಳು/ಲಗೇಜ್‌ಗಳನ್ನು ಇಳಿಸುವುದು ಮತ್ತು ಸ್ಥಳಾಂತರಿಸುವುದು.

ಬಿಡ್‌ಗಳನ್ನು ಸಲ್ಲಿಸಲು GeM ಪೋರ್ಟಲ್‌ನ ಕೊನೆಯ ದಿನಾಂಕ 03.05.2025

ಹೆಚ್ಚಿನ ಮಾಹಿತಿಗಳಿಗಾಗಿ: www.gem.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು,
ಪಿಯುಬಿ/65/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯು ಆರ್/2024–25 ಬೆಂಗಳೂರು

South Western Railway - SWR SWRRLY SWRRLY

PUBLIC NOTICE

My Client intends to purchase a residential plot, which is more particularly described in the Schedule hereunder and hereinafter referred to as the Schedule Property presently owned by Mrs.P.Sita Vijay, aged about 78 years, wife of late Sri.P.P.Vijay, residing at No.608, Silver Oaks, 21, Vittal Mallya Road, Bangalore – 560 001, Ms.Nandini Sriram aged about 58 years, daughter of Late Puttichanda Poovaiah Vijay, residing at 9624E Lake Circle, Greenwood Village, Denver, Colorado-80111, USA and Ms. P. Nirada Vijay, aged about 55 years, daughter of Late Puttichanda Poovaiah Vijay, residing at 12538 Brionee Way, Los Altos Hills, California-94022, USA, who have represented that they have clear and marketable title to the Schedule Property. Any person/persons who claims any right, title or interest of any nature or any lien, charge or enforceable right in relation to the Schedule Property and/or has any objections of any nature to the transaction should lodge such claim and/or objections in writing to the undersigned together with supporting documents **within 15 (fifteen) days** hereof, failing which it will presumed that no valid claims or objections subsist and my clients would proceed to complete the transaction with the present owner thereof subject to compliance with other statutory and legal formalities.

SCHEDULE PROPERTY

All that piece and parcel of agricultural land measuring to an extent of 2 acres 30 Guntas (exclusive of 6 ½ Guntas of Kharab land) comprised in a portion of Sy.No.14 of Thurahalli Village, Uttarahalli Hobli, Bangalore South Taluk, Bangalore and bounded on the:

East by : Sy.No.15 of Thurahalli Village
West by : Sy.No.16 of Thurahalli Village
North by : Road and Sy.Nos.11,12 & 13 of Thurahalli Village
South by : Sy.No.18 of Thurahalli Village

Sd/-, ARVIND RAGHAVAN, Advocate
48, Ishita, 2nd Main Road, Vyalikaval, Bangalore-560 003.
Phone : 98450 04419.
e-mail: arvind_ncsr@yahoo.com

Place : Bengaluru,
Dated: 26-04-2025

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ಅಭೂಸ್ವಾಅ/33/2025–26 ದಿನಾಂಕ:25/04/2025

ಸಾರ್ವಜನಿಕರ ಗಮನಕ್ಕಾಗಿ

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಚಳ್ಳಘಟ್ಟ ಗ್ರಾಮದ ಸರ್ವೆ ನಂ.49 ಮತ್ತು 57 ಸರ್ಕಾರಿ ಜಮೀನಿನ ಜಂಟಿ ಸರ್ವೆ ಕಾರ್ಯ ನಡೆಸುವ ಬಗ್ಗೆ.

ಉಲ್ಲೇಖ: ನಾಡಪ್ರಭು ಕೆಂಪೇಗೌಡ ಬಡಾವಣೆ ರಚನೆಗಾಗಿ ಹೊರಡಿಸಿದ ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ:ಯುಡಿಡಿ/51/ಎಂಎನ್‌ಎಕ್ಸ್/2010, ದಿನಾಂಕ: 18.02.2010.

◆◆◆

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಿಸಲು ಬೆಂಗಳೂರು ಉತ್ತರ ತಾಲ್ಲೂಕು ಹಾಗೂ ದಕ್ಷಿಣ ತಾಲ್ಲೂಕುಗಳಲ್ಲಿನ ಕೆಲವು ಗ್ರಾಮಗಳು ಸೇರಿ ಒಟ್ಟು 4043 ಎಕರೆ 27 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಲು ಉಲ್ಲೇಖದಲ್ಲಿ ನಮೂದಿಸಿರುವ ಸರ್ಕಾರದ ಅಂತಿಮ ಅಧಿಸೂಚನೆಯಲ್ಲಿ ಬಿಡಿಎ ಕಾಯ್ದೆ 1976ರ ಕಲಂ.19(1)ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ ಚಳ್ಳಘಟ್ಟ ಗ್ರಾಮ ಸರ್ವೆ ನಂ. 49 ಸರ್ಕಾರಿ ಖರಾಬು ಜಮೀನಾಗಿದ್ದು, ಆರ್.ಟಿ.ಸಿಯಂತೆ ಒಟ್ಟು 35 ಎಕರೆ 10 ಗುಂಟೆ ಜಮೀನಿದ್ದು, ಈ ಪೈಕಿ 31–00 ಎಕರೆ ಜಮೀನನ್ನು ಮತ್ತು ಚಳ್ಳಘಟ್ಟ ಸರ್ವೆ ನಂ.57ರಲ್ಲಿ 4 ಎಕರೆ 02 ಗುಂಟೆ ಜಮೀನನ್ನು ನಾಡಪ್ರಭು ಕೆಂಪೇಗೌಡ ಬಡಾವಣೆ ರಚನೆಗಾಗಿ ಅಧಿಸೂಚನೆ ಹೊರಡಿಸಲಾಗಿದ್ದು, ಪ್ರಾಧಿಕಾರದ ನಾಡಪ್ರಭು ಕೆಂಪೇಗೌಡ ಬಡಾವಣೆಯ ಅಧಿಸೂಚಿತ ಸರ್ಕಾರಿ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಬಗ್ಗೆ ನಕ್ಷೆ ಮತ್ತು ವರದಿಗಾಗಿ ಸಂಬಂಧಪಟ್ಟ ಭೂಮಾಪಕರು, ಗ್ರಾಮ ಲೆಕ್ಕಾಧಿಕಾರಿಗಳು, ರಾಜಸ್ವನಿರೀಕ್ಷಕರು ಮತ್ತು ಭೂಮಾಪಕರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಕಾರ್ಯಪಾಲಕ ಅಭಿಯಂತರರು, ನಾಡಪ್ರಭು ಕೆಂಪೇಗೌಡ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರುಗಳ ಜಂಟಿ ಅಳತೆ ಸರ್ವೆ ಕಾರ್ಯ ಅಗತ್ಯವಿರುತ್ತದೆ.

ಆದ್ದರಿಂದ **ದಿನಾಂಕ: 05.05.2025 ರಂದು ಬೆಳಗ್ಗೆ 11–00 ಗಂಟೆಗೆ** ಪ್ರಾಧಿಕಾರದ ತಾಲ್ಲೂಕು ಕಚೇರಿಯ ಭೂಮಾಪಕರು ಗ್ರಾಮ ಲೆಕ್ಕಾಧಿಕಾರಿಗಳು, ರಾಜಸ್ವನಿರೀಕ್ಷಕರು ಮತ್ತು ಭೂಮಾಪಕರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಕಾರ್ಯಪಾಲಕ ಅಭಿಯಂತರರು, ನಾಡಪ್ರಭು ಕೆಂಪೇಗೌಡ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರುಗಳು ಸದರಿ ಸರ್ವೆ ನಂಬರಿನ ಜಂಟಿ ಸರ್ವೆ ಕಾರ್ಯ ನಡೆಸುತ್ತಿದ್ದು, **ಸದರಿ ದಿನಾಂಕದಂದು ಚಳ್ಳಘಟ್ಟ ಗ್ರಾಮದ ಸರ್ವೆ ನಂ.49 ಮತ್ತು 57ರ ಜಮೀನಿನ ನಿಮ್ಮ ಹಕ್ಕುದಾರಿಕೆಯ ಹಾಗೂ ಕಂದಾಯ ದಾಖಲೆಯೊಂದಿಗೆ ಸ್ಥಳದಲ್ಲಿ ಹಾಜರಿದ್ದು ಸರ್ವೆ ಕಾರ್ಯಕ್ಕೆ ಸಹಕರಿಸಲು ಈ ಮೂಲಕ ತಿಳಿಯಪಡಿಸಿದೆ. ತಪ್ಪಿದಲ್ಲಿ ಸ್ಥಳದಲ್ಲಿ ದೊರೆಯಬಹುದಾದ ಮಾಹಿತಿಯಂತೆ ಸರ್ವೆ ಕಾರ್ಯ ನಡೆಸಲಾಗುವುದು ಎಂದು ಈ ಮೂಲಕ ತಿಳಿಸಿದೆ.**

ಹಾಗೂ ಸರ್ವೆ ನಂ.49 ಮತ್ತು 57ರ ಚಳ್ಳಘಟ್ಟ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಖಾತೆದಾರರುಗಳಿಗೆ ಸದರಿ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಅಧಿಕೃತ ಜ್ಞಾಪನ ಪತ್ರ, ನಕ್ಷೆ ಮತ್ತು ಇತರೆ ಕಂದಾಯ ದಾಖಲೆಯೊಂದಿಗೆ ಮೇಲ್ಕಂಡ ದಿನಾಂಕದಂದು ಸರ್ವೆ ಕಾರ್ಯಕ್ಕೆ ಹಾಜರಾಗಿ ಸಹಕರಿಸಲು ತಿಳುವಳಿಕೆ ಪತ್ರ ನೀಡಲಾಗಿದ್ದು, ಸದರಿ ತಿಳುವಳಿಕೆ ಪತ್ರ ತಲುಪದಿದ್ದಲ್ಲಿ ಸದರಿ ಸಾರ್ವಜನಿಕ ಪ್ರಕಟಣೆಯನ್ನೇ ತಿಳುವಳಿಕೆ ಪತ್ರವೆಂದು ಪರಿಗಣಿಸಲು ಈ ಮೂಲಕ ತಿಳಿಸಿದೆ.

ಸಹಿ/– ಹೆಚ್ಚುವರಿ ಭೂಸ್ವಾಧೀನಾಧಿಕಾರಿ, ಬೆಂಅಪ್ರಾ, ಬೆಂಗಳೂರು.

ಕೇಂದ್ರಿಯ ಆಯುರ್ವೇದಿಕ ವಿಜ್ಞಾನಗಳ ಸಂಶೋಧನಾ ಪರಿಷತ್
(ಆಯುಷ್ ಸಚಿವಾಲಯ, ಭಾರತ ಸರ್ಕಾರ)
ಜೆ.ಎಲ್.ಎನ್.ಬಿ.ಸಿ.ಎ.ಹೆಚ್. ಅನುಸಂಧಾನ ಭವನ,
ನಂ.61–65, ಇನ್‌ಸ್ಟಿಟ್ಯೂಷನಲ್ ಏರಿಯಾ, 'ಡಿ' ಬ್ಲಾಕ್ ಎದುರು, ಜನಕಪುರಿ,
ನವದೆಹಲಿ–110058

ಜಾಹೀರಾತು 2025 (ಜೂನ್ ಬ್ಯಾಚ್)
ಸಿಸಿಆರ್‌ಎಎಸ್ ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್ ಪ್ರೋಗ್ರಾಮ್
(ಸಿಸಿಆರ್‌ಎಎಸ್ ಪಿಡಿಎಫ್ ಪ್ರೋಗ್ರಾಮ್)

ಕೇಂದ್ರಿಯ ಆಯುರ್ವೇದಿಕ ವಿಜ್ಞಾನಗಳ ಸಂಶೋಧನಾ ಪರಿಷತ್ (ಸಿಸಿಆರ್‌ಎಎಸ್) ಎಂಬ ಈ ಸಂಸ್ಥೆಯು, ಭಾರತ ಸರ್ಕಾರದ ಆಯುಷ್ ಸಚಿವಾಲಯದ ಒಂದು ಸ್ವಾಯುತ್ತ ಅಂಗಸಂಸ್ಥೆಯಾಗಿದ್ದು, ಇದೀಗ ಈ ಸಂಸ್ಥೆಯು ಆಯುರ್ವೇದ ಕ್ಷೇತ್ರದಲ್ಲಿ ಆವಿಷ್ಕಾರಿ ಆಲೋಚನೆಗಳನ್ನು ಹೊಂದಿರುವ ಭರವಸೆದಾಯಕ ಯುವ ಸಂಶೋಧಕರನ್ನು ಗುರುತಿಸಿ, ಅವರಿಗೆ ಆಯುರ್ವೇದದ ವಿವಿಧ ಬಹುಶಿಸ್ತೀಯ ವಿಭಾಗಗಳಲ್ಲಿ ತರಬೇತಿ ನೀಡಲು ಮತ್ತು ಸಂಶೋಧನಾ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ, ಆಯುಷ್ ಸಚಿವಾಲಯದಿಂದ ಅನುಮೋದಿತ **"ಸಿಸಿಆರ್‌ಎಎಸ್ ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್ ಪ್ರೋಗ್ರಾಮ್"** ಎಂಬ ಯೋಜನೆಯನ್ನು ಇತ್ತೀಚೆಗಷ್ಟೆ ಆರಂಭಿಸಿದೆ. ಇಂತಹ ಯುವ ಸಂಶೋಧಕರನ್ನು ಮಾರ್ಗದರ್ಶನವುಳ್ಳ ಸಂಶೋಧಕರಿಂದ ಸ್ವತಂತ್ರ ಸಂಶೋಧಕರ ಮಟ್ಟಕ್ಕೆ ಪರಿವರ್ತನೆಗೊಳ್ಳುವ ಸೌಲಭ್ಯಗಳನ್ನು ನೀಡುವುದೇ ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಸಿಎಸ್‌ಐಆರ್, ಐಸಿಎಂಆರ್, ಡಿಬಿಟಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ಸ್, ಅಂಗೀಕೃತ ವಿಶ್ವವಿದ್ಯಾಲಯಗಳು ಮತ್ತು ರಾಷ್ಟ್ರೀಯ ಆಯುಷ್ ಸಂಸ್ಥೆ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಿಂದ, ಆಯುರ್ವೇದ ಪಿಹೆಚ್‌ಡಿ / ಪಿಜಿ ಪದವಿ ಪಡೆದಿರುವ ಮತ್ತು ಸಂಬಂಧಿತ ವಿಜ್ಞಾನ ವಿಷಯಗಳಲ್ಲಿ ಪಿಹೆಚ್‌ಡಿ ಪಡೆದಿರುವ ಭರವಸೆದಾಯಕ ಹೊಸ ಪದವೀಧರರಿಗೆ, ಪ್ರತಿ ವರ್ಷ ಇಂತಹ ಹತ್ತು (10) ಫೆಲೋಶಿಪ್‌ಗಳನ್ನು ನೀಡಬೇಕೆಂದು ಸಿಸಿಆರ್‌ಎಎಸ್ ಉದ್ದೇಶಿಸಿರುತ್ತದೆ. ಸಂಬಂಧಿತ ಸಂಸ್ಥೆ / ಕೇಂದ್ರಗಳ ಅವಶ್ಯಕತೆಯ ಆಧಾರದ ಮೇರೆಗೆ, ಸಿಸಿಆರ್‌ಎಎಸ್ ಸಂಸ್ಥೆಯ ಮಹಾ ನಿರ್ದೇಶಕರಿಂದ ಸದರಿ ಫೆಲೋಶಿಪ್‌ಗಳನ್ನು ಹಂಚಿಕೆ ಮಾಡಲಾಗುತ್ತದೆ. **ಜೂನ್, 2025ರ ಬ್ಯಾಚ್‌ಗೆ ಸಿಸಿಆರ್‌ಎಸ್ ಪಿಡಿಎಫ್ ಪೋರ್ಟಲ್‌ನಲ್ಲಿ (https://pdf.ccras.org.in/) ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ 30ನೇ ಜೂನ್, 2025 ಆಗಿರುತ್ತದೆ. ನೋಂದಣಿ ಮತ್ತು ಪ್ರಸ್ತಾವಣೆಗಳ ಸಲ್ಲಿಕೆಗಾಗಿ 1ನೇ ಜೂನ್ 2025ರಂದು ಪೋರ್ಟಲ್ ತೆರೆದಿರುತ್ತದೆ.**

ಅರ್ಜಿ ನಮೂನೆ, ಸ್ವಯಂ ಘೋಷಣೆ ಮತ್ತು ಅರ್ಹತೆ, ವಯೋಮಿತಿ, ಕಾಲಾವಧಿ, ಸಂಭಾವಣೆ, ಅರ್ಜಿ ಸಲ್ಲಿಸುವ ವಿಧಾನ ಸೇರಿದಂತೆ ಸಿಸಿಆರ್‌ಎಎಸ್ ಪಿಡಿಎಫ್ ಪ್ರೋಗ್ರಾಮ್‌ನ ವಿವರಗಳಿಗಾಗಿ, ಅರ್ಹ ಆಕಾಂಕ್ಷಿಗಳು ಸಿಸಿಆರ್‌ಎಎಸ್ ಪಿಡಿಎಫ್ ಪೋರ್ಟಲ್ ಪರಿಶೀಲಿಸಬಹುದು.

ಆಡಳಿತಾಧಿಕಾರಿ (ಎಸ್ಟಾ)

CBC 17216/12/0002/2526

सी-डैक CDAC

ADMISSION NOTIFICATION
C-DAC ADVANCED LEVEL DIPLOMA COURSE ON HIGH PERFORMANCE COMPUTING AND ITS APPLICATION

For candidates belonging to SC/ST (Any Gender), Women (Any Category), EWS, General Category

HIGHLIGHTS
- Duration: 6 Months
- Mode: Offline (Physical)
- No Registration Fee
- Course Fee: ~~Rs.1,75,000~~ FREE

BENEFITS
- Industry expert guidance
- Mentoring by C-DAC experts
- A monthly stipend of 10,000/- will be provided to SC/ST/EWS/Women only
- Hands-on training session on latest technology



Last date to Apply May 15, 2025

c-huk@cdac.in
https://c-huk.cdacb.in

CBC 06140/12/0002/2526

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಆಯುಕ್ತರವರ ಕಛೇರಿ (ವೆಲ್‌ಫೇರ್), ಬಿಬಿಎಂಪಿ ಕೇಂದ್ರ ಕಚೇರಿ,
2ನೇ ಮಹಡಿ, ಅನೆಕ್ಸ್–2 ಬಿಲ್ಡಿಂಗ್, ಎನ್.ಆರ್.ಚೌಕ, ಬೆಂಗಳೂರು–02.
ಇಮೇಲ್: wellfare bbmp@gmail.com

ಇಓಐ ಸಂಖ್ಯೆ: BBMP/2025-26/PREQUAL_TENDER_NUMBER_17 ದಿನಾಂಕ: 25/04/2025

ಟೆಂಡರ್ ಅಧಿಸೂಚನೆ


ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೆಳಗಿನವುಗಳಿಗೆ ಅರ್ಹ ಬಿಡ್ಡುದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ:

1) **ಎಲೆಕ್ಟ್ರಿಕ್ ಕಾರ್ / ಆಟೋ ಮತ್ತು ಸಿಎನ್‌ಜಿ ಕಾರ್ / ಇಸಾರಥಿ (ESARATHI) ಅಡಿಯಲ್ಲಿ ಆಟೋ ಪೂರೈಕೆ. ಬಿಡ್ ಪ್ರಕ್ರಿಯೆಯ ವೇಳಾಪಟ್ಟಿ ಈ ಕೆಳಗಿನಂತಿವೆ:**

1.	ಇಓಐ ಡಾಕ್ಯುಮೆಂಟ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡುವ ಪ್ರಾರಂಭದ ದಿನಾಂಕ	24/04/2025 ರಿಂದ
2.	ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ:	03/05/2025 ರಂದು ಮಧ್ಯಾಹ್ನ 12:30 ಗಂಟೆಗೆ: ವಿಶೇಷ ಆಯುಕ್ತರವರ ಕಚೇರಿ ಆರೋಗ್ಯ, ಅನೆಕ್ಸ್ 3 ಬಿಲ್ಡಿಂಗ್, 3ನೇ ಮಹಡಿ, ಬೆಂಗಳೂರು–560002.
3.	ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	03/05/2025 ರಂದು ಸಂಜೆ 5:00 ಗಂಟೆಯವರೆಗೆ
4.	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಇಓಐ ಅನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	26/05/2025 ರಂದು ಸಂಜೆ 5:00 ಗಂಟೆಯವರೆಗೆ.
5.	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಇಓಐ ಅಪ್ಲಿಕೇಷನ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ & ಸಮಯ	27/05/2025 ರಂದು ಸಂಜೆ 5:10 ಗಂಟೆಯವರೆಗೆ.
6.	ಮಾದರಿ ಸಲ್ಲಿಕೆ ಪ್ರದರ್ಶನದ ದಿನಾಂಕ ಮತ್ತು ಸಮಯ	ತಾಂತ್ರಿಕ ಬಿಡ್ ತೆರೆದ ನಂತರ ತಿಳಿಸಲಾಗುವುದು.
7.	ಸಂಪರ್ಕಕ್ಕಾಗಿ ವಿಳಾಸ	ಸಹಾಯಕ ಆಯುಕ್ತರವರ ಕಛೇರಿ (ವೆಲ್‌ಫೇರ್), 2ನೇ ಮಹಡಿ, ಅನೆಕ್ಸ್–2 ಬಿಲ್ಡಿಂಗ್, ಎನ್.ಆರ್.ಚೌಕ, ಬೆಂಗಳೂರು–02. ಮೊಬೈಲ್ ಸಂ.: 9902929741, ಇಮೇಲ್: wellfare bbmp@gmail.com

ಸೂಚನೆ: 1) ಪೂರ್ಣಗೊಂಡ ಟೆಂಡರ್‌ಗಳನ್ನು ಟೆಂಡರ್‌ದಾರರು ತಮ್ಮ ಬಳಕೆದಾರ ಐಡಿಯನ್ನು ಬಳಸಿಕೊಂಡು ಕೊನೆಯ ದಿನಾಂಕ ಮತ್ತು ಸಮಯ ನಿಗದಿಪಡಿಸಿದ ಮೊದಲು ಇ–ಟೆಂಡರಿಂಗ್ ವ್ಯವಸ್ಥೆಯ ಮೂಲಕ ಅಪ್‌ಲೋಡ್ ಮಾಡಬೇಕು. 2) ತಾಂತ್ರಿಕ ಬಿಡ್ (ಪ್ರಥಮ ಲಕೋಟೆ) ತೆರೆಯುವ ನಿರ್ದಿಷ್ಟ ದಿನಾಂಕದ ಸಂದರ್ಭದಲ್ಲಿ ಖರೀದಿದಾರರಿಗೆ ರಜಾದಿನವೆಂದು ಘೋಷಿಸಿದರೆ, ಮುಂದಿನ ಕೆಲಸದ ದಿನದಂದು ತಾಂತ್ರಿಕ ಬಿಡ್ ತೆರೆಯಲಾಗುತ್ತದೆ.

ಸಹಿ/– ಸಹಾಯಕ ಆಯುಕ್ತರು (ವೆಲ್‌ಫೇರ್),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ




ಸುಭಾಷಿತ

ಕೀರ್ತಿಯನ್ನು ಜೀರ್ಣಿಸಿಕೊಳ್ಳುವುದು ಬಹಳ ಕಷ್ಟ.
–ಕುವೆಂಪು

ಪಾಕಿಸ್ತಾನವನ್ನು ಏಕಾಂಗಿಯಾಗಿಸುವ ಅವಕಾಶವನ್ನು ಬಳಸಿಕೊಳ್ಳಬೇಕು

ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ಅಟ್ಟಹಾಸವು ಭಯೋತ್ಪಾದನೆ ಮತ್ತು ಭಯೋತ್ಪಾದಕರ ವಿರುದ್ಧ ಇಡೀ ದೇಶ ಒಗ್ಗೂಡುವಂತೆ ಮಾಡಿದೆ. ಈ ಹಿಂಸೆಗೆ ಕಾರಣರಾದವರು ಮತ್ತು ಅವರ ಬೆನ್ನಿಗೆ ನಿಂತವರನ್ನು ದಂಡಿಸುವುದಕ್ಕಾಗಿ ಸರ್ಕಾರ ಮಾಡುವ ಎಲ್ಲ ಪ್ರಯತ್ನಗಳಿಗೆ ಇಡೀ ದೇಶ ಬೆಂಬಲವಾಗಿ ನಿಂತಿದೆ. ದೇಶದ ಜನ, ಸಾಮಾಜಿಕ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಒಗ್ಗಟ್ಟು ಪ್ರದರ್ಶಿಸುವ ಮೂಲಕ ಬಲವಾದ ಸಂದೇಶವನ್ನು ರವಾನಿಸಿವೆ. ಅಮಾನವೀಯ ಹಿಂಸಾಚಾರದ ವಿರುದ್ಧ ಪ್ರತಿಭಟನೆಗಳು ನಡೆದಿವೆ. ಕಾಶ್ಮೀರದ ಜನರು ತಮ್ಮ ಭಾವನೆಗಳನ್ನು ಪ್ರದರ್ಶಿಸಿದರು. ಭಯೋತ್ಪಾದಕರ ದಾಳಿಯ ವಿರುದ್ಧ 35 ವರ್ಷಗಳ ಬಳಿಕ ಇದೇ ಮೊದಲಿಗೆ ಕಾಶ್ಮೀರದಲ್ಲಿ ಬಂದ್ ಆಚರಿಸಲಾಯಿತು. ಕಾಶ್ಮೀರ ಮತ್ತು ದೇಶದ ಇತರೆಡೆಗಳಲ್ಲಿ ರಾಜಕೀಯ ಪಕ್ಷಗಳು ದಾಳಿಯನ್ನು ಖಂಡಿಸಿದವು. ಆದರೆ, ಕೋಮು ನೆಲೆಯಲ್ಲಿ ಜನರನ್ನು ವಿಭಜಿಸಲು ಮತ್ತು ಭಾವನೆಗಳನ್ನು ಕೆರಳಿಸಲು ಈ ಘಟನೆಯು ಅವಕಾಶ ಕೊಡಬಾರದು ಎಂಬ ಎಚ್ಚರವನ್ನು ನಾವು ಇರಿಸಿಕೊಳ್ಳಬೇಕು. ಕಾಶ್ಮೀರದ ವಿದ್ಯಾರ್ಥಿಗಳು ಮತ್ತು ವರ್ತಕರನ್ನು ಕೆಲವು ರಾಜ್ಯಗಳಲ್ಲಿ ಬೆದರಿಸಲಾಗಿದೆ ಮತ್ತು ಅವರಿಗೆ ಕಿರುಕುಳ ನೀಡಲಾಗಿದೆ ಎಂಬ ವರದಿಗಳು ಬಂದಿವೆ. ಉಗ್ರರ ದಾಳಿಯ ಕಾರಣದಿಂದ ಒಂದು ಸಮುದಾಯವನ್ನು ಗುರಿಯಾಗಿಸುವುದು ಖಂಡನೀಯ. ಬೈಸರನ್‌ನಲ್ಲಿ ಕುದುರೆ ಸವಾರಿ ಸೇವೆ ಒದಗಿಸುತ್ತಿದ್ದ ಅದಿಲ್ ಹುಸೇನ್ ಶಾ ಅವರು ಉಗ್ರರ ದಾಳಿಯಿಂದ ಪ್ರವಾಸಿಗರನ್ನು ರಕ್ಷಿಸಲು ಪ್ರಯತ್ನಿಸಿ ತಮ್ಮ ಜೀವವನ್ನೇ ತ್ಯಾಗ ಮಾಡಿದರು ಎಂಬುದನ್ನು ನಾವು ನೆನಪಿನಲ್ಲಿ ಇರಿಸಿಕೊಳ್ಳಬೇಕು.



ಭಾವನೆ ಕೆರಳಿಸುವಂತಹ ಮಾತುಗಳಿಂದ ರಾಜಕೀಯ ನಾಯಕರು ಮತ್ತು ಜನಸಾಮಾನ್ಯರು ದೂರ ಇರುವುದು ಬಹಳ ಮುಖ್ಯ

ಭಯೋತ್ಪಾದನೆಗೆ ಬೆಂಬಲ ನೀಡಿದೆ ಎಂಬ ಕಾರಣಕ್ಕಾಗಿ ಪಾಕಿಸ್ತಾನದ ವಿರುದ್ಧ ರಾಜತಾಂತ್ರಿಕ ಮಟ್ಟದ ಕ್ರಮಗಳನ್ನು ಕೇಂದ್ರ ಸರ್ಕಾರವು ಘೋಷಿಸಿದೆ. ಆರು ದಶಕಗಳ ಹಿಂದೆ ಮಾಡಿಕೊಳ್ಳಲಾದ ಸಿಂಧೂ ನದಿನೀರು ಒಪ್ಪಂದ ರದ್ದತಿ, ಎರಡೂ ದೇಶಗಳನ್ನು ಸಂಪರ್ಕಿಸುವುದಕ್ಕೆ ಇದ್ದ ವಾಘಾ–ಅಟ್ಟಾರಿ ಗಡಿ ರಸ್ತೆ ಬಂದ್, ರಾಜತಾಂತ್ರಿಕ ಸಂಬಂಧ ಕೆಳದರ್ಜೆಗೆ ಇಳಿಕೆ ಮತ್ತು ಪಾಕಿಸ್ತಾನಿ ಪ್ರಜೆಗಳಿಗೆ ವೀಸಾ ನಿರ್ಬಂಧವು ಸರ್ಕಾರ ಕೈಗೊಂಡ ಕ್ರಮಗಳಲ್ಲಿ ಸೇರಿವೆ. ಪಾಕಿಸ್ತಾನವು ಇದಕ್ಕೆ ಪ್ರತಿಕ್ರಿಯೆ ನೀಡಿದೆ. ಗಡಿ ನಿಯಂತ್ರಣ ರೇಖೆ ಸೃಷ್ಟಿಗೆ ಕಾರಣವಾದ 1972ರ ಶಿಮ್ಲಾ ಒಪ್ಪಂದವನ್ನು ಅಮಾನತಿನಲ್ಲಿ ಇರಿಸುವುದು ಸೇರಿ ಕೆಲವು ಕ್ರಮಗಳನ್ನು ಪ್ರಕಟಿಸಿದೆ. ಪಾಕಿಸ್ತಾನವು ಈಗ ಅತ್ಯಂತ ದುರ್ಬಲ ಸ್ಥಿತಿಯಲ್ಲಿದೆ. ಭಯೋತ್ಪಾದನೆಯನ್ನು ಪೋಷಿಸಿದ್ದಕ್ಕೆ ಆ ದೇಶ ಬೆಲೆ ತೆರಲೇಬೇಕು. ಅದಕ್ಕಾಗಿ, ರಾಜತಾಂತ್ರಿಕವಾಗಿ ಆ ದೇಶವನ್ನು ಏಕಾಂಗಿಯಾಗಿಸುವ ಅವಕಾಶ ಭಾರತದ ಮುಂದೆ ಇದೆ. ಅದನ್ನು ಕಳೆದುಕೊಳ್ಳಬಾರದು. ನ್ಯಾಯ ದೊರಕುವುದಕ್ಕಾಗಿ ಎಲ್ಲ ಪ್ರಯತ್ನಗಳನ್ನೂ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಸರ್ಕಾರವು ಅನುಸರಣೆ ಚಟುವಟಿಕೆಗಳನ್ನು ಅತೀವ ಎಚ್ಚರದಿಂದ ನಡೆಸಬೇಕಾದ ಅಗತ್ಯ ಇದೆ. ಉಗ್ರರ ದಾಳಿ ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ಕೈಗೊಂಡ ಕ್ರಮಗಳನ್ನು ರಾಜಕೀಯ ಪಕ್ಷಗಳ ನಾಯಕರಿಗೆ ವಿವರಿಸುವುದಕ್ಕಾಗಿ ಸರ್ವಪಕ್ಷ ಸಭೆ ಆಯೋಜಿಸಿದ್ದು ಉತ್ತಮ ನಡೆ. ಎಲ್ಲ ಪಕ್ಷಗಳೂ ಸರ್ಕಾರಕ್ಕೆ ಬೆಂಬಲ ಘೋಷಿಸಿವೆ ಮತ್ತು ಭಯೋತ್ಪಾದನೆಯ ದಮನದಲ್ಲಿ ಸರ್ಕಾರದ ಜೊತೆಗೆ ನಿಲ್ಲುವುದಾಗಿ ಹೇಳಿವೆ. ಭದ್ರತಾ ವೈಫಲ್ಯ ಮತ್ತು ಗುಪ್ತಚರ ವೈಫಲ್ಯವು ಕೂಡ ಉಗ್ರರಿಗೆ ನೆರವಾಗಿವೆ. ದ್ವೇಷ ಬಿತ್ತುವ ಅಭಿಯಾನಗಳು ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿವೆ. ಈ ವಿಚಾರಗಳು ಕೂಡ ಸರ್ವಪಕ್ಷ ಸಭೆಯಲ್ಲಿ ಚರ್ಚೆಯಾಗಿವೆ. ಈ ಎರಡೂ ವಿಚಾರಗಳಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹವನ್ನೂ ಪಕ್ಷಗಳು ಮಾಡಿವೆ. ಹಿಂಸಾಚಾರ ನಡೆಸಿದ ಉಗ್ರರು ಇನ್ನೂ ಸೆರೆಯಾಗಿಲ್ಲ, ಅವರನ್ನು ಬಂಧಿಸುವ ಕೆಲಸ ಆಗಬೇಕಿದೆ. ಬಂಧನ ಆದರೆ ಮಾತ್ರ ಪಿತೂರಿಯ ವಿವರಗಳು, ಉಗ್ರರ ಜಾಲದ ವ್ಯಾಪ್ತಿಯ ಕುರಿತು ತಿಳಿಯಬಹುದು. ರಾಜಕೀಯ ನಾಯಕರು ಮತ್ತು ಜನಸಾಮಾನ್ಯರು ಭಾವನೆ ಕೆರಳಿಸುವ ಮಾತುಗಳಿಂದ ದೂರ ಇರುವುದು ಬಹಳ ಮುಖ್ಯ. ಹಾಗೆಯೇ, ಸಾಮಾಜಿಕ ಜಾಲತಾಣಗಳು ಮತ್ತು ಇತರ ವೇದಿಕೆಗಳಲ್ಲಿ ಜನಾಂಗೀಯ ಮತ್ತು ಕೋಮು ದ್ವೇಷ ಬಿತ್ತುವ ಹೇಳಿಕೆಗಳನ್ನು ಹರಿಯಬಿಡಬಾರದು. ಅತಿರೇಕದ ದೇಶಭಕ್ತಿ ಪ್ರದರ್ಶನದ ಕರೆಗಳನ್ನು ಯಾರೂ ನೀಡಬಾರದು.

ದಿನದ ಟ್ವೀಟ್

ಚರ್ಚೆ ಆಗಬೇಕಾಗಿರುವುದೇನು?



ಪಹಲ್ಗಾಮ್ ದಾಳಿಗೆ ಸಂಬಂಧಿಸಿದಂತೆ ಚರ್ಚೆಗೆ ಒಳಗಾಗದೇ ಇರುವ ಸಂಗತಿಗಳು: ಆ ಭಯೋತ್ಪಾದಕರು ಯಾರು? ಅಲ್ಲಿ ಭದ್ರತಾ ವ್ಯವಸ್ಥೆ ಯಾಕೆ ಇರಲಿಲ್ಲ? ಮತ್ತೊಮ್ಮೆ ಅಂತಹದ್ದು ಘಟಿಸುವುದನ್ನು ನಾವು ಹೇಗೆ ತಡೆಯಬಹುದು?

ಡಾ. ಅನಿರುದ್ಧ ಮಲ್ಪಾನಿ, ವೈದ್ಯ

ಕಿಡಿನುಡಿ



ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ನಿವಾಸದ ಮೇಲಿನ ಇ.ಡಿ. ದಾಳಿ ರಾಜಕೀಯ ಪ್ರೇರಿತವಾಗಿದ್ದು, ಕೇಂದ್ರ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ಬಿಜೆಪಿ ನಾಯಕರ ಮೇಲೆ ಮಾತ್ರ ಇ.ಡಿ. ದಾಳಿ ನಡೆಯುವುದಿಲ್ಲ. ಅವರೆಲ್ಲರೂ ಸಾಚಾಗಳಾ?

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಬುಧವಾರ, 26-4-2000

• ಆಲಮಟ್ಟಿ ಎತ್ತರ ಹೆಚ್ಚಳಕ್ಕೆ ಕೋರ್ಟ್ ಅಸ್ತು

ನವದೆಹಲಿ, ಏ. 25 (ಪಿಟಿಐ)– ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಿಸಲು ಸುಪ್ರೀಂ ಕೋರ್ಟ್ ಕರ್ನಾಟಕಕ್ಕೆ ಅನುಮತಿ ನೀಡಿದೆ.

ಇದರೊಂದಿಗೆ 25 ವರ್ಷಗಳಷ್ಟು ಹಳೆಯ ಕೃಷ್ಣಾ ನದಿ ವಿವಾದದ ಸುದೀರ್ಘ ಕಾನೂನು ಸಮರಕ್ಕೆ ತೆರೆ ಬಿದ್ದಂತಾಗಿದೆ.

ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 509 ಮೀಟರ್‌ಗಳಿಂದ 519.6 ಮೀಟರ್‌ಗಳಿಗೆ ಹೆಚ್ಚಿಸಲು ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠ ಒಮ್ಮತದ ಒಪ್ಪಿಗೆ ನೀಡಿದೆ.

ಅಣೆಕಟ್ಟೆ ಎತ್ತರ ಹೆಚ್ಚಿಸುವುದಕ್ಕೆ ತಡೆಯಾಜ್ಞೆ ನೀಡಬೇಕು ಎಂಬ ಆಂಧ್ರ ಪ್ರದೇಶದ ಮನವಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದ್ದು, ಅದಕ್ಕೆ ಮುಖಭಂಗವಾಗಿದೆ.

ನ್ಯಾಯಮಂಡಳಿ ರೂಪಿಸಿರುವ 'ಸ್ಕೀಂ ಬಿ' ಯನ್ನು ತೀರ್ಪು ಎಂದು ಪರಿಗಣಿಸುವಂತಿಲ್ಲ ಎಂಬ ಕರ್ನಾಟಕದ ವಾದವನ್ನೂ ಕೋರ್ಟ್ ಎತ್ತಿಹಿಡಿದಿದೆ.

ಆದರೆ ಹೊಸ ನ್ಯಾಯಮಂಡಳಿಯು ನೀರು ಹಂಚಿಕೆ ಬಗ್ಗೆ ನಿರ್ಧಾರ ಕೈಗೊಳ್ಳುವ ವರೆಗೆ ಕೃಷ್ಣಾ ನದಿಯ ನೀರನ್ನು ಬಳಸಿಕೊಳ್ಳಲು ಆಂಧ್ರಪ್ರದೇಶಕ್ಕೆ ಅನುಮತಿ ನೀಡಿದೆ.

• ರಟ್ಟೀಹಳ್ಳಿ ಲಾಕಪ್ ಸಾವು ಲಕ್ಷ ರೂ. ಪರಿಹಾರಕ್ಕೆ ಸೂಚನೆ

ನವದೆಹಲಿ, ಏ. 25 (ಪಿಟಿಐ)– ಪೊಲೀಸ್ ಲಾಕಪ್‌ನಲ್ಲಿ ಮೃತಪಟ್ಟ ಮಜೀದ್ ಎಂಬುವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರ ನೀಡುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಕರ್ನಾಟಕ ಸರ್ಕಾರಕ್ಕೆ ಆದೇಶ ನೀಡಿದೆ.

ಪತ್ರಿಕಾ ವರದಿಗಳ ಆಧಾರದ ಮೇಲೆ ತನಿಖೆ ನಡೆಸಿದ ಆಯೋಗ, ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸರು ತೋರಿದ ನಿರ್ಲಕ್ಷ್ಯದಿಂದಾಗಿ ಮಜೀದ್ ಮೃತಪಟ್ಟ ಎಂದು ಅಭಿಪ್ರಾಯಪಟ್ಟಿದೆ.

ಧಾರವಾಡದ ಪೊಲೀಸ್ ಸೂಪರಿಂಟೆಂಡೆಂಟ್ ಅವರ ವರದಿಯ ಪ್ರಕಾರ, 'ಅಂಗಡಿ ಕಳ್ಳತನ ಪ್ರಕರಣವೊಂದರಲ್ಲಿ ಮಜೀದ್ ಅವರನ್ನು ಪೊಲೀಸರು ಬಂಧಿಸಿದ್ದರು. ಆದರೆ ಮರುದಿನ ಬೆಳಿಗ್ಗೆ ಮಜೀದ್‌ನ ಶವ ಠಾಣೆಯ ಶೌಚಾಲಯದಲ್ಲಿ ಪತ್ತೆಯಾಗಿತ್ತು.

ವಿಷ ಸೇವನೆಯಿಂದ ಮಜೀದ್ ಮೃತಪಟ್ಟಿದ್ದಾನೆ ಎಂದು ಮರಣೋತ್ತರ ಪರೀಕ್ಷೆ ವರದಿಯಲ್ಲಿ ತಿಳಿಸಲಾಗಿತ್ತು.

50 ವರ್ಷಗಳ ಹಿಂದೆ

ಶನಿವಾರ, 26-4-1975

• ಗುಜರಾತ್ ವಿದ್ಯಾಪೀಠ ತ್ಯಜಿಸಿ ಇಲ್ಲವೇ ರಾಜಕೀಯ ನಿಲ್ಲಿಸಿ

ಅಹಮದಾಬಾದ್, ಏ. 25– ಇಪ್ಪತ್ತನಾಲ್ಕು ಗಂಟೆಗಳಲ್ಲಿ ಗುಜರಾತ್ ವಿದ್ಯಾಪೀಠವನ್ನು ತ್ಯಜಿಸಿ ಇಲ್ಲವೇ ಸಂಸ್ಥೆಯ ಆವರಣದೊಳಗೆ ನಡೆಸುವ ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸಿ ಎಂದು ಗುಜರಾತ್ ವಿದ್ಯಾಪೀಠದ ವಿದ್ಯಾರ್ಥಿಗಳು ಇಂದು ಅದರ ಕುಲಪತಿ ಮತ್ತು ಸಂಸ್ಥಾ ಕಾಂಗ್ರೆಸ್ ನಾಯಕ ಮೊರಾರ್ಜಿ ದೇಸಾಯಿಯವರಿಗೆ ಎಚ್ಚರಿಕೆ ನೀಡಿದ್ದಾರೆ.

ವಿದ್ಯಾರ್ಥಿಗಳು ನೀಡಿರುವ ಗಡುವು ನಾಳೆ ಬೆಳಿಗ್ಗೆ ಅಂತ್ಯಗೊಳ್ಳುತ್ತದೆ.

ಎಂಟು ವರ್ಷಗಳ ಹಿಂದೆ ಮೊರಾರ್ಜಿ ದೇಸಾಯಿ ಅವರು ತಮ್ಮ ಎಲ್ಲ ಆಸ್ತಿಯನ್ನು ವಿದ್ಯಾಪೀಠಕ್ಕೆ ದಾನವಾಗಿ ನೀಡಿದ್ದರು. ಆದರೆ ಅಹಮದಾಬಾದಿಗೆ ಭೇಟಿ ನೀಡಿದಾಗ ಅವರು ವಿದ್ಯಾಪೀಠದಲ್ಲಿರುವ ಅತಿಥಿಗೃಹದಲ್ಲಿ ತಂಗುತ್ತಾರೆ. ತಮ್ಮ ವಿದ್ಯಾಪೀಠದ ನಿವಾಸದಿಂದಲೇ ಅವರು ಕಮ್ಯುನಿಸ್ಟೇತರ ವಿರೋಧ ಪಕ್ಷಗಳ ಏಕತೆ ಪ್ರಯತ್ನವನ್ನು ಇತ್ತೀಚೆಗೆ ಆರಂಭಿಸಿದ್ದು.

'ನಿಮ್ಮ ರಾಜಕೀಯ ಚಟುವಟಿಕೆಗಳಿಂದ ನಮ್ಮ ಅಧ್ಯಯನಕ್ಕೆ ಭಂಗ ಬರುತ್ತಿದೆ' ಎಂದು ವಿದ್ಯಾರ್ಥಿಗಳು ತೀವ್ರವಾಗಿ ಮೊರಾರ್ಜಿ ಅವರನ್ನು ಆಕ್ಷೇಪಿಸಿದ್ದಾರೆ. ಈ ಕಾರಣದಿಂದಲೇ ಲೋಕ ಸಂಘರ್ಷ ಸಮಿತಿಯ ಏಳು ಮಂದಿ ಸದಸ್ಯರಿರುವ ಉಪಸಮಿತಿಯ ಸಭೆಯನ್ನು ವಿದ್ಯಾಪೀಠದ ಬದಲು ಸಂಸ್ಥಾ ಕಾಂಗ್ರೆಸ್ ಕಚೇರಿಯಲ್ಲಿ ನಡೆಸಲಾಯಿತು.

'ವೇವ್ಸ್': ಸಂಭ್ರಮಾಚರಣೆ ಮಾತ್ರವಲ್ಲ; ಪ್ರತಿಭಾವಂತರು, ಉದ್ಯಮಿಗಳಿಗೆ ಚಿಮ್ಮುಹಲಗೆ

ಸೃಜನಶೀಲ ಪ್ರತಿಭೆಗಳಿಗೆ ಜಾಗತಿಕ ವೇದಿಕೆ



ವಿಶ್ಲೇಷಣೆ

ಕಿರಣ್ ಮಜುಂದಾರ್ ಶಾ

ಜಾಗತಿಕ ವ್ಯಾಪಾರ ಸುಂಕ ಸಮರ ಮತ್ತು ಷೇರುಪೇಟೆಯ ಚಂಚಲತೆಯ ನಡುವೆಯೂ ಭಾರತವು ಎಂತಹ ಸನ್ನಿವೇಶವನ್ನಾದರೂ ನಿಭಾಯಿಸುವ ಸಾಮರ್ಥ್ಯವುಳ್ಳ ಆರ್ಥಿಕತೆಯಾಗಿ ಪ್ರಕಾಶಿಸುತ್ತಿದೆ. ತನ್ನಲ್ಲಿರುವ ಜನಸಂಖ್ಯೆಯ ಅನುಕೂಲ ಮತ್ತು ತಾಂತ್ರಿಕ ಸಾಮರ್ಥ್ಯಗಳನ್ನು ಬಳಸಿಕೊಂಡು ದೇಶವು ಸವಾಲುಗಳನ್ನೇ ಅವಕಾಶಗಳನ್ನಾಗಿ ಪರಿವರ್ತಿಸಬಹುದು. ಆ ಮೂಲಕ, ಜಾಗತಿಕ ಮಟ್ಟದಲ್ಲಿ ತನ್ನನ್ನು 'ಸೃಜನಶೀಲತೆಯ ಶಕ್ತಿಕೇಂದ್ರ' ಎಂದು ಗುರುತಿಸಿಕೊಳ್ಳಬಲ್ಲದು.

ಕಥೆ ಹೇಳುವ ಶ್ರೀಮಂತ ಪರಂಪರೆ ಹೊಂದಿರುವ ಭಾರತದ ಮಾಧ್ಯಮ ಮತ್ತು ಮನರಂಜನೆ (ಎಂಆ್ಯಂಡ್‌ಇ) ವಲಯವು 'ಭಾರತದಲ್ಲಿ ಸೃಷ್ಟಿಸಿ, ಪ್ರಪಂಚಕ್ಕಾಗಿ ಸೃಷ್ಟಿಸಿ' ಎಂಬ ದೃಷ್ಟಿಕೋನದ ಮೂಲಕ ಜಗತ್ತಿನಾದ್ಯಂತ ಇರುವ ಸೃಜನಶೀಲ ಪ್ರತಿಭೆಗಳನ್ನು ಸಂಪರ್ಕಿಸುವ ಗುರಿಯನ್ನು ಹೊಂದಿದೆ.

ಸಿನಿಮಾ, ಸಂಗೀತ, ಕಲೆ, ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವೇಗವಾಗಿ ಪ್ರವರ್ಧಮಾನಕ್ಕೆ ಬರುತ್ತಿರುವ ಸೃಜನಶೀಲ ಯುವ ಜನಸಮೂಹಕ್ಕೆ ಭಾರತವು ನೆಲೆಯಾಗಿದೆ. ವಿವಿಧ ವಿಭಾಗಗಳಲ್ಲಿ ಆಸ್ಕರ್ ಗೆದ್ದಿದ್ದ 'ಡ್ಯೂನ್–2' ಚಲನಚಿತ್ರದಲ್ಲಿ ನಮಿತ್ ಮಲ್ಹೋತ್ರಾ ನೇತೃತ್ವದ ವಿಷ್ಯುವಲ್ ಎಫೆಕ್ಟ್ಸ್ ಮತ್ತು ಆ್ಯನಿಮೇಷನ್ ಸ್ಟುಡಿಯೊ 'ಡಿಎನ್‌ಇಜಿ'ಯು ಅತ್ಯದ್ಭುತವಾದ ವಿಎಫ್‌ಎಕ್ಸ್ ತಂತ್ರಜ್ಞಾನ ಕೌಶಲವನ್ನು ಪ್ರದರ್ಶಿಸಿತ್ತು. ಇದು ಭಾರತದ ಏಳನೇ ಆಸ್ಕರ್ ಗೆಲುವು. ಜಾಗತಿಕ ಮನರಂಜನಾ ಉದ್ಯಮದಲ್ಲಿ ಭಾರತದ ಪ್ರಭಾವ ಹೆಚ್ಚಾಗುತ್ತಿರುವುದನ್ನು ಇದು ತೋರಿಸುತ್ತದೆ. ಸಾಂಪ್ರದಾಯಿಕ ಚಿತ್ರ ನಿರ್ಮಾಣದಿಂದ ಡಿಜಿಟಲ್ ನಿರ್ಮಾಣದವರೆಗೆ ಆಗಿರುವ ವಿಕಸನವು ವಿಶ್ವ ದರ್ಜೆಯ 'ಕಂಟೆಂಟ್' ಅನ್ನು ಸೃಷ್ಟಿಸುವ ದೇಶದ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ.

ಕೇಂದ್ರ ಸರ್ಕಾರದ 'ಜಾಗತಿಕ ಶ್ರವಣ–ದೃಶ್ಯ ಮನರಂಜನೆ ಶೃಂಗಸಭೆ–2025'ರ (ವೇವ್ಸ್) ಭಾಗವಾಗಿರುವ, ಸಮನ್ವಯ ವ್ಯವಸ್ಥೆಯಾದ ವೇವ್ಸ್ ಎಕ್ಸಲರೇಟರ್– ವೇವ್‌ಎಕ್ಸ್ ಯುವ ಸೃಜನಶೀಲ ಪ್ರತಿಭೆಗಳನ್ನು ಉದ್ಯಮದ ನಾಯಕರೊಂದಿಗೆ ಸಂಪರ್ಕಿಸುವ ಮತ್ತು ನವೋದ್ಯಮದ ಬೆಳವಣಿಗೆಗೆ ಉತ್ತೇಜನ ನೀಡುವ ಉದ್ದೇಶವನ್ನು ಹೊಂದಿದೆ. ಮುಂಬೈನಲ್ಲಿ ಮೇ ತಿಂಗಳಲ್ಲಿ ನಡೆಯಲಿರುವ ಈ ಶೃಂಗಸಭೆಯು ಭಾರತದ ಮಾಧ್ಯಮ ಮತ್ತು ಮನರಂಜನೆ ನವೋದ್ಯಮ ವ್ಯವಸ್ಥೆಗೆ ಮಾರ್ಗದರ್ಶನ, ಹಣಕಾಸಿನ ನೆರವು ಮತ್ತು ಜಾಗತಿಕ ಅವಕಾಶಗಳನ್ನು ಒದಗಿಸಿ ಈ ಕ್ಷೇತ್ರವನ್ನು ಮತ್ತಷ್ಟು ವಿಸ್ತರಿಸಲು ಪ್ರಯತ್ನಿಸಲಿದೆ. ಗೇಮಿಂಗ್, ಕೃತಕ ಬುದ್ಧಿಮತ್ತೆ ಮತ್ತು ಮೆಟಾವರ್ಸ್‌ನಂತಹ ನವೀನ ಕ್ಷೇತ್ರಗಳನ್ನು ಒಳಗೊಂಡಿರುವ ಈ ವಲಯವು 2023ರಲ್ಲಿ ₹2.42 ಲಕ್ಷ ಕೋಟಿ ಮೌಲ್ಯ ಹೊಂದಿತ್ತು. ಅದು 2027ರ ಹೊತ್ತಿಗೆ ₹3.06 ಲಕ್ಷ ಕೋಟಿಗೆ ಏರಿಕೆಯಾಗುವ ನಿರೀಕ್ಷೆ ಇದೆ.

ಮನ್ನಣೆ ಗಳಿಸುವಿಕೆಯಲ್ಲಿ ಇರುವ ಸವಾಲುಗಳ ನಡುವೆಯೂ ಈ ಶೃಂಗಸಭೆಯು ಬ್ರಹ್ಮನ್ ಗೇಮ್ ಸ್ಟುಡಿಯೋಸ್, ಕೀಬೌಂಡ್ ಮತ್ತು ವಾಯೊನ್ ಕ್ಲೌಡ್‌ನಂತಹ ನವೋದ್ಯಮಗಳಿಗೆ ಜಾಗತಿಕ ಬಂಡವಾಳ ಹೂಡಿಕೆದಾರರ ಮುಂದೆ ತಮ್ಮ ಕೌಶಲಗಳನ್ನು ಪ್ರದರ್ಶಿಸಲು ವೇದಿಕೆ ಕಲ್ಪಿಸಲಿದೆ. ಮಹಿಳೆಯರು ನೇತೃತ್ವ ವಹಿಸಿರುವ ಲ್ಯಾಪ್‌ವಿಂಗ್ ಸ್ಟುಡಿಯೋಸ್ ಮತ್ತು ವೈಗರ್ ಮೀಡಿಯಾದಂತಹ ನವೋದ್ಯಮಗಳು ಕೂಡ 'ವೇವ್ಸ್'ನ ಭಾಗವಾಗಲಿವೆ. ಹೆಚ್ಚು ಕ್ರಿಯಾಶೀಲ ಮತ್ತು ಸ್ಪರ್ಧಾತ್ಮಕವಾದ ನವೋದ್ಯಮ ವಾತಾವರಣ ಸೃಷ್ಟಿಸಲು ಮತ್ತು ಅಂತರರಾಷ್ಟ್ರೀಯ ಯಶಸ್ಸಿಗೆ ಚಿಮ್ಮುಹಲಗೆಯಾಗಲು 'ವೇವ್ಸ್' ಬದ್ಧವಾಗಿದೆ. ಬಂಡವಾಳ, ಮಾರ್ಗದರ್ಶನ ಮತ್ತು ಜಾಗತಿಕ ತೆರೆದುಕೊಳ್ಳುವಿಕೆಗೆ ಇರುವ ಅಡೆತಡೆಗಳನ್ನು ವೇವ್‌ಎಕ್ಸ್ ನೇರವಾಗಿ ಪರಿಹರಿಸಲಿದೆ. ನವೋದ್ಯಮಗಳಿಗೆ ಹಣಕಾಸಿನ ನೆರವು ನೀಡುವುದು ಮಾತ್ರವಲ್ಲದೆ, ಅವುಗಳ ಬೆಳವಣಿಗೆಗಾಗಿ ರಚನಾತ್ಮಕ ವ್ಯವಸ್ಥೆಯನ್ನೂ ರೂಪಿಸಲಿದೆ.

ಬರೀ ₹10 ಸಾವಿರ ಬಂಡವಾಳ ಮತ್ತು ದೂರದೃಷ್ಟಿಯೊಂದಿಗೆ ಬಯೋಕಾನ್ ಆರಂಭಿಸಿದ್ದ ನಾನು, ಪರಿವರ್ತನೆ ತರಬಹುದಾದ ಇಂತಹ ವೇದಿಕೆಗಳ ಮಹತ್ವವನ್ನು ಅರ್ಥಮಾಡಿಕೊಂಡಿದ್ದೇನೆ. ಬೆಂಗಳೂರಿನ ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿ (ಮ್ಯಾಪ್) ಮತ್ತು ಸೈನ್ಸ್ ಗ್ಯಾಲರಿಯಂತಹ ಸಂಸ್ಥೆಗಳ ಮೂಲಕ ಕಲೆ ಮತ್ತು ವಿಜ್ಞಾನಕ್ಕೆ ಬೆಂಬಲ ನೀಡುತ್ತಾ ಬಂದಿದ್ದೇನೆ. ದೇಶದ ಸಂಸ್ಕೃತಿಯ ಬೇರುಗಳು ಕಲೆ ಮತ್ತು ವಿಜ್ಞಾನ ಎರಡೂ ಕ್ಷೇತ್ರಗಳಲ್ಲಿ ಹರಡಿವೆ ಎಂದು ನಂಬಿದ್ದೇನೆ. ಕಲೆಗಳು ಮತ್ತು ವಿಜ್ಞಾನ ಎರಡೂ ಸೃಜನಶೀಲತೆಯಲ್ಲಿ ಬೇರೂರಿವೆ. ಕಲಾವಿದರು ಕ್ಯಾನ್ವಾಸ್ ಮೇಲೆ ಪ್ರಯೋಗ ಮಾಡುವಂತೆ ವಿಜ್ಞಾನಿಗಳು ಪ್ರಯೋಗಾಲಯಗಳಲ್ಲಿ ಪ್ರಯೋಗ ಮಾಡುತ್ತಾರೆ.

ಶತಮಾನಗಳಿಂದಲೂ ಕಥೆ ಹೇಳುವ ಸಂಪ್ರದಾಯ ಹೊಂದಿರುವ ಭಾರತವು ಈಗ ಜಾಗತಿಕವಾಗಿ ಸೃಜನಶೀಲ ಶಕ್ತಿಕೇಂದ್ರವಾಗಿ ಹೊರಹೊಮ್ಮುವಂತಹ ವಿಶಿಷ್ಟ ಸ್ಥಾನದಲ್ಲಿ ನಿಂತಿದೆ. ಈ ಶೃಂಗಸಭೆಯು ತಂತ್ರಜ್ಞಾನ ಮತ್ತು ಕಥೆ ಹೇಳುವಿಕೆಯ ಸೊಗಸಾದ ಸಂಧಿಸುವಿಕೆಗೆ ಒಂದು ಉದಾಹರಣೆ. ಆ್ಯನಿಮೇಷನ್, ಕೃತಕ ಬುದ್ಧಿಮತ್ತೆ, ಎಆರ್–ವಿಆರ್ (ಆಗ್ಮೆಂಟೆಡ್ ರಿಯಾಲಿಟಿ– ವರ್ಚ್ಯುವಲ್ ರಿಯಾಲಿಟಿ), ಗೇಮಿಂಗ್ ಮತ್ತು ಮೆಟಾವರ್ಸ್‌ನಂತಹ ನವೀನ ಕ್ಷೇತ್ರಗಳಲ್ಲಿರುವ ನವೋದ್ಯಮಗಳನ್ನು ಬೆಂಬಲಿಸುವ ಮೂಲಕ ತಂತ್ರಜ್ಞಾನ ಮತ್ತು ಕಥೆ ಹೇಳುವಿಕೆಯನ್ನು ಒಂದೇ ಬಿಂದುವಿನಲ್ಲಿ ಸೇರಿಸಲು 'ವೇವ್‌ಎಕ್ಸ್' ಸಜ್ಜಾಗಿದೆ.



'ವೇವ್ಸ್'ನಲ್ಲಿ ಭಾಗಿಯಾಗಲು 4,500ಕ್ಕೂ ಹೆಚ್ಚು ನವೋದ್ಯಮಿಗಳು ಮತ್ತು 5,900ಕ್ಕೂ ಹೆಚ್ಚು ಹೂಡಿಕೆದಾರರು ನೋಂದಣಿ ಮಾಡಿಕೊಂಡಿದ್ದಾರೆ. ಈ ಶೃಂಗಸಭೆ ಭಾರತೀಯ ನವೋದ್ಯಮಗಳು ಮತ್ತು ಜಾಗತಿಕ ಮಟ್ಟದ ಕಂಪನಿಗಳ ನಡುವೆ ಸಂಪರ್ಕ ಸೇತುವೆಯಾಗಲಿದ್ದು ಜಾಗತಿಕ ಮಾಧ್ಯಮ ಮತ್ತು ಮನರಂಜನೆ ಕ್ಷೇತ್ರದಲ್ಲಿ ಭಾರತ ನಾಯಕನ ಸ್ಥಾನಕ್ಕೆ ಏರುವುದಕ್ಕೆ ವೇಗ ನೀಡಲಿದೆ.

ಸಾಂಪ್ರದಾಯಿಕ ಮಾಧ್ಯಮವನ್ನು ಮೀರಿದ ನವೀನ ಕಲ್ಪನೆಗಳನ್ನೂ 'ವೇವ್ಸ್' ಪ್ರೋತ್ಸಾಹಿಸುತ್ತದೆ. ಎರುಕಾನವಿಸ್ ಟೆಕ್ನಾಲಜೀಸ್‌ನಂತಹ ಕಂಪನಿಗಳು ಎಐ-ಆಧಾರಿತ ಜಾಹೀರಾತು ಆ್ಯಪ್‌ಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ಪರಿಣತಿ ಸಾಧಿಸಿವೆ. ಆ್ಯನಿಮೇಷನ್ ಮತ್ತು ವಿಆರ್ ತಂತ್ರಜ್ಞಾನದ ಮೂಲಕ ಕಥೆ ಹೇಳುವಿಕೆಯನ್ನು ನವೋದ್ಯಮಗಳಾದ ಅಮೇಜ್ ಸ್ಟುಡಿಯೋಸ್ ಮತ್ತು ಆಫ್‌ಲೈನ್ ಹ್ಯೂಮನ್ ಸ್ಟುಡಿಯೋಸ್ ಮರುವ್ಯಾಖ್ಯಾನಿಸುತ್ತಿವೆ. ಇನ್‌ಸ್ಕೇಪ್‌ಎಕ್ಸ್‌ಆರ್ ಮತ್ತು ವಿಷನ್ ಇಂಪ್ಯಾಕ್ಟ್‌ನಂತಹ ಕಂಪನಿಗಳು ಡಿಜಿಟಲ್ ಮಾಧ್ಯಮದ ಮೂಲಕ ಕಲಿಕೆಯನ್ನು ರೂಪಾಂತರಿಸುತ್ತಿವೆ. ಒಟ್ಟಾಗಿ, ಈ ನವೋದ್ಯಮಗಳು ಭಾರತದ ಸೃಜನಶೀಲ ವ್ಯವಸ್ಥೆಯು ಹೊಂದಿರುವ ಬೃಹತ್ ಸಾಮರ್ಥ್ಯ ಮತ್ತು ಜಾಗತಿಕ ಪ್ರಸ್ತುತತೆಯನ್ನು ಎತ್ತಿ ತೋರಿಸುತ್ತವೆ.


'ವೇವ್ಸ್'ನಂತಹ ಪ್ರಯತ್ನಕ್ಕೆ ಬೆಂಬಲ ನೀಡಿರುವ ಭಾರತ ಸರ್ಕಾರವು ಮಾಧ್ಯಮ ಮತ್ತು ಮನರಂಜನಾ ಕ್ಷೇತ್ರದಲ್ಲಿ ದೇಶ ಹೊಂದಿರುವ ಸಾಮರ್ಥ್ಯಕ್ಕೆ ಪ್ರೋತ್ಸಾಹ ನೀಡುವ ಬದ್ಧತೆ ಪ್ರದರ್ಶಿಸಿದೆ. ಈ ಶೃಂಗಸಭೆಯ ಮೂಲಕ ನಾವು ನವೋದ್ಯಮಗಳಲ್ಲಿ ಹೂಡಿಕೆಯನ್ನು ಮಾತ್ರ ಮಾಡುತ್ತಿಲ್ಲ; ಬದಲಿಗೆ ಕಥೆ ಹೇಳುವಿಕೆಯಲ್ಲಿ, ಸ್ವಯಂ ಅಭಿವ್ಯಕ್ತಿಯಲ್ಲಿ, ನಮ್ಮ ಭವಿಷ್ಯವನ್ನು ರೂಪಿಸುವ ಸೃಜನಶೀಲ ಆರ್ಥಿಕತೆಯಲ್ಲೂ ಹೂಡಿಕೆ ಮಾಡುತ್ತಿದ್ದೇವೆ. ಅದು ಜೈವಿಕತಂತ್ರಜ್ಞಾನ ಪ್ರಯೋಗಾಲಯ ಆಗಿರಲಿ ಅಥವಾ ಡಿಜಿಟಲ್ ಸ್ಟುಡಿಯೋವೇ ಆಗಿರಲಿ, ಸೃಜನಶೀಲತೆ ಎನ್ನುವುದು ನಾಳೆಯ ಕೈಗಾರಿಕೆಗಳು ಮತ್ತು ಅಸ್ಮಿತೆಯನ್ನು ರೂಪಿಸುವ ಕರೆನ್ಸಿಯಾಗಿದೆ. 'ವೇವ್ಸ್' ಭಾರತದ ಮಾಧ್ಯಮ ಮತ್ತು ಮನರಂಜನೆ ಉದ್ಯಮದ ಸಂಭ್ರಮಾಚರಣೆ ಅಷ್ಟೇ ಅಲ್ಲ; ಅದಕ್ಕಿಂತಲೂ ಮಿಗಿಲಾದದ್ದು, ಈ ಜಗತ್ತು ಮನರಂಜನೆ, ಶಿಕ್ಷಣ ಮತ್ತು ಸಂಸ್ಕೃತಿಯನ್ನು ಬಳಸುತ್ತಿರುವ ರೀತಿಯನ್ನು ಪರಿವರ್ತಿಸಲು ಸಜ್ಜಾಗಿರುವ ಮುಂದಿನ ಪೀಳಿಗೆಯ ಸೃಜನಶೀಲ ಪ್ರತಿಭೆಗಳು ಮತ್ತು ಉದ್ಯಮಿಗಳಿಗೆ ಇದು ಚಿಮ್ಮುಹಲಗೆಯೂ ಆಗಿದೆ.

'ವೇವ್ಸ್'ನ ಸಲಹಾ ಮಂಡಳಿಯ ಸದಸ್ಯಳಾಗಿ, ಈ ಪರಿವರ್ತನೆಯ ಪ್ರಯಾಣದ ಭಾಗವಾಗಲು ನನಗೆ ಹೆಮ್ಮೆ ಇದೆ. ಈ ಶೃಂಗಸಭೆಯ ಪರಿಣಾಮವು ಸ್ಟುಡಿಯೊಗಳು ಮತ್ತು ಬೋರ್ಡ್‌ರೂಂಗಳನ್ನೂ ಮೀರಿ ಸಾಗಲಿದೆ. ಹೇಳಲಾಗುವ ಪ್ರತಿಯೊಂದು ಕಥೆಯಲ್ಲಿ, ಯಶಸ್ಸು ಸಾಧಿಸಿದ ಪ್ರತಿಯೊಂದು ನವೋದ್ಯಮದಲ್ಲಿ ಮತ್ತು ಸಂಪ್ರದಾಯಕ್ಕೆ ಸವಾಲೊಡ್ಡುವ ಪ್ರತಿಯೊಂದು ನಾವೀನ್ಯದಲ್ಲೂ ಅದು ಪ್ರತಿಧ್ವನಿಸಲಿದೆ.

ಜಾಗತಿಕ ಸೃಜನಶೀಲತೆಯ ಕ್ರಾಂತಿಯನ್ನು ಮುನ್ನಡೆಸುವ ಭಾರತದ ಕ್ಷಣಗಳು ಇಲ್ಲಿವೆ. ನಾವು 'ಭಾರತದಲ್ಲಿ ಸೃಷ್ಟಿಸೋಣ, ಪ್ರಪಂಚಕ್ಕಾಗಿ ಸೃಷ್ಟಿಸೋಣ' ಮತ್ತು ನಮ್ಮ ಕಲ್ಪನೆಯ ಅಪರಿಮಿತ ಶಕ್ತಿಯನ್ನು ಜಗತ್ತಿಗೆ ತೋರಿಸೋಣ.

ಲೇಖಕಿ: ಬಯೋಕಾನ್ ಸಮೂಹದ ಅಧ್ಯಕ್ಷೆ

ಚುರುಮುರಿ



ಹೊಸ ಪಕ್ಷ!

• ಬಿ.ಎನ್. ಮಲ್ಲೇಶ್

'ಏನೋ ತೆಪರ, ನಮ್ ಬಿಜಾಪುರದ ಹುಲಿ ಹೊಸ ಪಕ್ಷ ಕಟ್ತುತ್ತಂತೆ?' ದುಬ್ಬೀರ ಕೇಳಿದ.

'ಕಟ್ಲಿ ಬಿಡು, ಹುಲಿ ಕಟ್ತುತ್ತೆ ಅಂದ್ರೆ ಭರ್ಜರಿಯಾಗೇ ಇರುತ್ತೆ. ಆದ್ರೆ ಅಂತಿಂಥೋರು ಬರದಂಗೆ ನೋಡ್ಕಂಡ್ರೆ ಒಳ್ಳೇದು' ತೆಪರೇಸಿ ನಕ್ಕ.

'ಹುಲೀದಿರ್ಲಿ, ಕನ್ನಡ, ಕರ್ನಾಟಕದ ಹೆಸರಲ್ಲೂ ಕೆಲವರು ಪ್ರಾದೇಶಿಕ ಪಕ್ಷ ಕಟ್ತಾರಂತೆ, ಪೇಪರ್ ನೋಡ್ಲಿಲ್ವಾ?' ಗುಡ್ಡೆ ಕೇಳಿದ.

'ಹೌದಾ? ಕಟ್ಲಿ ಬಿಡು, ಆಕಾಶ ನೋಡಾಕೆ ನೂಕುನುಗ್ಗಾ? ಹಿಂದೆ ಬಾಳ ಜನ ಹೊಸ ಪಕ್ಷ ಕಟ್ಟಿದ್ರು, ಎಲ್ಲ ಚಪಾಟೆದ್ದು ಹೋದ್ವು. ಇವರದೂ ಒಂದು ಕೈ ನೋಡಿದ್ರಾತು'.

'ಹೊಸ ಪಕ್ಷ ಅಂದ್ರೆ ಹೊಸ ಬಾಟ್ಲ ಇದ್ದಂಗೆ ಕಣ್ರಲೆ. ಒಳಗಿರೋದೆಲ್ಲ ಹಳೇ ಮದ್ಯನೇ, ಅವ್ರೇ ಹಳೇ ರಾಜಕಾರಣಿಗಳೇ. ಜನ ಬದ್ಲಾಗದೆ ಎಷ್ಟು ಪಕ್ಷ ಕಟ್ಟಿದ್ರೂ ಅಷ್ಟೇಯ' ಮಂಜಮ್ಮ ಹೋಲ್‌ಸೇಲ್ ಮಾತಾಡಿದಳು.

'ಜನಾನೆಂಗೆ ಬದ್ಲು ಮಾಡೋದು? ಹೊಸ ದೇಶ ಕಟ್ಟಬೇಕು ಅಷ್ಟೆ'.

'ಹೊಸ ದೇಶನಾ? ನಮ್ ನಿತ್ಯಾನಂದನ ಕೈಲಾಸದ ತರನಾ? ನಿನ್ತೆಲಿ, ನಾವು ನೆಟ್ಟಗಿಲ್ಲದ್ದಕ್ಕೆ ದೇಶ ಏನ್ ಮಾಡ್ತದಲೆ?' ದುಬ್ಬೀರ ಗರಂ ಆದ.

'ಅದಿರ್ಲಿ, ನಮ್ ತೆಪರೇಸಿ ಅವನ ಮನೇಲಿದ್ದ ಚಾಕು, ಚೂರಿ, ಮಚ್ಚು ಎಲ್ಲ ಮಾಯ ಮಾಡಿದಾನಂತೆ, ಅದು ಗೊತ್ತಾ?' ಗುಡ್ಡೆ ಕೇಳಿದ.

'ಹೌದಾ? ಯಾಕಂತೆ?'

'ಭಯ! ಮೊನ್ನೆ ಅದ್ಯಾರೋ ಪೊಲೀಸಪ್ಪನ್ನ ಅವನೆಂಡ್ತಿ ಚಾಕುನಿಂದ ಚುಚ್ಚಿ ಚುಚ್ಚಿ ಕೊಂದ್ಲು ಅಂತ ಸುದ್ದಿ ಬಂದಿತ್ತಲ್ಲ, ಅವತ್ತಿಂದ ತೆಪರ ಹುಷಾರಾಗಿಬಿಟ್ಟನಂತೆ. ಇವ್ನು ಗುಂಡು ಹಾಕಿ ಮನಿಗೋಗೋದು, ಗ್ರಾಚಾರ ಕೆಟ್ಟು, ಊಟಕ್ಕೆ ಕುಂತಾಗ್ಲೇ ಅವನೆಂಡ್ತಿ ಕೈಗೆ ಚಾಕು ಸಿಗೋದು. ಯಾಕೆ ಬೇಕು ಅಲ್ವಾ?' ಗುಡ್ಡೆ ಕೀಟಲೆಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಚಾಲನೆ ಮತ್ತು ಕಾನೂನು ಪಾಲನೆ

ಬಾಲಕರ ವಾಹನ ಚಾಲನೆಯ ಪಿಡುಗು ಮಹಾನಗರಗಳಲ್ಲಿ ಮಾತ್ರವಲ್ಲದೆ ಹಳ್ಳಿಗಳಿಗೂ ವ್ಯಾಪಿಸಿರುವುದು ಸಮಾಜಕ್ಕೆ ಎಚ್ಚರಿಕೆಯ ಕರೆಗಂಟೆಯಾಗಿದೆ

• ದೀಪಾ ಹಿರೇಗುತ್ತಿ

ಇತ್ತೀಚೆಗೆ ಒಂದು ದಿನ ಬೆಳಿಗ್ಗೆ ಆರೂಕಾಲಿಗೆ ವಾಕಿಂಗ್ ಮುಗಿಸಿ ಮನೆಗೆ ಮರಳುತ್ತಿದ್ದೆ. ನೀಲಿ ಬಣ್ಣದ ಕಾರೊಂದು ನನ್ನೆದುರಿನಿಂದ ವೇಗವಾಗಿ ಹಾದುಹೋಯಿತು. ಒಳಗೆ ಚಾಲಕನ ಜಾಗ ಖಾಲಿ ಕಂಡಂತೆನಿಸಿ ಮತ್ತೊಮ್ಮೆ ನೋಡಿದರೆ, ಆರೋ ಏಳೋ ತರಗತಿಯವನಾಗಿರಬಹುದಾದ ಪುಟಾಣಿ ಬಾಲಕ! ಒಂದು ಸಲ ನನ್ನ ಹೃದಯ ಸ್ತಬ್ಧವಾದಂತಾಯಿತು. ಕಾರಿನ ನಂಬರ್ ನೋಡುವಷ್ಟರಲ್ಲಿ ಕಾರು ಹೋಗೇಬಿಟ್ಟಿತು.

ದೇಶದ ವಿವಿಧೆಡೆ ಬಾಲಕರು ವಾಹನ ಚಲಾಯಿಸಿ ಸಾವುನೋವಿಗೆ ಕಾರಣರಾದ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಅತಿಯಾಗಿಯೇ ಕೇಳಿಬರುತ್ತಿವೆ. 2016ರಲ್ಲಿ ಪುಣೆಯಲ್ಲಿ ಕುಡಿದು ಕಾರು ಚಲಾಯಿಸುತ್ತಿದ್ದ ಬಾಲಕ, ಬೈಕಿನಲ್ಲಿ ಹೋಗುತ್ತಿದ್ದ ಇಬ್ಬರು ಸಾಫ್ಟ್‌ವೇರ್ ಎಂಜಿನಿಯರುಗಳ ಸಾವಿಗೆ ಕಾರಣನಾಗಿದ್ದ. 2023ರ ಮೇ ತಿಂಗಳಿನಲ್ಲಿ ದೆಹಲಿಯಲ್ಲಿ ಹದಿನೇಳರ ಹುಡುಗ ಐಷಾರಾಮಿ ಕಾರೊಂದನ್ನು ಇಬ್ಬರು ವ್ಯಕ್ತಿಗಳ ಮೇಲೆ ಹಾಯಿಸಿ ಕೊಂದಿದ್ದ. ಇಂತಹ ಉದಾಹರಣೆಗಳು ನೂರಾರು.


ಹದಿನೆಂಟು ವರ್ಷವಾಗುವುದಕ್ಕಿಂತ ಮೊದಲು ವಾಹನ ಚಲಾಯಿಸಲು ಕಾನೂನು ಏಕೆ ಸಮ್ಮತಿಸುವುದಿಲ್ಲ ಎಂಬ ಮೂಲಭೂತ ವಿಚಾರವೇ ಬಹುತೇಕರಿಗೆ ಗೊತ್ತಿಲ್ಲ. ಕಾರು ಓಡಿಸುವುದೇನು ಬ್ರಹ್ಮವಿದ್ಯೆಯಲ್ಲ, ಆದರೆ ರಸ್ತೆಯಲ್ಲಿ ಅನಿರೀಕ್ಷಿತ ಸಮಸ್ಯೆಗಳಾದಾಗ ನಿರ್ಧಾರ ತೆಗೆದುಕೊಳ್ಳುವ ಕ್ಷಮತೆ ಹದಿನೆಂಟಕ್ಕಿಂತ ಮೊದಲು ಇರುವುದಿಲ್ಲ.

ವಿವಾಹಕ್ಕಾಗಲೀ ವೋಟು ಹಾಕಲಾಗಲೀ ವ್ಯವಹಾರಕ್ಕಾಗಲೀ ಒಂದು ವಯಸ್ಸು ನಿಗದಿಯಾಗಿರುವುದು ಕೂಡ ಅದಕ್ಕೇ. ಚಿಕ್ಕ ವಯಸ್ಸಿನ ಮಕ್ಕಳ ವಾಹನ ಚಾಲನೆ ಬೇರೆಯವರ ಜೀವವನ್ನು ಮಾತ್ರವಲ್ಲ, ವಾಹನ ಓಡಿಸುತ್ತಿರುವವರ ಬದುಕನ್ನೂ ಕೊನೆಗಾಣಿಸಿದ ಉದಾಹರಣೆಗಳಿವೆ. ಕೆಲವು ವರ್ಷಗಳ ಹಿಂದೆ ಬೆಳಗಾವಿಯಲ್ಲಿ ಹೈಸ್ಕೂಲ್ ಓದುತ್ತಿದ್ದ ಅಕ್ಕ, ತಂಗಿ ಸ್ಕೂಟರ್‌ನಲ್ಲಿ ಹೋಗುವಾಗ ಅಪಘಾತಕ್ಕೀಡಾಗಿ ಸ್ಥಳದಲ್ಲೇ ಮೃತಪಟ್ಟಿದ್ದರು. ಹೆಲ್ಮೆಟ್ ಇಲ್ಲದೇ ವೇಗದ ಮಿತಿ ಇಲ್ಲದೇ ಮೂರ್ನಾಲ್ಕು ಹುಡುಗರು ಬೈಕು, ಸ್ಕೂಟರ್ ಓಡಿಸುವುದನ್ನು ದಿನನಿತ್ಯ ನಮ್ಮ ನಮ್ಮ ಊರುಗಳಲ್ಲಿ ನೋಡುತ್ತಲೇ ಇರುತ್ತೇವೆ.

ಮೊದಲೆಲ್ಲ ಮಹಾನಗರಗಳಲ್ಲಿದ್ದ ಈ ಪಿಡುಗು ಇದೀಗ ಹಳ್ಳಿಗಳಿಗೂ ವ್ಯಾಪಿಸಿರುವುದು ಸಮಾಜಕ್ಕೆ ಎಚ್ಚರಿಕೆಯ ಕರೆಗಂಟೆಯಾಗಿದೆ. ತಮ್ಮ ಕಿರಿವಯಸ್ಸಿನ ಮಕ್ಕಳಿಗೆ ಮುಖ್ಯ ಬೀದಿಗಳಲ್ಲಿ ಕಾರು, ಬೈಕು ಓಡಿಸಲು ಬಿಡುವ ಬುದ್ಧಿಹೀನ ಪಾಲಕರಿಗೆ ಇದು ಗಂಭೀರ ಸಮಸ್ಯೆ ಎಂಬ ಅರಿವೇ ಆಗುತ್ತಿಲ್ಲ. ಅವರಿಗೋ ತಮ್ಮ ಮಕ್ಕಳ ವಾಹನ ಚಾಲನಾ ಕೌಶಲದ ಬಗ್ಗೆ ಹೇಳಿಕೊಳ್ಳುವ ಹುಚ್ಚು. ಇನ್ನು ಸ್ನೇಹಿತರ ಗುಂಪಿನಲ್ಲಿ ಬೈಕ್, ಕಾರು ಓಡಿಸಿ ಹೀರೊ ಆಗುವ ತವಕ ಈಗಿನ ಮಕ್ಕಳಿಗೆ. ಪಾಲಕರಿಗೆ ಬೆದರಿಕೆ ಹಾಕಿ ವಾಹನ ಓಡಿಸುವ ಮಕ್ಕಳೂ ಇದ್ದಾರೆ.

ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊ ವರದಿ ಪ್ರಕಾರ, 2021ರಲ್ಲಿ 6,500 ಅಪಘಾತಗಳು 15ರಿಂದ 18 ವಯಸ್ಸಿನೊಳಗಿನವರಿಂದ ನಡೆದಿವೆ ಮತ್ತು 2,200 ಜನ ಸಾವನ್ನಪ್ಪಿದ್ದಾರೆ. 2023 ಮತ್ತು 2024ರಲ್ಲಿ ಸುಮಾರು ಹನ್ನೆರಡು ಸಾವಿರ ಅಪಘಾತಗಳು ಮಕ್ಕಳಿಂದ ನಡೆದಿವೆ. ಇನ್ನು ದಾಖಲಾಗದೇ ಇರುವ ಪ್ರಕರಣಗಳ ಸಂಖ್ಯೆ ಎಷ್ಟಿದೆಯೋ?

ಮೋಟರು ವಾಹನ ಕಾಯ್ದೆ– 1988ರ ಸೆಕ್ಷನ್ 199ಎ ಪ್ರಕಾರ, 18 ವರ್ಷಕ್ಕಿಂತ ಚಿಕ್ಕ ಮಕ್ಕಳು ವಾಹನ ಚಲಾಯಿಸಿದರೆ ಅಥವಾ ಅಪಘಾತ ಮಾಡಿದರೆ ಅವರ ಪಾಲಕರೇ ತಪ್ಪಿತಸ್ಥರೆಂದು ಪರಿಗಣಿಸಲ್ಪಡುತ್ತಾರೆ. ವಾಹನಕ್ಕೆ ವಿಮೆ ಏನಾದರೂ ಇಲ್ಲದೇ ಹೋದರಂತೂ ದಂಡ ಕಟ್ಟಲು ಪಡಿಪಾಟಲು ಅನುಭವಿಸಬೇಕಾಗುತ್ತದೆ. ಇಂತಹ ಗಂಭೀರ ವಿಷಯವಿದ್ದಾಗಲೂ ಕೆಲವು ಲೋಪದೋಷಗಳನ್ನು ಉಪಯೋಗಿಸಿಕೊಂಡು ತಪ್ಪಿತಸ್ಥರು ಬಚಾವಾಗಿ ಬಿಡುತ್ತಾರೆ.



ಪೂನಾದ ಪ್ರಕರಣದಲ್ಲಿ ಹುಡುಗನ ಪಾಲಕರು ಕಾನೂನಿನಲ್ಲಿರುವ ಲೋಪಗಳನ್ನು ಉಪಯೋಗಿಸಿಕೊಂಡು ಸುಲಭದಲ್ಲಿ ತಪ್ಪಿಸಿಕೊಂಡರು. ದೆಹಲಿಯ ಪ್ರಕರಣದಲ್ಲಿ ಹುಡುಗನ ಶ್ರೀಮಂತ ತಂದೆತಾಯಿ ಹಣದಿಂದ ಇಡೀ ಪ್ರಕರಣವನ್ನೇ ಮುಚ್ಚಿಹಾಕುವ ಪ್ರಯತ್ನ ಮಾಡಿದ್ದರು. ಶ್ರೀಮಂತರನ್ನು ರಕ್ಷಿಸಲು ಇಡೀ ವ್ಯವಸ್ಥೆಯೇ ಟೊಂಕ ಕಟ್ಟಿ ನಿಲ್ಲುವುದು ಸಮಾಜದ ಕಟು ವ್ಯಂಗ್ಯ.

ಹಾಗಂತ ಪೊಲೀಸ್ ಇಲಾಖೆ ಸುಮ್ಮನೆ ಕುಳಿತಿಲ್ಲ. ಶಾಲಾ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ ನಡೆಸುತ್ತಿದೆ. ಹೈದರಾಬಾದ್‌ನಲ್ಲಿ ಈ ಒಂದು ವರ್ಷದ ವರೆಗಿನ ಅವಧಿಯಲ್ಲಿ 1,275 ಪ್ರಕರಣಗಳನ್ನು ದಾಖಲಿಸಿ ಮೂವತ್ತೈದು ವಾಹನಗಳ ನೋಂದಣಿಯನ್ನು ಸಂಚಾರ ಪೊಲೀಸರು ರದ್ದುಗೊಳಿಸಿದ್ದಾರೆ. ಸಿಕ್ಕಿಹಾಕಿಕೊಂಡ ಬಾಲಕರಿಗೆ ಇಪ್ಪತ್ತೈದು ವರ್ಷ ತುಂಬುವವರೆಗೂ ಚಾಲನಾ ಪರವಾನಗಿ ಕೊಡುವುದಿಲ್ಲ ಎಂದೂ ಇಲಾಖೆ ಕಟ್ಟುನಿಟ್ಟಾಗಿ ಹೇಳಿದೆ. ಎಲ್ಲ ಕಡೆ ಈ ರೀತಿಯ ಶಿಸ್ತುಕ್ರಮ ಜರುಗಬೇಕು.

ಇದು ಕಾನೂನಿನ ವಿಷಯ ಮಾತ್ರವಲ್ಲ ಬದಲಾಗಿ ಒಂದು ಸಾಮಾಜಿಕ ವೈಫಲ್ಯ ಕೂಡ ಹೌದು. ಏಕೆಂದರೆ ಮಕ್ಕಳು ವಾಹನ ಓಡಿಸದಂತೆ ಗಮನ ಹರಿಸುವುದು ಸಮಾಜದ ಸಂಘಟಿತ ಜವಾಬ್ದಾರಿ. ರಸ್ತೆ ಅಪಘಾತದಲ್ಲಿ ಪ್ರತಿ ಗಂಟೆಗೆ ಕನಿಷ್ಠ ಇಪ್ಪತ್ತು ಜನ ದೇಶದಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. 2030ರಲ್ಲಿ ರಸ್ತೆ ಅಪಘಾತದಲ್ಲಿ ಸಾವನ್ನಪ್ಪುವವರ ಸಂಖ್ಯೆಯನ್ನು ಅರ್ಧದಷ್ಟು ಇಳಿಸಲೇಬೇಕೆಂದು ಸರ್ಕಾರ ಗುರಿ ಇರಿಸಿಕೊಂಡಿದೆ. ಹೀಗಾಗಿ, ಚಿಕ್ಕ ಮಕ್ಕಳ ಕೈಗೆ ಕಾರು, ಬೈಕು ಸಿಗದಂತೆ ನೋಡಿಕೊಳ್ಳಲೇಬೇಕಾದ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ವಾಚಕರ ವಾಣಿ

ನೀರಿನ ವಿಷಯ ಬೆರೆಸುವುದು ಬೇಡ

'ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸುತ್ತಿದ್ದೇವೆ' ಎಂದು ಭಾರತ ಸರ್ಕಾರ ಘೋಷಿಸಿ, ಪಾಕಿಸ್ತಾನ ಸರ್ಕಾರಕ್ಕೆ ತಿಳಿಸಿದೆ. ಇದರ ಪರಿಣಾಮಗಳೇನು ಎಂಬುದರ ಬಗೆಗೆ ಪತ್ರಿಕೆಗಳು ವಿವರಗಳನ್ನು ಪ್ರಕಟಿಸುತ್ತಿವೆ. ಪ್ರವಾಸಿಗರನ್ನು ಹತ್ಯೆ ಮಾಡಿದ್ದು 'ನಾಗರಿಕ'ರಲ್ಲ, ಭಯೋತ್ಪಾದಕರು. ಆದರೆ ಭಾರತ ಸರ್ಕಾರ ಆ ಕೃತ್ಯಕ್ಕೆ ಪ್ರತಿಕ್ರಿಯಿಸುವಾಗ ನಾಗರಿಕವಾಗೇ ನಡೆದುಕೊಳ್ಳಬೇಕಾಗುತ್ತದೆ. ಗಡಿಗಳನ್ನು ಮುಚ್ಚುವುದು, ರಾಜತಾಂತ್ರಿಕರ ಸಂಖ್ಯೆ ಕಡಿತಗೊಳಿಸುವುದು ಇವೆಲ್ಲ ಸರಿ. ಆದರೆ ನದಿ ನೀರಿನ ಮಾತು ಬೇರೆ.

ಸಿಂಧೂ ಕಣಿವೆ ನಾಗರಿಕತೆ ಎಂದು ಓದಿದ್ದೇವೆ. ನದಿಗಳಿಗೆ ದೇಶಗಳ, ಗಡಿಗಳ ಹಂಗಿಲ್ಲ. ನೀರು ಮಾನವನ ಮೂಲಭೂತ ಆವಶ್ಯಕತೆಗಳಲ್ಲಿ ಒಂದು. ಭಾರತ ಇಬ್ಭಾಗವಾದಾಗ ಪಂಜಾಬ್ (ಐದು ನದಿಗಳ ಪ್ರದೇಶ) ಎರಡಾಯಿತು. ಸಿಂಧೂ ಮತ್ತು ಅದರ ಐದು ಉಪನದಿಗಳ ನೀರು ಹಂಚಿಕೆಯಾಗಬೇಕಾಯಿತು. ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಲ್ಲಿ ಒಪ್ಪಂದ ಏರ್ಪಟ್ಟಿತು. ಈಗ ಯಾವುದೇ ಒಂದು ಪಕ್ಷ ಏಕಪಕ್ಷೀಯವಾಗಿ ಅದನ್ನು ರದ್ದು ಮಾಡಲಾಗದು. ಅರವತ್ತೈದು ವರ್ಷಗಳ ನಂತರ ಅದರಲ್ಲಿ ತಿದ್ದುಪಡಿ ಮಾಡಬೇಕಾಗುತ್ತದೆ, ನಿಜ. ಆದರೆ ಈ ವಿಷಯವನ್ನು ಬೇರೆ ಬೆಳವಣಿಗೆಗಳೊಂದಿಗೆ ಬೆರೆಸುವುದು ಸೂಕ್ತ ನಿಲುವಲ್ಲ. ಪಾಕಿಸ್ತಾನ ಅನೇಕ ತಪ್ಪುಗಳನ್ನು ಮಾಡುತ್ತಾ ಬಂದಿದೆ. ಆದರೆ ಈಗ ಭಾರತದ ಈ ಕ್ರಮದಿಂದ ಅದು ವಿಶ್ವದ ಕನಿಕರ ಗಳಿಸುತ್ತದೆ. ನೀರು ತಿರುಗಿಸುವ ಕ್ರಮ ಯುದ್ಧಕ್ಕೆ ಸಮ ಎಂದು ಭಾರತದ ಕ್ರಮಕ್ಕೆ ಪಾಕಿಸ್ತಾನ ಪ್ರತಿಕ್ರಿಯಿಸಿದೆ. ಪಹಲ್ಗಾಮ್ ಪ್ರಕರಣದಲ್ಲಿ ಭಾಗಿಯಾದವರು ಹಾಗೂ ಅವರಿಗೆ ನೆರವು ನೀಡಿದವರು ಪಾಕಿಸ್ತಾನ ಅಥವಾ ಬೇರೆ ಯಾವುದೇ ದೇಶದಲ್ಲಿರಲಿ ಅವರನ್ನು ಪತ್ತೆ ಮಾಡುವಲ್ಲಿ ಸರ್ಕಾರ ವಿವಿಧ ದೇಶಗಳ ಸಹಾಯ ಪಡೆಯಬೇಕು. ಆಂತರಿಕವಾಗಿ ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡಿ ಅಲ್ಲಿನವರ ಸದ್ಭಾವನೆ ಗಳಿಸಿಕೊಳ್ಳಬೇಕು. ಒಟ್ಟಿನಲ್ಲಿ, ಒಂದು ಪ್ರದೇಶ ಯಥಾಸ್ಥಿತಿಗೆ ಮರಳಿದೆಯೇ ಎಂಬುದನ್ನು ಬರೀ ಪ್ರವಾಸಿಗರ ಸಂಖ್ಯೆಯ ಹೆಚ್ಚಳದಿಂದ ಹೇಳಲಾಗದು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಪಶುವೈದ್ಯರ ದಿನದ ಆಶಯ ಸಾಕಾರವಾಗಲಿ

ಪ್ರತಿವರ್ಷ ಏಪ್ರಿಲ್ ತಿಂಗಳಿನ ಕೊನೆಯ ಶನಿವಾರದಂದು ವಿಶ್ವ ಪಶುವೈದ್ಯರ ದಿನವನ್ನು ಆಚರಿಸಲಾಗುತ್ತದೆ. 'ಪ್ರಾಣಿಗಳಿಗೆ ಉತ್ತಮ ಚಿಕಿತ್ಸೆ ಒದಗಿಸಲು ತಂಡದ ವಿಧಾನ ಅಗತ್ಯ' ಎಂಬುದು ಈ ಬಾರಿಯ ದಿನಾಚರಣೆಯ ಧ್ಯೇಯವಾಕ್ಯವಾಗಿದೆ. ಪಶುಗಳ ಚಿಕಿತ್ಸೆಯಲ್ಲಿ ತೊಡಗಿರುವ ವೈದ್ಯರು, ಸಹಾಯಕರು ಒಂದು ತಂಡವಾಗಿ ಸಮನ್ವಯದಿಂದ ಕೆಲಸ ಮಾಡಿದಾಗ ಮಾತ್ರ ಪೂರ್ಣ ಯಶಸ್ಸು ಲಭಿಸಲು ಸಾಧ್ಯ. ಏಕೆಂದರೆ ಪ್ರಾಣಿಗಳಿಗೆ ಚಿಕಿತ್ಸೆ ನೀಡುವಾಗ ಅವುಗಳ ನಿಯಂತ್ರಣ ಮಾಡುವುದು ಬಹಳ ಮುಖ್ಯ ಸಂಗತಿ. ಇದಕ್ಕೆ ಪಶುವೈದ್ಯ ಸಹಾಯಕರು, ಗ್ರೂಪ್ ಡಿ ನೌಕರರು ಇರಲೇಬೇಕು. ಆದರೆ ಈ ಧ್ಯೇಯವಾಕ್ಯಕ್ಕೆ ತದ್ವಿರುದ್ಧವಾದ ಪರಿಸ್ಥಿತಿ ನಮ್ಮ ರಾಜ್ಯದ ಪಶು ಚಿಕಿತ್ಸಾಲಯಗಳಲ್ಲಿ ಇದೆ. ಪಶುವೈದ್ಯ ಇಲಾಖೆಯಲ್ಲಿ ಪಶು ಪರೀಕ್ಷಕರು, ಪಶುವೈದ್ಯ ಸಹಾಯಕರು ಹಾಗೂ ಗ್ರೂಪ್ ಡಿ ನೌಕರರ ನೇಮಕಾತಿ ನಡೆದು ಕೆಲವು ದಶಕಗಳೇ ಕಳೆದಿವೆ.

ಹೊಸದಾಗಿ ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸಿ ಗುತ್ತಿಗೆ ಆಧಾರದಲ್ಲಿ ಪಶುವೈದ್ಯರನ್ನು ಮಾತ್ರ ನೇಮಕ ಮಾಡಲಾಗಿದೆ. ಅನೇಕ ಸಂಸ್ಥೆಗಳಲ್ಲಿ ಒಬ್ಬ ಪಶುವೈದ್ಯರು ಮಾತ್ರ ಇದ್ದಾರೆ. ಚಿಕಿತ್ಸಾಲಯದ ಬಾಗಿಲು ತೆಗೆಯುವುದರಿಂದ ಹಿಡಿದು ಎಲ್ಲ ಕೆಲಸವನ್ನು ಅವರೇ ಮಾಡಬೇಕಾಗಿದೆ. ಕೆಲವು ಕಡೆ ಹೊರಗುತ್ತಿಗೆ ಮುಖಾಂತರ ಗ್ರೂಪ್ ಡಿ ನೌಕರರನ್ನು ನೇಮಿಸಲಾಗಿದೆ. ಆದರೆ ಇವರಿಗೆ ಪ್ರಾಣಿಗಳನ್ನು ನಿಯಂತ್ರಿಸುವ ಕೌಶಲ ಇರದ ಕಾರಣ ಇವರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಆದ್ದರಿಂದ ವಿಶ್ವ ಪಶುವೈದ್ಯರ ದಿನದ ಆಶಯ ಸಾಕಾರಗೊಳ್ಳಬೇಕಾದರೆ ಸರ್ಕಾರ ಕೂಡಲೇ ಪಶು ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ ಸಹಾಯಕ ಸಿಬ್ಬಂದಿ ಹಾಗೂ ಗ್ರೂಪ್ ಡಿ ನೌಕರರ ಹುದ್ದೆಗಳಿಗೆ ನೇಮಕಾತಿ ಮಾಡಬೇಕು.

ಟಿ.ಜಯರಾಂ, ಕೋಲಾರ

ದ್ವಿಭಾಷಾ ನೀತಿಯಲ್ಲ, ಪರೋಕ್ಷ ಹಿಂದಿ ಹೇರಿಕೆ

ಮಹಾರಾಷ್ಟ್ರವು ಶಿಕ್ಷಣದಲ್ಲಿ ದ್ವಿಭಾಷಾ ನೀತಿಗೆ ಮರಳಿದೆ ಎಂದು ರಮಾನಂದ್ ಎಸ್. ಅಭಿಪ್ರಾಯಪಟ್ಟಿದ್ದಾರೆ. (ವಾ.ವಾ., ಏ. 24). ಆದರೆ ವಾಸ್ತವವೆಂದರೆ, ಈವರೆಗೂ ಮಹಾರಾಷ್ಟ್ರದ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಐದನೇ ತರಗತಿವರೆಗೆ ದ್ವಿಭಾಷಾ ನೀತಿಯೇ ಇತ್ತು. ಆದರೆ ಹೊಸ ಶಿಕ್ಷಣ ನೀತಿಯ ಪ್ರಕಾರ, ಒಂದನೇ ತರಗತಿಯಿಂದಲೇ ಮೂರನೇ ಭಾಷೆಯಾಗಿ ಹಿಂದಿಯನ್ನೇ ಕಲಿಯಬೇಕೆಂದು ಕಡ್ಡಾಯಗೊಳಿಸಿ ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲಾಗಿದೆ. ಬದಲಾಗಿ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಇರುವಂತೆ ಯಾವುದಾದರೂ ಭಾರತೀಯ ಭಾಷೆಯನ್ನು ಮೂರನೇ ಭಾಷೆಯಾಗಿ ಕಲಿಯಬಹುದು ಎಂದಿದೆ. ಇದು ಕೂಡ ಪರೋಕ್ಷವಾಗಿ ಹಿಂದಿ ಹೇರಿಕೆಯ ಉದ್ದೇಶವನ್ನೇ ಹೊಂದಿದೆ. ಹೇಗೆಂದರೆ, ಮೂರನೇ ಭಾಷೆ ಕಡ್ಡಾಯಗೊಳಿಸಿದರೆ ಬಹುತೇಕ ಎಲ್ಲ ಶಾಲೆಗಳೂ ಹಿಂದಿಯನ್ನು ಮಾತ್ರ ಮೂರನೇ ಭಾಷೆಯ ಆಯ್ಕೆಯಾಗಿ ಒದಗಿಸುತ್ತವೆ. ಇಂತಹ ಸಂದರ್ಭದಲ್ಲಿ ಮಕ್ಕಳು ಅನಿವಾರ್ಯವಾಗಿ ಹಿಂದಿಯನ್ನೇ ಕಲಿಯಬೇಕಾಗುತ್ತದೆ. ಕೆಲವು ಶಾಲೆಗಳಲ್ಲಿ ಸಂಸ್ಕೃತದ ಆಯ್ಕೆ ಇರಬಹುದಷ್ಟೆ. ಹಾಗಾಗಿ ಈ ಮೂರನೇ ಭಾಷೆ ಎಂಬುದೇ ಹಿಂದಿಯನ್ನು ತರುವ ಯೋಜನೆಯ ಭಾಗವಾಗಿದೆ. ಇದುವರೆಗೂ ಐದನೇ ತರಗತಿಯಿಂದ ಇದ್ದ ಈ ಮೂರನೇ ಭಾಷೆಯನ್ನು ಈಗ ಒಂದನೇ ತರಗತಿಯಿಂದಲೇ ಕಲಿಯಬೇಕಾಗಿರುವುದು ಮಕ್ಕಳಿಗೆ ಹೊರೆಯಾಗುವುದು ಖಂಡಿತ. ಜೊತೆಗೆ ಇದು ಬಾಲ್ಯದಿಂದಲೇ ಎಲ್ಲರೂ ಹಿಂದಿಯನ್ನು ಒಪ್ಪಿಕೊಳ್ಳಬೇಕೆಂಬ ದೊಡ್ಡ ಯೋಜನೆಯಾಗಿರುವುದು ಸ್ಪಷ್ಟವಾಗಿದೆ.

ಕರ್ನಾಟಕದ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ಪ್ರೌಢಶಾಲೆಯಲ್ಲಿ ತ್ರಿಭಾಷಾ ಸೂತ್ರ ಇದ್ದು, ಬಹುತೇಕ ಶಾಲೆಗಳಲ್ಲಿ ಇದೇ ತರಹ ಅನಿವಾರ್ಯ ಹಿಂದಿ ಆಯ್ಕೆ ಇರುವುದನ್ನು ಕಾಣಬಹುದು. ಇದನ್ನು ಅರಿತೇ ತಮಿಳುನಾಡು ಮೊದಲಿಂದಲೂ ದ್ವಿಭಾಷಾ ನೀತಿಯನ್ನು ಪಾಲಿಸುತ್ತಿದೆ. ಯಾವುದೇ ಹಿಂದಿ ಭಾಷಿಕ ರಾಜ್ಯ ಅಥವಾ ಉತ್ತರಭಾರತದ ಯಾವುದೇ ರಾಜ್ಯವು ದಕ್ಷಿಣದ ಭಾಷೆಗಳನ್ನು ತನ್ನ ಪ್ರಾಥಮಿಕ ಶಿಕ್ಷಣದಲ್ಲಿ ಪರಿಚಯಿಸಲು ಇದುವರೆಗೆ ಮುಂದಡಿ ಇಟ್ಟಿಲ್ಲ. ಆದರೆ ಮಹಾರಾಷ್ಟ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರವು ಹೀಗೆ ಅತಿ ಉತ್ಸಾಹದಿಂದ ಹಿಂದಿಯನ್ನು ಕಡ್ಡಾಯ ಮಾಡಹೊರಟು ಪ್ರತಿರೋಧ ಬಂದಾಗ ಕೊಂಚ ಹಿಂದೆ ಸರಿದಂತೆ ಮಾಡಿ, ಪರೋಕ್ಷವಾಗಿ ಹಿಂದಿಯನ್ನು ಪ್ರಾಥಮಿಕ ಹಂತದಲ್ಲೇ ಹೇರುವ ಪ್ರಯತ್ನವನ್ನು ಪ್ರಾರಂಭಿಸಿರುವುದು ಎಚ್ಚರಿಕೆಯ ಗಂಟೆಯಂತಿದೆ. ಇದರಿಂದ ಎನ್‌ಇಪಿಯ ಉದ್ದೇಶ ಪ್ರಶ್ನಾರ್ಹವಾಗಿದೆ, ಅದನ್ನು ಹಿಂದಿ ಹೇರಿಕೆಯ ಹುನ್ನಾರವನ್ನಾಗಿ ಕಾಣುವಂತಾಗಿದೆ.

ವಿಕಾಸ್ ಹೆಗಡೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಸ್ತೂರಿರಂಗನ್

ಭಾರತದ ಅಂತರಿಕ್ಷ ಸಂಶೋಧನಾ ಕ್ಷೇತ್ರವನ್ನು ಉನ್ನತ ಮಟ್ಟಕ್ಕೇರಿಸಿದ ಮೇಧಾವಿ

ಅನನ್ಯ ವ್ಯಕ್ತಿತ್ವದ ವಿರಳ ಸಾಧಕ

ಜೀವನದ ಮಹತ್ವದ ಘಟ್ಟಗಳು

1940ರ ಅ.24: ಕೇರಳದ ಎರ್ನಾಕುಲಂನಲ್ಲಿ ಜನನ; ತಂದೆ ಕೃಷ್ಣಸ್ವಾಮಿ ಅಯ್ಯರ್, ತಾಯಿ ವಿಶಾಲಾಕ್ಷಿ

- ಎರ್ನಾಕುಲಂ, ಬಾಂಬೆಯಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣ; ಬಾಂಬೆ ವಿ.ವಿಯಿಂದ ಭೌತಶಾಸ್ತ್ರದಲ್ಲಿ ಎಂಎಸ್‌ಸಿ

1971: ವಿಕ್ರಮ್ ಸಾರಾಭಾಯ್ ಮಾರ್ಗದರ್ಶನದಲ್ಲಿ ಅಹಮದಾಬಾದ್ ವಿ.ವಿಯಿಂದ ಪಿಎಚ್.ಡಿ

1971: ಇಸ್ರೊದಲ್ಲಿ ಉದ್ಯೋಗಿಯಾಗಿ ಸೇರ್ಪಡೆ; ಮೂರು ದಶಕಗಳ ಕಾಲ ಮಹತ್ವದ ಹುದ್ದೆಗಳ ನಿರ್ವಹಣೆ

1994-2003: ಇಸ್ರೊ 5ನೇ ಅಧ್ಯಕ್ಷರಾಗಿ ಸೇವೆ; ಪಿಎಸ್‌ಎಲ್‌ವಿ, ಜಿಎಸ್‌ಎಲ್‌ವಿ ಅಭಿವೃದ್ಧಿಪಡಿಸಿದ ಶ್ರೇಯಸ್ಸು

- ಭೂ ವೀಕ್ಷಣಾ ಉಪಗ್ರಹಗಳಾದ ಭಾಸ್ಕರ್ 1, ಭಾಸ್ಕರ್ 2 ತಯಾರಿಕೆಯಲ್ಲಿ ಯೋಜನಾ ನಿರ್ದೇಶಕರಾಗಿ ಕೆಲಸ
- ಐಆರ್‌ಎಸ್–1ಎ, 1ಬಿ, 1ಸಿ ಮತ್ತು 1ಡಿ ಮತ್ತು ಇನ್‌ಸ್ಯಾಟ್ 2 ಉಪಗ್ರಹಗಳ ಉಡ್ಡಯನಕ್ಕೆ ಮಾರ್ಗದರ್ಶನ
- ಚೆನ್ನೈ ಐಐಟಿ, ರೂರ್ಕಿ ಐಐಟಿ, ಬೆಂಗಳೂರಿನ ಐಐಎಸ್‌ಸಿ ಆಡಳಿತ ಮಂಡಳಿ ಸದಸ್ಯ; ವಿಶ್ವಸಂಸ್ಥೆಯ ಬಾಹ್ಯಾಕಾಶ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ ಕೇಂದ್ರ, ರಾಮನ್ ಸಂಶೋಧನಾ ಕೇಂದ್ರ ಮತ್ತು ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರಿ ಅಧ್ಯಕ್ಷರಾಗಿ ಸೇವೆ
- ದೇಶದ ನಾಲ್ಕು ವಿಜ್ಞಾನ ಅಕಾಡೆಮಿಗಳು ಮತ್ತು ಹಲವು ವಿದೇಶಿ ಅಕಾಡೆಮಿಗಳು, ಸಂಸ್ಥೆಗಳ ಸದಸ್ಯರಾಗಿ ಸೇವೆ

2003-2009: ರಾಜ್ಯಸಭಾ ಸದಸ್ಯ

2004-2009: ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (ನಿಯಾಸ್) ನಿರ್ದೇಶಕ


2009-2014: ಯೋಜನಾ ಆಯೋಗದ ಸದಸ್ಯ

2013: ಪಶ್ಚಿಮ ಘಟ್ಟ ಅಧ್ಯಯನ ಸಮಿತಿ ನೇತೃತ್ವ

2020: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕರಡು ಸಮಿತಿಯ ಅಧ್ಯಕ್ಷ

- ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕುಲಪತಿಯಾಗಿ ಕರ್ತವ್ಯ, ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷರಾಗಿ ಸೇವೆ

ಪ್ರಶಸ್ತಿಗಳು: ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿ ((1983), ಪದ್ಮಶ್ರೀ (1982), ಪದ್ಮಭೂಷಣ (1992) ಮತ್ತು ಪದ್ಮವಿಭೂಷಣ (2000), ಆರ್ಯಭಟ ಪ್ರಶಸ್ತಿ (2003), ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (2014)



● ಡಾ. ಬಿ.ಆರ್. ಗುರುಪ್ರಸಾದ್

ಸಾಮಾನ್ಯವಾಗಿ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಜವಾಬ್ದಾರಿಯುತವಾದ ಉನ್ನತ ಹುದ್ದೆಯಲ್ಲಿದ್ದವರು ಆ ಕ್ಷೇತ್ರಗಳಿಗೆ ತಮ್ಮ ಶಕ್ತ್ಯಾನುಸಾರ ಉತ್ತಮವಾದ ಕೊಡುಗೆಯನ್ನು ನೀಡುತ್ತಾರೆ. ಆದರೆ ಅಂತಹ ವ್ಯಕ್ತಿಗಳು ಇತರ ಅನೇಕ ಕ್ಷೇತ್ರಗಳಿಗೂ ಪ್ರಮುಖವಾದ ಕೊಡುಗೆಯನ್ನು ನೀಡುವುದು ಬಹು ವಿರಳ. ಆ ಬಗೆಯ ವಿರಳವಾದ ವ್ಯಕ್ತಿಗಳಲ್ಲಿ ಒಬ್ಬರು ಡಾ.ಕೃಷ್ಣಸ್ವಾಮಿ ಕಸ್ತೂರಿರಂಗನ್ ಅವರು. ಭಾರತೀಯ ಅಂತರಿಕ್ಷ ಕಾರ್ಯಕ್ರಮದ ನೇತೃತ್ವವನ್ನು ಸುಮಾರು ಒಂದು ದಶಕದಷ್ಟು ಕಾಲ ವಹಿಸಿ ಅದನ್ನು ಯಶಸ್ವಿಯಾಗಿ ಮುನ್ನಡೆಸಿದ ಕಸ್ತೂರಿರಂಗನ್ ಅವರು ಅಂತರಿಕ್ಷ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲದೇ ಶಿಕ್ಷಣ, ಸಂಶೋಧನೆ, ಪರಿಸರ, ಸಂಸದೀಯ ಪ್ರಜಾಪ್ರಭುತ್ವ, ಆಡಳಿತ, ಆರ್ಥಿಕತೆ, ಸಂವಹನ, ಹೀಗೆ ವೈವಿಧ್ಯಮಯವಾದ ಕ್ಷೇತ್ರಗಳಿಗೆ ಪ್ರಮುಖವಾದ ಕೊಡುಗೆ ನೀಡಿದರು. ಹೀಗಾಗಿ ಇವರ ವ್ಯಕ್ತಿತ್ವ ಅನನ್ಯವಾದುದು.

ಕಸ್ತೂರಿರಂಗನ್ ಅವರು 1940ರ ಅಕ್ಟೋಬರ್ 24ರಂದು ಕೇರಳದ ಎರ್ನಾಕುಲಂನಲ್ಲಿ ಜನಿಸಿದರು. ಇವರ ಬಾಲ್ಯ ಕಳೆದುದು ಮುಂಬೈಯಲ್ಲಿ. ವಿಕ್ರಂ ಸಾರಾಭಾಯಿಯವರು ಸ್ಥಾಪಿಸಿದ 'ಭೌತಿಕ ಸಂಶೋಧನಾ ಪ್ರಯೋಗಶಾಲೆ'ಯಲ್ಲಿ (ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿ) ತಮ್ಮ ಡಾಕ್ಟರೇಟ್ ಪದವಿಯನ್ನು ಭೌತವಿಜ್ಞಾನದಲ್ಲಿ ಪಡೆದ ಕಸ್ತೂರಿರಂಗನ್ ಅವರು ನಂತರ ಅಲ್ಲೇ ಭಾರತೀಯ ಉಪಗ್ರಹ ಕಾರ್ಯಕ್ರಮದ ಪಿತಾಮಹರಾದ ಪ್ರೊ. ಯು ಆರ್.ರಾವ್ ಅವರ ಜೊತೆ ಕೆಲಸ ಮಾಡುತ್ತಿದ್ದರು. 1972ರಲ್ಲಿ ಪ್ರೊ.ರಾವ್ ಅವರು ಭಾರತದ ಮೊದಲ ಉಪಗ್ರಹ ಯೋಜನೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ಇಲ್ಲಿಗೆ ಬಂದಾಗ ಅವರ ಜೊತೆಗೆ ಬಂದ ವಿಜ್ಞಾನಿಗಳ ಪೈಕಿ ರಂಗನ್ ಅವರು ಪ್ರಮುಖರಾಗಿದ್ದರು. ನಂತರ 'ಆರ್ಯಭಟ' ಎಂದು ನಾಮಕರಣ ಮಾಡಲ್ಪಟ್ಟ ಭಾರತದ ಪ್ರಥಮ ಉಪಗ್ರಹಕ್ಕೆ ಅವರು ಪ್ರೊ. ರಾವ್ ಅವರೊಂದಿಗೆ ಶ್ರಮಿಸಿದರು. ಆ ಬಳಿಕ ಭಾರತದ ಉಪಗ್ರಹ ಕಾರ್ಯಕ್ರಮ ಬೆಳೆದು, 'ಭಾಸ್ಕರ' ಸರಣಿಯ ಎರಡು ಉಪಗ್ರಹಗಳ ನಿರ್ಮಾಣದ ನೇತೃತ್ವವನ್ನು ರಂಗನ್ ಅವರು ವಹಿಸಿದರು. 1979 ಹಾಗೂ 1981ರಲ್ಲಿ ಉಡಾಯಿಸಲ್ಪಟ್ಟ ಆ ಉಪಗ್ರಹಗಳು ಸಂಕೀರ್ಣವಾದ ಮತ್ತು ಅನೇಕ ವರ್ಷಗಳ ಕಾಲ ಅಡೆತಡೆಯಿಲ್ಲದೇ ತಮಗೆ ವಹಿಸಿದ ಕಾರ್ಯವನ್ನು ನಂಬಿಕಾರ್ಹವಾಗಿ ನಿರ್ವಹಿಸುವ ದೊಡ್ಡ 'ಕಾರ್ಯವಾಹಿ' (ಆಪರೇಷನಲ್) ಉಪಗ್ರಹಗಳನ್ನು ನಿರ್ಮಿಸುವ ಬಗ್ಗೆ ಭಾರತೀಯ ವಿಜ್ಞಾನಿಗಳಿಗೆ ಆತ್ಮವಿಶ್ವಾಸವನ್ನು ನೀಡಿದವು. ಇದಕ್ಕೆ ಸಂಬಂಧಿಸಿದಂತೆ 1988ರಲ್ಲಿ ಉಡಾಯಿಸಲಾದ ಭಾರತದ ಮೊದಲ ಕಾರ್ಯವಾಹಿ ಭೂವೀಕ್ಷಣಾ ಉಪಗ್ರಹ ಐಆರ್‌ಎಸ್-1ಎ ಯೋಜನೆಯ ನೇತೃತ್ವವನ್ನೂ ರಂಗನ್ ವಹಿಸಿದ್ದರು.



ರಾಷ್ಟ್ರಪತಿಯಾಗಿದ್ದ ಎ.ಪಿ.ಜೆ ಅಬ್ದುಲ್ ಕಲಾಂ ಅವರೊಂದಿಗೆ ಕಸ್ತೂರಿ ರಂಗನ್

> ರಾಷ್ಟ್ರೀಯ, ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ 200ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ ಹೆಗ್ಗಳಿಕೆ ಕಸ್ತೂರಿ ರಂಗನ್ ಅವರದು

1990ರ ದಶಕದಲ್ಲಿ ಅವರು ಇಸ್ರೊ ಉಪಗ್ರಹ ಕೇಂದ್ರದ (ಇಂದಿನ ಯು.ಆರ್.ರಾವ್ ಉಪಗ್ರಹ ಕೇಂದ್ರ) ನಿರ್ದೇಶಕರಾಗಿ, ಆ ನಂತರ 1994ರಲ್ಲಿ ಭಾರತೀಯ ಅಂತರಿಕ್ಷ ಕಾರ್ಯಕ್ರಮದ ಅಧ್ಯಕ್ಷರ ಹುದ್ದೆಯನ್ನು ಅಲಂಕರಿಸಿದರು. ಆ ನಂತರದ ಒಂದು ದಶಕ ರಂಗನ್ ಅವರು ಆ ಹುದ್ದೆಯಲ್ಲಿದ್ದ ವೇಳೆಯಲ್ಲಿ ಉಂಟಾದ 'ಯಶಸ್ಸುಗಳ ಸರಣಿ'ಯಿಂದಾಗಿ ಅಂದು ಇಸ್ರೊ ವಲಯಗಳಲ್ಲಿ ಕಸ್ತೂರಿರಂಗನ್ ಅವರ ಚಮತ್ಕಾರ (ಕಸ್ತೂರಿರಂಗನ್ಸ್ ಮ್ಯಾಜಿಕ್)' ಎಂಬ ಮಾತು ಪ್ರಚಲಿತವಾಗಿತ್ತು.

ಇಂದು ಭಾರತದ, ಅಷ್ಟೇಕೆ ಜಾಗತಿಕ ಮಟ್ಟದಲ್ಲೂ ಒಂದು ನಂಬಿಕಾರ್ಹವಾದ ಉಪಗ್ರಹ ಉಡಾವಣಾ ವಾಹನವೆಂಬ ಖ್ಯಾತಿಯನ್ನು ಪಡೆದಿರುವ 'ಪಿಎಸ್‌ಎಲ್‌ವಿ' ತನ್ನ ಮೊದಲ ಯಶಸ್ಸನ್ನು ಕಂಡದ್ದು ರಂಗನ್ ಅವರು ಇಸ್ರೊ ಅಧ್ಯಕ್ಷರಾಗಿದ್ದಾಗಲೇ. ಅದೇ ವೇಳೆಯಲ್ಲಿ ನಮ್ಮ ದೂರಸಂವೇದಿ ಅಥವಾ ಭೂವೀಕ್ಷಣಾ ಉಪಗ್ರಹಗಳು ಕಳುಹಿಸುತ್ತಿದ್ದ ಚಿತ್ರರೂಪದ ಮಾಹಿತಿಯನ್ನು ಅನೇಕ ಅಭಿವೃದ್ಧಿ ಕೆಲಸಗಳಿಗಾಗಿ ಬಳಸುವ ಪದ್ಧತಿ ನಮ್ಮ ದೇಶದಲ್ಲಿ ಪ್ರಾರಂಭವಾಯಿತು. ಇದರೊಂದಿಗೆ ಆ ಮಾಹಿತಿ ಅಮೆರಿಕವೂ ಸೇರಿದಂತೆ ವಿದೇಶಗಳಲ್ಲೂ ವಿತರಿಸುವ ಕಾರ್ಯ ಆರಂಭವಾಯಿತು.

1999ರಲ್ಲಿ ಉಡಾಯಿಸಲಾದ ಇನ್ಸಾಟ್-2ಇ ಉಪಗ್ರಹದ ಸಂಪರ್ಕ ಸಾಮರ್ಥ್ಯವನ್ನು ಜಾಗತಿಕ ಸಂಸ್ಥೆ ಇಂಟೆಲ್ಸಾಟ್ ಗುತ್ತಿಗೆ ಪಡೆಯಿತೆನ್ನುವ ವಿಷಯ ಭಾರತದ ಅಂತರಿಕ್ಷ ಸಾಮರ್ಥ್ಯದ ಬಗ್ಗೆ ಹೊರಜಗತ್ತಿಗಿರುವ ನಂಬಿಕೆಯನ್ನು ಉತ್ತಮವಾಗಿ ಪ್ರತಿಬಿಂಬಿಸುತ್ತಿತ್ತು. ಇಷ್ಟೇ ಸಾಲದೆಂಬಂತೆ ಭಾರತದ ರಾಕೆಟ್‌ಗಳಲ್ಲಿ ಹೊರದೇಶಗಳ ಉಪಗ್ರಹಗಳನ್ನು ಉಡಾಯಿಸುವ ಕಾರ್ಯವೂ ಕಸ್ತೂರಿರಂಗನ್ ಅವರ ಕಾಲದಲ್ಲೇ ಪ್ರಾರಂಭವಾಯಿತು. 1999ರಲ್ಲಿ ಕೊರಿಯ ಹಾಗೂ ಜರ್ಮನಿಯ ತಲಾ ಒಂದೊಂದು ಉಪಗ್ರಹಗಳು ಪಿಎಸ್‌ಎಲ್‌ವಿಯಲ್ಲಿ ಕಕ್ಷೆಗೆ ಯಶಸ್ವಿಯಾಗಿ ತೆರಳಿದವು.

2001ರಲ್ಲಿ ಭಾರತದ ಜಿಎಸ್‌ಎಲ್‌ವಿ ರಾಕೆಟ್ ವಾಹನ ಉಡಾವಣೆಗೆ ಸಿದ್ಧವಾಯಿತು. ಅದುವರೆವಿಗೂ ನಿರ್ಮಿಸಲಾಗಿದ್ದ ಭಾರತೀಯ ಉಪಗ್ರಹ ಉಡಾವಣಾ ರಾಕೆಟ್‌ಗಳಿಗಿಂತ ಶಕ್ತಿಶಾಲಿಯಾಗಿದ್ದ, ಆಧುನಿಕವಾಗಿದ್ದ ಹಾಗೂ ಸಂಕೀರ್ಣವಾಗಿದ್ದ ಆ ವಾಹನ 2001ರ ಏಪ್ರಿಲ್ 18ರಂದು ತನ್ನ ಮೊದಲ ಯಾನದಲ್ಲೇ ಯಶಸ್ಸನ್ನು ಕಂಡದ್ದು ರಂಗನ್ ಅವರ ಮತ್ತೊಂದು ಹೆಗ್ಗಳಿಕೆ.

ಅದೇ ರೀತಿ ಅದುವರೆವಿಗೂ ಭೂಮಿಯ ಸುತ್ತಲಿನ ಕಕ್ಷೆಯಲ್ಲೇ 'ಬಂಧಿಯಾಗಿದ್ದ' ಭಾರತೀಯ ಅಂತರಿಕ್ಷ ಕಾರ್ಯಕ್ರಮವನ್ನು ಅದರಾಚೆ ಚಂದ್ರನತ್ತ ಕೊಂಡೊಯ್ದವರೂ ರಂಗನ್. ಚಂದ್ರಯಾನ-1 ಅನ್ನು ತರ್ಕಬದ್ಧವಾಗಿ ಆಲೋಚಿಸಿ, ಆ ನಿಟ್ಟಿನಲ್ಲಿ ಅಧ್ಯಯನಗಳನ್ನು ಪ್ರಾರಂಭಿಸಿ, ವೈಜ್ಞಾನಿಕ ಹಾಗೂ ಎಂಜಿನಿಯರಿಂಗ್ ಸಮೂಹವನ್ನು ಇದಕ್ಕಾಗಿ ಹುರಿದುಂಬಿಸಿ ಅಂತಿಮವಾಗಿ ಸರ್ಕಾರದಿಂದ ಅದಕ್ಕೆ ಒಪ್ಪಿಗೆಯನ್ನು ಪಡೆವ ಮಹತ್ತರವಾದ ಕಾರ್ಯವನ್ನು ಮಾಡಿದರು. ಇಂದು ಚಂದ್ರನ ದಕ್ಷಿಣ ಧ್ರುವ ಪ್ರದೇಶದಲ್ಲಿ ಇಳಿದ ಮೊದಲ ರಾಷ್ಟ್ರ ಎಂಬ ಕೀರ್ತಿಗೆ ಭಾರತ ಪಾತ್ರವಾಗಿರುವಾಗ ಈ ದಿಸೆಯಲ್ಲಿ ಚಂದ್ರಯಾನ ಕಾರ್ಯಕ್ರಮಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ರಂಗನ್ ಅವರನ್ನು ನಾವು ಸ್ಮರಿಸುವುದು ಅತ್ಯಗತ್ಯ.

ತಮ್ಮ ಸಾಧನೆಗಳಿಂದಾಗಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಗೌರವಾದರಗಳನ್ನು ಗಳಿಸಿದ ಕಸ್ತೂರಿ ರಂಗನ್ ಅವರಿಗೆ ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮ ವಿಭೂಷಣ ಪುರಸ್ಕಾರಗಳೂ ಸಂದಿವೆ. ಬಹುಮುಖ ವ್ಯಕ್ತಿತ್ವದ ಸಜ್ಜನ ವ್ಯಕ್ತಿ ಕೆ.ಕಸ್ತೂರಿ ರಂಗನ್ ಅವರು ಇನ್ನು ನೆನಪು ಮಾತ್ರ. ಆದರೆ, ಅವರ ಜೀವನ ಹಾಗೂ ಸಾಧನೆ ನಮ್ಮ ವಿದ್ಯಾರ್ಥಿಗಳಿಗೆ ಸದಾಕಾಲ ದಾರಿದೀಪವಾಗಬಲ್ಲದು.

ಲೇಖಕ: ಬೆಂಗಳೂರಿನ ಜವಹರಲಾಲ್ ನೆಹರೂ ತಾರಾಲಯದ ನಿರ್ದೇಶಕ



ನಿಯಾಸ್ ನಿರ್ದೇಶಕರಾಗಿದ್ದ ಕಸ್ತೂರಿರಂಗನ್ ಅವರು 2006ರ ಆಗಸ್ಟ್‌ನಲ್ಲಿ ಬೆಂಗಳೂರಿನ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಖಗೋಳ ವೀಕ್ಷಣಾಲಯವನ್ನು ಉದ್ಘಾಟಿಸಿದ್ದರು ಪ್ರಜಾವಾಣಿ ಸಂಗ್ರಹ ಚಿತ್ರ



ಬೆಂಗಳೂರಿನಲ್ಲಿ 2016ರಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಅಂದಿನ ಇಸ್ರೊ ಅಧ್ಯಕ್ಷ ಎಸ್‌.ಕಿರಣ್ ಕುಮಾರ್ ಅವರಿಗೆ ಹಸ್ತಲಾಘವ ನೀಡಿದ್ದರು ಪ್ರಜಾವಾಣಿ ಸಂಗ್ರಹ ಚಿತ್ರ

ಪಶ್ಚಿಮ ಘಟ್ಟಗಳ ಅಧ್ಯಯನ ವರದಿ

ಆರು ರಾಜ್ಯಗಳಲ್ಲಿ ಹರಡಿರುವ ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಕಾಪಾಡುವ ಮತ್ತು ಅಲ್ಲಿನ ಜನರ ಅಭಿವೃದ್ಧಿಯ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು ಕೇಂದ್ರ ಸರ್ಕಾರವು ಪ್ರೊ.ಮಾಧವ ಗಾಡ್ಗೀಳ್ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಅದು 2011ರಲ್ಲಿ ವರದಿ ಸಲ್ಲಿಸಿತು. ಅದರ ವಿರುದ್ಧ ಟೀಕೆಗಳು ವ್ಯಕ್ತವಾದಾಗ ಕೇಂದ್ರವು ಕಸ್ತೂರಿರಂಗನ್ ನೇತೃತ್ವದಲ್ಲಿ ಮತ್ತೊಂದು ಸಮಿತಿ ರಚಿಸಿತು. ಅದು 2013ರಲ್ಲಿ ವರದಿ ಸಲ್ಲಿಸಿತು. ಅದರಲ್ಲಿ ರಾಜ್ಯದ 20,668 ಚ.ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಲಾಗಿತ್ತು. ರಾಜ್ಯದ 10 ಜಿಲ್ಲೆ, 33 ತಾಲ್ಲೂಕುಗಳ 1533 ಗ್ರಾಮಗಳು ಅದರ ವ್ಯಾಪ್ತಿಯಲ್ಲಿದ್ದವು.



ರಾಜ್ಯ ಜ್ಞಾನ ಆಯೋಗದ ಅಧ್ಯಕ್ಷರಾಗಿ ಮಹತ್ವದ ಶಿಫಾರಸುಗಳು

ಶಿಕ್ಷಣ ಕ್ಷೇತ್ರವೂ ಸೇರಿದಂತೆ ಹಲವು ರಂಗಗಳಲ್ಲಿ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ 2008ರ ಸೆ.5ರಂದು ಕೆ.ಕಸ್ತೂರಿರಂಗನ್ ಅವರ ನೇತೃತ್ವದಲ್ಲಿ ಕರ್ನಾಟಕ ಜ್ಞಾನ ಆಯೋಗವನ್ನು ರಚಿಸಲಾಗಿತ್ತು. ಆಯೋಗವು ಶಿಕ್ಷಣ, ಸಾರ್ವಜನಿಕ ಆರೋಗ್ಯ, ಸರ್ಕಾರಿ ಸೇವೆ, ಸಾಮುದಾಯಿಕ ಜ್ಞಾನ ಮತ್ತು ಅಭ್ಯಾಸಗಳು, ಕೌಶಲ ಅಭಿವೃದ್ಧಿ ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ ಮುಂತಾದ ವಲಯಗಳಿಗೆ ಸಂಬಂಧಿಸಿದಂತೆ 89 ಶಿಫಾರಸುಗಳನ್ನು ಮಾಡಿ ವರದಿ ನೀಡಿತ್ತು. ರಾಜ್ಯದಲ್ಲಿ ಉನ್ನತ ಶಿಕ್ಷಣ ಕ್ಷೇತ್ರ ಅಭಿವೃದ್ಧಿಯಾಗಬೇಕು, ಜ್ಞಾನಾಧಾರಿತ ಸಮಾಜ ನಿರ್ಮಾಣವಾಗಬೇಕು ಎನ್ನುವುದು ಅವರ ಶಿಫಾರಸುಗಳ ಆಶಯವಾಗಿತ್ತು. ಕನ್ನಡದಲ್ಲಿ 'ಕಣಜ' ಮಾಹಿತಿ ಕೋಶ ರೂಪಿಸಬೇಕು, ಜನರು ಮತ್ತು ಸಂಸ್ಥೆಗಳು ಪೇಟೆಂಟ್ ಪಡೆಯುವುದನ್ನು ಉತ್ತೇಜಿಸಲು ಪ್ರಶಸ್ತಿ ನೀಡಬೇಕು ಎಂದೂ ಶಿಫಾರಸು ಮಾಡಿದ್ದರು.

ನಂತರ ರಾಜ್ಯದಲ್ಲಿ ಶಿಕ್ಷಣ ನೀತಿ ರೂಪಿಸುವಂತೆ ಸರ್ಕಾರವು ಕರ್ನಾಟಕ ಜ್ಞಾನ ಆಯೋಗವನ್ನು 2015ರಲ್ಲಿ ಕೋರಿತ್ತು. ಆಯೋಗವು ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ 70, ಉನ್ನತ ಶಿಕ್ಷಣದ ಕುರಿತು 79, ಶಿಕ್ಷಣ ಆಡಳಿತಕ್ಕೆ ಸಹಕಾರಿಯಾಗುವ 16 ಶಿಫಾರಸುಗಳನ್ನು ಮಾಡಿತ್ತು. ಮಕ್ಕಳಿಗೆ 1ರಿಂದ 4ನೇ ತರಗತಿವರೆಗೆ ಮಾತೃಭಾಷೆಯಲ್ಲೇ ಶಿಕ್ಷಣ ನೀಡಬೇಕು. 5ನೇ ತರಗತಿಯಿಂದ ಮಾಧ್ಯಮದ ಆಯ್ಕೆಯ ಸ್ವಾತಂತ್ರ್ಯವು ವಿದ್ಯಾರ್ಥಿಗಳಿಗೆ ಇರಬೇಕು ಎನ್ನುವುದು ಅವರ ಮುಖ್ಯ ಶಿಫಾರಸು ಆಗಿತ್ತು.



ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷರಾಗಿದ್ದ ಕೆ.ಕಸ್ತೂರಿರಂಗನ್ ಅವರು 2012ರಲ್ಲಿ ಅಂದಿನ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರಿಗೆ ಆಯೋಗದ ಅಂತಿಮ ಶಿಫಾರಸುಗಳನ್ನು ಸಲ್ಲಿಸಿದ ಸಂದರ್ಭದ ಚಿತ್ರ. ಎಚ್‌.ಪಿ.ಕಿಂಚಾ, ಪ್ರೊ.ಎಂ.ಕೆ.ಶ್ರೀಧರ್ ಜೊತೆಗಿದ್ದರು ಪ್ರಜಾವಾಣಿ ಸಂಗ್ರಹ ಚಿತ್ರ

ಶಿಕ್ಷಣ ಕ್ಷೇತ್ರದಲ್ಲಿಯೂ ಸೇವೆ

2003ರಲ್ಲಿ ಇಸ್ರೊದ ಅಧ್ಯಕ್ಷ ಪದವಿಯಿಂದ ನಿವೃತ್ತರಾದ ನಂತರ ರಂಗನ್ ಅವರು ರಾಜ್ಯಸಭಾ ಸದಸ್ಯರಾದರು. ಆ ನಡುವೆ ಅವರು ವಿಜ್ಞಾನ ಹಾಗೂ ತಂತ್ರಜ್ಞಾನದ ನೀತಿಗಳನ್ನು ರೂಪಿಸುವ ಸಂಬಂಧ ತೋರಿದ ಆಸಕ್ತಿ, ಆಡಿದ ಮಾತುಗಳು ಗಮನಾರ್ಹ.

ಅದೇ ವೇಳೆಯಲ್ಲಿ ಅವರು ಬೆಂಗಳೂರಿನ 'ನಿಯಾಸ್' ಶಿಕ್ಷಣ/ಸಂಶೋಧನಾ ಸಂಸ್ಥೆಯ ನಿರ್ದೇಶಕರೂ ಆಗಿ ಆ ಕ್ಷೇತ್ರಗಳ ಮುನ್ನಡೆಗೂ ಗಮನಾರ್ಹವಾದ ಕೊಡುಗೆ ನೀಡಿದರು. ನಂತರ 2009ರಲ್ಲಿ ಅವರಿಗೆ ಯೋಜನಾ ಆಯೋಗದ ಸದಸ್ಯರಾಗುವ ಅವಕಾಶವೂ ದೊರೆಯಿತು. ಅದರ ಕಾರ್ಯನಿರ್ವಹಣೆಯಲ್ಲೂ ಚಟುವಟಿಕೆಯಿಂದ ಭಾಗವಹಿಸಿ ಸರ್ಕಾರ ಮುಖ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸೂಕ್ತ ಸಲಹೆಗಳನ್ನು ನೀಡುತ್ತಿದ್ದರು.

ಶಿಕ್ಷಣ ಕ್ಷೇತ್ರಕ್ಕೆ ಬಂದರೆ ಇಂದಿನ ಹಾಗೂ ಮುಂದಿನ ಭಾರತವನ್ನು ಮನಸ್ಸಿನಲ್ಲಿಟ್ಟುಕೊಂಡು ರೂಪಿಸಿದ '2020ರ ರಾಷ್ಟ್ರೀಯ ಶಿಕ್ಷಣ ನೀತಿ'ಯ (ಎನ್‌ಇಪಿ) ನೇತಾರರು ಇವರು ಎನ್ನಲು ಅಡ್ಡಿಯಿಲ್ಲ. ಪಶ್ಚಿಮ ಘಟ್ಟಗಳ ಪರಿಸರದ ರಕ್ಷಣೆಗೆ ಹಾಗೂ ಸುಸ್ಥಿರವಾದ ಅಭಿವೃದ್ಧಿಗೆ ಸಂಬಂಧಿಸಿದಂತೆಯೂ ಇವರು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದರು. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆಯೂ ಕಸ್ತೂರಿ ರಂಗನ್ ಅವರಿಂದ ಸೇವೆ ಸಂದಿದೆ. 2008ರಲ್ಲಿ ಸ್ಥಾಪಿಸಲಾದ ಕರ್ನಾಟಕದ 'ಜ್ಞಾನ ಆಯೋಗ'ದ ನೇತೃತ್ವವನ್ನೂ ಅವರು ವಹಿಸಿದ್ದರು.

ತಿದ್ದುಪಡಿ 'ಪ್ರಜಾವಾಣಿ'ಯ ಶುಕ್ರವಾರದ ಸಂಚಿಕೆಯ 'ಆಳ ಅಗಲ' ಲೇಖನದಲ್ಲಿ ಒಂದು ಎಕರೆ ಅಡಿ ನೀರು ಎಂದರೆ 1233.48 ಘನ ಅಡಿ ಎಂಬ ಮಾಹಿತಿ ತಪ್ಪಾಗಿದ್ದು, ಅದು 1238.48 ಘನ ಮೀಟರ್ ಎಂದಾಗಬೇಕು. ಘನ ಅಡಿ ಲೆಕ್ಕಾಚಾರದಲ್ಲಿ ಹೇಳುವುದಾದರೆ ಒಂದು ಎಕರೆ ಪ್ರದೇಶದಲ್ಲಿ ಒಂದು ಅಡಿಯಷ್ಟು ನಿಲ್ಲುವ ನೀರಿನ ಪ್ರಮಾಣ 43,560 ಘನ ಅಡಿ.

ಪದಬಂಧ 6023


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಮ್ಮ ಭಾಷೆ ಕನ್ನಡದ ಕಂಪು ಸುಗಂಧ ದ್ರವ್ಯದಂತೆ! (3)
3.ಬೆದರಿದಾಗ ಹೊರ ಬಂದಿರುವ ಸ್ವೇದ! (3)
4.ನುಡಿಸುವ ಸಂಗೀತ ಸಾಧನ (2)
5.ಕತ್ತಲೆ ಇಲ್ಲಿದೆ (3)
6.ತೆಂಗಿನಕಾಯಿಯ ಮೇಲಿನ ನಾರು (2)
9.ಸುಗಮವಾಗಿ ಕಿತ್ತಿರುವ ಹೂವು (2)
10.ಗೋಳಗುಮ್ಮಟವಿರುವ ಊರು (5)
12.ಬಿಸಿಲಲ್ಲಿ ಡೊಗರು ಕಾಣುತ್ತಿದೆಯೇ? (2)
13.ಖನಿಜಗಳ ನೆಲೆ (2)
14.ದಾರದೊಳಗಿರುವ ಉದಾರಿ! (3)
15.ವಾದಕನು ಮಾಡಿದ ಚರ್ಚೆ (2)
16.ಈತ ತಿರುಗಾಡುವವನು (3)
17.ಗಣಿಯ ಹತ್ತಿರ ಕಲಿತಿರುವ ಲೆಕ್ಕ ಶಾಸ್ತ್ರ (3)

ಮೇಲಿಂದ ಕೆಳಕ್ಕೆ

1.ಹಸುವಿನ ಮರಿ (2)
2.ರೀತಿಯೊಡಗೂಡುವ ಜೋಡು ನುಡಿ (3)
3.ಕುಂದಾನಗರಿ ಎಂದು ಕರೆಯಲ್ಪಡುವ ನಗರ (4)
5.ಮಳೆಬಿಲ್ಲನ್ನು ಹೀಗೂ ಕರೆಯುತ್ತಾರೆ (5)
7.ರೇಷ್ಮೆ ನಗರ ಎಂದು ಪ್ರಸಿದ್ಧಿ ಪಡೆದ ಊರು (5)
8.ಹಾಡುಗಾರ ಇಲ್ಲಿದ್ದಾನೆ (3)
11.ದಾರಿಯ ಕೊನೆಯಲ್ಲಿ ಪಡೆದುಕೊಂಡಿರುವ ಅಪ್ಪಣೆಚೀಟಿ (4)
13.ಕುಮಾರವ್ಯಾಸ ಹುಟ್ಟಿದ ಜಿಲ್ಲೆಯಿದು (3)
16.ಸಂತತಿಯಲ್ಲಿರುವ ಋಷಿ ಕಾಣುತ್ತಿದ್ದಾನೆಯೇ? (2)



6022ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಿಮಳ 5.ನವರಂಗ 6.ಶಿರಸಿ 9.ಹಣ 10.ಧಾವಂತ 11.ಬಣ 13.ನನಸು 15.ವಾತಾಯನ 17.ದನಗಾಹಿ

ಮೇಲಿಂದ ಕೆಳಕ್ಕೆ: 1.ಪದ 2.ಮಸೂರ 3.ಕವನ 4.ಹಗರಣ 6.ಶಿರಸ್ತ್ರಾಣ 7.ಸಿರಿಧಾನ್ಯ 8.ಮತದಾನ 9.ಹಸುಗೂಸು 11.ಬನವಾಸಿ 12.ಕಾಯಕ 14.ನಯನ 16.ಮಹಿ

ಸುಡೊಕು 6408

			8		1	9		
	8						3	1
3		1	2		9		5	6
	1	7			8	3		
							8	4
8		3	9				6	
1			7		2	4		3
		8		4			1	
	3		1		5			8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6407 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 26, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ತ್ರಯೋದಶಿ ಗಂ. 08-28 ನಂತರ ಚತುರ್ದಶಿ ಗಂ.28-50 ನಕ್ಷತ್ರ: ಉತ್ತರಭಾದ್ರ ಗಂ. 6-27 ನಂತರ ರೇವತಿ ಗಂ.27-39 ಯೋಗ: ವೈಧೃತಿ ಗಂ. 8-41, ಮೇಷ ಮಾಸದ 13 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-15 ಸೂರ್ಯಾಸ್ತ : 06-42
ಮುಸ್ಲಿಂ ದಿನಾಂಕ : 27 ಶವ್ವಾಲ್
ಅದೃಷ್ಟ ಸಂಖ್ಯೆ : 6, 11

ಮೇಷ: ಕಠಿಣ ಪರಿಶ್ರಮದಿಂದ, ವ್ಯವಹಾರಿಕ ಚಾಕಚಕ್ಯತೆಯಿಂದ ಕನಸು ನನಸಾಗಿಸುವಿರಿ. ಹೊಸ ಬದುಕು ಆರಂಭಿಸಲು ಅವಕಾಶದ ಬಾಗಿಲು ತೆರೆದಿದೆ. ಮಾನಸಿಕ ನೆಮ್ಮದಿಗಾಗಿ ದೇವಿಯ ಮೊರೆ ಹೋಗಿ.

ವೃಷಭ: ಪತ್ರಿಕಾ ಪ್ರಕಾಶಕರಿಗೆ ನೂತನ ಕಾರ್ಯಭಾರ ಒದಗುವುದು. ಬರಬೇಕಾಗಿದ್ದ ಹಣಕ್ಕೆ ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳುವಿರಿ. ಕಳೆದು ಹೋಗಿದ್ದ ವಸ್ತುಗಳು ಪತ್ತೆಯಾಗುವುವು. ಶ್ರೀ ಸಿದ್ಧಿ ವಿನಾಯಕನನ್ನು ಸ್ತುತಿಸಿ.

ಮಿಥುನ: ಮನೆ ಅಥವಾ ಭೂಮಿಯನ್ನು ಕೊಳ್ಳಲು ಹಣದ ವ್ಯವಸ್ಥೆ ಅನಾಯಾಸವಾಗಿ ಆಗಲಿದೆ. ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯ. ಷೇರು ವ್ಯವಹಾರದಲ್ಲಿ ಹೆಚ್ಚಿನ ಗಮನವಿರಲಿ.

ಕರ್ಕಾಟಕ: ಮನೆಯಲ್ಲಿ ಮೂಡಿದ್ದ ಬಿಗು ವಾತಾವರಣ ತಿಳಿಯಾಗಿ ಮನಸ್ಸಿಗೆ ಸಮಾಧಾನ ಉಂಟಾಗಲಿದೆ. ಪಾಲುದಾರಿಕೆಯಂಥ ವ್ಯವಹಾರದಲ್ಲಿ ಒಮ್ಮತ ಮೂಡದೆ ಹಿಂದೆ ಸರಿಯಬೇಕಾಗಬಹುದು.

ಸಿಂಹ: ಮರಗೆಲಸದವರಿಗೆ ಸುದಿನ. ವೃತ್ತಿಯ ಬದುಕಿಗೆ ಸಂಬಂಧಿಸಿದಂತೆ ದೂರದ ಪ್ರಯಾಣದ ಸಾಧ್ಯತೆಗಳು ಹೆಚ್ಚಿರುವುದು. ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ವೃತ್ತಿಗೆ ಬೇಕಾದ ನ್ನು ಸಂಗ್ರಹಿಸುವುದು ಲಾಭ ತರಲಿದೆ.

ಕನ್ಯಾ: ಹತ್ತಾರು ಕೆಲಸಗಳಲ್ಲಿ ಅಥವಾ ವಿಷಯದಲ್ಲಿ ಗಮನ ಹರಿಸುವುದಕ್ಕಿಂತ ನಿರ್ದಿಷ್ಟ ಗುರಿಯ ಕಡೆಗೆ ತಲುಪುವ ಪ್ರಯತ್ನ ಮಾಡಿ. ರೇಷ್ಮೆ, ಹತ್ತಿ ಬೆಳೆಗಾರರಿಗೆ ಮತ್ತು ನೇಕಾರರಿಗೆ ಉತ್ತಮ ಆದಾಯ ಇರಲಿದೆ.

ತುಲಾ: ಉತ್ಸಾಹಭರಿತ ಓಡಾಟಗಳಿಗೆ ಮನಸ್ಸು ಸ್ಪಂದಿಸಿದರೂ, ದೇಹ ಸ್ಪಂದಿಸುವುದು ಕಷ್ಟ. ಅನಾಯಾಸದಿಂದ ಧನಾದಾಯವಿದ್ದರೂ ಅನವಶ್ಯಕ ಖರ್ಚು-ವೆಚ್ಚಗಳು ಆರ್ಥಿಕ ಬಿಕ್ಕಟ್ಟಿನ ಕಡೆಗೆ ಕೊಂಡೊಯ್ಯುವಂತಾಗಲಿದೆ.

ವೃಶ್ಚಿಕ: ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿದಲ್ಲಿ ಸಾಧನೆ ಕಷ್ಟವಲ್ಲ. ಲೇವಾದೇವಿ ವ್ಯವಹಾರಗಳಿಂದ ಕೈಸುಡುವ ಸ್ಥಿತಿ ಕಾಣುವುದು, ಜಾಗ್ರತರಾಗಿರಿ. ನಾಟ್ಯಕಲಾಕಾರರಿಗೆ ಪ್ರತಿಭೆ ಹೆಚ್ಚಿಸಿಕೊಳ್ಳುವ ಕಾಲ ಇದು.

ಧನು: ಸ್ವಂತವಾಗಿ ಉದ್ಯಮ ನಡೆಸುವವರಿಗೆ ಕೆಲಸದಲ್ಲಿ ಪ್ರಮುಖ ಬದಲಾವಣೆಯು ಗಮನಕ್ಕೆ ಬರಲಿದೆ. ರಾಜಕೀಯ ರಂಗದ ಏಳು ಬೀಳುಗಳನ್ನು ಸಕಾರಾತ್ಮಕವಾಗಿ ತೆಗೆದುಕೊಂಡು ಮುಂದುವರಿಯಿರಿ.

ಮಕರ: ಆಸ್ಪತ್ರೆಯ ಓಡಾಟ ಅನಿವಾರ್ಯ. ವಿದ್ಯಾಭ್ಯಾಸ ಮುಗಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗ ಆಯ್ಕೆಗೆ ಒದಗುವ ಹೆಚ್ಚಿನ ಅವಕಾಶಗಳಿಂದ ಮನಸ್ಸಿಗೆ ಸಂತಸವಿರುವುದು. ಮನೆಗೆ ಅಪರೂಪದ ಅತಿಥಿಗಳ ಆಗಮನದಿಂದ ಸಂತಸ.

ಕುಂಭ: ವ್ಯವಹಾರದಲ್ಲಿ ಪಾಲುದಾರರ ಜೊತೆ ಉತ್ತಮ ಬಾಂಧವ್ಯ ಹೊಂದುವುದರಿಂದ ಮತ್ತು ಅಧಿಕವಾದ ಜವಾಬ್ದಾರಿಯಿಂದ ಆದಾಯ ಹೆಚ್ಚುವುದು. ತಂದೆಯ ಆರೋಗ್ಯದಲ್ಲಿ ಸುಧಾರಣೆ ಇರುವುದು.

ಮೀನ: ವ್ಯವಹಾರದಲ್ಲಿ ನಂಬಿಕೆ ಉಳ್ಳವರೊಂದಿಗೆ ವ್ಯವಹಾರ ನಡೆಸುವುದು ಮತ್ತು ಕಾನೂನಿನ ಚೌಕಟ್ಟಿನಲ್ಲಿ ವ್ಯವಹರಿಸುವುದು ಉತ್ತಮ. ತೆಂಗು ಬೆಳೆಗಾರರಿಗೆ ಉತ್ತಮ ಬೆಳೆ, ಆದಾಯಗಳೆರಡೂ ಪ್ರಾಪ್ತಿಯಾಗುತ್ತದೆ.



ಕಣಿವೆಯಲ್ಲಿ ಮರಣ ಮೃದಂಗ



ಪ್ರಜಾವಾಣಿ
ಶನಿವಾರ • ಏಪ್ರಿಲ್ 26, 2025

ಮತ್ತೆ ಚರ್ಚೆ ಹುಟ್ಟು ಹಾಕಿದ ಪಹಲ್ಗಾಮ್ ಉಗ್ರರ ದಾಳಿ • ಗಸ್ತು ವಾಹನಗಳು ಇರಲಿಲ್ಲ– ಪ್ರವಾಸಿಗರ ದೂರು

‘ಭದ್ರತೆ: ಉತ್ತರ ಸಿಗದ ಹಲವು ಪ್ರಶ್ನೆ’

ಪ್ರಜಾವಾಣಿ ವಾರ್ತೆ

ಶ್ರೀನಗರ: ಪಹಲ್ಗಾಮ್‌ನಲ್ಲಿ ಉಗ್ರರು ಪ್ರವಾಸಿಗರನ್ನು ಹತ್ಯೆ ಮಾಡಿದ ಬೆನ್ನಲ್ಲೇ, ಕಾಶ್ಮೀರದಲ್ಲಿ ವ್ಯಾಪಕ ಭದ್ರತೆ ಇದೆಯೇ? ಕಣಿವೆಯಲ್ಲಿ ಈಗ ಸಹಜ ಸ್ಥಿತಿ ಮರುಸ್ಥಾಪನೆಯಾಗಿದೆಯೇ ಎಂಬಂತಹ ಪ್ರಶ್ನೆಗಳು ಉದ್ಭವಿಸಿವೆ.

ಪಹಲ್ಗಾಮ್‌ನಲ್ಲಿ ಭದ್ರತಾ ವೈಫಲ್ಯ ಆಗಿದೆ ಎಂಬುದಾಗಿ ಕೇಂದ್ರ ಸರ್ಕಾರವು ಉಗ್ರರ ದಾಳಿ ಕುರಿತು ಚರ್ಚಿಸಲು ನಡೆದ ಸರ್ವಪಕ್ಷಗಳ ಸಭೆಯಲ್ಲಿ ಒಪ್ಪಿಕೊಂಡಿದೆ ಎಂದು ಹೇಳಲಾಗುತ್ತಿದೆ.

ಮತ್ತೊಂದೆಡೆ, ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಬರುವ ಕುರಿತು ಆಡಳಿತವು ಯಾವುದೇ ಮುನ್ಸೂಚನೆ/ಸಲಹೆ ನೀಡಿರಲಿಲ್ಲ ಎಂದು ಕಾಶ್ಮೀರ ಪ್ರವಾಸೋದ್ಯಮ ಕ್ಷೇತ್ರದಲ್ಲಿ ನಿರತರಾದವರು ಹೇಳುತ್ತಿದ್ದಾರೆ.

‘ಬೈಸರನ್ ಕಣಿವೆಯನ್ನು ಏಪ್ರಿಲ್ 20ರಂದು ಪ್ರವಾಸಿಗರಿಗೆ ಮುಕ್ತಗೊಳಿಸಲಾಗಿತ್ತು. ಏಪ್ರಿಲ್ 22ರಂದು ಉಗ್ರರಿಂದ ದಾಳಿ ನಡೆಯಿತು. ವಾಸ್ತವದಲ್ಲಿ ಜೂನ್‌ನಲ್ಲಿ ಬೈಸರನ್ ಕಣಿವೆಗೆ ಸಂಪರ್ಕ ಸಾಧ್ಯವಾಗುತ್ತದೆ. ಅದರಲ್ಲೂ, ಅಮರನಾಥ ಯಾತ್ರಿಗಳು ಈ ಸ್ಥಳದ ಮೂಲಕವೇ ಸಾಗಬೇಕು. ಹಾಗಾಗಿ, ಈ ವರ್ಷ ಅವಧಿಗೂ ಮುಂಚೆಯೇ ಈ ಜಾಗವನ್ನು ಪ್ರವಾಸಿಗರಿಗೆ ಮುಕ್ತಗೊಳಿಸಿದ್ದು ಏಕೆ’ ಎಂದು ಹೆಸರು ಹೇಳಲು ಇಚ್ಛಿಸದ, ಪಹಲ್ಗಾಮ್‌ನ ಹೋಟೆಲ್ ಮಾಲೀಕರೊಬ್ಬರು ಹೇಳುತ್ತಾರೆ.



ಪಹಲ್ಗಾಮ್‌ನಲ್ಲಿ ನಾಲ್ಕು ದಿನಗಳ ಹಿಂದೆ ಉಗ್ರರು ದಾಳಿ ನಡೆಸಿದ ಜಾಗದಲ್ಲಿ ಪಾತ್ರೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ –ಪಿಟಿಐ ಚಿತ್ರ

ಅಮರನಾಥ ಯಾತ್ರೆ ವೇಳೆ, ಭಯೋತ್ಪಾದಕ ಚಟುವಟಿಕೆ ಸಾಧ್ಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಪಹಲ್ಗಾಮ್ ಹಾಗೂ ಸುತ್ತಲಿನ ಪ್ರದೇಶದಲ್ಲಿ ಸೇನೆಯ ಕಣ್ಗಾವಲು ಇರುತ್ತದೆ. ಆದರೆ, ಉಗ್ರರ ದಾಳಿ ನಡೆದ ಸಂದರ್ಭದಲ್ಲಿ ಬೈಸರನ್‌ನಲ್ಲಿ ಭದ್ರತಾ ಸಿಬ್ಬಂದಿ ಇರಲಿಲ್ಲ. ಇದು ಆಡಳಿತದ ನಿರ್ಲಕ್ಷ್ಯ ಕುರಿತು ಗಂಭೀರ ಪ್ರಶ್ನೆಗಳಿಗೆ ಕಾರಣವಾಗುತ್ತಿದೆ ಎಂದೂ ಅವರು ಹೇಳುತ್ತಾರೆ.

‘ಚೆಕ್‌ಪಾಯಿಂಟ್‌ಗಳಾಗಲಿ, ಗಸ್ತು ವಾಹನಗಳು ಇರಲಿಲ್ಲ. ಪ್ರವಾಸಿಗರು ತಮ್ಮ ರಕ್ಷಣೆ ತಾವೇ ಮಾಡಿಕೊಳ್ಳುವಂತಹ ಸ್ಥಿತಿ ಇತ್ತು’ ಎಂದು ಹಲವರು ಹೇಳುತ್ತಾರೆ.

ಪಾಕ್ ಪ್ರಜೆಗಳಿಗೆ ನೀಡಿದ್ದ 14 ಬಗೆಯ ವೀಸಾ ರದ್ದು

ನವದೆಹಲಿ(ಪಿಟಿಐ): ವ್ಯಾಪಾರ, ಯಾತ್ರೆ, ಸಮಾವೇಶಗಳಲ್ಲಿ ಭಾಗಿಯಾಗುವುದಕ್ಕೆ ಸೇರಿದಂತೆ ವಿವಿಧ ಕಾರಣಗಳಿಗಾಗಿ ಪಾಕಿಸ್ತಾನ ಪ್ರಜೆಗಳಿಗೆ ನೀಡಿದ್ದ 14 ಬಗೆಯ ವೀಸಾಗಳನ್ನು ರದ್ದು ಮಾಡಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಶುಕ್ರವಾರ ಹೇಳಿದೆ.

ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿ, ಪ್ರವಾಸಿಗರನ್ನು ಹತ್ಯೆ ಮಾಡಿದ್ದಕ್ಕೆ ಭಾರಿ ಆಕ್ರೋಶ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ, ಭದ್ರತೆ ಕುರಿತಾದ ಸಂಪುಟ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಧಾರದಂತೆ, ಪಾಕಿಸ್ತಾನ ಪ್ರಜೆಗಳಿಗೆ ನೀಡಿದ ವೀಸಾಗಳನ್ನು ರದ್ದು ಮಾಡಲಾಗಿದೆ.

ತಕ್ಕ ಪ್ರತ್ಯುತ್ತರದ ನಿರೀಕ್ಷೆಯಲ್ಲಿದ್ದೇವೆ: ಭಾಗವತ್

ಮುಂಬೈ (ಪಿಟಿಐ): ‘ಭಯೋತ್ಪಾದಕರು ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಧರ್ಮವನ್ನು ಕೇಳಿ ನಂತರ ಕೊಂದಿದ್ದಾರೆ. ಹಿಂದೂಗಳು ಎಂದಿಗೂ ಇಂತಹ ಕೆಲಸ ಮಾಡುವುದಿಲ್ಲ. ನಾವು ಈಗ ಅವರಿಗೆ ತಕ್ಕ ಪ್ರತ್ಯುತ್ತರ ನೀಡುವುದನ್ನು ಎದುರು ನೋಡುತ್ತಿದ್ದೇವೆ’ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಗುರುವಾರ ಇಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಮ್ಮ ಹೃದಯದಲ್ಲಿ ನೋವಿದೆ. ನಮಗೆ ಸಿಟ್ಟು ಬಂದಿದೆ. ಆದರೆ, ಈಗ ಕೆಟ್ಟದ್ದನ್ನು ನಾಶಮಾಡಲು, ನಾವು ನಮ್ಮ ಶಕ್ತಿ ತೋರಿಸಬೇಕಿದೆ. ರಾವಣನು ತನ್ನ ಮನಸ್ಸನ್ನು ಬದಲಾಯಿಸಲು ನಿರಾಕರಿಸಿದ್ದ. ಆತನಿಗೆ ಸುಧಾರಣೆ ಮಾಡಿಕೊಳ್ಳಲು ಅವಕಾಶ ನೀಡಿದ ನಂತರವೇ ರಾಮನು ಅವನನ್ನು ಸಂಹರಿಸಿದ. ನಮಗೆ ಬೇರೆ ಆಯ್ಕೆ ಇಲ್ಲ, ಇದು ಧರ್ಮ ಮತ್ತು ಅಧರ್ಮದ ನಡುವಿನ ಯುದ್ಧ’ ಎಂದು ಅವರು ಗುಡುಗಿದರು.

‘ದ್ವೇಷ ಮತ್ತು ಹಗೆತನ ನಮ್ಮ ಸ್ವಭಾವದಲ್ಲಿಲ್ಲ. ಆದರೆ, ಮೌನವಾಗಿದ್ದುಕೊಂಡು ಹಾನಿ ಸಹಿಸುವುದಿಲ್ಲ. ನಿಜವಾದ ಅಹಿಂಸಾತ್ಮಕ ವ್ಯಕ್ತಿಯು ಸಹ ಬಲಶಾಲಿಯಾಗಿರಬೇಕು. ಶಕ್ತಿ ಇಲ್ಲದಿದ್ದರೆ, ಯಾವುದೇ ಆಯ್ಕೆಯೂ ಇರುವುದಿಲ್ಲ. ಆದರೆ ಶಕ್ತಿ ಇದ್ದಾಗ, ಅದು ಅಗತ್ಯವಿರುವಾಗ ಗೋಚರವಾಗಬೇಕು’ ಎಂದು ಅವರು ಹೇಳಿದರು.

‘ಇಂತಹ ದುರಂತಗಳನ್ನು ಮತ್ತು ದುಷ್ಟರ ದುರುದ್ದೇಶಗಳನ್ನು ತಡೆಯಲು ಸಮಾಜದೊಳಗೂ ಒಗ್ಗಟ್ಟು ಅತ್ಯಗತ್ಯ. ನಾವು ಒಗ್ಗಟ್ಟಾಗಿದ್ದರೆ, ಯಾರೂ ನಮ್ಮನ್ನು ಕೆಟ್ಟ ದೃಷ್ಟಿಯಿಂದ ನೋಡುವ ಧೈರ್ಯ ಮಾಡುವುದಿಲ್ಲ. ಯಾರಾದರೂ ಹಾಗೆ ಮಾಡಿದರೆ, ಅವರ ಕಣ್ಣುಗಳು ಛಿದ್ರವಾಗುತ್ತವೆ’ ಎಂದರು.

ಪಾಕ್‌ಗೆ ಒಂದು ಹನಿಯೂ ನೀರು ಹರಿಸಲ್ಲ: ಕೇಂದ್ರ ಶಪಥ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಹಲ್ಗಾಮ್ ಭಯೋತ್ಪಾದನಾ ದಾಳಿಯ ನಂತರ ಪಾಕಿಸ್ತಾನದ ಮೇಲೆ ರಾಜತಾಂತ್ರಿಕ ಒತ್ತಡ ಹೆಚ್ಚಿಸುತ್ತಿರುವ ಕೇಂದ್ರ ಸರ್ಕಾರವು, ಭಾರತದಿಂದ ನೆರೆಯ ದೇಶಕ್ಕೆ ‘ಒಂದು ಹನಿ ನೀರು’ ಹರಿಸದಿರಲು ಸಮಗ್ರ ಕಾರ್ಯತಂತ್ರ ರೂಪಿಸಿದೆ ಎಂದು ಶುಕ್ರವಾರ ಹೇಳಿದೆ.

ಸಿಂಧೂ ಜಲ ಒಪ್ಪಂದವನ್ನು ತಕ್ಷಣದಿಂದಲೇ ಸ್ಥಗಿತಗೊಳಿಸುವ ಬಗ್ಗೆ ಭಾರತವು ಪಾಕಿಸ್ತಾನಕ್ಕೆ ಗುರುವಾರ ಲಿಖಿತವಾಗಿ ತಿಳಿಸಿದೆ. ಜಲ್ ಶಕ್ತಿ ಸಚಿವಾಲಯದ ಕಾರ್ಯದರ್ಶಿ ದೇಬಶ್ರೀ ಮುಖರ್ಜಿ ಅವರು ಪಾಕಿಸ್ತಾನ ಜಲ ಸಂಪನ್ಮೂಲ ಸಚಿವಾಲಯದ ಕಾರ್ಯದರ್ಶಿ ಸೈಯದ್ ಅಲಿ ಮುರ್ತಾಜಾ ಅವರಿಗೆ ಈ ಬಗ್ಗೆ ಗುರುವಾರ ಲಿಖಿತ ಪತ್ರ ಬರೆದಿದ್ದಾರೆ.

ಇದೇ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಜಲಸಂಪನ್ಮೂಲ ಸಚಿವ ಸಿ.ಆರ್. ಪಾಟೀಲ, ಸಚಿವಾಲಯದ ಅಧಿಕಾರಿಗಳೊಂದಿಗೆ 1960ರ ಸಿಂಧೂ ಜಲ ಒಪ್ಪಂದ ಸ್ಥಗಿತ ನಿರ್ಧಾರದ ಅನುಷ್ಠಾನಕ್ಕೆ ಸಭೆ ನಡೆಸಿದರು.

‘ಸಿಂಧೂ ನದಿಯ ಒಂದು ಹನಿ ನೀರು ಕೂಡ ಪಾಕಿಸ್ತಾನಕ್ಕೆ ತಲುಪದಂತೆ ನೋಡಿಕೊಳ್ಳಲು ಸಭೆಯಲ್ಲಿ ಮಾರ್ಗಸೂಚಿ ಸಿದ್ಧಪಡಿಸಲಾಗಿದೆ. ಇದಕ್ಕಾಗಿ ಸರ್ಕಾರವು ಅಲ್ಪಾವಧಿಯ, ಮಧ್ಯಮ ಅವಧಿಯ ಮತ್ತು ದೀರ್ಘಕಾಲೀನ ಕ್ರಮಗಳನ್ನು ಕೈಗೆತ್ತಿಕೊಂಡಿದೆ’ ಎಂದು ಸಭೆಯ ನಂತರ ಸಚಿವ ಸಿ.ಆರ್. ಪಾಟೀಲ ತಿಳಿಸಿದರು.


ಪ್ರಧಾನಿ ನರೇಂದ್ರ ಮೋದಿ ಅವರು ಈ ಸಂಬಂಧ ಕೆಲವು ನಿರ್ದೇಶನಗಳನ್ನು ನೀಡಿದ್ದಾರೆ. ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಮಿತ್ ಶಾ ಅವರು ಸಭೆಯಲ್ಲಿ ಹಲವು ಸಲಹೆಗಳನ್ನು ನೀಡಿದ್ದಾರೆ ಎಂದು ಹೇಳಿದರು.

ಪಾಕಿಸ್ತಾನಕ್ಕೆ ನೀರು ಹರಿಯದಂತೆ ತಡೆಯಲು ನದಿ ನೀರನ್ನು ಬೇರೆಡೆ ತಿರುಗಿಸಲು ಮತ್ತು ನದಿಗಳ ಹೂಳು ತೆಗೆಯುವಂತಹ ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದರು.

‘ಸಿಂಧೂ ನದಿ ನೀರಿನ ಒಪ್ಪಂದದ ಬಗ್ಗೆ ಮೋದಿ ಸರ್ಕಾರ ತೆಗೆದುಕೊಂಡ ಐತಿಹಾಸಿಕ ನಿರ್ಧಾರದಲ್ಲಿ ಸಂಪೂರ್ಣ ರಾಷ್ಟ್ರೀಯ ಹಿತಾಸಕ್ತಿ ಇದೆ. ಸಿಂಧೂ ನದಿಯ ನೀರಿನ ಒಂದು ಹನಿಯು ಪಾಕಿಸ್ತಾನವನ್ನು ತಲುಪುವುದಿಲ್ಲವೆಂದು ನಾವು ಖಾತ್ರಿಪಡಿಸುತ್ತೇವೆ’ ಎಂದು ಪಾಟೀಲ್ ‘ಎಕ್ಸ್’ನಲ್ಲೂ ಪೋಸ್ಟ್ ಮಾಡಿದ್ದಾರೆ.

ಜಮ್ಮು–ಕಾಶ್ಮೀರ: 28ರಂದು ವಿಶೇಷ ಅಧಿವೇಶನ

ಶ್ರೀನಗರ(ಪಿಟಿಐ): ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಯ ಬಗ್ಗೆ ಚರ್ಚಿಸಲು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಏ.28ರಂದು ವಿಧಾನಸಭೆಯ ಒಂದು ದಿನದ ವಿಶೇಷ ಅಧಿವೇಶನ ಕರೆದಿದ್ದಾರೆ.



ಮನೋಜ್ ಸಿನ್ಹಾ

ಭಯೋತ್ಪಾದಕರ ದಾಳಿಯಲ್ಲಿ ಹಲವರು ಮೃತಪಟ್ಟಿರುವ ಬಗ್ಗೆ ಮತ್ತು ಇತರ ವಿಷಯಗಳ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನವನ್ನು ಕರೆಯಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿಶೇಷ ಅಧಿವೇಶನ ಕರೆಯುವಂತೆ ಲೆಫ್ಟಿನೆಂಟ್ ಗವರ್ನರ್‌ಗೆ ಸಲಹೆ ಮಾಡಲು ಜಮ್ಮು–ಕಾಶ್ಮೀರ ಸಂಪುಟವು ಬುಧವಾರ ನಿರ್ಧರಿಸಿತ್ತು.

‘ಭದ್ರತಾ ವೈಫಲ್ಯದ ಚರ್ಚೆ ಸರಿಯಲ್ಲ’

ಮಂಜುನಾಥರಾವ್ ನಿವಾಸಕ್ಕೆ ಭೇಟಿ: ಕುಟುಂಬದವರಿಗೆ ಸ್ಪೀಕರ್ ಸಾಂತ್ವನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರ ಅಟ್ಟಹಾಸ ಮೆರೆದಿರುವ ವಿಷಯಕ್ಕೆ ಸಂಬಂಧಿಸಿದಂತೆ ಈಗ ಭದ್ರತಾ ವೈಫಲ್ಯದ ಬಗ್ಗೆ ಚರ್ಚಿಸುವುದು ಸರಿಯಲ್ಲ. ಬದಲಿಗೆ ಇಡೀ ದೇಶದ ಜನರು ಕೇಂದ್ರ ಸರ್ಕಾರ ಹಾಗೂ ಭಾರತೀಯ ಸೇನೆಯ ಜೊತೆ ನಿಲ್ಲೋಣ’ ಎಂದು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಹೇಳಿದರು.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ ಬಲಿಯಾದ ಮಂಜುನಾಥ ರಾವ್ ಅವರ ನಿವಾಸಕ್ಕೆ ಶುಕ್ರವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಇದು ದೇಶದ ಭದ್ರತೆಯ ಪ್ರಶ್ನೆ. ವಿಭಜನೆ ತಂತ್ರದ ಮೂಲಕ ದೇಶದ ಏಕತೆ ಮತ್ತು ಒಗ್ಗಟ್ಟು ದುರ್ಬಲಗೊಳಿಸುವ ವಿದೇಶಿ ಶಕ್ತಿಗಳ ಹುನ್ನಾರವು ದಾಳಿಯ ಹಿಂದೆ ಅಡಗಿರಬಹುದು. ಮೊದಲು ದಾಳಿ ನಡೆಸಿದ ಭಯೋತ್ಪಾದಕರು ಹಾಗೂ ಅವರ ಬೆಂಬಲಿಗರನ್ನು ಪತ್ತೆ ಹಚ್ಚಿ ಸಂಪೂರ್ಣ ಮಟ್ಟ ಹಾಕಬೇಕಿದೆ. ಹೀಗಾಗಿ ರಾಜಕಾರಣ ಬಿಟ್ಟು ಇಡೀ ದೇಶವೇ ಒಂದಾಗಿ ಕೇಂದ್ರ ಸರ್ಕಾರ ಹಾಗೂ ಭಾರತೀಯ ಸೇನೆಯನ್ನು ನೈತಿಕವಾಗಿ ಬೆಂಬಲಿಸಬೇಕಿದೆ’ ಎಂದು ಪುನರುಚ್ಚರಿಸಿದರು.



ಕಾಶ್ಮೀರದಲ್ಲಿ ಉಗ್ರರಿಂದ ಹತ್ಯೆಗೊಳಗಾದ ಮಂಜುನಾಥ ರಾವ್ ಅವರ ಶಿವಮೊಗ್ಗದ ನಿವಾಸಕ್ಕೆ ಶುಕ್ರವಾರ ಭೇಟಿ ನೀಡಿದ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು

ಪಹಲ್ಗಾಮ್‌ನಲ್ಲಿ ಪ್ರವಾಸಿಗರಿಗೆ ಕಷ್ಟಕಾಲದಲ್ಲಿ ಸ್ಥಳೀಯರು ನೆರವಾಗಿ ಮಾನವೀಯತೆ ಮತ್ತು ಮನುಷ್ಯ ಧರ್ಮ ಎತ್ತಿಹಿಡಿದಿದ್ದಾರೆ. ಈ ವಿಚಾರದಲ್ಲಿ ಭಾರತದ ಸಂಸ್ಕೃತಿ, ಪರಂಪರೆಯನ್ನು ಕಾಶ್ಮೀರಿಗಳು ಬಿಂಬಿಸಿದ್ದಾರೆ ಎಂದು ಹೇಳಿದ ಯು.ಟಿ. ಖಾದರ್, ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯಲ್ಲಿ ಸಾವಿಗೀಡಾದವರಿಗೆ ರಾಜ್ಯ ಸರ್ಕಾರ ಪ್ರಕಟಿಸಿರುವ ₹ 10 ಲಕ್ಷ ಪರಿಹಾರ ಮೊತ್ತವನ್ನು ಹೆಚ್ಚಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಚರ್ಚಿಸುವೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ರಸ್ತೆ ಮೇಲೆ ಪಾಕ್ ಧ್ವಜ ಅಂಟಿಸಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಖಂಡಿಸಿ ಬಜರಂಗದಳದ ಕಾರ್ಯಕರ್ತರು ಶುಕ್ರವಾರ ನಗರದ ಹಲವೆಡೆ ಪಾಕಿಸ್ತಾನದ ಧ್ವಜದ ಸ್ಟಿಕ್ಕರ್‌ಗಳನ್ನು ರಸ್ತೆ ಮೇಲೆ ಅಂಟಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಜಗತ್ ವೃತ್ತ, ಆಳಂದ ನಾಕಾ, ಮಾರ್ಕೆಟ್ ಚೌಕ್, ಸಾಥ್ ಗುಂಬಜ್ ಸೇರಿದಂತೆ ಹಲವೆಡೆ ರಸ್ತೆಯ ಮೇಲೆ ಪಾಕಿಸ್ತಾನ ಧ್ವಜದ ದೊಡ್ಡ ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿತ್ತು. ಆರಂಭದಲ್ಲಿ ‘ಇದು ಶಾಂತಿ–ಸೌಹಾರ್ದ ಕದಡಲು ಕಿಡಿಗೇಡಿಗಳು ನಡೆಸಿದ ಕೃತ್ಯ’ ಎಂಬ ಸುದ್ದಿ ಹರಡಿತ್ತು. ಆದರೆ, ಉಗ್ರರ ದಾಳಿ ಖಂಡಿಸಿ ಪ್ರತಿರೋಧ ವ್ಯಕ್ತಪಡಿಸಲು ಬಜರಂಗದಳವು ಹೀಗೆ ಮಾಡಿದೆ ಎಂಬುದು ಬಳಿಕ ಸ್ಪಷ್ಟವಾಯಿತು.

ವಿಷಯ ತಿಳಿದ ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಪೊಲೀಸರು ಸ್ಟಿಕ್ಕರ್‌ಗಳನ್ನು ತೆರವುಗೊಳಿಸಿದರು.



ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಖಂಡಿಸಿ ಕಲಬುರಗಿಯಲ್ಲಿ ಭಜರಂಗದಳದ ಕಾರ್ಯಕರ್ತರು ಶುಕ್ರವಾರ ರಸ್ತೆಗೆ ಪಾಕಿಸ್ತಾನ ಧ್ವಜದ ಸ್ಟಿಕ್ಕರ್ ಅಂಟಿಸಿ ಆಕ್ರೋಶ ವ್ಯಕ್ತಪಡಿಸಿದರು

‘ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಖಂಡಿಸಿ ಬಜರಂಗದಳದ ಕಾರ್ಯಕರ್ತರು ಪಾಕಿಸ್ತಾನದ ಧ್ವಜದ ಸ್ಟಿಕ್ಕರ್‌ಗಳನ್ನು ರಸ್ತೆಗೆ ಅಂಟಿಸಿ ಪ್ರತಿಭಟನೆ ದಾಖಲಿಸಿದ್ದಾರೆ. ಇದಕ್ಕೆ ಯಾವುದೇ ಅನುಮತಿ ಪಡೆದಿರಲಿಲ್ಲ. ಹೀಗಾಗಿ ಗೊಂದಲ ಸೃಷ್ಟಿಯಾಗಿತ್ತು. ಈ ಸಂಬಂಧ ಆರು ಮಂದಿಯನ್ನು ಬ್ರಹ್ಮಪುರ ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ’ ಎಂದು ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಪ್ರತಿಕ್ರಿಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ದಾಳಿ ನಂಟು ತಿರಸ್ಕರಿಸಿ ಪಾಕ್ ಸೆನೆಟ್ ನಿರ್ಣಯ

ಇಸ್ಲಾಮಾಬಾದ್ (ಪಿಟಿಐ): ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನದ ನಂಟು ಇರುವುದಾಗಿ ಭಾರತ ಮಾಡಿರುವ ಆರೋಪಗಳನ್ನು ತಿರಸ್ಕರಿಸುವ ನಿರ್ಣಯವನ್ನು ಪಾಕಿಸ್ತಾನದ ಸೆನೆಟ್ ಶುಕ್ರವಾರ ಅಂಗೀಕರಿಸಿದೆ.

ಭಾರತ ಮಾಡಿರುವ ಆರೋಪ ಕ್ಷುಲ್ಲಕ ಮತ್ತು ಆಧಾರ ರಹಿತವಾದ ಪ್ರಯತ್ನಗಳೆಂದು ಅದು ಹೇಳಿದೆ.

ಉಪಪ್ರಧಾನಿ ಇಶಾಕ್ ದಾರ್ ನಿರ್ಣಯ ಮಂಡಿಸಿದರು. ಸಂಸತ್ತಿನ ಮೇಲ್ಮನೆಯಲ್ಲಿ ಈ ನಿರ್ಣಯವನ್ನು ಎಲ್ಲ ಪಕ್ಷಗಳು ಸಂಪೂರ್ಣ ಬೆಂಬಲಿಸಿದವು.

ಜಲ ಭಯೋತ್ಪಾದನೆ ಅಥವಾ ಮಿಲಿಟರಿ ಪ್ರಚೋದನೆ ಸೇರಿ ಯಾವುದೇ ಆಕ್ರಮಣದ ವಿರುದ್ಧ ತನ್ನ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸಲು ಪಾಕಿಸ್ತಾನವು ಸಂಪೂರ್ಣ ಸಮರ್ಥವಾಗಿದೆ ಹಾಗೂ ಸಿದ್ಧವಾಗಿದೆ ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ.

ಸಿಂಧೂ ಜಲ ಒಪ್ಪಂದವನ್ನು ತಡೆಹಿಡಿಯುವ ಭಾರತದ ಘೋಷಣೆಯನ್ನು ಖಂಡಿಸಿ, ಈ ಕ್ರಮವು ಯುದ್ಧದ ಕೃತ್ಯಕ್ಕೆ ಸಮಾನವಾಗಿದೆ ಎಂದು ನಿರ್ಣಯದಲ್ಲಿ ಹೇಳಿದೆ.

ಇದಕ್ಕೂ ಮುನ್ನ, ವಿದೇಶಾಂಗ ಕಚೇರಿಯು ಈ ಪ್ರದೇಶದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ 26 ದೇಶಗಳ ರಾಜತಾಂತ್ರಿಕರಿಗೆ ವಿವರಿಸಿದೆ ಎಂದು ಉಪ ಪ್ರಧಾನಿ ಸದನಕ್ಕೆ ಮಾಹಿತಿ ನೀಡಿದರು.

ಸಂಯಮದಿಂದ ಇರಲು ಮನವಿ

ವಿಶ್ವಸಂಸ್ಥೆ(ಪಿಟಿಐ): ಸದ್ಯದ ಉದ್ವಿಗ್ನ ಸ್ಥಿತಿಯಲ್ಲಿ ಗರಿಷ್ಠ ಸಂಯಮ ಕಾಯ್ದುಕೊಳ್ಳಬೇಕು ಮತ್ತು ಪರಿಸ್ಥಿತಿ ಮತ್ತಷ್ಟು ಹದಗೆಡದಂತೆ ನೋಡಿಕೊಳ್ಳಬೇಕು ಎಂದು ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳಿಗೆ ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಮನವಿ ಮಾಡಿದ್ದಾರೆ.

‘ಎರಡು ದಿನಗಳ ಹಿಂದೆ ಪಹಲ್ಗಾಮ್‌ನಲ್ಲಿ ನಡೆದಿರುವ ಭಯೋತ್ಪಾದಕ ದಾಳಿಯಲ್ಲಿ ನಾಗರಿಕರ ಹತ್ಯೆಯಾಗಿದೆ. ಈ ಕೃತ್ಯವನ್ನು ನಾವು ಪ್ರಬಲವಾಗಿ ಖಂಡಿಸುತ್ತೇವೆ. ಸಂತ್ರಸ್ತರ ಕುಟುಂಬಗಳಿಗೆ ಗುಟೆರಸ್ ಸಂತಾಪ ತಿಳಿಸಿದ್ದಾರೆ. ಯಾವುದೇ ಸಂದರ್ಭದಲ್ಲೂ ನಾಗರಿಕರ ಮೇಲಿನ ದಾಳಿಗಳು ಸ್ವೀಕಾರಾರ್ಹವಲ್ಲ ಎಂಬುದನ್ನು ಒತ್ತಿಹೇಳಿದ್ದಾರೆ’ ಎಂದು ಗುಟೆರಸ್ ಅವರ ವಕ್ತಾರರಾದ ಸ್ಟೀಫನ್ ಡುಜಾರಿಕ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಯಿಂದ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಗುಟೆರಸ್ ಅವರು ಭಾರತ ಮತ್ತು ಪಾಕಿಸ್ತಾನದ ಸರ್ಕಾರಗಳೊಂದಿಗೆ ಸಂಪರ್ಕ ಸಾಧಿಸಿದ್ದಾರೆಯೇ ಎಂದು ಕೇಳಲಾದ ಪ್ರಶ್ನೆಗೆ, ‘ಗುಟೆರಸ್ ಯಾವುದೇ ನೇರ ಸಂಪರ್ಕ ಸಾಧಿಸಿಲ್ಲ. ಆದರೆ ಅವರು ಪರಿಸ್ಥಿತಿಯನ್ನು ಬಹಳ ಕಾಳಜಿಯಿಂದ ಗಮನಿಸುತ್ತಿದ್ದಾರೆ’ ಎಂದು ಡುಜಾರಿಕ್ ಹೇಳಿದರು.

ವಿಶೇಷ ಅಧಿವೇಶನಕ್ಕೆ ಸಿಬಲ್ ಒತ್ತಾಯ

ನವದೆಹಲಿ (ಪಿಟಿಐ): ಸಂಸತ್ತಿನ ವಿಶೇಷ ಅಧಿವೇಶನ ಕರೆದು ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಖಂಡಿಸುವ ನಿರ್ಣಯ ಅಂಗೀಕರಿಸಬೇಕು ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಅವರು ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಪಾಕಿಸ್ತಾನದ ಮೇಲೆ ರಾಜತಾಂತ್ರಿಕ ಒತ್ತಡವನ್ನು ಹೇರಲು ಆಡಳಿತ ಮತ್ತು ವಿರೋಧ ಪಕ್ಷಗಳ ಸಂಸದರ ನಿಯೋಗವನ್ನು ಪ್ರಮುಖ ದೇಶಗಳಿಗೆ ಕಳುಹಿಸುವಂತೆಯೂ ಸರ್ಕಾರಕ್ಕೆ ಮನವಿ ಮಾಡಿದರು.

ಪಾಕ್ ಪ್ರಜೆಗಳನ್ನು ಹೊರಹಾಕಿ: ಶಾ

ಒಂದನೇ ಪುಟದಿಂದ...

ಪಾಕಿಸ್ತಾನಿ ಪ್ರಜೆಗಳಿಗೆ ನೀಡಿರುವ ವೀಸಾಗಳ ಅವಧಿ ಏಪ್ರಿಲ್ 27ರಂದು ಮುಕ್ತಾಯವಾಗಲಿದೆ. ವೈದ್ಯಕೀಯ ವೀಸಾ ಏ. 29ರವರೆಗೆ ಮಾತ್ರ ಊರ್ಜಿತವಾಗಿರಲಿದೆ ಎಂದು ವಿದೇಶಾಂಗ ಸಚಿವಾಲಯ ಗುರುವಾರ ಪ್ರಕಟಿಸಿತ್ತು. ಪಾಕಿಸ್ತಾನಕ್ಕೆ ತೆರಳಿರುವ ಭಾರತದ ಪ್ರಜೆಗಳು ಶೀಘ್ರವೇ ಸ್ವದೇಶಕ್ಕೆ ಮರಳಬೇಕೆಂದೂ ಸಲಹೆ ನೀಡಿತ್ತು.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಹಾಗೂ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಭಾರತ ಕೈಗೊಂಡ ಕ್ರಮಗಳ ಬಗ್ಗೆ ವಿವಿಧ ದೇಶಗಳ ರಾಯಭಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಇಬ್ಬರು ಉಗ್ರರ ಮನೆ ಧ್ವಂಸ

ಒಂದನೇ ಪುಟದಿಂದ...

ಥೋಕರ್‌ನ ಮನೆಯನ್ನು ಗುರುವಾರ ರಾತ್ರಿ ನಡೆಸಿದ ಕಾರ್ಯಾಚರಣೆಯಲ್ಲಿ ಧ್ವಂಸಗೊಳಿಸಲಾಗಿದೆ. ಭದ್ರತಾ ಪಡೆಗಳು ಮನೆಯಲ್ಲಿ ಶೋಧ ನಡೆಸಿದಾಗ ಅಲ್ಲಿ ಸ್ಫೋಟಕಗಳಿರುವುದು ಪತ್ತೆಯಾಗಿದೆ. ಅದನ್ನು ಅಲ್ಲೇ ಸ್ಫೋಟಿಸಿದಾಗ ಮನೆ ನೆಲಸಮಗೊಂಡಿದೆ.

ತ್ರಾಲ್‌ನ ಮೊಘಮಾ ಗ್ರಾಮದಲ್ಲಿ ಭದ್ರತಾ ಪಡೆಗಳು ನಡೆಸಿದ ಇದೇ ರೀತಿಯ ಕಾರ್ಯಾಚರಣೆಯಿಂದ ಆಸಿಫ್ ಶೇಖ್‌ನ ಮನೆ ಭಾಗಶಃ ಕುಸಿದಿದೆ. ಶೋಧ ಕಾರ್ಯಾಚರಣೆ ವೇಳೆ ಪೆಟ್ಟಿಗೆಯೊಂದರಲ್ಲಿ ಅನುಮಾನಾಸ್ಪದ ವಸ್ತು ದೊರೆತಿದೆ. ಅದನ್ನು ಪರಿಶೀಲಿಸಿದ ಸೇನೆಯ ಎಂಜಿನಿಯರ್‌ಗಳು ಸ್ಫೋಟಕ ಎಂಬುದನ್ನು ಖಚಿತಪಡಿಸಿದರು. ಅದನ್ನು ಅಲ್ಲೇ ನಾಶಪಡಿಸಿದಾಗ ಮನೆಯ ಒಂದು ಭಾಗ ಕುಸಿದಿದೆ.

ಮನೆಗಳನ್ನು ಯಾವ ಆಧಾರದಲ್ಲಿ ನೆಲಸಮಗೊಳಿಸಲಾಗಿದೆ ಎಂಬುದು ಅಸ್ಪಷ್ಟವಾಗಿಯೇ ಉಳಿದಿದ್ದರೂ, ಪಹಲ್ಗಾಮ್ ದಾಳಿಗೆ ಪ್ರತ್ಯುತ್ತರವಾಗಿ ಭದ್ರತಾ ಪಡೆಗಳು ಈ ಕಾರ್ಯಾಚರಣೆ ನಡೆಸಿವೆ ಎನ್ನಲಾಗಿದೆ. ಆಸಿಫ್ ಮತ್ತು ಥೋಕರ್ ಬಗ್ಗೆ ಮಾಹಿತಿ ಕಲೆ ಹಾಕಲು ಅಧಿಕಾರಿಗಳು ಸ್ಥಳೀಯ ನಿವಾಸಿಗಳನ್ನು ಪ್ರಶ್ನಿಸಿದ್ದಾರೆ.

ಪಹಲ್ಗಾಮ್ ದಾಳಿಯ ಪ್ರಮುಖ ಆರೋಪಿಗಳಲ್ಲಿ ಥೋಕರ್ ಒಬ್ಬನಾಗಿದ್ದು, ಆತನ ಸುಳಿವು ನೀಡಿದವರಿಗೆ ಜಮ್ಮು ಮತ್ತು ಕಾಶ್ಮೀರ ಪೊಲೀಸರು ₹20 ಲಕ್ಷ ನಗದು ಬಹುಮಾನ ಘೋಷಿಸಿದ್ದಾರೆ.

ಉಗ್ರರಿಗೆ ಬೆಂಬಲ: ಒಪ್ಪಿಕೊಂಡ ಪಾಕ್

ಒಂದನೇ ಪುಟದಿಂದ...

‘ನಮ್ಮಿಂದ ತಪ್ಪಾಗಿದ್ದು, ಅದರಿಂದಾಗಿ ಸಾಕಷ್ಟು ನಷ್ಟ ಅನುಭವಿಸಿದ್ದೇವೆ. ಸೋವಿಯತ್ ಯೂನಿಯನ್ ವಿರುದ್ಧದ ಯುದ್ಧ ಮತ್ತು 9/11 ಘಟನೆಯ ನಂತರದ ಯುದ್ಧದಲ್ಲಿ (ಅಮೆರಿಕದ ನೇತೃತ್ವದಲ್ಲಿ ನಡೆದ ಭಯೋತ್ಪಾದನೆ ವಿರುದ್ಧದ ಜಾಗತಿಕ ಸಮರ) ಭಾಗವಹಿಸದಿದ್ದರೆ, ಪಾಕಿಸ್ತಾನಕ್ಕೆ ಇಂತಹ ಇಕ್ಕಟ್ಟಿನ ಪರಿಸ್ಥಿತಿ ಎದುರಾಗುತ್ತಿರಲಿಲ್ಲ’ ಎಂದಿದ್ದಾರೆ.

‘ಈ ಪ್ರದೇಶದಲ್ಲಿ ಏನೇ ಸಂಭವಿಸಿದರೂ ಪಾಕಿಸ್ತಾನವನ್ನು ದೂಷಿಸಲಾಗುತ್ತಿದೆ. 80ರ ದಶಕದಲ್ಲಿ ನಾವು ಸೋವಿಯತ್ ಯೂನಿಯನ್ ವಿರುದ್ಧ ಯುದ್ಧ ಮಾಡುತ್ತಿದ್ದಾಗ, ಈಗಿನ ಈ ಎಲ್ಲಾ ಭಯೋತ್ಪಾದಕರು ಅಂದು ವಾಷಿಂಗ್ಟನ್‌ನಲ್ಲಿ ಮದ್ಯ ಸೇವಿಸಿ ಮೋಜು ಮಾಡುತ್ತಿದ್ದರು’ ಎಂದು ಆರೋಪಿಸಿದ್ದಾರೆ.

ಗುಂಡಿನ ದಾಳಿ; ಭಾರತ ಪ್ರತ್ಯುತ್ತರ

ಒಂದನೇ ಪುಟದಿಂದ...

ಪಹಲ್ಗಾಮ್ ದಾಳಿಯ ಬಳಿಕ ಉಭಯ ದೇಶಗಳ ಮಧ್ಯೆ ಉದ್ವಿಗ್ನತೆ ಹೆಚ್ಚುತ್ತಿರುವ ಸಂದರ್ಭದಲ್ಲೇ ಈ ಬೆಳವಣಿಗೆ ನಡೆದಿದೆ. ಗುಂಡಿನ ದಾಳಿಯಲ್ಲಿ ಯಾವುದೇ ಪ್ರಾಣಹಾನಿ ವರದಿಯಾಗಿಲ್ಲ ಎಂದು ಸೇನೆಯ ಮೂಲಗಳು ತಿಳಿಸಿವೆ. ‘ಪಾಕ್‌ನಿಂದ ಉಲ್ಲಂಘನೆ ಮುಂದುವರಿದರೆ 2021ರ ಕದನ ವಿರಾಮ ಒಪ್ಪಂದದಿಂದ ಹಿಂದೆ ಸರಿಯುವುದನ್ನು ಭಾರತ ಗಂಭೀರವಾಗಿ ಪರಿಗಣಿಸುತ್ತಿದೆ’ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ದಾಳಿ: ಸಂತ್ರಸ್ತ ಕುಟುಂಬದ ಮಕ್ಕಳಿಗೆ ಉಚಿತ ಶಿಕ್ಷಣ

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ‘ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಮೃತಪಟ್ಟವರ ಕುಟುಂಬದ ಮಕ್ಕಳಿಗೆ ಎಲ್‌ಕೆಜಿಯಿಂದ ಪದವಿ ತನಕ ನಟ್ಟೋಜ ಫೌಂಡೇಶನ್ ಟ್ರಸ್ಟ್‌ನ ಅಂಬಿಕಾ ಶಿಕ್ಷಣ ಸಂಸ್ಥೆಗಳಲ್ಲಿ ವಸತಿ ಸಹಿತ ಉಚಿತ ಶಿಕ್ಷಣ ನೀಡಲಾಗುವುದು’ ಎಂದು ಸಂಸ್ಥೆ ಸಂಚಾಲಕ ಸುಬ್ರಹ್ಮಣ್ಯ ನಟ್ಟೋಜ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಕಾಶ್ಮೀರದ ಪಂಡಿತರ ಮಕ್ಕಳಿಗೆ ಉಚಿತ ಶಿಕ್ಷಣ ಘೋಷಿಸಲಾಗಿತ್ತು. ಕಾಶ್ಮೀರದಿಂದ ಇಬ್ಬರು ವಿದ್ಯಾರ್ಥಿಗಳು ಪುತ್ತೂರಿನ ಅಂಬಿಕಾ ಪದವಿ ಪೂರ್ವ ವಿದ್ಯಾಲಯಕ್ಕೆ ಬಂದು ಪಿಯು ದಾಖಲಾತಿ ಪಡೆದು ಶಿಕ್ಷಣ ಪಡೆಯುತ್ತಿದ್ದಾರೆ ಎಂದರು.

ನಟ್ಟೋಜ ಫೌಂಡೇಶನ್ ಟ್ರಸ್ಟ್ ಕೋಶಾಧಿಕಾರಿ ರಾಜಶ್ರೀ ನಟ್ಟೋಜ, ಸಂಸ್ಥೆಯ ಆಡಳಿತಾಧಿಕಾರಿ ಗಣೇಶ್ ಪ್ರಸಾದ್, ಸದಸ್ಯರಾದ ಎಚ್. ಮಾಧವ ಭಟ್, ಬಾಲಕೃಷ್ಣ ಬೋರ್ಕರ್ ಸುದ್ದಿಗೋಷ್ಠಿಯಲ್ಲಿ ಇದ್ದರು.

‘ನನ್ನ ಮಗನನ್ನು ತಾಯ್ನಾಡಿಗೆ ಕರೆತನ್ನಿ’

ಹೂಗ್ಲಿ (ಪಶ್ಚಿಮ ಬಂಗಾಳ): ‘ಆಕಸ್ಮಿಕವಾಗಿ ಅಂತರರಾಷ್ಟ್ರೀಯ ಗಡಿ ರೇಖೆ ದಾಟಿದ ಕಾರಣಕ್ಕೆ ಪಾಕಿಸ್ತಾನದ ಸೇನೆಯಿಂದ ಬಂಧನಕ್ಕೆ ಒಳಗಾಗಿರುವ ಬಿಎಸ್‌ಎಫ್ ಯೋಧ ಪೂರ್ಣಂ ಸಾಹು ಆಗಮನಕ್ಕಾಗಿ ಇಡೀ ಕುಟುಂಬ ಕಾತರದಿಂದ ಕಾಯುತ್ತಿದೆ’ ಎಂದು ಅವರ ತಂದೆ ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ರಿಷ್ರಾದ ಬಳಿ ನೆಲೆಸಿರುವ ಪೂರ್ಣಂ ಸಾಹು ಅವರ ಕುಟುಂಬದಲ್ಲಿ ನೀರವ ಮೌನ ಆವರಿಸಿದ್ದು, ತಮ್ಮ ಮಗ ಸುರಕ್ಷಿತವಾಗಿ ಮನೆಗೆ ಮರಳಲಿ ಎಂದು ಪ್ರಾರ್ಥನೆ ಮಾಡುತ್ತಿದ್ದಾರೆ.

ಹಸ್ತಾಂತರಕ್ಕೆ ನಿರಾಕರಣೆ: ‘ಬಿಎಸ್‌ಎಫ್ ಯೋಧ ಪಿ.ಕೆ. ಸಾಹು ಅವರನ್ನು ಹಸ್ತಾಂತರಿಸಲು ಪಾಕಿಸ್ತಾನದ ರೇಂಜರ್‌ಗಳು ಸತತ ಮೂರನೇ ದಿನವಾದ ಶುಕ್ರವಾರವೂ ನಿರಾಕರಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಸುರಕ್ಷತೆಯ ಚಿಂತೆ: ‘ನನ್ನ ಮಗ ಸುರಕ್ಷಿತವಾಗಿದ್ದಾನೊ ಅಥವಾ ಇಲ್ಲವೊ ಎಂಬುದು ಗೊತ್ತಿಲ್ಲ. ಆತ ಈಗ ಪಾಕಿಸ್ತಾನದ ವಶದಲ್ಲಿದ್ದಾನೆ ಎಂದು ಕೇಳಲ್ಪಟ್ಟಿದ್ದೇವೆ. ನನ್ನ ಮಗ ಈಗ ಎಲ್ಲಿದ್ದಾನೆ ಮತ್ತು ಆತ ಸುರಕ್ಷಿತವಾಗಿದ್ದಾನೆಯೇ ಎಂಬುದನ್ನು ತಿಳಿಯಲು ಇಚ್ಛಿಸುತ್ತೇನೆ’ ಎಂದು ಸಾಹು ಅವರ ತಂದೆ ಭೋಲನಾಥ್ ಸಾಹು ಪ್ರತಿಕ್ರಿಯಿಸಿದರು.

ಅಟ್ಟಾರಿ– ವಾಘಾ ಗಡಿಯಲ್ಲಿ ಹೆಚ್ಚಿದ ವಾಹನ ದಟ್ಟಣೆ

ಸ್ವದೇಶಕ್ಕೆ ಮರಳುತ್ತಿರುವ ಪಾಕಿಸ್ತಾನಿಯರು

ಚಂಡೀಗಢ (ಪಿಟಿಐ): ಭಾರತದಲ್ಲಿದ್ದ ಪಾಕಿಸ್ತಾನ ಪ್ರಜೆಗಳು ಪಂಜಾಬ್‌ನ ಅಮೃತಸರದ ಅಟ್ಟಾರಿ– ವಾಘಾ ಗಡಿಯ ಮೂಲಕ ಪಾಕಿಸ್ತಾನಕ್ಕೆ ಮರಳುತ್ತಿರುವುದು ಶುಕ್ರವಾರ ಕೂಡ ಮುಂದುವರಿದಿತ್ತು.

ಪಹಲ್ಗಾಮ್ ದಾಳಿಯ ಹಿನ್ನೆಲೆಯಲ್ಲಿ ಪಾಕಿಸ್ತಾನ ಪ್ರಜೆಗಳಿಗೆ ಭಾರತ ತೊರೆಯಲು ಕೇಂದ್ರ ಸರ್ಕಾರ ಗುರುವಾರ 48 ಗಂಟೆಗಳ ಗಡುವು ನೀಡಿತ್ತು.

ಪಾಕಿಸ್ತಾನದವರನ್ನು ಮದುವೆಯಾಗಿದ್ದು, ಭಾರತದ ಪಾಸ್‌ಪೋರ್ಟ್‌ಗಳನ್ನು ಹೊಂದಿರುವ ಕೆಲವು ಮಹಿಳೆಯರು ಅಗತ್ಯ ದಾಖಲೆಗಳಿದ್ದರೂ ಗಡಿ ದಾಟಲು ಸಮಸ್ಯೆ ಎದುರಿಸುತ್ತಿದ್ದೇವೆ ಎಂದು ಆರೋಪಿಸಿದ್ದಾರೆ.

‘ಭಾರತದಲ್ಲಿರುವ ತಮ್ಮ ಸಂಬಂಧಿಕರನ್ನು ಭೇಟಿಯಾಗಲು ಬಂದಿದ್ದೆವು. ಆದರೆ, ಪಾಕಿಸ್ತಾನ ಪ್ರಜೆಗಳು ದೇಶ ತೊರೆಯಲು 48 ಗಂಟೆಗಳ ಗಡುವನ್ನು ಸರ್ಕಾರ ನಿಗದಿಪಡಿಸಿದ ನಂತರ ಅನಿವಾರ್ಯವಾಗಿ ಮರಳಬೇಕಾಗಿದೆ’ ಕೆಲವು ಮಹಿಳೆಯರು ಹೇಳಿದ್ದಾರೆ.

ಕರಾಚಿಯಲ್ಲಿ ಮದುವೆಯಾಗಿರುವ ಮಹಿಳೆಯೊಬ್ಬರು, ‘ಹೃದ್ರೋಗಿಯಾಗಿರುವ ತನ್ನ ತಾಯಿಯನ್ನು ಭೇಟಿಯಾಗಲು 15 ದಿನಗಳ ಮಟ್ಟಿಗೆ ದೆಹಲಿಗೆ ಬಂದಿದ್ದೆ. ಈಗ ನನಗೆ ಹಿಂತಿರುಗಲು ಅವಕಾಶ ನೀಡುತ್ತಿಲ್ಲ’ ಎಂದು ಆರೋಪಿಸಿದ್ದಾರೆ.



ಪಾಕಿಸ್ತಾನದ ಪ್ರಜೆ ಸಾಹಿಬ್‌ಜಾದಾ ಅಹ್ಮದ್ ಅವರು ಅಟ್ಟಾರಿ–ವಾಘಾ ಗಡಿ ಮೂಲಕ ಪಾಕಿಸ್ತಾನಕ್ಕೆ ತೆರಳುವಾಗ, ಅವರ ಪತ್ನಿ ಭಾರತದ ಪ್ರಜೆ ಝುಕಿಯಾ ಫಿರ್ದೌಸ್ ಕಣ್ಣೀರಿಟ್ಟರು –ಪಿಟಿಐ ಚಿತ್ರ

‘ನನ್ನ ಪತಿ ಮತ್ತು ಮಾವ ವಾಘಾ ಗಡಿಯ ಇನ್ನೊಂದು ಬದಿಯಲ್ಲಿ ನನಗಾಗಿ ಕಾಯುತ್ತಿದ್ದಾರೆ. ಆದರೆ, ನನಗೆ ಹಿಂತಿರುಗಲು ಅವಕಾಶ ನೀಡುತ್ತಿಲ್ಲ’ ಎಂದು ಭಾರತದ ಪಾಸ್‌ಪೋರ್ಟ್ ಹೊಂದಿರುವ ಶನಿಜಾ ಅಟ್ಟಾರಿಯಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ನನ್ನ ಬಳಿ ಭಾರತದ ಪಾಸ್‌ಪೋರ್ಟ್ ಇದೆ. ನನ್ನ ಇಬ್ಬರು ಮಕ್ಕಳು ಪಾಕಿಸ್ತಾನದ ಪಾಸ್‌ಪೋರ್ಟ್ ಹೊಂದಿದ್ದಾರೆ. ನನ್ನ ವಿವಾಹ ಪ್ರಮಾಣ ಪತ್ರ ತೋರಿಸಿದರೂ ಅವರು ನಮ್ಮ ಮಾತನ್ನು ಕೇಳಲು ಸಿದ್ಧರಿಲ್ಲ. ಅವರು ಭಾರತದ ಪಾಸ್‌ಪೋರ್ಟ್ ಹೊಂದಿದವರಿಗೆ ಗಡಿ ದಾಟಲು ಅವಕಾಶ ನೀಡುತ್ತಿಲ್ಲ’ ಎಂದು ಮತ್ತೊಬ್ಬ ಮಹಿಳೆ ಅಳಲು ತೋಡಿಕೊಂಡಿದ್ದಾರೆ.

ಮಕ್ಕಳ ಚಿಕಿತ್ಸೆಗೆ ಅವಕಾಶ ಕಲ್ಪಿಸಿ: ಮನವಿ

ಕರಾಚಿ/ಲಾಹೋರ್ (ಪಿಟಿಐ): ಅನಾರೋಗ್ಯಪೀಡಿತ ಇಬ್ಬರು ಮಕ್ಕಳನ್ನು ಭಾರತಕ್ಕೆ ಚಿಕಿತ್ಸೆಗೆ ಕರೆತಂದಿರುವ ಪಾಕಿಸ್ತಾನದ ಪ್ರಜೆಯೊಬ್ಬರು, ‘ಮಕ್ಕಳ ಚಿಕಿತ್ಸೆ ಪೂರ್ಣಗೊಳಿಸಲು ಅವಕಾಶ ಕಲ್ಪಿಸಬೇಕು’ ಎಂದು ಉಭಯ ಸರ್ಕಾರಗಳಿಗೆ ಮನವಿ ಮಾಡಿದ್ದಾರೆ.

ಪಾಕಿಸ್ತಾನದ ಸಿಂಧ್ ಪ್ರಾಂತ್ಯಕ್ಕೆ ಸೇರಿದ ವ್ಯಕ್ತಿ ಹೈದರಾಬಾದ್‌ನಲ್ಲಿ ನೆಲಸಿದ್ದಾರೆ. ಇತ್ತೀಚಿನ ಪಹಲ್ಗಾಮ್ ಉಗ್ರರ ದಾಳಿ ಕೃತ್ಯದ ಹಿನ್ನೆಲೆಯಲ್ಲಿ ತವರಿಗೆ ಮರಳಬೇಕಾಗಿದೆ. ಎಲ್ಲ ವೀಸಾ ರದ್ದುಪಡಿಸಿರುವ ಭಾರತ ಸರ್ಕಾರ, ಪಾಕ್‌ಗೆ ಮರಳಲು ಗಡುವು ವಿಧಿಸಿದೆ.

ಜಿಯೊ ಸುದ್ದಿವಾಹಿನಿ ಜೊತೆಗೆ ಮಾತನಾಡಿದ ಪಾಕಿಸ್ತಾನದ ಪ್ರಜೆಯು, ‘ನನ್ನ 9 ಮತ್ತು 7 ವರ್ಷ ವಯಸ್ಸಿನ ಇಬ್ಬರು ಮಕ್ಕಳೂ ಹುಟ್ಟಿನಿಂದಲೇ ಹೃದ್ರೋಗ ಸಮಸ್ಯೆ ಎದುರಿಸುತ್ತಿದ್ದಾರೆ’ ಎಂದು ಹೇಳಿಕೊಂಡಿದ್ದಾರೆ. ಸುದ್ದಿವಾಹಿನಿ ಇವರ ಹೆಸರು ಪ್ರಕಟಿಸಿಲ್ಲ.

ಮಕ್ಕಳನ್ನು ಚಿಕಿತ್ಸೆಗಾಗಿ ಭಾರತಕ್ಕೆ ಕರೆದೊಯ್ಯಲು ಈಗಾಗಲೇ ಸಾಕಷ್ಟು ಹಣವನ್ನು ವೆಚ್ಚ ಮಾಡಿದ್ದೇನೆ. ಹೀಗಾಗಿ, ಮಕ್ಕಳ ಚಿಕಿತ್ಸೆ ಪೂರ್ಣಗೊಳಿಸಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದ್ದಾರೆ.

ಈ ಮಧ್ಯೆ, ವೀಸಾ ರದ್ದುಪಡಿಸಿದ ಹಿಂದೆಯೇ ಪಾಕ್‌ನಲ್ಲಿದ್ದ 100 ಮಂದಿ ಭಾರತೀಯ ಪ್ರಜೆಗಳು ಹಾಗೂ ಭಾರತದಲ್ಲಿದ್ದ ಸುಮಾರು 28 ಮಂದಿ ಪಾಕಿಸ್ತಾನಿಯರು ತಮ್ಮ ತವರು ದೇಶಗಳಿಗೆ ಮರಳಿದ್ದಾರೆ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಒಗ್ಗಟ್ಟು ಇರಲಿ: ರಾಹುಲ್



ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಯಿಂದ ಗಾಯಗೊಂಡು ಶ್ರೀನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುವನ್ನು ಶುಕ್ರವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭೇಟಿಯಾಗಿ ಮಾತುಕತೆ ನಡೆಸಿದರು–ಪಿಟಿಐ ಚಿತ್ರ

ಶ್ರೀನಗರ: ‘ಭಯೋತ್ಪಾದನೆಯನ್ನು ನಿರ್ಣಾಯಕವಾಗಿ ಎದುರಿಸಲು ರಾಷ್ಟ್ರೀಯ ಏಕತೆ ಪ್ರದರ್ಶಿಸಬೇಕು’ ಎಂದು ಕಾಂಗ್ರೆಸ್ ಸಂಸದ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕರೆ ನೀಡಿದ್ದಾರೆ. ಇತ್ತೀಚಿಗಿನ ಭಯೋತ್ಪಾದಕ ದಾಳಿ ಬಳಿಕ ದೇಶದ ವಿವಿಧೆಡೆ ಕಾಶ್ಮೀರಿಗಳ ಮೇಲೆ ನಡೆಯುತ್ತಿರುವ ಕಿರುಕುಳವನ್ನು ಅವರು ತೀವ್ರವಾಗಿ ಖಂಡಿಸಿದ್ದಾರೆ.

ಶ್ರೀನಗರಕ್ಕೆ ಶುಕ್ರವಾರ ಬಂದಿಳಿದ ಅವರು, ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಯಿಂದ ಗಾಯಗೊಂಡ ವ್ಯಕ್ತಿಗಳನ್ನು ಆಸ್ಪತ್ರೆಯಲ್ಲಿ ಭೇಟಿಯಾಗಿ ಧೈರ್ಯ ತುಂಬಿದರು.

‘ಒಂದು ರಾಷ್ಟ್ರವಾಗಿ ಭಯೋತ್ಪಾದನೆಯನ್ನು ಒಗ್ಗಟ್ಟಿನಿಂದ ಸೋಲಿಸುವುದು ಅತ್ಯಗತ್ಯ. ಈಗ ವಿಭಜಿಸುವ ಸಮಯವಲ್ಲ, ಒಗ್ಗಟ್ಟಿನಿಂದ ಹೋರಾಡುವುದು ಮುಖ್ಯ’ ಎಂದು ತಿಳಿಸಿದರು.

ಕಾಶ್ಮೀರದ ಈಗಿನ ಸ್ಥಿತಿಗತಿ ಕುರಿತಂತೆ, ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹಾಗೂ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರ ಜೊತೆಗೂ ಮಾತುಕತೆ ನಡೆಸಿದರು.



ಚಾಮರ ವಜ್ರ ಮೈದಾನದಲ್ಲಿ ಆರಂಭಗೊಂಡ ಭಾರತ–ಅಂತರರಾಷ್ಟ್ರೀಯ ಕಾಫಿ ಉತ್ಸವ

ಹರಡಿದ ಕಾಫಿ ಘಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತರಹೇವಾರಿ ಬಗೆಯ ಕಾಫಿಯನ್ನು ಕಾಫಿಪ್ರಿಯರು ಆಸ್ವಾದಿಸಿದರು. ನಗರದ ಚಾಮರ ವಜ್ರ ಮೈದಾನದಲ್ಲಿ ಶುಕ್ರವಾರ ಆರಂಭಗೊಂಡ ಅಂತರರಾಷ್ಟ್ರೀಯ ಕಾಫಿ ಉತ್ಸವವು ಕಾಫಿ ಘಮ ಹರಡಿತು.

ಸ್ಪೆಷಾಲಿಟಿ ಕಾಫಿ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಸಿಎಐ) ಸಂಸ್ಥೆಯು ಭಾರತೀಯ ಕಾಫಿ ಮಂಡಳಿಯ ಸಹಕಾರದೊಂದಿಗೆ ಆಯೋಜಿಸಿರುವ ಮೂರು ದಿನಗಳ 'ಭಾರತ–ಅಂತರರಾಷ್ಟ್ರೀಯ ಕಾಫಿ ಉತ್ಸವ–2025'ದಲ್ಲಿ ವಿವಿಧ ಕಾಫಿ ಬೆಳೆಗಾರರ ಸಂಘಗಳು, ಕಾಫಿ ಉತ್ಪಾದಕರು, ಕಾಫಿ ಕೆಫೆ ಕಂಪನಿಗಳು ಕಾಫಿ ಉತ್ಪಾದನಾ ಯಂತ್ರಗಳಿಗೆ ಸಂಬಂಧಿಸಿದ 80ಕ್ಕೂ ಅಧಿಕ ಮಳಿಗೆಗಳು ಭಾಗವಹಿಸಿದ್ದವು.

ಮನೆ ಹಾಗೂ ವಾಣಿಜ್ಯ ಬಳಕೆಗೆ ಸಹಕಾರಿಯಾದ ಕಾಫಿ ಯಂತ್ರಗಳನ್ನು ವೀಕ್ಷಿಸಿದ ಕಾಫಿಪ್ರಿಯರು ಸ್ಥಳದಲ್ಲಿಯೇ ಸಿದ್ಧಪಡಿಸುತ್ತಿದ್ದ ಕಾಫಿಯನ್ನು ಸವಿದು, ಕಾಫಿ ಪುಡಿ ಖರೀದಿಸಿದರು.

ಕಾಫಿ ಬೆಳೆ, ಮಾರುಕಟ್ಟೆ, ರಫ್ತು ಉತ್ತೇಜನ ಮತ್ತು ಮೌಲ್ಯವರ್ಧನೆ ಕುರಿತಾದ ಸಂಶೋಧನೆಗಳು ಮತ್ತು ಚರ್ಚೆಗಳಿಗೆ ಉತ್ಸವದಲ್ಲಿ ಚಾಲನೆ ನೀಡಲಾಯಿತು.

ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ. ದಿನೇಶ್, ಕಾರ್ಯದರ್ಶಿ ಕೆ.ಜಿ. ಜಗದೀಶ್, ಮಂಡಳಿಯ ಹಣಕಾಸು ವಿಭಾಗದ ನಿರ್ದೇಶಕ ಎನ್. ಎನ್. ನರೇಂದ್ರ, ಯುನೈಟೆಡ್ ಪ್ಲಾಂಟರ್ಸ್ ಅಸೋಸಿಯೇಷನ್ ಆಫ್ ಸದರ್ನ್ ಇಂಡಿಯಾ ಅಧ್ಯಕ್ಷ ಮ್ಯಾಥ್ಯು ಅಬ್ರಹಾಂ, ಸ್ಪೆಷಲ್ ಕಾಫಿ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಸಿಎಐ) ಅಧ್ಯಕ್ಷ ಡಿ.ಎಂ.ಪೂರ್ಣೇಶ್, ಕಾರ್ಯದರ್ಶಿ ಎಸ್. ಅಪ್ಪಾದೊರೈ, ಕೋಶಾಧಿಕಾರಿ ಹಂಸಿನಿ, ವಿವಿಧ ಕಂಪನಿಗಳ ಎನ್. ವಿಶ್ವನಾಥ್, ವಿಕ್ರಂ ಖುರಾನಾ, ಶ್ರೀಕಾಂತ್ ಅವರು ಚಾಲನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಏ.27ರವರೆಗೆ 15 ಕಾರ್ಯಾಗಾರಗಳು ನಡೆಯಲಿವೆ. ಕಾಫಿ ಉತ್ಸವಕ್ಕೆ ಶುಲ್ಕ ನಿಗದಿಪಡಿಸಲಾಗಿದೆ.



'ಕಸ್ಕಾರ' ಕಾಫಿಯನ್ನು ಎಸ್‌ಸಿಐ ಕಂಪನಿಯ ಮಳಿಗೆಯಲ್ಲಿ ನೀಡುತ್ತಿರುವುದು ಪ್ರಜಾವಾಣಿ ಚಿತ್ರ



ಕಾಫಿ ಉತ್ಪನ್ನ, ಸಂರಕ್ಷಣೆಯ ಯಂತ್ರಗಳ ವಿವರವನ್ನು ಮಳಿಗೆಯ ಸಿಬ್ಬಂದಿ ಜನರಿಗೆ ವಿವರಿಸಿದರು ಪ್ರಜಾವಾಣಿ ಚಿತ್ರ



ವಿವಿಧ ಫ್ಲೇವರ್‌ಗಳ ಸಿರಪ್‌ಗಳನ್ನು ಉತ್ಸವದಲ್ಲಿ ಆಕರ್ಷಕವಾಗಿ ಜೋಡಿಸಿಡಲಾಗಿತ್ತು



ಕಾಫಿ ಉತ್ಪನ್ನಗಳನ್ನು ವೀಕ್ಷಿಸುತ್ತಿರುವ ಕಾಫಿಪ್ರಿಯರು

ವಿಸ್ಕಿ ಫ್ಲೇವರ್

ಬಾಗ್ಮನೆ, ಕೃಷ್ಣಗಿರಿ, ಬೈನೆಕೆರೆ, ಅಲಲ್‌ಗಂಡಿ ಸಹಿತ ವಿವಿಧ ಕಾಫಿ ಬೆಳೆಗಾರರು ಸೇರಿ ಚಂದ್ರದ್ರೋಣ ಸಂಘ ಕಟ್ಟಿದ್ದು, ಈ ಸಂಘದ ಮಳಿಗೆಯಲ್ಲಿ ವಿಸ್ಕಿ ಫ್ಲೇವರ್ ಕಾಫಿ ಗಮನಸೆಳೆಯಿತು. ಎ, ಎಎ, ಎಎಎ, ಬಿ ಸಹಿತ ವಿವಿಧ ದರ್ಜೆಯ ಕಾಫಿ ಬೀಜಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಅದರಲ್ಲಿ 'ವಿಸ್ಕಿ ಫ್ಲೇವರ್' ಕಾಫಿ ಬೀಜಗಳನ್ನು ಜನರು ಕುತೂಹಲದಿಂದ ವೀಕ್ಷಿಸಿದರು. ವಿಸ್ಕಿಯಲ್ಲಿ ಮೂರು ತಿಂಗಳು ಹಾಕಿ ಇಟ್ಟು, ಈ ಫ್ಲೇವರ್ ತಯಾರಿಸಲಾಗಿದೆ ಎಂದು ಮಳಿಗೆಯ ಅಶ್ವಿನ್, ಜಗತ್ ವಿವರಿಸಿದರು.

ವೈನ್, ಕಾಫಿ ಸಹಿತ ಎಲ್ಲ ಪಾನೀಯಗಳಿಗೆ ಕಾಫಿ ಸ್ವಾದ, ಬೇರೆ ಸ್ವಾದಗಳ ಸಿರಪ್‌ಗಳನ್ನು ಫ್ಲೇವರ್ ಜೀನಿಯಸ್ ಕಂಪನಿಯು ಪ್ರದರ್ಶನಕ್ಕೆ ಇಟ್ಟಿತ್ತು. ಕಾಫಿ ಪುಡಿ ಮಾಡುವ ಯಂತ್ರಗಳು, ಕಾಫಿ ಸಂರಕ್ಷಿಸಿಡುವ ಯಂತ್ರಗಳು ಗಮನಸೆಳೆದವು.

ಜೆಎನ್‌ಯು ಚುನಾವಣೆ ಶೇ 70ರಷ್ಟು ಮತದಾನ 28ರಂದು ಫಲಿತಾಂಶ

ನವದೆಹಲಿ (ಪಿಟಿಐ): ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) 2024–25ನೇ ಸಾಲಿನ ವಿದ್ಯಾರ್ಥಿ ಸಂಘದ ಚುನಾವಣೆ ಮುಗಿದಿದ್ದು, ಶೇ 70ರಷ್ಟು ಮತದಾನವಾಗಿದೆ.

ಜೆಎನ್‌ಯು ವಿದ್ಯಾರ್ಥಿ ಸಂಘದ ಚುನಾವಣಾ ಸಮಿತಿ ಪ್ರಕಾರ ಶೇ 69.6ರಷ್ಟು ವಿದ್ಯಾರ್ಥಿಗಳು ಹಕ್ಕು ಚಲಾಯಿಸಿದರು. 2023ರಲ್ಲಿ ಶೇ 73ರಷ್ಟು ಮತದಾನವಾಗಿತ್ತು.

7,906 ವಿದ್ಯಾರ್ಥಿಗಳಲ್ಲಿ 5,500 ವಿದ್ಯಾರ್ಥಿಗಳು ಮತದಾನಕ್ಕೆ ಅರ್ಹರಾಗಿದ್ದರು. ಒಟ್ಟು 42 ಕೌನ್ಸಿಲರ್ ಸ್ಥಾನಗಳಿಗೆ 200 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಮತಎಣಿಕೆ ಪ್ರಕ್ರಿಯೆಯು ಶುಕ್ರವಾರ ರಾತ್ರಿ ಆರಂಭವಾಗಿದೆ. ಕೌನ್ಸೆಲರ್‌ಗಳ ಸ್ಥಾನದ ಫಲಿತಾಂಶ ಮೊದಲಿಗೆ ಪ್ರಕಟವಾಗಲಿದೆ. ಅಂತಿಮ ಫಲಿತಾಂಶ ಸೋಮವಾರ, ಏ. 28ರಂದು ಹೊರಬೀಳುವ ಸಂಭವವಿದೆ.



ನಮನ... ಪಹಲ್ಗಾಮ್ ಹುತಾತ್ಮರ ಸ್ಮರಣಾರ್ಥ ಮೇಣದಬತ್ತಿ ಬೆಳಗಿದ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿ, ಅಧ್ಯಕ್ಷ ಎ.ಅಮೃತ್‌ರಾಜ್ ನೇತೃತ್ವದಲ್ಲಿ ಮೌನಾಚರಣೆ ಮಾಡಿದರು

ಉಗ್ರರ ಕೃತ್ಯ ಖಂಡಿಸಿ ಮುಸ್ಲಿಮರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಭಾರತದ ಸಾರ್ವಭೌಮತೆಯ ಸಂಕೇತ, ಭೂಲೋಕದ ಸ್ವರ್ಗ ಎಂದೇ ಬಿಂಬಿಸಲಾಗುವ ಕಾಶ್ಮೀರದಲ್ಲಿ ಭಯೋತ್ಪಾದಕರು ನಡೆಸಿದ ಪೈಶಾಚಿಕ ಕೃತ್ಯ ಇಡೀ ಮನುಕುಲವೇ ನಾಚಿ ತಲೆತಗ್ಗಿಸಬೇಕಾದ ಸಂಗತಿ' ಎಂದು ಅಖಿಲ ಕರ್ನಾಟಕ ಮಹಮ್ಮದೀಯರ ಕನ್ನಡ ವೇದಿಕೆಯ ಅಧ್ಯಕ್ಷ ಸಮಿ ಉಲ್ಲಾಖಾನ್ ಹೇಳಿದರು.

ಮತ್ತಿಕೆರೆಯ ಮಸ್ಜಿದ್-ಎ-ತಾಹ ಮುಂಭಾಗ ನೂರಾರು ಮುಸ್ಲಿಮರು ಕಾಶ್ಮೀರ ಉಗ್ರರ ದಾಳಿ ಖಂಡಿಸಿ ಪ್ರತಿಭಟಿಸಿದರು.

'ಧರ್ಮ ಶಾಂತಿ, ಸೌಹಾರ್ದದ ಸಂಕೇತ. ಧರ್ಮದಲ್ಲಿ ನಿಜವಾದ ನಂಬಿಕೆ ಇರುವ ವ್ಯಕ್ತಿ ಇಂಥ ನೀಚ, ಕ್ರೌರ್ಯದ ಕೆಲಸ ಮಾಡಲಾರ. ಘಟನೆಗೆ ಕಾರಣವಾದ ವೈಫಲ್ಯಗಳ ಬಗ್ಗೆ ಸೂಕ್ತ ತನಿಖೆಯಾಗಬೇಕು. ಯಾರೇ ತಪ್ಪು ಮಾಡಿದರೂ ಬಿಡಬಾರದು. ಇಲ್ಲಿ ನಾವೆಲ್ಲರೂ ಭಾರತೀಯರು, ಒಂದೇ ತಾಯಿಯ ಮಕ್ಕಳು. ಮಾನವೀಯತೆ ಸಮಾನತೆಯಿಂದ ಬದುಕಬೇಕು' ಎಂದರು.

ಮಾಜಿ ಸಚಿವ ಆರ್.ರೋಷನ್ ಬೇಗ್ ಮಾತನಾಡಿ, 'ದೇಶದಲ್ಲಿ ಉಗ್ರವಾದ ಚಟುವಟಿಕೆಗಳನ್ನು ಖಂಡಿಸುತ್ತೇನೆ. ಯಾವುದೇ ಜಾತಿ, ಧರ್ಮದವರೇ ಆಗಲಿ ಹೆಂಡತಿ, ಮಕ್ಕಳ ಎದುರು ಕೊಲ್ಲುವುದು ಹೇಯಕೃತ್ಯ. ಉಗ್ರ ಚಟುವಟಿಕೆ ನಡೆಸುವ ದುಷ್ಕರ್ಮಿಗಳಿಗೆ ಸಹಾಯ ಮಾಡುವ ವ್ಯಕ್ತಿಗಳಿಗೂ ಶಿಕ್ಷೆಯಾಗಲೇಬೇಕು' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪತ್ರಕರ್ತ ಬೆಲಗೂರು ಸಮಿವುಲ್ಲಾ, 'ಭಾರತದ ಹೃದಯದ ಮೇಲೆ ಆಗಿರುವ ಗಾಯ ಜಾತಿ, ಧರ್ಮ ಮೀರಿ ಮನುಕೂಲಕ್ಕೆ ಆಗಿರುವ ಅನ್ಯಾಯ. ಯಾರನ್ನಾದರೂ ಕೊಲ್ಲು ಎಂದು ಯಾವ ಧರ್ಮವೂ ಹೇಳುವುದಿಲ್ಲ. ಅಂತಹ ಅನ್ಯಾಯ ನೀಚ, ಪೈಶಾಚಿಕ ಕೃತ್ಯ ನಡೆಸಿದರೂ ಧರ್ಮ ಒಪ್ಪುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಪ್ರಧಾನ ಮಂತ್ರಿ ವಿ.ಪಿ. ಸಿಂಗ್ ಅವರ ರಾಜಕೀಯ ಕಾರ್ಯದರ್ಶಿ ಸೈಯದ್ ಅಶ್ರಫ್, ವಕ್ಫ್ ಮಂಡಳಿ ಉಪಾಧ್ಯಕ್ಷ ಹಫೀಜ್ ಉರ್ ರಹಮಾನ್, ಬೈತುಲ್ ಮಾಲ್ ಅಧ್ಯಕ್ಷ ನಜೀರ್, ಮಸ್ಜಿದ್ ಏ ತಾಹ ಆಡಳಿತ ಮಂಡಳಿಯ ಮುಖ್ಯಸ್ಥರು, ಪದಾಧಿಕಾರಿಗಳು ಭಾಗವಹಿಸಿದ್ದರು.

ಮೃತ ಭರತ್ ಭೂಷಣ್ ಅವರ ಮನೆಗೆ ತೆರಳಿದ ಮುಸ್ಲಿಂ ಮುಖಂಡರು ಸಾಂತ್ವನ ಹೇಳಿದರು.



ಕಾಶ್ಮೀರದಲ್ಲಿ ನಡೆದ ಉಗ್ರರ ಕೃತ್ಯವನ್ನು ಖಂಡಿಸಿ ಮತ್ತಿಕೆರೆ ಮಸೀದಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು

'ಕೇಂದ್ರ, ರಾಜ್ಯದ ತಿಕ್ಕಾಟದಿಂದ ಸಮಸ್ಯೆ ಜೀವಂತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವೆ ಸಮನ್ವಯತೆಯ ಕೊರತೆಯಿಂದಾಗಿ ತೆರಿಗೆ, ಕುಡಿಯುವ ನೀರಿನ ಹಂಚಿಕೆಯೂ ತಿಕ್ಕಾಟಕ್ಕೆ ಕಾರಣವಾಗಿದೆ' ಎಂದು ರಾಜ್ಯಸಭೆ ಮಾಜಿ ಸದಸ್ಯ ಎಲ್. ಹನುಮಂತಯ್ಯ ಬೇಸರ ವ್ಯಕ್ತಪಡಿಸಿದರು.

ಕನ್ನಡ ಗೆಳೆಯರ ಬಳಗ ಮತ್ತು ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕನ್ನಡ ಚಿಂತನೆ ಮತ್ತು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವರಿಗೆ ಅಭಿನಂದನೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ತೆರಿಗೆಯನ್ನು ನೀಡುವ ರಾಜ್ಯಗಳೇ ಬೇರೆ, ಅದರ ಫಲ ಪಡೆಯುವ ರಾಜ್ಯಗಳೇ ಬೇರೆಯಾಗಿವೆ. ಇದು ಯಾವುದೇ ರಾಜ್ಯದ, ಪ್ರಜೆಯ ಅಸಮಾಧಾನಕ್ಕೆ ಕಾರಣವಾಗುತ್ತದೆ. ನೀರಾವರಿಗೆ ಸಂಬಂಧಿಸಿದ ಸಂಘರ್ಷಗಳೂ ಬಗೆಹರಿಯದಿರಲೂ ಕೇಂದ್ರ ಮತ್ತು ರಾಜ್ಯದ ನಡುವಿನ ತಿಕ್ಕಾಟವೇ ಕಾರಣ' ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮನು ಬಳಿಗಾರ್, 'ಭಾಷೆ, ಉದ್ಯೋಗ, ನೀರು ಸೇರಿ ಎಲ್ಲಕ್ಕೂ ಕನ್ನಡಿಗರು ಹೋರಾಟ ಮಾಡುವ ಪರಿಸ್ಥಿತಿ ಬಂದಿದೆ. ರಾಜ್ಯದ ಸಂಸದರಿಗೆ ಜಾತಿ ಮುಖ್ಯವಾಗಿದೆ, ರಾಜ್ಯ ಮುಖ್ಯವಾಗಿಲ್ಲ' ಎಂದು ಹೇಳಿದರು.

ಕನ್ನಡ ಪರ ಹೋರಾಟಗಾರ ಸ.ರ. ಸುದರ್ಶನ್, 'ಕನ್ನಡಿಗರಿಗೆ ರಾಜ್ಯದಲ್ಲಿ ಉದ್ಯೋಗ ಲಭಿಸಬೇಕು. ಗೋಕಾಕ್ ಚಳವಳಿ ಬಳಿಕ ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಲಭಿಸುವಂತಾಯಿತು. ಆಂಗ್ಲ ಭಾಷೆಯ ನಾಮಫಲಕ ಎಲ್ಲೆಡೆ ರಾರಾಜಿಸುತ್ತಿದೆ. ನಾಮಫಲಕದಲ್ಲಿ ಕನ್ನಡ ಸಮರ್ಪಕವಾಗಿ ಜಾರಿಯಾಗಬೇಕು' ಎಂದು ಆಗ್ರಹಿಸಿದರು.

ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, 'ಗಡಿ, ಜಲ ಸಮಸ್ಯೆ ಬಂದಾಗ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತದೆ. ತಮಿಳುನಾಡಿನಲ್ಲಿ ಸಂಸದರು ಒಟ್ಟಾಗಿ ಸೇರಿ ಹೋರಾಟ ಮಾಡುತ್ತಾರೆ. ನಮ್ಮ ರಾಜ್ಯದ ಸಂಸದರು ರಾಜ್ಯದ ಬಗ್ಗೆ ಚಿಂತನೆ ಮಾಡದಿರುವುದು ವಿಪರ್ಯಾಸ' ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ್, 'ಕೇಂದ್ರದಲ್ಲಿ ಆಡಳಿತ ನಡೆಸಿದ ಎಲ್ಲ ಪಕ್ಷಗಳು ರಾಜ್ಯಕ್ಕೆ ಅನ್ಯಾಯ ಮಾಡಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ಆರ್. ಪ್ರಭುಶಂಕರ್ ಮತ್ತು ಉಮಾದೇವಿ ದಂಪತಿಯನ್ನು ಅಭಿನಂದಿಸಲಾಯಿತು. ಎಲ್. ಹನುಮಂತಯ್ಯ, ಮನು ಬಳಿಗಾರ್, ಸ.ರ. ಸುದರ್ಶನ್, ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ ಉಪಸ್ಥಿತರಿದ್ದರು

ರಾಷ್ಟ್ರೀಯ ಲಾಂಛನ, ಚಿಹ್ನೆ, ಧ್ವಜಗಳ ದುರ್ಬಳಕೆಗೆ ಆಕ್ಷೇಪ

ಕಟ್ಟುನಿಟ್ಟಿನ ಕ್ರಮಕ್ಕೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಲಾಂಛನಗಳು ಮತ್ತು ರಾಷ್ಟ್ರೀಯ ಚಿಹ್ನೆಗಳನ್ನು ವಿವಿಧ ರೂಪಗಳ ಮುಖಾಂತರ ದುರುಪಯೋಗ ಮಾಡಿಕೊಳ್ಳುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕು' ಎಂದು ಆದೇಶಿಸಿರುವ ಹೈಕೋರ್ಟ್, 'ಈ ದಿಸೆಯಲ್ಲಿ ಅಧಿಕಾರಿಗಳಿಗೆ ಅರಿವು ಮೂಡಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅಗತ್ಯ ನಿಯಮಗಳನ್ನು ರೂಪಿಸಬೇಕು' ಎಂದು ನಿರ್ದೇಶಿಸಿದೆ.

ಈ ಸಂಬಂಧ, 'ಹೈಕೋರ್ಟ್ ಕಾನೂನು ಸೇವೆಗಳ ಸಮಿತಿ'ಯ ಕಾರ್ಯದರ್ಶಿ ಕಾವೇರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅಧಿಕಾರದಲ್ಲಿ ಇಲ್ಲದ ಅಧಿಕಾರಿಗಳು, ಮಾಜಿ ಸಂಸದರು, ಮಾಜಿ ಶಾಸಕರು ತಮ್ಮ ಲೆಟರ್ ಹೆಡ್‌ಗಳಲ್ಲಿ ಮತ್ತು ವಾಹನಗಳ ನಂಬರ್ ಪ್ಲೇಟ್‌ಗಳಲ್ಲಿ; ಲಾಂಛನಗಳು, ಧ್ವಜಗಳು, ಹೆಸರು... ಇತ್ಯಾದಿಗಳನ್ನು ಹಾಕಿಕೊಂಡು ದುರುಪಯೋಗಪಡಿಸಿಕೊಳ್ಳುವ ಪ್ರವೃತ್ತಿ ಹೊಂದಿರುವುದು ದುರದೃಷ್ಟಕರ' ಎಂದು ನ್ಯಾಯಪೀಠ ವಿಷಾದಿಸಿದೆ.

'ರಾಷ್ಟ್ರೀಯ ಗುರುತುಗಳನ್ನು ಅನಧಿಕೃತವಾಗಿ ಸಾರ್ವಜನಿಕ ರಸ್ತೆ ಹಾಗೂ ಸ್ಥಳಗಳಲ್ಲಿ ದುರುಪಯೋಗ ಮಾಡಿಕೊಳ್ಳುವುದನ್ನು ತಡೆಯಲು ಕೇಂದ್ರ ಮತ್ತು ರಾಜ್ಯ ಮೋಟಾರು ವಾಹನ ಕಾಯ್ದೆ ಅಡಿಯಲ್ಲಿನ ನಿಯಮಗಳನ್ನು ಅನ್ವಯಿಸಬೇಕು' ಎಂದು ಸರ್ಕಾರಕ್ಕೆ ತಾಕೀತು ಮಾಡಿದೆ.

'ಎಲ್ಲಾ ರೀತಿಯ ಅನಧಿಕೃತ ಧ್ವಜಗಳು, ಲಾಂಛನಗಳು, ಹೆಸರುಗಳು ಮತ್ತು ಚಿಹ್ನೆಗಳನ್ನು ತೆಗೆದುಹಾಕಲು ಮುದ್ರಣ ಮತ್ತು ದೃಶ್ಯ ಮಾಧ್ಯಮಗಳ ಮೂಲಕ ನೋಟಿಸ್ ಹೊರಡಿಸಬೇಕು. ಅನಧಿಕೃತ ಬಳಕೆಯನ್ನು ನಿಲ್ಲಿಸಲು ನಾಲ್ಕು ವಾರಗಳಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ನಿರ್ದೇಶಿಸಿರುವ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.



'ಐಎಎಫ್ ಅಧಿಕಾರಿ ವಿರುದ್ಧ ಬಲವಂತದ ಕ್ರಮ ಬೇಡ'

'ನಗರದ ರಸ್ತೆಯೊಂದರಲ್ಲಿ ನಡೆದ ಹಲ್ಲೆಗೆ ಸಂಬಂಧಿಸಿದಂತೆ ದಾಖಲಾಗಿರುವ ಕೊಲೆ ಯತ್ನ ಆರೋಪ ಪ್ರಕರಣದಲ್ಲಿ, ಭಾರತೀಯ ವಾಯುಸೇನೆಯ ವಿಂಗ್ ಕಮಾಂಡರ್ ಶೀಲಾದಿತ್ಯ ಬೋಸ್ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

'ನನ್ನ ವಿರುದ್ಧ ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಈ ಕುರಿತಾದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಕೋಲ್ಕತ್ತಾದ ಶೀಲಾದಿತ್ಯ ಬೋಸ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಬೈಯಪ್ಪನಹಳ್ಳಿ ಪೊಲೀಸರು ಬೋಸ್ ವಿರುದ್ಧ ಬಲವಂತದ ಕ್ರಮ ಕೈಗೊಳ್ಳಬಾರದು. ಕಾನೂನು ಪರಿಪಾಲಿಸದೇ ಅರ್ಜಿದಾರರಿಗೆ ವಿಚಾರಣೆಗೆ ಹಾಜರಾಗಲು ಸೂಚಿಸಬಾರದು. ಅರ್ಜಿದಾರರು ತನಿಖೆಗೆ ಸಹಕರಿಸಬೇಕು. ನ್ಯಾಯಾಲಯದ ಅನುಮತಿ ಪಡೆಯದೇ ಸಕ್ಷಮ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬಾರದು' ಎಂದು ನ್ಯಾಯಪೀಠ ತಾಕೀತು ಮಾಡಿದೆ.

ವಿನಯ ಕುಲಕರ್ಣಿ ಜಾಮೀನು ರದ್ದು ಕೋರಿಕೆ ತಿರಸ್ಕೃತ

'ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ 16ನೇ ಆರೋಪಿ ಚಂದ್ರಶೇಖರ ಇಂಡಿ ಅವರಿಗೆ ಮಂಜೂರು ಮಾಡಲಾಗಿದ್ದ ಷರತ್ತುಬದ್ಧ ಜಾಮೀನನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ರದ್ದುಪಡಿಸಿದೆ.

ಜಾಮೀನು ರದ್ದುಪಡಿಸುವಂತೆ ಕೋರಿ ಸಿಬಿಐ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ವಿಚಾರಣೆ ನಡೆಸಿ ಶುಕ್ರವಾರ ಈ ಕುರಿತಂತೆ ಆದೇಶಿಸಿದ್ದಾರೆ.

ಇದೇ ವೇಳೆ 9ನೇ ಆರೋಪಿ ಅಶ್ವತ್ಥ ಮತ್ತು 15ನೇ ಆರೋಪಿ ವಿನಯ ಕುಲಕರ್ಣಿ ಅವರ ಜಾಮೀನನ್ನೂ ರದ್ದುಪಡಿಸುವಂತೆ ಕೋರಿದ್ದ ಅರ್ಜಿಗಳನ್ನು ನ್ಯಾಯಾಧೀಶರು ತಿರಸ್ಕರಿಸಿದ್ದಾರೆ. 'ಶಾಸಕ ವಿನಯ ಕುಲಕರ್ಣಿ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿರುವ ಕಾರಣ ಈ ಸಂಬಂಧ ಸಿಬಿಐ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸುವ ವ್ಯಾಪ್ತಿಯನ್ನು ಈ ನ್ಯಾಯಾಲಯ ಹೊಂದಿಲ್ಲ' ಎಂದು ನ್ಯಾಯಾಧೀಶರು ಆದೇಶದಲ್ಲಿ ತಿಳಿಸಿದ್ದಾರೆ.

ಪ್ರಿಯಕರನ ಕೊಲೆ: ಆರೋಪಿ ದೋಷಮುಕ್ತ

'ಪತ್ನಿಯೊಂದಿಗೆ ಸರಸ ಸಲ್ಲಾಪದಲ್ಲಿ ತೊಡಗಿದ್ದ ಪ್ರಿಯಕರನನ್ನು, ಮಂಚದ ಅಡಿ ಅವಿತು ಕುಳಿತು ಸಮಯ ಸಾಧಿಸಿ ಕೊಲೆ ಮಾಡಿದ್ದ' ಎಂಬ ಆರೋಪ ಎದುರಿಸುತ್ತಿದ್ದ ವ್ಯಕ್ತಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ದೋಷಮುಕ್ತಗೊಳಿಸಿದೆ.

ಭರತ್ ಕುಮಾರ್ ದೋಷಮುಕ್ತಗೊಂಡ ಆರೋಪಿ. ಶಿವಕುಮಾರ್ ಎಂಬಾತನನ್ನು 2021ರ ಮಾರ್ಚ್ 24 ರಂದು ರಾತ್ರಿ ಕೊಲೆ ಮಾಡಿದ ಆರೋಪದಡಿ ಭರತ್ ವಿರುದ್ಧ ಕೊಲೆ ಮತ್ತು ಸಾಕ್ಷ್ಯ ನಾಶದ ಆರೋಪದಡಿ ಬ್ಯಾಡರಹಳ್ಳಿ ಠಾಣೆಯ ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಕೆ.ಗುರುಪ್ರಸಾದ್, 'ದೋಷಾರೋಪಣೆ ಸಾಬೀತು ಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ. ಸಾಕ್ಷ್ಯಾಧಾರಗಳ ಕೊರತೆಯ ಕಾರಣ ಆರೋಪಿಯನ್ನು ದೋಷ-ಮುಕ್ತಗೊಳಿಸಲಾಗಿದೆ' ಎಂದು ತೀರ್ಪು ನೀಡಿದ್ದಾರೆ. ಭರತ್ ಕುಮಾರ್ ಪರ ಹೈಕೋರ್ಟ್ ವಕೀಲ ಭದ್ರವಾಡಿ ಸಿದ್ದೇಶ್ವರ ವಾದ ಮಂಡಿಸಿದ್ದರು.

ಗಾಲ್ಫ್: ಮುನ್ನಡೆ ಸಾಧಿಸಿದ ಚೀಮಾ

ಬೆಂಗಳೂರು: ಚಂಡೀಗಢದ ಅಂಗದ್ ಚೀಮಾ ಅವರು ಇಲ್ಲಿ ನಡೆಯುತ್ತಿರುವ ₹2 ಕೋಟಿ ಬಹುಮಾನದ ಕಪಿಲ್ ದೇವ್–ಗ್ರಾಂಟ್ ಥಾರ್ನ್‌ಟನ್ ಆಹ್ವಾನಿತ ಗಾಲ್ಫ್ ಟೂರ್ನಿಯಲ್ಲಿ ಎರಡನೇ ಸುತ್ತಿನ ಬಳಿಕ ಮುನ್ನಡೆ ಸಾಧಿಸಿದ್ದಾರೆ.

ನಗರದ ಹೊರವಲಯದಲ್ಲಿರುವ ಪ್ರೆಸ್ಟೀಜ್ ಗಾಲ್ಫ್‌ಶೈರ್ ಕ್ಲಬ್‌ನಲ್ಲಿ ಟೂರ್ನಿಯ ಎರಡನೇ ದಿನವಾದ ಶುಕ್ರವಾರ ಚೀಮಾ ಅವರು ಎರಡನೇ ಸುತ್ತಿನಲ್ಲಿ ಅತ್ಯುತ್ತಮ ಪ್ರಯತ್ನ ನಡೆಸಿ 64 ಸ್ಕೋರ್ (8 ಅಂಡರ್) ಸಂಪಾದಿಸಿದರು.

ಮೊದಲ ಸುತ್ತಿನಲ್ಲಿ 66 ಸ್ಕೋರ್ ಸಂಪಾದಿಸಿ ನಾಲ್ಕನೇ ಸ್ಥಾನದಲ್ಲಿದ್ದ ಅವರು ಒಟ್ಟು 130 ಅಂಕಗಳೊಡನೆ (14 ಅಂಡರ್) ಅಗ್ರಸ್ಥಾನಕ್ಕೇರಿದ್ದಾರೆ.

ಫರೀದಾಬಾದ್‌ನ ಅಭಿನವ್ ಲೋಹನ್ ಎರಡನೇ ದಿನ 65 ಸ್ಕೋರ್ ಸಂಪಾದಿಸಿದರು. ಒಟ್ಟು 131 ಅಂಕಗಳೊಂದಿಗೆ (13 ಅಂಡರ್) ಎರಡನೇ ಸ್ಥಾನ ಪಡೆದರು. ಕಾಲಿನ್ ಜೋಶಿ (65, 67) ಮೂರನೇ ಸ್ಥಾನದಲ್ಲಿದ್ದಾರೆ.

ಈ ವರ್ಷದ ಪಿಜಿಟಿಐ ವಿಜೇತ ಗ್ರೇಟರ್ ನೋಯ್ಡಾದ ಸಪ್ತಕ್ ತಲ್ವಾರ್ ಶುಕ್ರವಾರ 63 ಸ್ಕೋರ್ ಸಂಪಾದಿಸಿ, ಮೊದಲ ಸುತ್ತಿನಲ್ಲಿ ನೋಯ್ಡಾದ ಗೌರವ್ ಪ್ರತಾಪ್ ಸಿಂಗ್ ನಿರ್ಮಿಸಿದ್ದ ಕೋರ್ಸ್ ದಾಖಲೆಯನ್ನು ಸರಿಗಟ್ಟಿದರು. ಸಪ್ತಕ್ (133) ನಾಲ್ಕನೇ ಸ್ಥಾನ ಗಳಿಸಿದ್ದಾರೆ.

20 ವರ್ಷ ವಯಸ್ಸಿನ ಹಿತಾಶಿ ಬಕ್ಷಿ 10 ಅಂಡರ್‌ಗಳಲ್ಲಿ 134 (69 ಮತ್ತು 65) ಸ್ಕೋರ್ ಗಳಿಸಿ, ಮಹಿಳಾ ವೃತ್ತಿಪರರಲ್ಲಿ ಉನ್ನತ ಸ್ಥಾನ ಪಡೆದರು.

ಟೈಗರ್ ಕಪ್ 16 ವರ್ಷದೊಳಗಿನವರ ಕ್ರಿಕೆಟ್

ಕ್ರಿಕೆಟ್: ಆರ್‌ಸಿಎ ತಂಡಕ್ಕೆ ಗೆಲುವು

ಬೆಂಗಳೂರು: ಮೈಸೂರಿನ ಆರ್‌ಸಿಎ ತಂಡವು ಶುಕ್ರವಾರ ನಡೆದ ಟೈಗರ್ ಕಪ್ 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ 99 ರನ್‌ಗಳಿಂದ ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ ತಂಡವನ್ನು ಮಣಿಸಿತು.

ಜೆಎಸ್‌ಎಸ್‌ಎಟಿಇ– ಕೆಎಸ್‌ಸಿಎ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಎ ತಂಡ ಮೊದಲು ಬ್ಯಾಟಿಂಗ್ ಮಾಡಿ 27 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 262 ರನ್ ಕಲೆ ಹಾಕಿತು. ಆರ್‌ಸಿಎ ತಂಡದ ಚೆರಿಶ್ ಶತಕ (126 ರನ್) ಹೊಡೆದರು. ಯಶವಂತ್ ಗೌಡ 43, ಶಮಂತ್ ರಾವ್ ಜಿ. 30 ರನ್ ಗಳಿಸಿದರು.

ಕಾರ್ತಿಕ್ ಎಂ.ಎಸ್. 38ಕ್ಕೆ 2, ತೇಜಸ್ ಮುಕುಂದ್ 45ಕ್ಕೆ 2 ವಿಕೆಟ್ ಪಡೆದರು. ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ 27 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 163 ರನ್ ಗಳಿಸಿತು. ತಂಡದ ಪರ ಸುಜನ್ ಗುಣಪಾಲ್ 54, ಬೇಯನ್ ಬಾಸ್ಟಿನ್ 20 ರನ್ ಗಳಿಸಿದರು. ಆರ್‌ಸಿಎ ಪರ ಆರವ್ ಆ.ಎಸ್. 34ಕ್ಕೆ 3, ಅಮಿತ್ ಜಿ. ಅಶ್ವಿನ್ 34ಕ್ಕೆ 2 ವಿಕೆಟ್ ಪಡೆದರು.

ಇನ್ನೊಂದು ಪಂದ್ಯದಲ್ಲಿ ಆರ್‌ಎಕ್ಸ್‌ಸಿಎ ತಂಡ 4 ವಿಕೆಟ್‌ಗಳಿಂದ ದಿ ಸ್ಕೂಲ್ ಆಫ್ ಕ್ರಿಕೆಟ್ ತಂಡವನ್ನು ಸೋಲಿಸಿತು. ಅಲ್ಟಿಯೋರ್ ಸ್ಪೋರ್ಟ್ಸ್ ದಿ ಓವಲ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ದಿ ಸ್ಕೂಲ್ ಆಫ್ ಕ್ರಿಕೆಟ್ ತಂಡ 9 ವಿಕೆಟ್‌ಗಳಿಗೆ 140 ರನ್ (30 ಓವರ್) ಕಲೆ ಹಾಕಿತು. ತಂಡದ ಪರ ಅನಿರುದ್ಧ್ ರಾಯಸಾಮ್ (34 ರನ್), ಅಂಜನಿ ಕುಮಾರ್ ಪಿ. (34 ರನ್) ಮಿಂಚಿದರು. ಆರ್‌ಎಕ್ಸ್‌ಸಿಎ ಪರ ಆಯುಷ್ಮಾನ್ ವಾದುಲ್ಲಾ 23ಕ್ಕೆ 3, ಗೌರಿ ಮೇಥಿ 13ಕ್ಕೆ 2 ವಿಕೆಟ್ ಪಡೆದರು. ಆರ್‌ಎಕ್ಸ್‌ಸಿಎ 22.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 141 ರನ್ ಗಳಿಸಿತು. ತಂಡದ ಸಿದ್ಧಾರ್ಥ್ ಸರ್ದಾ (31 ರನ್), ದರ್ಶಿತ್ ಆರ್.ಜೆ. (23 ರನ್), ಕೆವಿನ್ ಸರ್ಫ್ (21 ರನ್) ಉಪಯುಕ್ತ ಕಾಣಿಕೆ ನೀಡಿದರು.

ಹಾಕಿ: ಸೆಮಿಫೈನಲ್‌ಗೆ ನೆಲ್ಲಮಕ್ಕಡ, ಮಂಡೇಪಂಡ

ಮಡಿಕೇರಿ: ನೆಲ್ಲಮಕ್ಕಡ, ಮಂಡೇಪಂಡ, ಚೇಂದಂಡ ಮತ್ತು ಕುಪ್ಪಂಡ ತಂಡಗಳು 'ಮುದ್ದಂಡ ಕಪ್' ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟವು.

ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಂಡೇಪಂಡ ತಂಡವು ಚಂಗಪ್ಪ ಮತ್ತು ಸಜನ್ ಅಚ್ಚಯ್ಯ ಬಾರಿಸಿದ ತಲಾ 2 ಗೋಲುಗಳ ನೆರವಿನಿಂದ 6–0 ಯಿಂದ ಕರವಂಡ ವಿರುದ್ಧ ಭರ್ಜರಿ ಗೆಲುವು ದಾಖಲಿಸಿತು.

ಮಂಡೇಪಂಡ ತಂಡದ ದಿಲನ್ ದೇವಯ್ಯ ಮತ್ತು ಗೌತಮ್ ತಲಾ ಒಂದು ಗೋಲು ಗಳಿಸಿದರು.

ಚೇಂದಂಡ ಮತ್ತು ಚೆಪ್ಪುಡಿರ ತಂಡಗಳು ನಿಗದಿ ಆಟದ ಕೊನೆಗೆ ತಲಾ ಒಂದು ಗೋಲು ಗಳಿಸಿ ಸಮಬಲ ಸಾಧಿಸಿದ್ದವು.

ರೋಚಕ ಟೈ ಬ್ರೇಕರ್‌ನಲ್ಲಿ ಚೇಂದಂಡ 3–2 ರಿಂದ ಗೆದ್ದು ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ಸಚಿನ್ (2) ಹಾಗೂ ವೀಕ್ಷಿತ್ ಸೋಮಯ್ಯ (1) ಗೋಲುಗಳ ಬಲದಿಂದ ನೆಲ್ಲಮಕ್ಕಡ ತಂಡದವರು 3-1 ಅಂತರದಿಂದ ಮೂರು ಬಾರಿಯ ಚಾಂಪಿಯನ್ ಕೂತಂಡ ತಂಡವನ್ನು ಮಣಿಸಿದರು.

ಸೋಮಯ್ಯ ಅವರ 2 ಗೋಲುಗಳು, ಪುದಿಯೊಕ್ಕಡ ತಂಡದ ವಿರುದ್ಧ ಕುಪ್ಪಂಡ ತಂಡವನ್ನು ನಾಲ್ಕರ ಘಟ್ಟ ತಲುಪಿಸಿತು. ಶನಿವಾರ ಬೆಳಿಗ್ಗೆ 11.30ಕ್ಕೆ '5 ಎ ಸೈಡ್' ಮಹಿಳಾ ಹಾಕಿ ಟೂರ್ನಿಯ ಫೈನಲ್ ಪಂದ್ಯ ನಡೆಯಲಿದ್ದು, ಪ್ರಶಸ್ತಿಗಾಗಿ ಕಂಬೀರಂಡ ಮತ್ತು ಕೇಚೆಟ್ಟಿರ ತಂಡಗಳು ಸೆಣಸಲಿವೆ.

ವೇಗವಾಗಿ ಗುರಿಮಟ್ಟಿದ ಕರ್ಣ–ಶರೀಫ್

ಚೆನ್ನೈ (ಪಿಟಿಐ): ಹಾಲಿ ರಾಷ್ಟ್ರೀಯ ಚಾಂಪಿಯನ್ ಕರ್ಣ ಕಡೂರು ಮತ್ತು ಮೂಸಾ ಶರೀಫ್ (ಅರ್ಕ ಮೋಟಾರ್ ಸ್ಪೋರ್ಟ್ಸ್) ಅವರು ಎಫ್‌ಐಎ ಏಷ್ಯಾ ಪೆಸಿಫಿಕ್ ರ‍್ಯಾಲಿ ಚಾಂಪಿಯನ್‌ಷಿಪ್‌ನ ಏಷ್ಯಾ ಕಪ್ ಲೆಗ್‌ನ ಸೂಪರ್ ಸ್ಪೆಷಲ್ ಹಂತವನ್ನು ಅತಿ ವೇಗದ ಅವಧಿಯಲ್ಲಿ ಪೂರೈಸಿದ ಹಿರಿಮೆಗೆ ಪಾತ್ರರಾದರು.

ಮದ್ರಾಸ್ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ಶುಕ್ರವಾರ ಈ ರೇಸ್ ಆರಂಭವಾಯಿತು.

ಬೆಂಗಳೂರಿನ ಕರ್ಣ ಮತ್ತು ಕೇರಳದ ಅನುಭವಿ ಸಹ ಚಾಲಕ ಮೂಸಾ ಶರೀಫ್ ಅವರು 1.45 ಕಿ.ಮೀ. ದೂರ ಕಚ್ಚಾ ರಸ್ತೆಯ ಎರಡು ಲೂಪ್‌ಗಳ ದೂರವನ್ನು ಒಟ್ಟು 2ನಿ.50.9 ಸೆ.ಗಳ ಅವಧಿಯಲ್ಲಿ ಮುಗಿಸಿದರು.

ಅಮಿತ್ರಾಜಿತ್ ಘೋಷ್ ಮತ್ತು ಸಹ ಚಾಲಕ ಅಶ್ವಿನ್ ನಾಯಕ್ (ಮಂಗಳೂರು) ಅವರು ಮೊದಲ ಲ್ಯಾಪ್ ನಂತರ ಮುನ್ನಡೆ ಸಾಧಿಸಿದರೂ, ನಂತರ ಕರ್ಣ ಮಿಂಚಿನ ವೇಗ ಸಾಧಿಸಿದ ಮುನ್ನಡೆದರು.

ಎಫ್‌ಸಿ ಡೆಕ್ಕನ್ ತಂಡಕ್ಕೆ ಗೆಲುವು

ಬೆಂಗಳೂರು: ಎಫ್‌ಸಿ ಡೆಕ್ಕನ್ ತಂಡ ಬಿಡಿಎಫ್‌ಎ ಎ ಡಿವಿಷನ್ ಲೀಗ್ ಪಂದ್ಯದಲ್ಲಿ ಶುಕ್ರವಾರ ಶ್ರೀ ಗಜಾನನ ಎಫ್‌ಸಿ ವಿರುದ್ಧ 4–1 ಗೋಲುಗಳಿಂದ ಜಯ ಪಡೆಯಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಫ್‌ಸಿ ಡೆಕ್ಕನ್ ಪರ ಶಾಯಿನ್ ಪಿ. (49ನೇ ನಿ.), ಗಂಗಾಂಗ್ ಲುಂಗ್ ಗಾಂಗ್‌ಮೆಯಿ (58ನೇ ನಿ.), ವಿನಯ್ ಎಂ. (79ನೇ ನಿ.), ಹಿಜಾಮ್ ಸಂತೋಯಿ ಸಿಂಗ್ (82ನೇ ನಿ.) ಗೋಲು ಗಳಿಸಿದರು. ಗಜಾನನ ಪರ ನಾಗರಾಜನ್ ಶಕ್ತಿವೇಲ್ (13ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಸ್ನೈಪರ್ಸ್ ಎಫ್‌ಸಿ (ಕೆಎಸ್‌ಎಫ್‌ಎ) ತಂಡ 5–3 ಗೋಲುಗಳಿಂದ ಬ್ಲಿಟ್ಜ್ ಎಫ್‌ಸಿ ತಂಡವನ್ನು ಮಣಿಸಿತು. ಸ್ನೈಪರ್ಸ್ ಎಫ್‌ಸಿ ಪರ ಅಭಿಲ್ ಎ ತಣಗಟ್ಟಿಲ್ (45ನೇ ನಿ.), ಶಾಹಿಲ್ ವಿಪಿ (45 + 2ನೇ ನಿ.), ಪ್ರಣವ್ ಎಸ್. (44ನೇ ನಿ.), ಅಮಲ್ ಸುರೇಶ್ (47ನೇ ನಿ.), ನಿಖಿಲ್ ಮೆನನ್ (63ನೇ ನಿ.) ಗೋಲು ಬಾರಿಸಿದರು. ಬ್ಲಿಟ್ಜ್ ತಂಡದ ಪರ ತೆನ್ಜಿನ್ ವೊಸೆರ್ (41ನೇ ನಿ.) ಮತ್ತು ಮೃಣಾಲ್ ಗೌಡ (58 ನೇ ನಿ. ಮತ್ತು 78ನೇ ನಿ.) ಗೋಲು ಬಾರಿಸಿದರು.

'ಅಕ್ಷಯ ತೃತೀಯ ಆಚರಣೆ' ವಿಶೇಷ ಅಭಿಯಾನ

ಸಮೃದ್ಧಿಯ ಭರವಸೆ GRT ಜ್ಯುವೆಲರ್ಸ್

ಬೆಂಗಳೂರು: ಆಭರಣ ಉದ್ಯಮದ ವಿಶ್ವಾಸಾರ್ಹ ಸಂಸ್ಥೆ GRT ಜ್ಯುವೆಲರ್ಸ್, ತನ್ನ ಆರು ದಶಕಗಳ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲು ಅಕ್ಷಯ ತೃತೀಯ ಹಬ್ಬದ ಸಂದರ್ಭದಲ್ಲಿ 'ಅಕ್ಷಯ ತೃತೀಯ ಆಚರಣೆ' ಎಂಬ ವಿಶೇಷ ಅಭಿಯಾನವನ್ನು ಆರಂಭಿಸುತ್ತಿದೆ.

ಈ ಅಭಿಯಾನವನ್ನು ತಮಿಳುನಾಡು ಮತ್ತು ಪಾಂಡಿಚೇರಿಯಲ್ಲಿ 'ಅಕ್ಷಯ ತೃತೀಯ ಕೊಂಡಾಟ್ಟಂ', ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ 'ಅಕ್ಷಯ ತೃತೀಯ ವೇದಗಳು' ಹಾಗೂ ಕರ್ನಾಟಕದಲ್ಲಿ 'ಅಕ್ಷಯ ತೃತೀಯ ಸಂಭ್ರಮ' ಎಂದು ಕರೆಯಲಾಗುತ್ತದೆ.

ಹಬ್ಬದ ಆಚರಣೆ ಅಂಗವಾಗಿ ಜಿಆರ್‌ಟಿ ಜ್ಯುವೆಲರ್ಸ್ ಚಿನ್ನಾಭರಣ ಖರೀದಿ ಮೇಲೆ ಪ್ರತಿ ಗ್ರಾಂಗೆ ₹20 ರಿಯಾಯಿತಿ. ಹಳೆ ಆಭರಣ ವಿನಿಮಯದ ಮೇಲೆ ಪ್ರತಿ ಗ್ರಾಂಗೆ ₹75 ಹೆಚ್ಚುವರಿ ಹಾಗೂ ವಜ್ರದ ಮೌಲ್ಯದ ಮೇಲೆ ಪ್ರತಿ ಕ್ಯಾರೆಟ್‌ಗೆ ₹12,500 ರಿಯಾಯಿತಿ ಸೇರಿದಂತೆ ಆರು ವಿಶೇಷ ಕೊಡುಗೆಗಳನ್ನು ಪ್ರಸ್ತುತಪಡಿಸುತ್ತಲಿದೆ. ಹೆಚ್ಚುವರಿ ಕೊಡುಗೆಗಳಲ್ಲಿ ಅನ್‌ಕಟ್ ಡೈಮಂಡ್ ಮೌಲ್ಯದ ಮೇಲೆ 10% ರಿಯಾಯಿತಿ, ಬೆಳ್ಳಿ ವಸ್ತುಗಳು ಮತ್ತು ಕಾಲ್ಚೆಜ್ಜೆಗಳ ಮೇಕಿಂಗ್ ಚಾರ್ಜಸ್ ಮೇಲೆ 25% ರಿಯಾಯಿತಿ ಹಾಗೂ ಬೆಳ್ಳಿ ಆಭರಣಗಳ ಎಂಆರ್‌ಪಿಯಲ್ಲಿ 10% ರಿಯಾಯಿತಿ ಘೋಷಿಸಿದೆ.



ಜಿಆರ್‌ಟಿ ಜ್ಯುವೆಲರ್ಸ್ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತಪದ್ಮನಾಭನ್ ಅವರು ಮಾತನಾಡಿ, ಅಕ್ಷಯ ತೃತೀಯದಂದು ಚಿನ್ನ ಖರೀದಿಸುವುದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಮಂಗಳಕರ ಸಂಪ್ರದಾಯವಾಗಿದೆ. ಈ ಶುಭ ದಿನದಂದು ನಮ್ಮ ಅನೇಕ ಗ್ರಾಹಕರು ಚಿನ್ನದ ನಾಣ್ಯಗಳನ್ನು ಖರೀದಿಸುವ ಇಚ್ಛೆ ವ್ಯಕ್ತಪಡಿಸುವುದರಿಂದ, ಅದನ್ನು ಗೌರವಿಸುವ ಸಲುವಾಗಿ ಚಿನ್ನದ ನಾಣ್ಯ ಖರೀದಿ ಮೇಲೆ ವೇಸ್ಟೇಜ್ ಶುಲ್ಕವನ್ನು ಶೂನ್ಯ ಮಾಡಿದ್ದೇವೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಪ್ರೋತ್ಸಾಹಿಸುತ್ತೇನೆ. ಶ್ರೀ ಲಕ್ಷ್ಮೀ ದೇವಿ ಸಮೃದ್ಧಿ ಮತ್ತು ಸಂತೋಷ ದಯಪಾಲಿಸಲೆಂದು ಕೋರಿಕೊಳ್ಳುತ್ತೇನೆ ಎಂದರು.

ಮತ್ತೊಬ್ಬ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್ ಮಾತನಾಡಿ, 'ನಮ್ಮ 60 ವರ್ಷಗಳ ಶ್ರೇಷ್ಠ ಪರಂಪರೆಯನ್ನು ಮುಂದುವರಿಸುತ್ತಾ, ಈ ವಿಶೇಷ ಅಭಿಯಾನ ಪ್ರಸ್ತುತ-ಪಡಿಸಲು ಹೆಮ್ಮೆ ಪಡುತ್ತೇವೆ. ಈ ವರ್ಷ ಅಕ್ಷಯ ತೃತೀಯ ಬುಧವಾರ ಬರುವುದರಿಂದ ನಾವು ಆ ದಿನವನ್ನು ಸಮೃದ್ಧಿ ಮತ್ತು ಪರಿಪೂರ್ಣ ಸಮಯದ ವಿಶಿಷ್ಟ ಜೋಡಣೆ ಎಂದು ನೋಡುತ್ತೇವೆ. ದಕ್ಷಿಣ ಭಾರತದಲ್ಲಿ 62 ಮತ್ತು ಸಿಂಗಾಪುರದಲ್ಲಿ ಒಂದು ಮಳಿಗೆ ಸೇರಿದಂತೆ 63 ಶಾಖೆಗಳಲ್ಲಿ ತನ್ನ ಗ್ರಾಹಕರ ವಿಶ್ವಾಸ ಗಳಿಸಿರುವ ನಾವು. ಜಿಆರ್‌ಟಿ ಜ್ಯುವೆಲರ್ಸ್‌ನಲ್ಲಿ ಮನಸ್ಸನ್ನು ಸೂರೆಗೊಳ್ಳುವ ಹಬ್ಬಗಳಲ್ಲಿ ಗ್ರಾಹಕರು ಸೇರಲು ಆಹ್ವಾನಿಸುತ್ತೇವೆ' ಎಂದು ಹೇಳಿದರು.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್



ಗರ್ಭಾವಸ್ಥೆಯ ಸಮಯದಲ್ಲಿ ಪತಿಗಿಷ್ಟು ಸಲಹೆಗಳು

ಡಾ. ಆರ್. ನಾಗವೇಣಿ

ಕಾಳಜಿ

ಗರ್ಭಾವಸ್ಥೆಯೆಂಬುದು ಕೇವಲ ಹೆಣ್ಣಿಗೆ ಮಾತ್ರ ಸಂಬಂಧಿಸಿದ್ದಲ್ಲ. ಇದು ಗಂಡ-ಹೆಂಡತಿಯ ಸುಂದರವಾದ ಪಯಣ. ದೈಹಿಕ ಹಾಗೂ ಮಾನಸಿಕವಾಗಿ ಒತ್ತಡದಿಂದ ಬಳಲುತ್ತಿರುವ ಗರ್ಭಿಣಿ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳುವ ಮೂಲಕ ಒತ್ತಡ ನಿವಾರಣೆಗೆ ಪತಿಯಾದವನು ಸಹಕರಿಸಬೇಕು. ಆರೋಗ್ಯ ಜೀವನಶೈಲಿ ಅಳವಡಿಸಿಕೊಳ್ಳಲು ಸಹಾಯ ಮಾಡಬೇಕು. ಪ್ರತಿ ಕ್ಷಣವು ಗಂಡನ ಇರುವಿಕೆಯನ್ನು ಆಕೆ ಪ್ರೀತಿಸುವಂತಾದರೆ, ಇಬ್ಬರ ನಡುವಿನ ಭಾವನಾತ್ಮಕ ಸಂಬಂಧ ಗಟ್ಟಿಗೊಳ್ಳುತ್ತದೆ. ಆಕೆ ಗಟ್ಟಿಗೊಂಡಷ್ಟೂ ಆಕೆಗೂ, ಮಗುವಿಗೂ ಒಳ್ಳೆಯದಾಗುತ್ತದೆ.

ಗರ್ಭಾವಸ್ಥೆಯಲ್ಲಿ ಪತಿಯು ತನ್ನ ಪತ್ನಿಗೆ ನೀಡಬಹುದಾದ ದೊಡ್ಡ ಬೆಂಬಲವೆಂದರೆ ಅದು ಭಾವನಾತ್ಮಕ ಬೆಂಬಲ. ಗರ್ಭಾವಸ್ಥೆಯಲ್ಲಿ ದೈಹಿಕ ಅಸ್ವಸ್ಥತೆ ಮತ್ತು ಭಾವನಾತ್ಮಕ ಏರಿಳಿತಗಳು ಬಹಳ ಸಾಮಾನ್ಯ. ಈ ಸಂದರ್ಭದಲ್ಲಿ ಸಂಗಾತಿಯು ಶಾಂತವಾಗಿದ್ದುಕೊಂಡು ಬೆಂಬಲ ನೀಡುವುದರಿಂದ ಇಂಥ ಸಮಯದಲ್ಲಿ ಉಂಟಾಗುವ ಖಿನ್ನತೆ ಮತ್ತು ಆತಂಕ ದೂರಾಗುತ್ತದೆ. ಜತೆಗೆ ನಿದ್ರೆಯ ಗುಣಮಟ್ಟ ಮತ್ತು ಮನಸ್ಥಿತಿಯೂ ಉತ್ತಮಗೊಳ್ಳುತ್ತದೆ.

ಪ್ರಸವಪೂರ್ವ ತಪಾಸಣೆಗಳಿಗೆ ವೈದ್ಯರ ಬಳಿ ಹೋಗುವಾಗ ಪತ್ನಿಯ ಜೊತೆ ಪತಿಯೂ ಹೋಗಬೇಕು. ಅದರಿಂದ ಮಗುವಿನ ಬೆಳವಣಿಗೆಯ ಕುರಿತು ತಿಳಿಯಲು, ಗರ್ಭಿಣಿಯ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಹೆಂಡತಿಗೆ ಭದ್ರತಾಭಾವ ಬರುತ್ತದೆ. ಗರ್ಭಾವಸ್ಥೆಯ ಉದ್ದಕ್ಕೂ ಪತ್ನಿಯ ಜೊತೆಗೆ ಇರುವುದರಿಂದ ಬಾಂಧವ್ಯ ಹೆಚ್ಚುತ್ತದೆ. ಪರಸ್ಪರ ನಿರ್ಧಾರ ತೆಗೆದುಕೊಳ್ಳಲು ಸಹಾಯವಾಗುತ್ತದೆ.

ಆರೋಗ್ಯಕರ ಜೀವನ ಶೈಲಿ ಪಾಲಿಸುವ ವಿಚಾರದಲ್ಲಿ ಗಂಡನ ಪಾತ್ರ ಮಹತ್ವದ್ದು. ಈ ಅವಧಿಯಲ್ಲಿ ಇಬ್ಬರೂ ಪೌಷ್ಟಿಕ ಆಹಾರವನ್ನು ಸೇವಿಸಬೇಕು. ನಿಯಮಿತವಾಗಿ ವ್ಯಾಯಾಮ ಮಾಡಬೇಕು. ಧೂಮಪಾನ ಅಥವಾ ಮದ್ಯಪಾನವನ್ನು ತಪ್ಪಿಸಬೇಕು. ಆಗ ಉತ್ತಮ ವಾತಾವರಣ ಏರ್ಪಡುತ್ತದೆ. ಗಂಡನು ಮಾದರಿಯಾಗಿ ನಡೆದುಕೊಂಡರೆ, ಗರ್ಭಿಣಿಯೂ ಆರೋಗ್ಯಕರ ಅಭ್ಯಾಸಗಳನ್ನು ಪಾಲಿಸುತ್ತಾಳೆ.

ಮಗು ಗರ್ಭದಲ್ಲಿ ಇರುವಾಗಲೇ ತಂದೆ ತನ್ನ ಮಗುವಿನ ಜೊತೆ ಬಾಂಧವ್ಯವನ್ನು ಹೊಂದಬಹುದು. ಸಂಶೋಧನೆಯ ಪ್ರಕಾರ ಗರ್ಭದೊಳಗೆ ಇರುವ ಮಗು ಹೊರಗಿನ ಧ್ವನಿ ಮತ್ತು ಶಬ್ದಗಳಿಗೆ ಪ್ರತಿಕ್ರಿಯಿಸುತ್ತದೆ. ಮಗುವಿನ ಜೊತೆಗೆ ಮಾತನಾಡುವ ಮೂಲಕ, ಓದುವ ಮೂಲಕ ಅಥವಾ ಹಾಡುವ ಮೂಲಕ ಭಾವನಾತ್ಮಕವಾಗಿಯೂ ಗಟ್ಟಿಯಾಗಬಹುದು.

ಪತ್ನಿಗೆ ದೈನಂದಿನ ಕೆಲಸಗಳಲ್ಲಿ ಸಹಾಯ ಮಾಡುವುದರಿಂದ ದೊಡ್ಡ ವ್ಯತ್ಯಾಸವನ್ನು ಉಂಟು ಮಾಡಬಹುದು. ಮನೆಯ ಕೆಲಸ, ಊಟದ ಸಿದ್ಧತೆಯಲ್ಲಿ ಸಹಾಯ ಮಾಡಬಹುದು. ಪದೇ ಪದೇ ವಿಶ್ರಾಂತಿ ತೆಗೆದುಕೊಳ್ಳಲು ಪ್ರೋತ್ಸಾಹಿಸಬಹುದು. ಇದರಿಂದ ಯಾವುದೇ ಅಸಮಾಧಾನವಿಲ್ಲದೆ ವೈದ್ಯಕೀಯ ಸಲಹೆಯನ್ನು ಪಾಲಿಸುವುದು ಗರ್ಭಿಣಿಗೆ ಸಾಧ್ಯವಾಗುತ್ತದೆ. ಈ ಸಮಯದಲ್ಲಿ ಗಂಡನ ಜವಾಬ್ದಾರಿ ಬಹಳ ದೊಡ್ಡದಿದೆ. ಪ್ರತಿ ಹಂತದಲ್ಲಿಯೂ ಪತ್ನಿಯ ಜೊತೆಗೇ ಇದ್ದಾಗ ತಾಯಿ ಮತ್ತು ಮಗುವಿಗೆ ಹೆಚ್ಚು ಬೆಂಬಲ ದೊರೆಯುತ್ತದೆ. ಮುಂದಿನ ಹಂತಕ್ಕೆ ತಾಯಿ ಮತ್ತು ಮಗು ಸಿದ್ಧರಾಗಲು ನೆರವಾಗುತ್ತದೆ. ಗರ್ಭಾವಸ್ಥೆಯೆಂಬುದು ಎಂದಿಗೂ ಹೊರೆಯಲ್ಲ. ಅದು ಬದುಕಿನಲ್ಲಿ ಬರುವ ಚಂದದ ಅನುಭವ. ಆ ಅನುಭವವನ್ನು ಇನ್ನಷ್ಟು ಚಂದವಾಗಿ ಸವಿಯಲು ಸದಾ ಪ್ರೀತಿ ಕೊಡುವ ಗಂಡ ಜತೆಗಿರಬೇಕು. ❖

ಪವಿತ್ರಾ ಭಟ್

ಈ ಅಕ್ಷಯ ತೃತೀಯದಂದು ಉಳಿಕೆಯೆಲ್ಲವೂ ಹೂಡಿಕೆಯಾಗಲಿ, ಹೂಡಿಕೆ ಅಕ್ಷಯವಾಗಲಿ, ಅದಕ್ಕಾಗಿ ಮಾಹಿತಿ ಇಲ್ಲಿದೆ...



ಸಣ್ಣ ಉಳಿತಾಯ.. ಸುಭದ್ರ ಜೀವನ

ಆರು ಕಾಸಿದ್ದರೂ ಎರಡು ಕಾಸು ಉಳಿಸಿ ಸಂಸಾರ ಮಾಡುವ ಚಾಲಾಕುತನ ಹೆಣ್ಣುಮಕ್ಕಳದ್ದು. ಇದ್ದ ಹಣದಲ್ಲಿ ಮನೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಜವಾಬ್ದಾರಿ ಮೊದಲಿನಿಂದಲೂ ಹೆಣ್ಣಿನ ಹೆಗಲಿಗೆ ಇದೇ. ಸಾಸಿವೆ ಡಬ್ಬಿಯಿಂದಲೋ, ಟೀ ಪುಡಿ ಡಬ್ಬಿಯಿಂದಲೂ ತಿಂಗಳ ಖರ್ಚಿನಲ್ಲಿ ಅಷ್ಟೋ ಇಷ್ಟೋ ಉಳಿಸಿ ಬಚ್ಚಿಡುವುದು ರೂಢಿ. ಅದು ಕೆಲವೊಮ್ಮೆ ಆಪತ್ ಧನವೂ ಆಗಿ ನೆರವಾಗಿರುತ್ತದೆ. ಈಗ ಕಾಲ ಬದಲಾಗಿದೆ, ಹೆಣ್ಣುಮಕ್ಕಳೂ ತಮ್ಮ ಸ್ವಂತ ದುಡಿಮೆ ಮಾಡುತ್ತಾರೆ, ತಿಂಗಳಿನಲ್ಲಿ ಅಲ್ಲ ಸ್ವಲ್ಪ ಉಳಿಸಿ ಮನೆ, ಸಂಸಾರ ನಿಭಾಯಿಸುತ್ತಾರೆ. ಭವಿಷ್ಯಕ್ಕಾಗಿ ಕೂಡಿಡುತ್ತಾರೆ. ಕಾಲಕ್ಕೆ ತಕ್ಕಂತೆ ಹಣ ಉಳಿತಾಯದ ಹಾದಿ ಕೂಡ ಕೊಂಚ ಭಿನ್ನವಾಗಿದೆ. ಬ್ಯಾಂಕುಗಳಲ್ಲಿ ಡಿಪಾಸಿಟ್, ಚೀಟಿ ಕಟ್ಟುವುದು, ಚಿನ್ನ, ಆಸ್ತಿ ಖರೀದಿಸುವುದು, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಹೀಗೆ ಉಳಿತಾಯದ ಹಾದಿ ಬೃಹದಾಕಾರವಾಗಿದೆ. ಇವೆಲ್ಲವನ್ನು ಹೊರತುಪಡಿಸಿ ಹನಿ ಹನಿ ಕೂಡಿದರೆ ಹಳ್ಳ ಎನ್ನುವಂತೆ ಸಣ್ಣ ಪ್ರಮಾಣದಲ್ಲಿ ಹೂಡಿಕೆ ಮಾಡಿ ಉಳಿತಾಯ ಮಾಡಿ ಒಂದು ದೊಡ್ಡ ಮೊತ್ತ ಪಡೆಯುವ ಕೆಲವು ಯೋಜನೆಗಳಿವೆ. ಅವುಗಳ ಬಗ್ಗೆ ಚಾರ್ಟರ್ಡ್ ಅಕೌಂಟೆಂಟ್ ಕಾವ್ಯಾ ಡಿ. ಅವರು ಮಾಹಿತಿ ಹಂಚಿಕೊಂಡಿದ್ದಾರೆ.



1 ರೆಕರಿಂಗ್ ಡೆಪಾಸಿಟ್

- **ಬಡ್ಡಿ ದರ:** ಶೇ 6.70 (ಮೂರು ತಿಂಗಳಿಗೊಮ್ಮೆ ಬಡ್ಡಿ ದರ ಪರಿಷ್ಕರಣೆಯಾಗುತ್ತದೆ)
- **ಕನಿಷ್ಠ ಹೂಡಿಕೆ ಮೊತ್ತ:** ₹ 100
- **ಗರಿಷ್ಠ ಹೂಡಿಕೆ ಮೊತ್ತ:** ಮಿತಿ ಇಲ್ಲ
- **ಹೂಡಿಕೆ ಅವಧಿ:** 5 ವರ್ಷ
- **ಹೂಡಿಕೆ ಎಲ್ಲಿ ಆರಂಭಿಸಬಹುದು:** ಅಂಚೆ ಕಚೇರಿ
- **ಹೂಡಿಕೆ ರಿಸ್ಕ್:** ರಿಸ್ಕ್ ಇಲ್ಲ
- **ತೆರಿಗೆ ಅನುಕೂಲ:** ಆದಾಯ ತೆರಿಗೆ ಸ್ಲ್ಯಾಬ್‌ಗೆ ಅನುಗುಣವಾಗಿ ತೆರಿಗೆ ಕಟ್ಟಬೇಕಾಗುತ್ತದೆ.

2 ಸುಕನ್ಯಾ ಸಮೃದ್ಧಿ ಯೋಜನೆ

- **ಬಡ್ಡಿ ದರ:** ಶೇ 8.20 (ಮೂರು ತಿಂಗಳಿಗೊಮ್ಮೆ ಬಡ್ಡಿ ದರ ಪರಿಷ್ಕರಣೆಯಾಗುತ್ತದೆ)
- **ಕನಿಷ್ಠ ಹೂಡಿಕೆ ಮೊತ್ತ (ವರ್ಷಕ್ಕೆ):** ₹ 250
- **ಗರಿಷ್ಠ ಹೂಡಿಕೆ ಮೊತ್ತ(ವರ್ಷಕ್ಕೆ):** ₹ 1.5 ಲಕ್ಷ
- **ಯಾರಿಗೆ ಈ ಹೂಡಿಕೆ ಅನ್ವಯ :** 10 ವರ್ಷದ ಒಳಗಿನ ಹೆಣ್ಣು ಮಗುವಿನ ಹೆಸರಲ್ಲಿ ಮಾತ್ರ ಖಾತೆ ಆರಂಭಿಸಬಹುದು



- **ಹೂಡಿಕೆ ಅವಧಿ:** 15 ವರ್ಷಗಳು
- **ಹೂಡಿಕೆ ಎಲ್ಲಿ ಆರಂಭಿಸಬಹುದು:** ಅಂಚೆ ಕಚೇರಿ, ಆಯ್ದ ಬ್ಯಾಂಕ್‌ಗಳು
- **ಹೂಡಿಕೆ ರಿಸ್ಕ್:** ರಿಸ್ಕ್ ಇಲ್ಲ
- **ನಗದೀಕರಣ:** ಹೆಣ್ಣು ಮಗುವಿಗೆ 21 ತುಂಬಿದ ಮೇಲೆ ಹಣ ಪಡೆಯಬಹುದು.
- **ತೆರಿಗೆ ಅನುಕೂಲ:** ಆದಾಯ ತೆರಿಗೆ ಸೆಕ್ಷನ್ 80 ಸಿ ತೆರಿಗೆ ವಿನಾಯಿತಿ ಅನುಕೂಲ ಲಭ್ಯ. ಇದು ವಿಶೇಷವಾಗಿ ಹೆಣ್ಣುಮಕ್ಕಳಿಗಾಗಿ ಇರುವ ಉಳಿತಾಯದ ಯೋಜನೆಯಾಗಿದೆ.

3 ಇಕ್ವಿಟಿ ಮ್ಯೂಚುವಲ್ ಫಂಡ್

- **ಬಡ್ಡಿ ದರ ನಿರೀಕ್ಷೆ:** ಶೇ 12ರಷ್ಟು
- **ಕನಿಷ್ಠ ಹೂಡಿಕೆ ಮೊತ್ತ:** ₹ 500
- **ಗರಿಷ್ಠ ಹೂಡಿಕೆ ಮೊತ್ತ:** ಮಿತಿ ಇಲ್ಲ
- **ಯಾರಿಗೆ ಈ ಹೂಡಿಕೆ ಅನ್ವಯ:** ಷೇರು ಮಾರುಕಟ್ಟೆಯಲ್ಲಿ ಪರೋಕ್ಷವಾಗಿ ಹೂಡಿಕೆ ಮಾಡಬೇಕು ಎನ್ನುವವರಿಗೆ
- **ಹೂಡಿಕೆಗೆ ಪರಿಗಣಿಸಬೇಕಿರುವ ಕನಿಷ್ಠ ಅವಧಿ:** 5 ವರ್ಷಗಳು
- **ಹೂಡಿಕೆ ಎಲ್ಲಿ ಆರಂಭಿಸಬಹುದು:** ಸೆಬಿ ನೋಂದಾಯಿತ ಮ್ಯೂಚುವಲ್ ಫಂಡ್ ಆಪ್‌ಗಳು , ವಿತರಕರು, ಬ್ಯಾಂಕ್.
- **ಹೂಡಿಕೆ ರಿಸ್ಕ್:** ಷೇರು ಮಾರುಕಟ್ಟೆಯಲ್ಲಿ ಉಂಟಾಗುವ ಏರಿಳಿತದ ರಿಸ್ಕ್ ಇರುತ್ತದೆ
- **ತೆರಿಗೆ ಅನುಕೂಲ:** ಹೂಡಿಕೆ ಮಾಡಿದ 1 ವರ್ಷದ ನಂತರ ಗಳಿಕೆ ಮೊತ್ತ ₹ 1.25 ಲಕ್ಷದೊಳಗಿದ್ದರೆ ತೆರಿಗೆ ಇಲ್ಲ. ಇಲ್ಲದಿದ್ದರೆ ಎಸ್ ಟಿಸಿಜಿ ಅಥವಾ ಎಲ್ ಟಿಸಿಜಿ ತೆರಿಗೆ ಅನ್ವಯಿಸುತ್ತದೆ.

4 ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್)

- **ಪ್ರಸ್ತುತ ಬಡ್ಡಿ ದರ:** ಶೇ 7.10 (ಮೂರು ತಿಂಗಳಿಗೊಮ್ಮೆ ಬಡ್ಡಿ ದರ ಪರಿಷ್ಕರಣೆಯಾಗುತ್ತದೆ)
- **ಕನಿಷ್ಠ ಹೂಡಿಕೆ ಮೊತ್ತ (1 ವರ್ಷಕ್ಕೆ) :** ₹ 500
- **ಗರಿಷ್ಠ ಹೂಡಿಕೆ ಮೊತ್ತ (1 ವರ್ಷಕ್ಕೆ):** ₹ 1.5 ಲಕ್ಷ
- **ಹೂಡಿಕೆ ಅವಧಿ:** 15 ವರ್ಷಗಳು
- **ಹೂಡಿಕೆ ಎಲ್ಲಿ ಆರಂಭಿಸಬಹುದು:** ಅಂಚೆ ಕಚೇರಿ, ಆಯ್ದ ಪ್ರಮುಖ ಬ್ಯಾಂಕ್‌ಗಳು
- **ಹೂಡಿಕೆ ರಿಸ್ಕ್:** ರಿಸ್ಕ್ ಇಲ್ಲ
- **ತೆರಿಗೆ ಅನುಕೂಲ:** ಸೆಕ್ಷನ್ 80 ಸಿ ಅಡಿ ವಿನಾಯಿತಿ, ಹೂಡಿಕೆ ಮೇಲಿನ ಬಡ್ಡಿ ಗಳಿಕೆ ಮತ್ತು ನಗದೀಕರಣದ ವೇಳೆ ತೆರಿಗೆ ಕಟ್ಟಬೇಕಿಲ್ಲ.



5 ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್ ಸಿ)

- **ಪ್ರಸ್ತುತ ಬಡ್ಡಿ ದರ:** ಶೇ 7.70 (ಮೂರು ತಿಂಗಳಿಗೊಮ್ಮೆ ಬಡ್ಡಿ ದರ ಪರಿಷ್ಕರಣೆಯಾಗುತ್ತದೆ)
- **ಕನಿಷ್ಠ ಹೂಡಿಕೆ ಮೊತ್ತ:** ₹ 1000
- **ಗರಿಷ್ಠ ಹೂಡಿಕೆ ಮೊತ್ತ:** ಮಿತಿ ಇಲ್ಲ
- **ಹೂಡಿಕೆ ಅವಧಿ:** 5 ವರ್ಷ
- **ಹೂಡಿಕೆ ಎಲ್ಲಿ ಆರಂಭಿಸಬಹುದು:** ಅಂಚೆ ಕಚೇರಿ
- **ಹೂಡಿಕೆ ರಿಸ್ಕ್ :** ರಿಸ್ಕ್ ಇಲ್ಲ
- **ತೆರಿಗೆ ಅನುಕೂಲ:** ಟಿಡಿಎಸ್ ಕಡಿತವಾಗುವುದಿಲ್ಲ, ಸೆಕ್ಷನ್ 80 ಸಿ. ಅಡಿ ತೆರಿಗೆ ವಿನಾಯಿತಿ

6 ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆ (ಪೋಸ್ಟ್ ಆಫೀಸ್ ಮಂತ್ಲಿ ಇನ್ ಕಂ ಸ್ಕೀಂ)

- **ಪ್ರಸ್ತುತ ಬಡ್ಡಿ ದರ:** ಶೇ 7.40 (ಮೂರು ತಿಂಗಳಿಗೊಮ್ಮೆ ಬಡ್ಡಿ ದರ ಪರಿಷ್ಕರಣೆಯಾಗುತ್ತದೆ)
  ಕನಿಷ್ಠ ಹೂಡಿಕೆ ಮೊತ್ತ: ₹ 1000
- **ಗರಿಷ್ಠ ಹೂಡಿಕೆ ಮೊತ್ತ:** ಒಬ್ಬರೇ ಹೂಡಿದರೆ ಮಿತಿ 9 ಲಕ್ಷ, ಜಂಟಿ ಹೂಡಿಕೆಗೆ ಮಿತಿ 15 ಲಕ್ಷ
- **ಹೂಡಿಕೆ ಅವಧಿ:** 5 ವರ್ಷ (ಪ್ರತಿ ತಿಂಗಳು ಬಡ್ಡಿ ಆದಾಯ ಸಿಗುತ್ತದೆ)
- **ಹೂಡಿಕೆ ಎಲ್ಲಿ ಆರಂಭಿಸಬಹುದು:** ಅಂಚೆ ಕಚೇರಿ
- **ಹೂಡಿಕೆ ರಿಸ್ಕ್:** ರಿಸ್ಕ್ ಇಲ್ಲ
- **ತೆರಿಗೆ ಅನುಕೂಲ:** ಆದಾಯ ತೆರಿಗೆ ಸ್ಲ್ಯಾಬ್ ಗೆ ಅನುಗುಣವಾಗಿ ತೆರಿಗೆ ಕಟ್ಟಬೇಕಾಗುತ್ತದೆ

7 ಅಂಚೆ ಕಚೇರಿ ಅವಧಿ ಠೇವಣಿ (ಟೈಂ ಡೆಪಾಸಿಟ್)

- **ಬಡ್ಡಿ ದರ:** ಶೇ 6.9 ರಿಂದ ಶೇ 7.50 (ಮೂರು ತಿಂಗಳಿಗೊಮ್ಮೆ ಬಡ್ಡಿ ದರ ಪರಿಷ್ಕರಣೆಯಾಗುತ್ತದೆ)
- **ಕನಿಷ್ಠ ಹೂಡಿಕೆ ಮೊತ್ತ:** ₹ 1000
- **ಗರಿಷ್ಠ ಹೂಡಿಕೆ ಮೊತ್ತ:** ಮಿತಿ ಇಲ್ಲ
- **ಹೂಡಿಕೆ ಅವಧಿ:** 1 ವರ್ಷ, 2 ವರ್ಷ , 3 ವರ್ಷ , 5 ವರ್ಷ
- **ಹೂಡಿಕೆ ಎಲ್ಲಿ ಆರಂಭಿಸಬಹುದು:** ಅಂಚೆ ಕಚೇರಿ
- **ಹೂಡಿಕೆ ರಿಸ್ಕ್:** ರಿಸ್ಕ್ ಇಲ್ಲ
- **ತೆರಿಗೆ ಅನುಕೂಲ:** 5 ವರ್ಷದ ಅವಧಿ ಠೇವಣಿಗೆ ಮಾತ್ರ ಆದಾಯ ತೆರಿಗೆ ಸೆಕ್ಷನ್ 80 ಸಿ ಅನುಕೂಲ ಲಭ್ಯ

8 ಹಿರಿಯ ನಾಗರಿಕರ ಉಳಿತಾಯ ಯೋಜನೆ (SCSS)

- **ಬಡ್ಡಿ ದರ:** ಶೇ 8.20
- **ಕನಿಷ್ಠ ಹೂಡಿಕೆ ಮೊತ್ತ:** ₹ 1000
- **ಗರಿಷ್ಠ ಹೂಡಿಕೆ ಮೊತ್ತ:** ₹ 30 ಲಕ್ಷ
- **ಯಾರಿಗೆ ಈ ಹೂಡಿಕೆ ಅನ್ವಯ :** 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ
- **ಹೂಡಿಕೆ ಅವಧಿ:** 5 ವರ್ಷಗಳು
- **ಹೂಡಿಕೆ ಎಲ್ಲಿ ಆರಂಭಿಸಬಹುದು:** ಅಂಚೆ ಕಚೇರಿ, ಆಯ್ದ ಬ್ಯಾಂಕ್ ಗಳು
- **ಹೂಡಿಕೆ ರಿಸ್ಕ್:** ರಿಸ್ಕ್ ಇಲ್ಲ
- **ತೆರಿಗೆ ಅನುಕೂಲ:** ಆದಾಯ ತೆರಿಗೆ ಸೆಕ್ಷನ್ 80 ಸಿ ತೆರಿಗೆ ವಿನಾಯಿತಿ ಅನುಕೂಲ ಲಭ್ಯ.

(ಮಾಹಿತಿ ಆಧಾರ: ಅಂಚೆ ಕಚೇರಿ ಮತ್ತು ವಿವಿಧ ಬ್ಯಾಂಕ್‌ಗಳ ವೆಬ್‌ಸೈಟ್)

ಆಹಾ ಮಾವು!

ರಸಾಸ್ವಾದ

ಈ ಋತುವಿನಲ್ಲಿ ಯಥೇಚ್ಛವಾಗಿ ಸಿಗುವ ಮಾವಿನಕಾಯಿ ಮತ್ತು ಹಣ್ಣಿನಲ್ಲಿಯೇ ವಿಧವಿಧವಾದ ಅಡುಗೆಗಳನ್ನು ಮಾಡಬಹುದು. ನಿತ್ಯ ಮಾಡುವ ಸಾಮಾನ್ಯ ರೆಸಿಪಿಗೆ ಒಂದಷ್ಟು ಮಾವಿನಕಾಯಿ ಹಾಕಿಯೂ ನಾಲಿಗೆಯ ರುಚಿಮೊಗ್ಗುಗಳನ್ನು ಅರಳಿಸಬಹುದು. ಮಾವಿನಕಾಯಿಯ ರೆಸಿಪಿ ನೀಡಿದ್ದಾರೆ

ಕೆ.ವಿ.ರಾಜಲಕ್ಷ್ಮಿ



ಅವಲಕ್ಕಿ

ಬೇಕಾಗುವ ಸಾಮಗ್ರಿ: ಮಧ್ಯಮಗಾತ್ರದ ಅವಲಕ್ಕಿ 2 ಕಪ್, ಹುಳಿ ಮಾವಿನಕಾಯಿಯ ತುರಿ 1/2 ಕಪ್, ತೆಂಗಿನತುರಿ 1/2 ಕಪ್, ಸಾಸಿವೆ 1 ಚಮಚ, ಹಸಿ ಮೆಣಸಿನಕಾಯಿ 6, ಚಿಟಿಕೆ ಇಂಗು, ಅರಿಶಿನಪುಡಿ, ಶೇಂಗಾ 2 ಚಮಚ, ಕರಿಬೇವು 8-10 ಎಲೆ, ರುಚಿಗೆ ತಕ್ಕಷ್ಟು ಉಪ್ಪು,

ಮಾಡುವ ವಿಧಾನ: ಅವಲಕ್ಕಿಯನ್ನು ಚೆನ್ನಾಗಿ ತೊಳೆದು ನೀರು ಸೋಸಿ ಬದಿಗಿಟ್ಟುಕೊಳ್ಳಿ. ಮಾವಿನಕಾಯಿಯ ತುರಿ, ಸಾಸಿವೆ, ಹಸಿ ಮೆಣಸಿನಕಾಯಿ, ಇಂಗು, ಅರಿಶಿನಪುಡಿ, ಉಪ್ಪು ಹಾಕಿ ತರಿತರಿಯಾಗಿ ರುಬ್ಬಿಕೊಳ್ಳಿ. ಬಾಣಲೆಯಲ್ಲಿ ಒಗ್ಗರಣೆಗೆ ಸಾಸಿವೆ, ಸಿಡಿಸಿ ಕರಿಬೇವು, ಶೇಂಗಾ ಹುರಿದು, ರುಬ್ಬಿದ ಮಿಶ್ರಣವನ್ನು ಹಸಿವಾಸನೆ ಹೋಗುವವರೆಗೆ ಬಾಡಿಸಿ ಉರಿ ಆರಿಸಿ, ನಂತರ ಅವಲಕ್ಕಿಯೊಂದಿಗೆ ಬೆರಸಿ ಮಿಶ್ರಣ ಮಾಡಿ.



ಶ್ಯಾವಿಗೆ

ಬೇಕಾಗುವ ಸಾಮಗ್ರಿ: ಹುರಿದ ಶ್ಯಾವಿಗೆ 1 ಕಪ್, ಸಣ್ಣಗೆ ಹೆಚ್ಚಿದ ತೋತಾಪುರಿ, ಮಾವಿನಕಾಯಿ ಒಂದು ಹೋಳು, ಹಸಿ ಮೆಣಸಿನಕಾಯಿ 6, ಕೊತ್ತಂಬರಿ ಸೊಪ್ಪು 2 ಎಸಳು, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಬಾಣಲೆಗೆ ಎಣ್ಣೆ ಹಾಕಿ ಸಾಸಿವೆ, ಕಡಲೆಬೇಳೆ ಒಗ್ಗರಿಸಿ ಹಸಿಮೆಣಸಿನಕಾಯಿ, ಮಾವಿನಕಾಯಿ ಹಾಕಿ ಎರಡು ನಿಮಿಷ ಹುರಿದು ಶ್ಯಾವಿಗೆ ಸೇರಿಸಿ ಒಂದು ಸುತ್ತು ಕೈಯಾಡಿಸಿ ಎರಡೂವರೆ ಕಪ್ ನೀರು, ಉಪ್ಪು ಸೇರಿಸಿ ಮಿಶ್ರಣ ಮಾಡಿ ಮುಚ್ಚಳ ಮುಚ್ಚಿ, ಬೇಯಲು ಬಿಡಿ. ಶ್ಯಾವಿಗೆ ಸಂಪೂರ್ಣವಾಗಿ ಬೆಂದ ಮೇಲೆ ಕೊತ್ತಂಬರಿ ಸೊಪ್ಪು ಉದುರಿಸಿ ಮಿಶ್ರಣ ಮಾಡಿ, ಉರಿ ಆರಿಸಿ.



ಮೊಸರನ್ನ

ಬೇಕಾಗುವ ಸಾಮಗ್ರಿಗಳು: ಅನ್ನ 1 ಕಪ್, ಸಣ್ಣಗೆ ಹೆಚ್ಚಿದ ತೋತಾಪುರಿ ಮಾವಿನಕಾಯಿ ಅರ್ಧ ಹೋಳು, ಮೊಸರು 1 ಕಪ್, ಹಾಲು 1/4 ಕಪ್, ಗೋಡಂಬಿ 6-8, ಸಕ್ಕರೆ 1 ಚಮಚ, ಚಿಟಿಕೆ ಇಂಗು, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಒಂದು ಪಾತ್ರೆಯಲ್ಲಿ ಅನ್ನವನ್ನು ಹರವಿ ಮೊಸರು, ಹಾಲು, ಸಕ್ಕರೆ ಬೆರೆಸಿ ಕಲೆಸಿಕೊಳ್ಳಿ. ನಂತರ ಒಗ್ಗರಣೆಗೆ ಸಾಸಿವೆ, ಇಂಗು, ಉದ್ದಿನಬೇಳೆ, ಗೋಡಂಬಿ, ಹುರಿದು ಮಾವಿನಕಾಯಿ, ಉಪ್ಪು ಸೇರಿಸಿ ಒಂದು ಸುತ್ತು ಬಾಡಿಸಿ ಕಲೆಸಿದ ಅನ್ನಕ್ಕೆ ಸೇರಿಸಿ ಹಾಕಿ ಮಿಶ್ರಣ ಮಾಡಿ.



ಥೈರಾಯ್ಡ್ ಮಾತ್ರೆ ಸೇವನೆ ನಿಲ್ಲಿಸಿದರೆ ತೊಂದರೆಯೇ?

ಸ್ಪಂದನ



ಡಾ. ವೀಣಾ ಎಸ್. ಭಟ್

• ಪ್ರತಿ ಬಾರಿ ಮುಟ್ಟಾದಾಗಲೂ ಏಳೆಂಟು ದಿನ ಸ್ರಾವವಾಗುತ್ತದೆ. 25 ಮೈಕ್ರೋಗ್ರಾಂ ಥೈರಾಯ್ಡ್ ಮಾತ್ರೆ ತೆಗೆದುಕೊಳ್ಳುತ್ತಿದ್ದೆ. ಗರ್ಭಿಣಿಯಾಗಿದ್ದಾಗ ನಿಲ್ಲಿಸಿಬಿಟ್ಟೆ. ಈಗ ಮಗುವಿಗೆ ಮೂರು ವರ್ಷಗಳು. ಸ್ಕ್ಯಾನಿಂಗ್ ಮಾಡಿಸಿದ್ದೇನೆ. ಗರ್ಭಕೋಶದಲ್ಲಿ ಏನೂ ತೊಂದರೆ ಇಲ್ಲವೆಂದು ಹೇಳಿದ್ದಾರೆ. ಈಚೆಗೆ ತುಂಬಾ ದಪ್ಪಗಾಗುತ್ತಿದ್ದೇನೆ. ಸುಸ್ತು, ಆಯಾಸ ಉಂಟಾಗಿದ್ದು, ಗರ್ಭಕೋಶವನ್ನೇ ತೆಗೆಸಿಬಿಡಬೇಕೇ?

ಗರ್ಭಕೋಶ ತೆಗೆಸುವ ಅಗತ್ಯವಿಲ್ಲ. ತೂಕ ಹೆಚ್ಚುತ್ತಿರುವುದಕ್ಕೆ ಥೈರಾಕ್ಸಿನ್ ಮಾತ್ರೆ ಸೇವನೆ ನಿಲ್ಲಿಸಿರುವುದು ಕಾರಣವಾಗಿರಬಹುದು. ಯಾವುದಕ್ಕೂ ನೀವು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಟಿ.ಎಸ್.ಎಚ್ ಅಂದರೆ ಥೈರಾಯ್ಡ್ ಸ್ಟಿಮ್ಯೂಲೇಟಿಂಗ್ ಹಾರ್ಮೋನನ್ನು ಲ್ಯಾಬ್‌ನಲ್ಲಿ ಪರೀಕ್ಷಿಸಿಕೊಳ್ಳಿ. ಹೈಪೋಥೈರಾಯ್ಡ್ ಸಮಸ್ಯೆ ಮುಂದುವರಿದಿರಬಹುದು.

40 ವರ್ಷಗಳ ನಂತರ ಮುಟ್ಟಿನ ತೊಂದರೆಗಳಿಗಾಗಿ ವೈದ್ಯರ ಹತ್ತಿರ ಬಂದಾಗಲೇ ಥೈರಾಯ್ಡ್ ಸಮಸ್ಯೆ ಪತ್ತೆಯಾಗುವುದು. ಥೈರಾಯ್ಡ್ ಗ್ರಂಥಿ ಕುತ್ತಿಗೆಯ ಮುಂಭಾಗದಲ್ಲಿರುವ ಅತಿ ಮುಖ್ಯ ನಿರ್ನಾಳ ಗ್ರಂಥಿಯಾಗಿದ್ದು, ಇದರಿಂದ ಸ್ರವಿಸುವ ಹಾರ್ಮೋನುಗಳು ಹಲವು ಚಯಾಪಚಯ ಕ್ರಿಯೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಹಾರ್ಮೋನುಗಳಲ್ಲಿ ಥೈರಾಕ್ಸಿನ್ ಟಿ4 ಮತ್ತು ಟ್ರೈಅಯೋಡೋ ಥೈರೋನಿನ್ ಟಿ3 ಮುಖ್ಯವಾದವುಗಳು. ಇವುಗಳ ಸ್ರಾವವನ್ನು ಮುಂಭಾಗದ ಪಿಟ್ಯುಟರಿಯಿಂದ ಉತ್ಪಾದನೆಯಾಗುವ ಟಿ.ಎಸ್.ಹೆಚ್ ಹಾರ್ಮೋನು ನಿಯಂತ್ರಿಸುತ್ತದೆ. ಥೈರಾಯ್ಡ್ ಗ್ರಂಥಿಯಿಂದ ಹಾರ್ಮೋನುಗಳು ಹೆಚ್ಚಾಗಿ ಸ್ರವಿಸುತ್ತಿದ್ದರೆ ಟಿ.ಎಸ್.ಎಚ್ ಕಡಿಮೆಯಾಗುತ್ತದೆ. ಥೈರಾಯ್ಡ್ ಸ್ರಾವ ಕಡಿಮೆಯಾದಾಗ ಟಿ.ಎಸ್.ಎಚ್. ಹಾರ್ಮೋನ್ ಮಟ್ಟ ಹೆಚ್ಚಾಗುತ್ತದೆ. ಥೈರಾಯ್ಡ್ ಹಾರ್ಮೋನ್ ಕಡಿಮೆಯಾಗುವುದನ್ನು ಹೈಪೋಥೈರಾಯ್ಡಿಸಂ ಎನ್ನುತ್ತಾರೆ. ಇದರಲ್ಲಿ ಸುಸ್ತು, ಒಣಚರ್ಮ, ತೂಕ ಏರುವಿಕೆ, ಗಂಟು ನೋವು, ಮಲಬದ್ಧತೆ ಅತಿಯಾದ ರಕ್ತಸ್ರಾವ ಇತ್ಯಾದಿ ಉಂಟಾಗಬಹುದು. ಕೆಲವು ಸಂದರ್ಭಗಳಲ್ಲಿ ಥೈರಾಯ್ಡ್ ಸ್ರಾವ ಹೆಚ್ಚಾದಾಗಲೂ ಬೇಗ ಬೇಗನೆ ಮುಟ್ಟಾಗುವುದು. ತಡವಾಗಿ ಮುಟ್ಟಾಗುವುದು, ಕಡಿಮೆ ಮುಟ್ಟಾಗುವುದು ಆಗಬಹುದು. ಜತೆಗೆ ಉದ್ವೇಗ, ಕೈನಡುಕ, ಎದೆಬಡಿತ ಹೆಚ್ಚುವುದು, ತೂಕ ಕಡಿಮೆ ಆಗಬಹುದು. ಥೈರಾಯ್ಡ್ ಗ್ರಂಥಿಯ ಸ್ರಾವ ಕಡಿಮೆ ಇದ್ದಾಗಲೂ ಅಥವಾ ಹೆಚ್ಚಿದಾಗಲೂ ಮುಟ್ಟಿನಲ್ಲಿ ಏರುಪೇರು ಆಗುತ್ತದೆ. ಯಾಕೆಂದರೆ ಅಂಡೋತ್ಪತ್ತಿ ಸರಿಯಾಗಿ ಆಗದೇ ಪ್ರೊಜೆಸ್ಟಿರಾನ್ ಹಾರ್ಮೋನ್ ಕೊರತೆ ಉಂಟಾಗುತ್ತದೆ. ಜೊತೆಗೆ ಪಿಟ್ಯುಟರಿಯಿಂದ ಉತ್ಪತ್ತಿಯಾಗುವ ಅಂಡಾಶಯದ ಕಾರ್ಯಕ್ಕೆ ಅವಶ್ಯವಾದ ಎಫ್.ಎಸ್.ಎಚ್ ಹಾಗೂ ಎಲ್.ಎಚ್. ಹಾರ್ಮೋನುಗಳ ಸ್ರಾವದಲ್ಲೂ ವ್ಯತ್ಯಾಸ ಉಂಟಾಗುತ್ತದೆ. ತಜ್ಞ ವೈದ್ಯರ ನೆರವು ಪಡೆದು, ಥೈರಾಯ್ಡ್ ಹಾರ್ಮೋನು ಸ್ರಾವದ ತೊಂದರೆ ಇದೆಯೇ ಎಂದು ತಿಳಿದುಕೊಳ್ಳಿ. ತೊಂದರೆ ಇದ್ದರೆ ಎಲ್-ಥೈರಾಕ್ಸಿನ್ ಮಾತ್ರೆಯನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳಿ. ಅದನ್ನು ನಿಯಮಿತವಾಗಿ ಸೇವಿಸಿ.

ಥೈರಾಯ್ಡ್ ಹಾರ್ಮೋನ್ ಉತ್ಪಾದನೆಗೆ ಅಯೋಡಿನ್ ಅಗತ್ಯ ಇರುವುದರಿಂದ ಅಯೋಡಿನ್ಯುಕ್ತ ಉಪ್ಪನ್ನು ಸೇವಿಸಿ. ಹೈಪೋ ಥೈರಾಯ್ಡಿಸಂ ಇದ್ದಲ್ಲಿ ಕ್ಯಾಬೇಜ್, ಬ್ರಕೋಲಿ, ಕಾಲಿಫ್ಲವರ್, ಟರ್ನಿಪ್, ಹಸಿಈರುಳ್ಳಿ ಸೇವಿಸಬೇಡಿ.

ಸೋಯಾ ಸೇವನೆಯೂ ಹೆಚ್ಚು ಬೇಡ. ಜಂಕ್‌ಫುಡ್ ಹಾಗೂ ಕೃತಕ ಪಾನೀಯಗಳ ಸೇವನೆ ಬೇಡ. ರಾತ್ರಿ ಸರಿಯಾಗಿ ಆರರಿಂದ ಎಂಟು ತಾಸು ನಿದ್ದೆ ಮಾಡಿ. ಯೋಗಾಸನದಲ್ಲಿ ಸರ್ವಾಂಗಸನ, ಭುಜಂಗಾಸನ, ಸೇತುಬಂಧಾಸನ, ಮತ್ಸ್ಯಾಸನ ಉಪಯುಕ್ತ. ❖



ಮೇ 17ಕ್ಕೆ ‘ಫೈನಲ್ ರೆಕನಿಂಗ್ ’

ಹಾಲಿವುಡ್ ನಟ ಟಾಮ್ ಕ್ರೂಸ್ ನಟನೆಯ ‘ಮಿಷನ್ ಇಂಪಾಸಿಬಲ್’ ಸರಣಿಯ ಎಂಟನೇ ಸಿನಿಮಾ ‘ಫೈನಲ್ ರೆಕನಿಂಗ್’ ಮೇ 17ರಂದು ಭಾರತದಲ್ಲಿ ಬಿಡುಗಡೆಯಾಗಲಿದೆ ಎಂದು ಪ್ಯಾರಾಮೌಂಟ್ ಪಿಕ್ಚರ್ಸ್ ಇಂಡಿಯಾ ತಿಳಿಸಿದೆ. ಇದಾದ ಆರು ದಿನಗಳ ಬಳಿಕ ಸಿನಿಮಾ ಅಮೆರಿಕದಲ್ಲಿ ತೆರೆಕಾಣಲಿದೆ.

ಭಿನ್ನಪ್ರಸ್ತುತಿ, ಕಲರ್‌ಫುಲ್ ಸಿನಿಮಾ

ಸಿನಿಮಾದುದ್ದಕ್ಕೂ ಬಗೆಬಗೆಯ ಪ್ರಮಾಣದಲ್ಲಿ ಪರದೆಯ ಬಳಕೆ, ತೆರೆ ತುಂಬಾ ಬಣ್ಣದೋಕುಳಿ, ಬೆಳಕಿನೋಕುಳಿ. ಸಂದರ್ಭಕ್ಕನುಗುಣವಾಗಿ ಹಿನ್ನೆಲೆಯಲ್ಲಿ ಹಳೆಯ ಹಾಡುಗಳು, ಮಿತವಾದ ಸಂಗೀತ, ಕಣ್ಣಿಗೆ ಹಿತವಾದ ಛಾಯಾ ಚಿತ್ರಗ್ರಹಣ... ಹೀಗೆ ಭಿನ್ನವಾದ ಪ್ರಸ್ತುತಿಯಲ್ಲಿ ವಂಶಿ ತಮ್ಮ ನಿರ್ದೇಶನದ ಚೊಚ್ಚಲ ಸಿನಿಮಾ ‘ಫೈರ್‌ಫ್ಲೈ’ ಅನ್ನು ತೆರೆಗೆ ತಂದಿದ್ದಾರೆ. ಇದು ನಿವೇದಿತಾ ಅವರ ನಿರ್ಮಾಣದ ಮೊದಲ ಚಿತ್ರ.

ವಿವೇಕಾನಂದ ಅಪ್ಪ–ಅಮ್ಮನ ಪ್ರೀತಿಯ ವಿಕ್ಕಿ(ವಂಶಿ). ವಿದೇಶದಲ್ಲಿ ಓದುತ್ತಿದ್ದಾತ ನಾಲ್ಕು ವರ್ಷಗಳ ಬಳಿಕ ತನ್ನೂರಾದ ಮೈಸೂರಿಗೆ ಮರಳಿದ್ದಾನೆ. ಆತನನ್ನು ಸ್ವಾಗತಿಸಲು ಅಪ್ಪ–ಅಮ್ಮ(ಅಚ್ಯುತ್ ಕುಮಾರ್–ಸುಧಾರಾಣಿ) ವಿಮಾನ ನಿಲ್ದಾಣಕ್ಕೆ ಬಂದಿದ್ದಾರೆ. ಅಲ್ಲಿಂದ ಮರಳುವ ವೇಳೆ ಅವಘಡವೊಂದು ನಡೆಯುತ್ತದೆ. ಈ ಘಟನೆಯು ವಿಕ್ಕಿಯನ್ನು ಖಿನ್ನತೆಗೆ ದೂಡುತ್ತದೆ, ಆತ ನಿದ್ರಾಹೀನನಾಗುತ್ತಾನೆ. ಇದರಿಂದ ವಿಕ್ಕಿ ಹೇಗೆ ಹೊರಬರುತ್ತಾನೆ ಎನ್ನುವುದೇ ಚಿತ್ರದ ಕಥೆ.

ಸಿನಿಮಾದ ಕಥೆಯ ಎಳೆ ಸರಳವಾಗಿದೆ. ಆದರೆ ಇದನ್ನು ಒಂದು ಭಿನ್ನವಾದ ರೀತಿಯ ಚಿತ್ರಕಥೆಯಲ್ಲಿ ವಂಶಿ ಪ್ರಸ್ತುತಪಡಿಸಿದ್ದಾರೆ. ಚಿತ್ರಕಥೆಯ ಆಲೋಚನೆಯೇ ವಿಭಿನ್ನವಾಗಿದೆ. ಕೌನ್ಸಿಲಿಂಗ್ ಸಂದರ್ಭದಲ್ಲಿ ವಂಶಿ ತನ್ನ ಜೀವನದ ಕಥೆಯನ್ನು ಇತರರೊಂದಿಗೆ ಹಂಚಿಕೊಳ್ಳುವ ರೀತಿಯಲ್ಲಿ ಸಿನಿಮಾ ಕಥೆಯ ನಿರೂಪಣೆಯಿದೆ. ರಿವರ್ಸ್ ಸ್ಕ್ರೀನ್‌ಪ್ಲೇಯಿಂದ ಕಥೆ ಆರಂಭವಾಗುತ್ತದೆ. ವಿಕ್ಕಿ ಅನುಭವಿಸುತ್ತಿರುವ ನೋವನ್ನು ಮನರಂಜನಾತ್ಮಕವಾಗಿಯೂ ತೆರೆಗೆ ತರಲಾಗಿದೆ. ಯುವಜನತೆಗೊಂದು ಸಂದೇಶ ಸಿನಿಮಾದೊಳಗಿದೆ. ಮಿಂಚುಹುಳಗಳ ಮೂಲಕ ಇದನ್ನು ಹೇಳಲಾಗಿದೆ. ಹಲವೆಡೆ ದೃಶ್ಯಗಳು, ಪಾತ್ರಗಳು ಬಹಳ ಕೃತಕವಾಗಿವೆ ಎನ್ನುವ ಭಾವನೆ ಮೂಡುತ್ತದೆ. ಅತಿಯಾದ ಕಾಳಜಿ ಹೊಂದಿರುವ ದೊಡ್ಡಪ್ಪ, ಸಂಬಂಧಿಕರ ಪಾತ್ರಗಳ ಬರವಣಿಗೆ ಹಾಗೂ ನಟನೆ ಕೃತಕವಾಗಿದೆ. ಸೆಟ್‌ಗಳ ಮೇಲೆ ಇನ್ನೊಂದಿಷ್ಟು ಕೆಲಸ ಮಾಡಬಹುದಿತ್ತು. ವಂಶಿ ಇಡೀ ಸಿನಿಮಾವನ್ನು ಆವರಿಸಿಕೊಂಡಿದ್ದಾರೆ. ನಟನೆಯಲ್ಲಿ ಅವರು ಪಳಗಿದ್ದಾರೆ. ಭಾವನಾತ್ಮಕ ದೃಶ್ಯಗಳಲ್ಲಿ ಹೆಚ್ಚಿನ ಅಂಕ ಗಿಟ್ಟಿಸುತ್ತಾರೆ. ಶ್ರೀವತ್ಸ ಅವರ ಪಾತ್ರವನ್ನು ಮತ್ತಷ್ಟು ಹಿಗ್ಗಿಸಿಕೊಳ್ಳಲು ಅವಕಾಶವಿತ್ತು. ಅಚ್ಯುತ್ ಕುಮಾರ್, ಸುಧಾರಾಣಿ, ರಚನಾ ಇಂದರ್, ಶಿವರಾಜ್‌ಕುಮಾರ್, ಮೂಗು ಸುರೇಶ್ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ‘ಇನ್ ದಿ ನೈಟ್..’ ಹಾಡು ಗುನುಗುನುಗುವಂತಿದೆ. ಚರಣ್‌ರಾಜ್ ಸಂಗೀತ ನಿರ್ದೇಶನ ಹಾಗೂ ಅಭಿಲಾಷ್ ಕಳತ್ತಿ ಛಾಯಾಚಿತ್ರಗ್ರಹಣ ಚಿತ್ರಕ್ಕೆ ಹೊಸ ರೂಪ ನೀಡಿದೆ.

ಅಭಿಲಾಷ್ ಪಿ.ಎಸ್.



ವಂಶಿ–ರಚನಾ ಇಂದರ್

ಫೈರ್‌ಫ್ಲೈ (ಕನ್ನಡ)
- ನಿರ್ಮಾಣ: ನಿವೇದಿತಾ ಶಿವರಾಜ್‌ಕುಮಾರ್
- ನಿರ್ದೇಶನ: ವಂಶಿ
- ತಾರಾಗಣ: ವಂಶಿ, ರಚನಾ ಇಂದರ್, ಅಚ್ಯುತ್ ಕುಮಾರ್, ಸುಧಾರಾಣಿ, ಮೂಗು ಸುರೇಶ್, ಶಿವರಾಜ್‌ಕುಮಾರ್, ಮತ್ತಿತರರು

ಇದು ನೋಡಬಹುದಾದ ಸಿನಿಮಾ.

ಅರುಣನ ಪೇಲವ ಪ್ರೇಮಕಥೆ



ನಾವು ನೋಡಿದ ಸಿನಿಮಾ

ಅದು ಹುಡುಗರ ಗ್ಯಾಂಗ್. ಪ್ರೀತಿಸಿ ಓಡಿಹೋಗುವವರಿಗೆ ಸಹಾಯ ಹಸ್ತ ಒದಗಿಸುವ ಗೆಳೆಯರ ಬಳಗವದು. ಈ ಗ್ಯಾಂಗ್ ಪ್ರೀತಿಸಿದ ಜೋಡಿಯೊಂದು ಊರು ಬಿಟ್ಟು ಪರಾರಿಯಾಗಲು ಸಹಾಯ ಮಾಡುತ್ತದೆ ಎಂಬ ದೃಶ್ಯದೊಂದಿಗೆ ಸಿನಿಮಾ ಪ್ರಾರಂಭವಾಗುತ್ತದೆ. ಈ ದೃಶ್ಯಕ್ಕೆ ಸಿನಿಮಾದೊಂದಿಗೆ ಸಂಬಂಧವಿದೆ ಎಂದು ತಿಳಿಯುವ ಹೊತ್ತಿಗೆ ಮೊದಲಾರ್ಧ ಮುಗಿದಿರುತ್ತದೆ. ಸಹಾಯ ಮಾಡಿದ್ದು ಚಿತ್ರದ ನಾಯಕ ಅರುಣನ ಗ್ಯಾಂಗ್. ಆದರೆ ಬೇರೆ ಪ್ರೇಮಿಗಳಿಗೆ ಸಹಾಯ ಮಾಡುವ ಈತನದ್ದೇ ಒಂದು ದುರಂತ ಪ್ರೇಮಕಥೆ.

ಪ್ರಾಥಮಿಕ ಶಾಲೆಯಲ್ಲಿಯೇ ಪ್ರೀತಿಯ ಬಲೆಗೆ ಬಿದ್ದವನು ಅರುಣ. ಮೂರನೆ ತರಗತಿಯಲ್ಲಿಯೇ ಸಹಪಾಠಿ ಕಾವ್ಯಾ ಜೊತೆ ಒಂದು ಆಕರ್ಷಣೆ ಬೆಳೆದಿರುತ್ತದೆ. ತಂದೆಯ ವರ್ಗಾವಣೆಯಿಂದ ಆ ಊರು ಬಿಟ್ಟ ಈತನಿಗೆ ಆಕೆ ಸಿಗುವುದೇ ಇಲ್ಲ. ಇವಿಷ್ಟು ಹಿನ್ನೆಲೆಯಲ್ಲಿ ಬರುತ್ತದೆ. ಈಗ ಅರುಣ ಮದುವೆ ವಯಸ್ಸಿಗೆ ಬಂದಿದ್ದಾನೆ. ಮನೆಯಲ್ಲಿ ಮದುವೆ ಒತ್ತಡ ಹೆಚ್ಚಾಗಿದೆ. ಆದರೆ ಈತ ಮಾತ್ರ ಕಾವ್ಯಾ ಸಿಗುತ್ತಾಳೆಂದು ಹುಡುಕುತ್ತಲೇ ಇದ್ದಾನೆ. ಮೊದಲಾರ್ಧ ಮುಗಿಯುವ ತನಕವೂ ಹುಡುಕುತ್ತಲೇ ಇರುತ್ತಾನೆ! ನಿರ್ದೇಶಕರು ಬಹಳ ಸಣ್ಣ ಎಳೆಯನ್ನು ಇಟ್ಟುಕೊಂಡು ಧಾರಾವಾಹಿ ರೀತಿಯಲ್ಲಿ ಹಿಗ್ಗಿಸಿದ್ದಾರೆ. ಹೀಗಾಗಿ ಇಡೀ ಪ್ರೇಮ ಪಯಣ ಪೇಲವ ಎನ್ನಿಸುತ್ತದೆ.

ಚಿತ್ರದಲ್ಲಿ ಇರುವುದೇ ನಾಲ್ಕಾರು ಪಾತ್ರಗಳು. ಎಲ್ಲವೂ ಅಲ್ಲಲ್ಲೇ ಗಿರಕಿ ಹೊಡೆದು ಸಾಕಷ್ಟು ಕಡೆ ನೋಡುಗನ ತಾಳ್ಮೆ ಕೆಡುತ್ತದೆ. ಎರಡು ಮಕ್ಕಳು, ಶಾಲೆ, ಅರುಣ ಮತ್ತು ಕಾವ್ಯಾಳ ಬದುಕು, ಬಳ್ಳಾರಿ ಸುತ್ತಲಿನ ಪರಿಸರ, ಜನಜೀವನ ಇಟ್ಟುಕೊಂಡು ಬಯಲು ಸೀಮೆಯ ನವಿರಾದ ಪ್ರೇಮಕಥೆಯನ್ನು ಹೆಣೆಯುವ ಅವಕಾಶ ನಿರ್ದೇಶಕರಿಗಿತ್ತು. ಆದರೆ ಭಾಷೆ, ಸ್ಥಳದ ಹೊರತಾಗಿ ಮತ್ತೆಲ್ಲಿಯೂ ಈ ಚಿತ್ರ ಬಯಲು ಸೀಮೆಯಲ್ಲಿ ನಡೆಯುತ್ತಿದೆ ಎಂಬ ಭಾವನೆ ಮೂಡಿಸುವುದೇ ಇಲ್ಲ. ಬಹುತೇಕ ದೃಶ್ಯಗಳು ಧಾರಾವಾಹಿಯ ಅನುಭವ ನೀಡುತ್ತವೆ.

ಅರುಣನಾಗಿ ಹರಿಶರ್ವಾ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಆತನ ಗೆಳೆಯನಾಗಿ ಧರ್ಮಣ್ಣ ಕಡೂರು ಅಲ್ಲಲ್ಲಿ ನಗಿಸುತ್ತಾರೆ. ಆದರೆ ಹಲವೆಡೆ ಬಲವಂತವಾಗಿ ನಗಿಸುವ ಯತ್ನಗಳು ಕಿರಿಕಿರಿ ಮೂಡಿಸುತ್ತವೆ. ನಾಯಕಿಯರು ನಟನೆಯಲ್ಲಿ ಇನ್ನಷ್ಟು ಪಳಗಬೇಕಿತ್ತು. ನಾಯಕನ ತಂದೆಯಾಗಿ ಬಲ ರಾಜವಾಡಿ ಗಂಭೀರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸಂಗೀತ, ಛಾಯಾಚಿತ್ರಗ್ರಹಣದಲ್ಲಿಯೂ ಹೊಸತನವೇನಿಲ್ಲ. ❖

ಅಮರ ಪ್ರೇಮಿ ಅರುಣ್
- ನಿರ್ಮಾಣ: ಒಲವು ಸಿನಿಮಾಸ್
- ನಿರ್ದೇಶನ: ಪ್ರವೀಣ್ ಕುಮಾರ್ ಬಿ.ಜಿ
- ತಾರಾಗಣ: ಹರಿಶರ್ವಾ, ದೀಪಿಕಾ ಆರಾಧ್ಯ, ಧರ್ಮಣ್ಣ ಕಡೂರು ಮತ್ತಿತರರು

ವೆಬ್ ಸರಣಿಯಲ್ಲಿ ದೀಕ್ಷಿತ್ ಶೆಟ್ಟಿ




‘ದಿಯಾ’ ಸಿನಿಮಾ ಮೂಲಕ ಬೆಳ್ಳಿತೆರೆಯಲ್ಲಿ ಮಿಂಚಿದ ದೀಕ್ಷಿತ್ ಶೆಟ್ಟಿ, ಬಳಿಕ ‘ದಸರಾ’ ಸಿನಿಮಾ ಮೂಲಕ ಟಾಲಿವುಡ್‌ಗೂ ಕಾಲಿಟ್ಟವರು. ಸದ್ಯ ಸಾಲು ಸಾಲು ಪ್ರಾಜೆಕ್ಟ್‌ಗಳನ್ನು ಕೈಯಲ್ಲಿಟ್ಟುಕೊಂಡಿರುವ ದೀಕ್ಷಿತ್, ಸಿನಿಮಾ ಜೊತೆಗೆ ವೆಬ್ ಸರಣಿಯಲ್ಲೂ ಬಣ್ಣಹಚ್ಚಿದ್ದಾರೆ.

ಅವರು ನಟಿಸಿರುವ ಮೊದಲ ವೆಬ್ ಸರಣಿ ‘ಟಚ್ ಮಿ ನಾಟ್’ ಜಿಯೊ ಹಾಟ್‌ಸ್ಟಾರ್‌ನಲ್ಲಿ ಬಿಡುಗಡೆಗೊಂಡಿದೆ. ಈ ಸರಣಿಯು ತೆಲುಗಿನಲ್ಲಿ ಚಿತ್ರೀಕರಣಗೊಂಡಿದ್ದು, ಕನ್ನಡ, ಹಿಂದಿ, ತಮಿಳು ಸೇರಿದಂತೆ ಎಂಟು ಭಾಷೆಗಳಲ್ಲಿ ವೀಕ್ಷಣೆಗೆ ಲಭ್ಯವಿದೆ. ಥ್ರಿಲ್ಲರ್ ಮಿಸ್ಟರಿ ಜಾನರ್‌ನಲ್ಲಿ ಈ ಸರಣಿಯಿದೆ. ಅಸಾಧಾರಣ ಶಕ್ತಿ ಹೊಂದಿದ ಯುವಕನೊಬ್ಬ ತಂಡವೊಂದನ್ನು ಕಟ್ಟಿಕೊಂಡು ಅತ್ಯಂತ ಕಠಿಣ ಪ್ರಕರಣಗಳನ್ನು ಬಗೆಹರಿಸುವ ಕಥೆ ಇದರಲ್ಲಿದೆ. ಮುಖ್ಯಭೂಮಿಕೆಯಲ್ಲಿ ದೀಕ್ಷಿತ್ ನಟಿಸಿದ್ದಾರೆ. ಮೊದಲ ಸೀಸನ್‌ನಲ್ಲಿ ಒಟ್ಟು ಆರು ಕಂತುಗಳು ಇವೆ.

ದೀಕ್ಷಿತ್ ಸದ್ಯ ರಶ್ಮಿಕಾ ಮಂದಣ್ಣ ಅವರ ಜೊತೆಗಿನ ತೆಲುಗು ಸಿನಿಮಾ ‘ದಿ ಗರ್ಲ್‌ಫ್ರೆಂಡ್’ ಹಾಗೂ ಕನ್ನಡದ ‘ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ’ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಜೊತೆಗೆ ತೆಲುಗಿನಲ್ಲಿ ‘ಕೆ.ಜೆ.ಕ್ಯು’, ಮಲಯಾಳದಲ್ಲಿ ‘ಒಪ್ಪೀಸ್’ ಎಂಬ ಸಿನಿಮಾವನ್ನೂ ಮಾಡುತ್ತಿದ್ದಾರೆ. ❖

ಬಾಲಿವುಡ್ ಉತ್ತಮಗೊಳ್ಳಲು ಅವಕಾಶವಿದೆ ಅಮೀರ್



ಬಾಲಿವುಡ್ ಸಿನಿಮಾಗಳ ಸೋಲಿನ ಕುರಿತು ಅಮೀರ್ ಖಾನ್ ಮುಕ್ತವಾಗಿ ಮಾತನಾಡಿದ್ದಾರೆ. ಹಿಂದಿ ಸಿನಿಮಾಗಳ ನಿರ್ಮಾಪಕರು ತಮ್ಮ ಸಿನಿಮಾಗಳನ್ನು ಉತ್ತಮವಾಗಿಸಲು ಸಾಕಷ್ಟು ಅವಕಾಶವಿದೆ ಎಂದು ಹೇಳಿದ್ದಾರೆ.

ವಿದೇಶಿ ಮಾಧ್ಯಮಕ್ಕೆ ಸಂದರ್ಶನ ನೀಡಿರುವ ಅವರು, ‘ಹಾಗಂತ ಇತರ ಚಿತ್ರರಂಗಕ್ಕಿಂತ ಹಿಂದೆ ಇದ್ದೇವೆ, ಈಗ ಕಳಪೆ ಸಿನಿಮಾ ಮಾಡುತ್ತಿದ್ದೇವೆ ಎಂದಲ್ಲ. ಪ್ರಸ್ತುತ ಕಾಲಮಾನಕ್ಕೆ ತಕ್ಕಂತೆ ನಮ್ಮನ್ನು ಉತ್ತಮವಾಗಿಸಿಕೊಳ್ಳಲು ಮತ್ತು ಇತರ ಚಿತ್ರರಂಗಗಳಿಂದ ಕಲಿಯಲು ಸಾಕಷ್ಟು ಅವಕಾಶಗಳಿವೆ. ಸಿನಿಮಾ ನಿರ್ಮಾಣದ ಗುಣಮಟ್ಟವನ್ನು ಹೆಚ್ಚಿಸುವತ್ತ ಗಮನ ಹರಿಸಬೇಕು’ ಎಂದಿದ್ದಾರೆ.

ತಮ್ಮ ‘ಲಾಲ್‌ಸಿಂಗ್ ಚಡ್ಡಾ’ ಚಿತ್ರ ಏಕೆ ಜನಮನ್ನಣೆ ಗಳಿಸಲಿಲ್ಲ ಎಂಬ ಕುರಿತು ಅವರು ಅವಲೋಕಿಸಿದ್ದಾರೆ. ‘1970–80ರ ದಶಕಕ್ಕೆ ಹೋಲಿಸಿದರೆ 80–90ರ ದಶಕದ ಸಿನಿಮಾಗಳು ಕಡಿಮೆ ಗುಣಮಟ್ಟ ಹೊಂದಿದ್ದವು. 1990ರ ನಂತರ ಬಾಲಿವುಡ್ ಮತ್ತೆ ಚೇತರಿಕೆ ಕಂಡಿತು. 2000 ದಲ್ಲಿ ಪ್ರೇಕ್ಷಕರು ಬದಲಾದರು. ಅಲ್ಲಿಂದ ನಂತರ ಪ್ರೇಕ್ಷಕರು ಮುಕ್ತ ಮನಸಿನವರಾಗಿದ್ದು ಭಿನ್ನ ಕಂಟೆಂಟ್ ಸಿನಿಮಾಗಳನ್ನು ಬಯಸುತ್ತಿದ್ದಾರೆ’ ಎಂದು ಅಮೀರ್ ಅಭಿಪ್ರಾಯಪಟ್ಟಿದ್ದಾರೆ.

‘ಸದ್ಯದ ಸ್ಥಿತಿಯಲ್ಲಿ ಬಾಲಿವುಡ್ ಚಿತ್ರಗಳು ಉತ್ತಮವಾಗಿಲ್ಲ. ಉತ್ತಮಪಡಿಸಿಕೊಳ್ಳಲು, ಕಲಿಕೆಗೆ ಅವಕಾಶವಿದೆ. ಪ್ರತಿ ಕ್ಷೇತ್ರದಲ್ಲಿಯೂ ಏರಿಳಿತಗಳಿರುತ್ತವೆ. ನಾವೀಗ ಇಳಿಮುಖವಾಗಿದ್ದೇವೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಇದೇನು ಹೊಸತಲ್ಲ. ಇದೊಂದು ಚಕ್ರವಷ್ಟೆ. ಈ ಹಂತ ದಾಟಿ ಬರುತ್ತೇವೆ. ನನಗೆ ನಂಬಿಕೆ ಇರುವ ಕಥೆಗಳನ್ನು ಸಿನಿಮಾವಾಗಿಸುತ್ತೇನೆ’ ಎಂದವರು ತಿಳಿಸಿದ್ದಾರೆ. ❖



ತಮಿಳು ನಟ ಶೇಖರ್ ನಡೆಗೆ 'ಸುಪ್ರೀಂ' ಕಿಡಿ

ನವದೆಹಲಿ (ಪಿಟಿಐ): ಪತ್ರಕರ್ತರ ವಿರುದ್ಧದ ಆಕ್ಷೇಪಾರ್ಹ ಪೋಸ್ಟ್‌ಗೆ ಸಂಬಂಧಿಸಿದಂತೆ ತಮಿಳು ಚಿತ್ರನಟ, ರಾಜಕಾರಣಿ ಎಸ್.ವಿ.ಶೇಖರ್ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, 'ಅವರು ಮಹಿಳೆಯರ ವಿರುದ್ಧ ಕೆಟ್ಟದಾಗಿ ಅಭಿಯಾನ ನಡೆಸಿದ್ದಾರೆ' ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್.ಕೋಟಿಶ್ವರ್ ಸಿಂಗ್ ಅವರಿದ್ದ ಪೀಠ, 'ನಟ ತನ್ನ ನಡೆಗಾಗಿ ಕ್ಷಮೆ ಕೋರಿಲ್ಲ' ಎಂಬುದನ್ನು ಗಮನಕ್ಕೆ ತೆಗೆದುಕೊಂಡಿತು. ಪ್ರಕರಣದ ಮುಂದಿನ ವಿಚಾರಣೆಯವರೆಗೆ ಶರಣಾಗುವುದರಿಂದ ಆರೋಪಿಗೆ ವಿನಾಯಿತಿ ನೀಡಿತು.

'ಸಾಮಾಜಿಕ ಜಾಲತಾಣದ ಪೋಸ್ಟ್ ಮೂಲಕ ನೀವು ಮಹಿಳೆಯ ಘನತೆ, ವ್ಯಕ್ತಿತ್ವದ ಮೇಲೆ ನೇರವಾಗಿ, ಕಟುವಾಗಿ ಅನುಚಿತ ಕ್ರಮದಲ್ಲಿ ದಾಳಿ ನಡೆಸಿದ್ದೀರಿ' ಎಂದು ಪೀಠವು ಕಟುವಾಗಿ ಹೇಳಿತು.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ನೋಂದಣಿ ಕಛೇರಿ : ಗುವಿಸಕಂನಿ, ನಿಗಮ ಕಾರ್ಯಾಲಯ, ಸ್ಟೇಷನ್ ಮುಖ್ಯ ರಸ್ತೆ, ಕಲಬುರಗಿ–585102
CIN : U4010KA2002SGC030436, Email : eeitgescom@gmail.com
Website ; www.gescom.karnatakagov.in

ಸಂಖ್ಯೆ: ಜೆಸ್ಕಾಂ/ಮು.ಅ(ಕಾರ್ಯಾಚರಣೆ)/ಅ.ಅ(ವಾಣಿಜ್ಯ)/ಕಾ.ನಿ.ಅ(ಐ.ಟಿ)/ಸ.ಕಾ.ನಿ(ಐ.ಟಿ)/ಸ.ಅ(ಐ.ಟಿ)–08/2025–26 4644–4658 ದಿನಾಂಕ : 24–04–2025

ಟೆಂಡರ ಪ್ರಕಟಣೆ (KPPP ಪೋರ್ಟಲ್ ಪದ್ಧತಿಯಲ್ಲಿ ಮಾತ್ರ)

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ವ್ಯಾಪ್ತಿಯಲ್ಲಿ **"ಇಂಪ್ಲಿಮೆಂಟೇಶನ್ ಆಫ್ ಅಪ್ಲಿಕೇಶನ್ ಏಕ್ಸೆಸ ಕಂಟ್ರೋಲ್ ಸಿಸ್ಟಮ್ ಇನ್ ಜೆಸ್ಕಾಂ"** ಗಾಗಿ ಒಟ್ಟು ಟರ್ನ್ಕೀ ಆಧಾರದ ಮೇಲೆ ಅರ್ಹ ಬಿಡ್ಡುದಾರರಿಂದ KPPP ಪೋರ್ಟಲ್ ಮೂಲಕ ಟೆಂಡರ್ ಅನ್ನು ಆಹ್ವಾನಿಸುತ್ತದೆ.
1) ವಿಚಾರಣೆ ಸಂಖ್ಯೆ : **GESCOM/CEE/SEE/EE/2025-26/IT32,** 2) ಕಂಪನಿ : **GESCOM**
ಬಿಡ್ಡದಾಖಲೆಗಳು ದಿನಾಂಕ : **05–05–2025 ರಂದು** ಅಥವಾ ನಂತರ https://kppp.karnataka.gov.in ನಲ್ಲಿ ಲಭ್ಯವಿರುತ್ತವೆ. ಬಿಡ್ಡುದಾರರು ಟೆಂಡರ್‌ಗಳಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸರ್ಕಾರದ KPPP ಪೋರ್ಟಲ್ ಮೂಲಕ https://kppp.karnataka.gov.in ಪಡೆಯಬಹುದಾಗಿದೆ.

ಸಹಿ/– ಮುಖ್ಯ ಅಭಿಯಂತರರು (ವಿ),
(ಕಾರ್ಯಾಚರಣೆ), ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ

ವಾ.ಸಾ.ಸಂ.ಇ./ಕಲಬುರಗಿ/64/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.49, 4 ಮತ್ತು 5ನೇ ಮಹಡಿ, 'ಈಸ್ಟ್‌ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001
ದೂರವಾಣಿ ಸಂ: 080–22265383 ವೆಬ್‌ಸೈಟ್: **www.kiadb.in** ಇಮೇಲ್: **ceoemkiadb@gmail.com**

ಸಂ: ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:44705–II/1253/2025–26 ದಿನಾಂಕ: 25.04.2025

ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕ.ಕೈ.ಪ್ರ.ಅ.ಮಂ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966 ರಡಿಯಲ್ಲಿ ಸಂಯೋಜಿತವಾದ ಒಂದು ಶಾಸನಬದ್ಧ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಭಿವೃದ್ಧಿ ಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ವೃದ್ಧಿಗಾಗಿ ಎಲ್ಲಾ ಮೂಲಸೌಕರ್ಯಗಳೊಂದಿಗೆ ಕ್ರಮಬದ್ಧವಾಗಿ ನಿರ್ಮಾಣ ಮಾಡುವ ಧ್ಯೇಯೋದ್ದೇಶ ಹೊಂದಿದೆ. ಮಂಡಳಿಯು ಅಭಿವೃದ್ಧಿ ಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕೋದ್ಯಮಿಗಳ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಸಿಎ/ಅಮೆನಿಟಿ ನಿವೇಶನಗಳನ್ನು ರಚಿಸುವ ಬಗ್ಗೆ ಕೆಐಎಡಿ ಕಾಯ್ದೆ 1966 ರ ಸೆಕ್ಷನ್ 14 (ಸಿ) ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ. ಸಿಐ 78 ಎಸ್‌ಪಿಕ್ಯೂ 2021 ಬೆಂಗಳೂರು ದಿನಾಂಕ:10.11.2023 ರಲ್ಲಿ ಈ ಹಿಂದಿನ ಸರ್ಕಾರಿ ಅಧಿಸೂಚನೆ ಸಂ:ಸಿಐ 86 ಎಸ್‌ಪಿಕ್ಯೂ 90 ಬೆಂಗಳೂರು ದಿನಾಂಕ:13.03.1991 ನ್ನು ಹಿಂಪಡೆದು ಕೆಲವು ಚಟುವಟಿಕೆಗಳನ್ನು ಅಮೆನಿಟಿ ಎಂದು ನಿಗದಿಪಡಿಸಿರುತ್ತದೆ. (ಮಂಡಳಿಯ ವೆಬ್‌ಸೈಟ್: **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ).

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಐ 78 ಎಸ್‌ಪಿಕ್ಯೂ 2021 ದಿ:10.11.2023 ರಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶದಲ್ಲಿನ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಕಾರ್ಯವಿಧಾನಗಳನ್ನು ರಚಿಸಿ 10 ವರ್ಷಗಳ ಗುತ್ತಿಗೆ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಆಧಾರದಲ್ಲಿ ಹಂಚಿಕೆ ಮಾಡಲು ಆದೇಶಿಸಲಾಗಿದೆ. (ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ).

ಮುಂದುವರೆದು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಐ 78 ಎಸ್‌ಪಿಕ್ಯೂ 2021 ದಿ:05.02.2024 ರಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಒಟ್ಟು ಸಿ.ಎ. ನಿವೇಶನಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ.24.10 ರಷ್ಟು ಮೀಸಲಾತಿಯನ್ನು ನಿಗದಿಪಡಿಸಿ ಆದೇಶಿಸಲಾಗಿದೆ. (ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ).

ಈ ಹಿಂದೆ, ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ಖಾಸಗಿ ಉದ್ಯಮ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಉದ್ದಿಮೆದಾರರಿಂದ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ:05.02.2024 (ಪ್ರಕಟಣೆ ದಿನಾಂಕ:06.02.2024) ಮತ್ತು ದಿನಾಂಕ:07.02.2024 (ಪ್ರಕಟಣೆ ದಿನಾಂಕ:08.02.2024) ಗಳಂದು ಅಧಿಸೂಚನೆ ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ತಿಳಿಸಿದಂತಹ ಮಾರ್ಗಸೂಚಿಗಳನ್ವಯ ಅರ್ಹ ಅರ್ಜಿದಾರರಿಗೆ ದಿನಾಂಕ:05.03.2024ರ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಿರ್ಣಯದನ್ವಯ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಸದರಿ ಸಭೆಯ ನಡವಳಿಯು ಕೆಐಎಡಿಬಿ ವೆಬ್‌ಸೈಟ್ **(www.kiadb.in)** ನಲ್ಲಿ ಲಭ್ಯವಿರುತ್ತದೆ.

ಮುಂದುವರೆದು, ಮಂಡಳಿಯು ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿನ ಲಭ್ಯವಿರುವ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ಖಾಸಗಿ ಉದ್ಯಮ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಉದ್ದಿಮೆದಾರರಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ಮಂಡಳಿಯ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗೆ ಪ್ರಸ್ತಾಪಿಸಿರುವ ಸಿಎ/ಅಮೆನಿಟಿ ನಿವೇಶನಗಳ ಪಟ್ಟಿಯನ್ನು ದಿನಾಂಕ:02.05.2025 ರಿಂದ ಸಂಬಂಧಿಸಿದ ಎಲ್ಲಾ ಮಾಹಿತಿಯೊಂದಿಗೆ ಅಂದರೆ ಕೈಗಾರಿಕಾ ಪ್ರದೇಶ, ನಿವೇಶನ ಸಂಖ್ಯೆ, ವಿಸ್ತೀರ್ಣ, ವರ್ಗ, ತಾತ್ಕಾಲಿಕ ಹಂಚಿಕೆ ದರ ಇತ್ಯಾದಿ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **www.kiadb.in** ರಲ್ಲಿ ಪ್ರಕಟಿಸಲಾಗುತ್ತದೆ. ಅರ್ಜಿದಾರರು ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಎಲ್ಲಾ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು ಹಾಗೂ ರೂ.2,000/–ಗಳ ಅರ್ಜಿ ಶುಲ್ಕವನ್ನು RTGS ಮುಖಾಂತರ ಪಾವತಿಸುವುದು.

ನಿಗದಿತ ಅರ್ಜಿ ನಮೂನೆ ಮತ್ತು RTGS ವಿವರಗಳನ್ನು ಮಂಡಳಿಯ ವೆಬ್‌ಸೈಟ್:**www.kiadb.in** ರಲ್ಲಿ **ದಿನಾಂಕ: 02.05.2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

District	Industrial Area
Bengaluru Urban	(Hardware Sector) Hitech Defence & Aerospace Park, Bengaluru Phase-1
Bengaluru Rural	Sompura 1st & 2nd Stage
	Avverahalli (Dobaspet 4th Phase)
	Hitech, Defence & Aerospace Park Phase-2
	Adinarayanahosahalli Phase-1 (Doddaballapura 4th Phase)
	Devanahalli General Industrial Area Phase-1
Ramanagara	Harohalli 3rd Phase
	Harohalli 3rd Phase (Women Entrepreneurs Park)
Chikkaballapura	Gowribidnur 2nd Phase
	Mastenahalli 1st Phase
Kolar	Vemgal
	Narasapura
	Malur 4th Phase
Tumakuru	Antharasanahalli 2nd Phase
	Vasanthanarasapura 1st Phase
	Vasanthanarasapura 1st Phase (Annexe)
	Vasanthanarasapura 2nd Phase
	Vasanthanarasapura 3rd Phase
	Vasanthanarasapura 3rd Phase (Residential Layout)
	Sira
	Tumkur Machine Tool Park
Belagavi	Kanagala
	Kakati
Vijayapura	Mahalbhagayat
	Mulawad
Davanagere	SarathiKurubarahalli 1st Stage
Dakshina Kannada	Baikampadi
	EPIP 1st Phase
Udupi	Nandikur
	Belapu
	Miyaru
Chikkamagaluru	Amble
Chamarajanagar	Badanaguppe & Kellamballi
Mysuru	Kadakola
	Adakanahalli
	Thandya 2nd Phase
	Thandya 2nd Phase Womens Park 1st Phase
	Koorgalli
Dharwad	Gamanagatti 1st Stage
	Rayapura
	Kotur Belur
	Mummigatti
Gadag	Narasapur
Kalaburgi	Kapnoor 3rd Stage
	Nandur Kesaratagi 2nd Phase
	Womens Park
Yadgir	Kadechur

ಅರ್ಜಿದಾರರು ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ವೆಬ್‌ಸೈಟ್‌ನಲ್ಲಿ ಇರುವ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ವಲಯ ಕಛೇರಿ ರವರುಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

ಮಂಡಳಿಯು ಯಾವುದೇ ನಿವೇಶನ ಅಥವಾ ಕೈಗಾರಿಕಾ ಪ್ರದೇಶದ ಅಧಿಸೂಚನೆಯನ್ನು ಹಿಂಪಡೆಯಲು ಅಧಿಕಾರ ಹೊಂದಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ಮಂಡಳಿಯ ನಿರ್ಣಯ ಅಂತಿಮವಾಗಿರುತ್ತದೆ, ಮತ್ತು ಮಂಡಳಿಯ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಅರ್ಜಿ ಸಲ್ಲಿಸಲು **ದಿನಾಂಕ:02.05.2025 ರಿಂದ** ಮೂರು ವಾರಗಳ ಕಾಲಾವಕಾಶವಿರುತ್ತದೆ. ಅರ್ಜಿ ಸಲ್ಲಿಸಲು **ದಿನಾಂಕ:22.05.2025 ಕೊನೆಯ** ದಿನಾಂಕವಾಗಿರುತ್ತದೆ. ಅರ್ಜಿ ಶುಲ್ಕ ಸಲ್ಲಿಸದ ಹಾಗೂ ಇತರೆ ಅಪೂರ್ಣಗೊಂಡ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕು ಮಂಡಳಿಗಿರುತ್ತದೆ. ನಿವೇಶನ ಹಂಚಿಕೆಯ ವಿಷಯದಲ್ಲಿ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ ಹಾಗೂ ಇದಕ್ಕೆ ಎಲ್ಲಾ ಅರ್ಜಿದಾರರು ಬದ್ಧರಾಗಿರಬೇಕಾಗಿರುತ್ತದೆ.

ದಿನಾಂಕ:25.04.2025
ಸ್ಥಳ: ಬೆಂಗಳೂರು

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ಸದಸ್ಯರು.

ಸಂಸತ್ ಅಂಗೀಕರಿಸಿರುವ ಕಾರಣ ಸಿಂಧುತ್ವ ಹೊಂದಿದೆ: 'ಸುಪ್ರೀಂ'ಗೆ ಪ್ರಮಾಣಪತ್ರ

ವಕ್ಫ್ ಕಾಯ್ದೆ ತಡೆಗೆ ಕೇಂದ್ರ ವಿರೋಧ

ನವದೆಹಲಿ(ಪಿಟಿಐ): ಕೇಂದ್ರ ಸರ್ಕಾರವು ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಶುಕ್ರವಾರ ಬಲವಾಗಿ ಸಮರ್ಥಿಸಿಕೊಂಡಿದೆ.

ಸಂಸತ್‌ನಲ್ಲಿ ಅಂಗೀಕರಿಸಲಾದ ಈ ಕಾಯ್ದೆಗೆ ಸಾಂವಿಧಾನಿಕ ಸಿಂಧುತ್ವ ಇರುತ್ತದೆ. ಹೀಗಾಗಿ ಕಾಯ್ದೆಗೆ ಸಂಬಂಧಿಸಿ ವ್ಯಾಪಕವಾಗಿ ಅನ್ವಯವಾಗುವಂತೆ ತಡೆ ನೀಡುವುದನ್ನು ಕೂಡ ಕೇಂದ್ರ ವಿರೋಧಿಸಿದೆ.

ಸುಪ್ರೀಂ ಕೋರ್ಟ್‌ಗೆ 1,332 ಪುಟಗಳ ಪ್ರಾಥಮಿಕ ಪ್ರಮಾಣಪತ್ರ ಸಲ್ಲಿಸಿರುವ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ , 'ವಕ್ಫ್ ತಿದ್ದುಪಡಿ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಗಳನ್ನು ವಜಾಗೊಳಿಸಬೇಕು' ಎಂದು ಕೋರಿದೆ.

ಮುಖ್ಯನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ನ್ಯಾಯಪೀಠವು, ವಕ್ಫ್ ಕಾಯ್ದೆಯಲ್ಲಿನ ಕೆಲ ಅವಕಾಶಗಳ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಗಳ ವಿಚಾರಣೆಯನ್ನು ಮೇ 5ರಂದು ನಡೆಸಲಿದೆ.

'ಈ ಮೇಲ್ಮನವಿಗಳು, ಕಾಯ್ದೆಯಲ್ಲಿನ ಕೆಲ ಅವಕಾಶಗಳ ಕುರಿತಂತೆ ದುರುದ್ದೇಶದಿಂದ ಕೂಡಿದ ಸುಳ್ಳು ಸಂಕಥನಗಳನ್ನು ಒಳಗೊಂಡಿವೆ. ಅರ್ಜಿದಾರರು ಉಲ್ಲೇಖಿಸಿರುವ ವಿಚಾರಗಳು ತಪ್ಪು ಮಾತ್ರವಲ್ಲ ಉದ್ದೇಶಪೂರ್ವಕವಾಗಿ ನ್ಯಾಯಾಲಯದ ದಾರಿ ತಪ್ಪಿಸುವಂತಿವೆ. ಹೀಗಾಗಿ ಕಾಯ್ದೆಯಲ್ಲಿ ಅವಕಾಶಗಳಿಗೆ ತಡೆ ನೀಡಬಾರದು' ಎಂದೂ ಪ್ರತಿಪಾದಿಸಿದೆ.

'ಅವಕಾಶಗಳ ದುರ್ಬಳಕೆ': ವಕ್ಫ್ ಕಾಯ್ದೆಯಲ್ಲಿನ ಕೆಲ ಅವಕಾಶಗಳನ್ನು ದುರ್ಬಳಕೆ ಮಾಡಿಕೊಂಡಿರುವ ಹಲವಾರು ನಿದರ್ಶನಗಳು ಇವೆ ಎಂದು ಕೇಂದ್ರ ಸರ್ಕಾರ ತನ್ನ ಪ್ರಮಾಣಪತ್ರದಲ್ಲಿ ವಿವರಿಸಿದೆ.

'ಬಳಕೆಯ ಕಾರಣದಿಂದಾಗಿ ವಕ್ಫ್' ಹಾಗೂ 'ಯಾವುದೇ ಆಸ್ತಿಯನ್ನು ವಕ್ಫ್ ಎಂಬುದಾಗಿ ವಕ್ಫ್ ಮಂಡಳಿ ಘೋಷಿಸುವುದು' ಅವಕಾಶಗಳು ಸರ್ಕಾರಿ ಮತ್ತು ಖಾಸಗಿ ಆಸ್ತಿಗಳನ್ನು ಒತ್ತುವರಿ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದವು ಎಂಬುದು ಸಾಬೀತಾಗಿದೆ ಎಂದು ಕೇಂದ್ರ ಹೇಳಿದೆ.

ಕೇಂದ್ರದ ವಾದ: ಪ್ರಮುಖ ಅಂಶಗಳು

- ಕಾಯ್ದೆಗೆ ಸಂಬಂಧಿಸಿ ಸಂಪೂರ್ಣ ಅಥವಾ ಭಾಗಶಃ ತಡೆ ನೀಡುವುದರಿಂದ ಆಗುವ ಪರಿಣಾಮಗಳ ಕುರಿತು ಅರಿವು ಇಲ್ಲದೆಯೇ ಇಂತಹ ಯಾವುದೇ ಆದೇಶ ನೀಡುವುದನ್ನು ಒಪ್ಪತಕ್ಕದ್ದಲ್ಲ. ಇಂತಹ ಆದೇಶವು ಮುಸ್ಲಿಂ ಸಮುದಾಯದ ಸದಸ್ಯರ ಮೇಲೂ ಅಡ್ಡ ಪರಿಣಾಮ ಬೀರುತ್ತದೆ
- ಶಾಸನಾತ್ಮಕ ಅವಕಾಶಗಳಿಗೆ ಸಾಂವಿಧಾನಿಕ ಕೋರ್ಟ್‌ಗಳು ನೇರವಾಗಿ ಇಲ್ಲವೇ ಪರೋಕ್ಷವಾಗಿ ತಡೆ ನೀಡುವಂತಿಲ್ಲ ಎಂಬುದು ಸ್ಥಾಪಿತ ತತ್ವ. ಸಂಸತ್‌ನಲ್ಲಿ ಅಂಗೀಕರಿಸಿರುವ ಕಾಯ್ದೆಗಳು ಸಾಂವಿಧಾನಿಕ ಸಿಂಧುತ್ವ ಹೊಂದಿರುತ್ತವೆ ಎಂದೇ ಭಾವಿಸಲಾಗುತ್ತದೆ. ಇದನ್ನು ಬದಲಾಯಿಸುವುದಕ್ಕೆ 'ಅನುಮತಿ ನೀಡಲಾಗುವುದಿಲ್ಲ'
- ವಕ್ಫ್ ಹೊಂದಿರುವ ಆಸ್ತಿಯ ಪ್ರಮಾಣದಲ್ಲಿ 2013ರಿಂದ ಶೇ 116ರಷ್ಟು ಹೆಚ್ಚಳ ಕಂಡುಬಂದಿದೆ
- 'ಬಳಕೆಯ ಕಾರಣದಿಂದಾಗಿ ವಕ್ಫ್' ಆಸ್ತಿಗಳನ್ನು ಏಪ್ರಿಲ್ 8ರ ಹೊತ್ತಿಗೆ ನೋಂದಣಿ ಮಾಡಿಸಿರಬೇಕು ಎಂಬ ಅವಕಾಶಕ್ಕೆ ವಿರೋಧ ಸಲ್ಲ. ಯಾವುದೇ ಮಧ್ಯಂತರ ಆದೇಶದ ಮೂಲಕ ಇಂತಹ ಅವಕಾಶದಲ್ಲಿ ಹಸ್ತಕ್ಷೇಪ ಮಾಡಿದಲ್ಲಿ, ಅದು 'ನ್ಯಾಯಾಂಗದ ಆದೇಶದ ಮೂಲಕ ಸೃಜಿಸಿದ ಆಡಳಿತ' ಎನಿಸುತ್ತದೆ
- ಕಾಯ್ದೆಗೆ ತಂದ ತಿದ್ದುಪಡಿಯಿಂದಾಗಿ ಕೇಂದ್ರೀಯ ವಕ್ಫ್ ಪರಿಷತ್ತು ಮತ್ತು ರಾಜ್ಯ ವಕ್ಫ್ ಮಂಡಳಿಗಳಲ್ಲಿ ಮುಸ್ಲಿಮರ ಸಂಖ್ಯೆ ಕುಸಿಯಲಿದೆ ಎಂಬ ವಾದದಲ್ಲಿ ಹುರುಳಿಲ್ಲ
- ಅರ್ಜಿದಾರರ ನಿವೇದನೆಯಂತೆ ನೀಡುವ ಯಾವುದೇ ಆದೇಶವು ಸಂಸತ್‌ನಲ್ಲಿ ಅಂಗೀಕಾರಗೊಂಡಿರುವ ಈ ತಿದ್ದುಪಡಿ ಕಾಯ್ದೆಗೆ ತಡೆ ನೀಡಿದಂತಾಗಲಿದೆ. ಇಂತಹ ಆದೇಶ ಹೊರಡಿಸಲು ಅವಕಾಶ ಇಲ್ಲ ಎಂಬುದನ್ನು ಸಂವಿಧಾನದಲ್ಲಿಯೇ ನಿರೂಪಿಸಲಾಗಿದೆ
- ವಕ್ಫ್ ತಿದ್ದುಪಡಿ ಕಾಯ್ದೆಯು ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂಬ ವಾದದಲ್ಲಿ ಸತ್ಯಾಂಶ ಇಲ್ಲ. ಕಾಯ್ದೆಯು ಮುಸ್ಲಿಂ ಸಮುದಾಯದ ಮುಖ್ಯ ಧಾರ್ಮಿಕ ಪದ್ಧತಿಗಳನ್ನು ಗೌರವಿಸುತ್ತದೆ. ನಂಬಿಕೆ ಮತ್ತು ಪ್ರಾರ್ಥನೆಯಂತಹ ವಿಚಾರಗಳ ಗೊಡವೆಗೇ ಹೋಗಿಲ್ಲ
- ವಕ್ಫ್ ಆಸ್ತಿಗಳ ಆಡಳಿತವು ಜಾತ್ಯತೀತವಾಗಿರುವ ಕಾರ್ಯ. ವಕ್ಫ್ ಪರಿಷತ್ತು ಮತ್ತು ಮಂಡಳಿಗಳು ಧಾರ್ಮಿಕ ಚಟುವಟಿಕೆಗಳಿಗೆ ಹೊಣೆಯಲ್ಲ ಹೀಗಾಗಿ ಮುಸ್ಲಿಮರಲ್ಲದವರು ಮಂಡಳಿಗಳಲ್ಲಿ ಇರುವುದರಿಂದ ಸಂವಿಧಾನದ 26ನೇ ವಿಧಿಯ ಉಲ್ಲಂಘನೆ ಆಗುವುದಿಲ್ಲ



ಮೇಧಾ ಪಾಟ್ಕರ್ ಶಿಕ್ಷೆ ಅಮಾನತು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಅವರನ್ನು 23 ವರ್ಷಗಳ ಹಿಂದಿನ ಕ್ರಿಮಿನಲ್ ಮಾನನಷ್ಟ ಪ್ರಕರಣದಲ್ಲಿ ಶುಕ್ರವಾರ ಬೆಳಿಗ್ಗೆ ಪೊಲೀಸರು ಬಂಧಿಸಿದರು.



ಆದರೆ, ಅವರಿಗೆ ವಿಧಿಸಲಾಗಿದ್ದ ಶಿಕ್ಷೆಯನ್ನು ದೆಹಲಿ ಹೈಕೋರ್ಟ್ ಮಧ್ಯಾಹ್ನ ಅಮಾನತಿನಲ್ಲಿರಿಸಿತು.

ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಶಾಲಿಂದರ್ ಕೌರ್ ಅವರು, ₹25,000 ವೈಯಕ್ತಿಕ ಬಾಂಡ್ ಆಧಾರದ ಮೇಲೆ ಮೇಧಾ ಅವರ ಬಿಡುಗಡೆಗೆ ಆದೇಶಿಸಿ, ವಿಚಾರಣೆಯನ್ನು ಮೇ 20ಕ್ಕೆ ಮುಂದೂಡಿದರು. ಜಾಮೀನು ಷರತ್ತುಗಳನ್ನು ಪೂರೈಸಿದ ಪಾಟ್ಕರ್ ಅವರನ್ನು ಸಂಜೆ ಬಿಡುಗಡೆ ಮಾಡಲಾಯಿತು.

ಎನ್‌ಬಿಡಬ್ಲ್ಯು ಹೊರಡಿಸಿದ್ದ ಕೋರ್ಟ್: 'ಪ್ರೊಬೇಷನ್' ಅವಧಿಗೆ ಸಂಬಂಧಿಸಿದಂತೆ ಮೇಧಾ ಅವರು ಬಾಂಡ್‌ಗಳನ್ನು ಸಲ್ಲಿಸದ ಕಾರಣ ಸೆಷನ್ಸ್ ನ್ಯಾಯಾಲಯವು ಎರಡು ದಿನಗಳ ಹಿಂದೆಯಷ್ಟೇ ಜಾಮೀನು ರಹಿತ ವಾರಂಟ್ (ಎನ್‌ಬಿಡಬ್ಲ್ಯು) ಹೊರಡಿಸಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಟ್ಕರ್ ಅವರನ್ನು ಶುಕ್ರವಾರ ಬೆಳಿಗ್ಗೆ ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಅವರು ಬಾಂಡ್‌ಗಳನ್ನು ಒದಗಿಸಿ, ಪರಿಹಾರ ಮೊತ್ತವನ್ನು ಠೇವಣಿ ಇರಿಸಿದ ಬಳಿಕ ಬಿಡುಗಡೆ ಮಾಡುವಂತೆ ನ್ಯಾಯಾಧೀಶರು ಮೌಖಿಕವಾಗಿ ಆದೇಶಿಸಿದ್ದರು ಎಂದು ಅವರು ಮಾಹಿತಿ ನೀಡಿದ್ದಾರೆ.

ಏನಿದು ಪ್ರಕರಣ?: ಮೇಧಾ ತಮ್ಮ ವಿರುದ್ಧ ಹೊರಡಿಸಿದ ಪತ್ರಿಕಾ ಹೇಳಿಕೆಯೊಂದು ಮಾನಹಾನಿಕರವಾಗಿದೆ ಎಂದು ದೂರಿ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲಿಸಿದ್ದರು. ಆಗ ಸಕ್ಸೇನಾ ಅವರು ನ್ಯಾಷನಲ್ ಕೌನ್ಸಿಲ್ ಆಫ್ ಸಿವಿಲ್ ಲಿಬರ್ಟೀಸ್‌ನ ಅಧ್ಯಕ್ಷರಾಗಿದ್ದರು.

ಈ ಪ್ರಕರಣದಲ್ಲಿ ಮೇಧಾ ಅವರು ಅಪರಾಧಿ ಎಂದು ತೀರ್ಪು ನೀಡಿದ್ದ ನ್ಯಾಯಾಲಯ ಐದು ತಿಂಗಳ ಜೈಲು ಶಿಕ್ಷೆ ವಿಧಿಸಿತ್ತು. ಅದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ವಿಶಾಲ್ ಸಿಂಗ್, ಮೇಧಾ ಅವರ ವಯಸ್ಸು, ಅಪರಾಧದ ತೀವ್ರತೆ ಮತ್ತು ಅವರು ಈ ಹಿಂದೆ ಯಾವುದೇ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗದೇ ಇರುವುದನ್ನು ಪರಿಗಣಿಸಿ 'ಪ್ರೊಬೇಷನ್' ಅವಧಿ ವಿಧಿಸಿರುವುದಾಗಿ ತಿಳಿಸಿದರು.

ಅಲ್ಲದೆ, ಅವರಿಗೆ ವಿಧಿಸಲಾಗಿದ್ದ ದಂಡದ ಮೊತ್ತವನ್ನು ₹10 ಲಕ್ಷದಿಂದ ₹1 ಲಕ್ಷಕ್ಕೆ ಇಳಿಸಿದ್ದರು. ಅಲ್ಲದೆ ₹25,000 ಪ್ರೊಬೇಷನ್ ಬಾಂಡ್ ಸಲ್ಲಿಸುವಂತೆ ಆದೇಶಿಸಿದ್ದರು.

'ಪ್ರೊಬೇಷನ್' ಅವಧಿಯಲ್ಲಿ ಅಪರಾಧಿಗಳನ್ನು ಜೈಲಿನಲ್ಲಿ ಇರಿಸದೆ, ಅವರ ದೈನಂದಿನ ಚಟುವಟಿಕೆಯ ಮೇಲೆ ನಿಗಾ ಇಡಲಾಗುತ್ತದೆ. ಮೇಧಾ ಅವರು ಒಂದು ವರ್ಷ ನಿಯುಕ್ತ ಅಧಿಕಾರಿಯ ನಿರೀಕ್ಷಣೆಯಲ್ಲಿರುವರು. ಈ ಅವಧಿಯಲ್ಲಿ ಅವರ ನಡವಳಿಕೆ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಕೆಯಾಗುವ ವರದಿ ಆಧರಿಸಿ ಮುಂದಿನ ಕ್ರಮ ಜರುಗಿಸಲಾಗುತ್ತದೆ.

ಈ ಕುರಿತ ಆದೇಶದ ಪ್ರಕಾರ ಪಾಟ್ಕರ್ ಅವರು ಏಪ್ರಿಲ್ 23ರಂದು 'ಪ್ರೊಬೇಷನ್' ಅವಧಿಗೆ ಸಂಬಂಧಿಸಿದಂತೆ ಬಾಂಡ್‌ಗಳನ್ನು ಒದಗಿಸಬೇಕಿತ್ತು.



ಉತ್ಸವ

ತಿರುವನಂತಪುರದಲ್ಲಿ ಅನಂತಪುರಿ ಮಹಾಸಮ್ಮೇಳನಂ ಉತ್ಸವದ ಅಂಗವಾಗಿ ಅಳವಡಿಸಿರುವ ಶಿವ ಮತ್ತು ಭಗವಾನ್ ಹನುಮಾನ್ ಕಟೌಟ್‌ಗಳ ಮುಂದೆ ಮಹಿಳೆಯೊಬ್ಬರು ಹಾದುಹೋದರು

– ಪಿಟಿಐ ಚಿತ್ರ

ಸೋನಿಯಾ, ರಾಹುಲ್‌ಗೆ ನೋಟಿಸ್ ನೀಡಲು ಕೋರ್ಟ್ ನಕಾರ

ನವದೆಹಲಿ(ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣದ ಜತೆ ನಂಟಿನ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ಈ ಹಂತದಲ್ಲಿ ನೋಟಿಸ್ ಜಾರಿ ಮಾಡಲು ದೆಹಲಿಯ ನ್ಯಾಯಾಲಯ ಶುಕ್ರವಾರ ನಿರಾಕರಿಸಿತು.

ಪ್ರಕರಣಕ್ಕೆ ಸಂಬಂಧಿಸಿ ಸಲ್ಲಿಸಲಾದ ಆರೋಪಪಟ್ಟಿಯನ್ನು ಪರಿಗಣಿಸಿ, ಆರೋಪಿಗಳಿಗೆ ನೋಟಿಸ್ ಜಾರಿ ಮಾಡುವಂತೆ ಜಾರಿ ನಿರ್ದೇಶನಾಲಯ(ಇ.ಡಿ), ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತ್ತು.

ಅರ್ಜಿ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ,'ಕಾಯ್ದೆಯಲ್ಲಿನ ಹೊಸ ಅವಕಾಶಗಳ ಪ್ರಕಾರ, ಆರೋಪಿಗಳ ಹೇಳಿಕೆಗಳನ್ನು ಪಡೆಯದೇ ಅವರ ವಿರುದ್ಧದ ಆರೋಪಪಟ್ಟಿಯನ್ನು ಪರಿಗಣಿಸಲು ಸಾಧ್ಯವಿಲ್ಲ' ಎಂದು ಹೇಳಿದರು.

'ಪ್ರಕರಣದ ವಿಚಾರಣೆ ದೀರ್ಘ ಕಾಲ ನಡೆಯುವುದು ಬೇಡ. ಕೂಡಲೇ ಆರೋಪಿಗಳಿಗೆ ನೋಟಿಸ್ ಜಾರಿ ಮಾಡಿ' ಎಂದು ಇ.ಡಿ ಪರ ವಕೀಲರು ಮನವಿ ಮಾಡಿದರು.

'ನೋಟಿಸ್ ನೀಡುವ ಅಗತ್ಯವಿದೆ ಎಂಬುದು ನ್ಯಾಯಾಲಯಕ್ಕೆ ಮನವರಿಕೆಯಾಗಬೇಕು. ಅಲ್ಲದೇ, ಅರ್ಜಿಯಲ್ಲಿ ಏನಾದರೂ ನ್ಯೂನತೆಗಳಿವೆಯೇ ಎಂಬುದನ್ನು ಪರಿಶೀಲಿಸಬೇಕು' ಎಂದು ನ್ಯಾಯಾಧೀಶರು ಹೇಳಿದರು.

'ಆರೋಪಪಟ್ಟಿಯಲ್ಲಿ ಕೆಲ ನಿರ್ದಿಷ್ಟ ದಾಖಲೆಗಳು ನಾಪತ್ತೆಯಾಗಿರುವ ಕುರಿತು ಕೋರ್ಟ್ ಸಿಬ್ಬಂದಿ ಹೇಳಿದ್ದಾರೆ. ಈ ದಾಖಲೆಗಳನ್ನು ನೀಡುವಂತೆ ಇ.ಡಿಗೆ ನಿರ್ದೇಶನ ನೀಡಲಾಗಿದೆ. ಅವುಗಳನ್ನು ಪರಿಶೀಲಿಸಿದ ನಂತರ ನೋಟಿಸ್ ಜಾರಿ ಕುರಿತು ನಿರ್ಧರಿಸಲಾಗುವುದು' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಇ.ಡಿ ಪರ ವಕೀಲರು, 'ಆರೋಪಪಟ್ಟಿ ಸಂಪೂರ್ಣ ಪಾರದರ್ಶಕವಾಗಿದೆ. ಯಾವುದನ್ನೂ ಮುಚ್ಚಿಟ್ಟಿಲ್ಲ' ಎಂದು ಹೇಳಿದರು.

ಆಗ, ವಿಚಾರಣೆಯನ್ನು ಮೇ 2ಕ್ಕೆ ಮುಂದೂಡಿ ನ್ಯಾಯಾಧೀಶರು ಆದೇಶಿಸಿದರು.

ಅಲಹಾಬಾದ್ ಹೈಕೋರ್ಟ್ ಆದೇಶಕ್ಕೆ ತಡೆ

ರಾಹುಲ್‌ಗೆ 'ಸುಪ್ರೀಂ' ತರಾಟೆ

ನವದೆಹಲಿ(ಪಿಟಿಐ): ಮಹಾರಾಷ್ಟ್ರದಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡುವ ವೇಳೆ ವಿನಾಯಕ ದಾಮೋದರ ಸಾವರ್ಕರ್ ಕುರಿತು 'ಬೇಜವಾಬ್ದಾರಿ' ಹೇಳಿಕೆ ನೀಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದ್ದರೂ, ಅವರ ವಿರುದ್ಧದ ಕ್ರಿಮಿನಲ್ ವಿಚಾರಣೆಗೆ ಶುಕ್ರವಾರ ತಡೆ ನೀಡಿದೆ.

ಉತ್ತರ ಪ್ರದೇಶ ಸರ್ಕಾರ ಹಾಗೂ ದೂರುದಾರರಾದ ವಕೀಲ ನೃಪೇಂದ್ರ ಪಾಂಡೆ ಅವರಿಗೆ ನೋಟಿಸ್ ಜಾರಿ ಮಾಡಿರುವ ಸುಪ್ರೀಂ ಕೋರ್ಟ್, ರಾಹುಲ್ ಗಾಂಧಿ ವಿರುದ್ಧದ ಸಮನ್ಸ್ ರದ್ದು ಮಾಡಲು ನಿರಾಕರಿಸಿ ಅಲಹಾಬಾದ್ ಹೈಕೋರ್ಟ್ ಹೊರಡಿಸಿದ್ದ ಆದೇಶಕ್ಕೆ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ದೀಪಾಂಕರ ದತ್ತ ಹಾಗೂ ಮನಮೋಹನ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, 'ಬ್ರಿಟಿಷರಿಗೆ ಬರೆದ ಪತ್ರಗಳಲ್ಲಿ ಮಹಾತ್ಮ ಗಾಂಧಿ ಕೂಡ 'ನಿಮ್ಮ ವಿಶ್ವಾಸಾರ್ಹ ಸೇವಕ' ಎಂಬ ಪದಗಳನ್ನು ಬಳಸಿದ್ದರು ಎಂಬುದು ನಿಮ್ಮ ಕಕ್ಷಿದಾರರಿಗೆ ತಿಳಿದಿದೆಯೇ' ಎಂದು ರಾಹುಲ್ ಗಾಂಧಿ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರನ್ನು ಪೀಠ ಪ್ರಶ್ನಿಸಿತು.



ರಾಹುಲ್ ಗಾಂಧಿ

'ವೈರತ್ವ ಬೆಳೆಸಲು ಯತ್ನ ಹಾಗೂ ಸಾರ್ವಜನಿಕವಾಗಿ ಕೆಟ್ಟ ನಡವಳಿಕೆಯಂತಹ ಆರೋಪಗಳನ್ನು ರಾಹುಲ್ ಗಾಂಧಿ ವಿರುದ್ಧ ಹೊರಿಸಲಾಗಿಲ್ಲ' ಎಂದು ಸಿಂಘ್ವಿ ಅವರು ಪೀಠಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ನೀವು ಬಹಳ ಗೌರವಾನ್ವಿತ ವ್ಯಕ್ತಿಯಾಗಿದ್ದೀರಿ. ಮಹಾತ್ಮ ಗಾಂಧಿ ಅವರು ಬ್ರಿಟಿಷ್ ವೈಸರಾಯ್ ಅವರಿಗೆ ಬರೆದ ಪತ್ರಗಳಲ್ಲಿ 'ನಿಮ್ಮ ಆಜ್ಞಾಧಾರಕ ಸೇವಕ' ಎಂದು ಬರೆದಿದ್ದರು ಎಂಬುದು ನಿಮ್ಮ ಕಕ್ಷಿದಾರರಿಗೆ ಗೊತ್ತಿದೆಯೇ. ಇಂತಹ ಪದಗಳನ್ನು ಬಳಸಿದ್ದಾರೆ ಎಂಬ ಕಾರಣಕ್ಕೆ ಗಾಂಧೀಜಿ ಅವರನ್ನು ಬ್ರಿಟಿಷರ ಸೇವಕ ಎಂದು ಕರೆಯಲು ಸಾಧ್ಯವೇ?' ಎಂದು ಹೇಳಿತು.

'ಈ ಹಿಂದೆ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನು ಉದ್ದೇಶಿಸಿ ಬರೆದ ಪತ್ರಗಳಲ್ಲಿ ಕಲ್ಕತ್ತ ಹೈಕೋರ್ಟ್ ನ್ಯಾಯಮೂರ್ತಿಗಳು 'ನಿಮ್ಮ ಸೇವಕ' ಎಂಬ ಪದಗಳನ್ನು ಬಳಸುತ್ತಿದ್ದುದನ್ನು ನಾವು ನೋಡಿದ್ದೇವೆ' ಎಂದು ನ್ಯಾಯಮೂರ್ತಿಗಳು ಹೇಳಿದರು.

'ರಾಜಕೀಯ ಪಕ್ಷವೊಂದರ ನಾಯಕರಾಗಿರುವ ರಾಹುಲ್ ಗಾಂಧಿ ಏಕೆ ಇಂತಹ ಹೇಳಿಕೆ ನೀಡಬೇಕು. ಮಹಾರಾಷ್ಟ್ರಕ್ಕೆ ಹೋಗಿ ನೋಡಿ, ಅಲ್ಲಿನ ಜನರು ಸಾವರ್ಕರ್ ಅವರನ್ನು ಪೂಜಿಸುತ್ತಾರೆ' ಎಂದ ಪೀಠ, 'ಭವಿಷ್ಯದಲ್ಲಿ ರಾಹುಲ್ ಗಾಂಧಿ ಅವರಿಂದ ಏನಾದರೂ ಇಂತಹ ಹೇಳಿಕೆಗಳು ಹೊರಬಿದ್ದಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಲಾಗುವುದು' ಎಂದು ಹೇಳಿತು.

'ನಿಮ್ಮ ಕಕ್ಷಿದಾರರ ಅಜ್ಜಿ (ಇಂದಿರಾ ಗಾಂಧಿ) ಪ್ರಧಾನಿಯಾಗಿದ್ದಾಗ, ಸಾವರ್ಕರ್ ಅವರನ್ನು ಹೊಗಳಿ ಪತ್ರ ಬರೆದಿದ್ದರು. ಈ ವಿಷಯ ನಿಮ್ಮ ಕಕ್ಷಿದಾರರಿಗೆ ತಿಳಿದಿದೆಯೇ?' ಎಂದು ನ್ಯಾಯಮೂರ್ತಿ ದತ್ತ ಅವರು ಸಿಂಘ್ವಿ ಉದ್ದೇಶಿಸಿ ಕೇಳಿದರು.

ಭಾರತ ಜೋಡೊ ಯಾತ್ರೆ ವೇಳೆ, ಮಹಾರಾಷ್ಟ್ರದ ಅಕೋಲಾ ಜಿಲ್ಲೆಯಲ್ಲಿ 2022ರ ನ. 17ರಂದು ರಾಹುಲ್ ಗಾಂಧಿ ಅವರು ಸಾವರ್ಕರ್ ಕುರಿತು ನೀಡಿದ್ದ ಹೇಳಿಕೆಗಳ ವಿರುದ್ಧ ದೂರು ದಾಖಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಜಾಜಿನಗರ ವಿಭಾಗ,
ಸರ್ ಎಂ. ವಿಶ್ವೇಶ್ವರಯ್ಯ ವಾಣಿಜ್ಯ ಸಂಕೀರ್ಣ, 12ನೇ ಮುಖ್ಯರಸ್ತೆ, 2ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು – 560010.

ಸಂಖ್ಯೆ: ಕಾಅ/ಆರ್‌ಎನ್‌ಆರ್/ಇ–ಪ್ರೋಕ್/01/2025–26 ದಿನಾಂಕ: 25–04–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ಸ್ – ಕೆಡಬ್ಲ್ಯೂ–4)

ಕ್ರ ಸಂ.	ಕಾಮಗಾರಿಯ ಹೆಸರು
1	ರಾಜಾಜಿನಗರ ವಿಧಾನಸಭಾ ಮತಕ್ಷೇತ್ರದ ರಾಜಾಜಿನಗರ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗದ ಸಮಗ್ರ ಅಭಿವೃದ್ಧಿ ಕಾಮಗಾರಿ ಹಾಗೂ ಉದ್ಯಾನವನಗಳ ಸುಂದರೀಕರಣ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 500.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 7,50,000.00**
2	ರಾಜಾಜಿನಗರ ವಿಧಾನಸಭಾ ಮತಕ್ಷೇತ್ರದ ಶ್ರೀರಾಮ ಮಂದಿರ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗದ ಸಮಗ್ರ ಅಭಿವೃದ್ಧಿ ಕಾಮಗಾರಿ ಹಾಗೂ ಉದ್ಯಾನವನಗಳ ಸುಂದರೀಕರಣ ಕಾಮಗಾರಿ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 500.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 7,50,000.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **09–05–2025 ರ 16.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **14–05–2025 ರಂದು 16.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **16–05–2025 ರಂದು 15.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ (ರಾಜಾಜಿನಗರ ವಿಭಾಗ)** ಇಲ್ಲಿ ನಡೆಯುವುದು. 4) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **26–05–2025 ರಂದು 16.00 ಗಂಟೆವರೆಗೆ.** 5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **27–05–2025 ರಂದು 16.00 ಗಂಟೆಗೆ.** 6) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **ಕೆಪಿಪಿ ಪೋರ್ಟಲ್ ಮೂಲಕ ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆಯಾದ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬಿಬಿಎಂಪಿ.

ಸಂಕ್ಷಿಪ್ತ ಸುದ್ದಿ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ: ಮುಖ್ಯ ಆರೋಪಿ ಬಂಧನ


ಪಟ್ನಾ (ಪಿಟಿಐ): ನೀಟ್ (ಯುಜಿ)–2024ರ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಮುಖ್ಯ ಆರೋಪಿ ಸಂಜೀವ್ ಕುಮಾರ್ ಸಿಂಗ್ ಅವರನ್ನು ಬಿಹಾರ ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧಗಳ ವಿಭಾಗ(ಇಒಯು) ಬಂಧಿಸಿದೆ.

'ಖಚಿತ ಮಾಹಿತಿಯ ಆಧಾರದಲ್ಲಿ ಶೋಧ ನಡೆಸಿದಾಗ ಆರೋಪಿ ಸಿಂಗ್ ಅಪಾರ್ಟ್‌ಮೆಂಟ್‌ವೊಂದರಲ್ಲಿ ಪತ್ತೆಯಾಗಿದ್ದಾರೆ' ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. ನಳಂದ ಸರ್ಕಾರಿ ಕಾಲೇಜಿನಲ್ಲಿ ತಾಂತ್ರಿಕ ಸಹಾಯಕರಾಗಿ ನೇಮಕಗೊಂಡಿದ್ದ ಸಿಂಗ್ ಅಲಿಯಾಸ್ ಸಂಜೀವ್ ಮುಖಿಯಾ ಅವರನ್ನು ಹುಡುಕಿಕೊಟ್ಟವರಿಗೆ ₹3 ಲಕ್ಷ ಬಹುಮಾನ ಘೋಷಣೆಯಾಗಿತ್ತು.

'ಬಿಹಾರ ಲೋಕಸೇವಾ ಆಯೋಗ 2024ರಲ್ಲಿ ನಡೆಸಿದ್ದ ಶಿಕ್ಷಕರ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿಯೂ ಸಿಂಗ್ ಭಾಗಿಯಾಗಿದ್ದಾರೆ ಎಂಬ ಆರೋಪವಿದೆ. ಪ್ರಸ್ತುತ ಸಿಂಗ್ ಅವರನ್ನು ಇಒಯು ಮತ್ತು ಸಿಬಿಐ ವಿಚಾರಣೆಗೆ ಒಳಪಡಿಸಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಾಮ್ರಾ ವಿಚಾರಣೆ ನಡೆಸಬಹುದು, ಬಂಧಿಸುವಂತಿಲ್ಲ'

ಮುಂಬೈ (ಪಿಟಿಐ): ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರನ್ನು ವಿಚಾರಣೆಗೆ ಒಳಪಡಿಸಬಹುದು. ಆದರೆ, ಬಂಧಿಸುವ ಅಗತ್ಯವಿಲ್ಲ ಎಂದು ಬಾಂಬೆ ಹೈಕೋರ್ಟ್ ಶುಕ್ರವಾರ ಹೇಳಿದೆ.



ಕುನಾಲ್ ಕಾಮ್ರಾ

ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಯೂ ಆಗಿರುವ ಶಿವಸೇನಾ ಮುಖ್ಯಸ್ಥ ಏಕನಾಥ ಶಿಂದೆ ಅವರನ್ನು 'ದೇಶದ್ರೋಹಿ' ಎಂದು ಕರೆದಿರುವ ಆರೋಪದಲ್ಲಿ ಕುನಾಲ್ ವಿರುದ್ಧ ಖಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಮ್ಮ ಮೇಲಿನ ಎಫ್‌ಐಆರ್ ರದ್ದು ಕೋರಿ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಆದೇಶ ಕಾಯ್ದಿರಿಸಿತ್ತು. ಕಾಮ್ರಾ ಅವರಿಗೆ ಬಂಧನದಿಂದ ಮಧ್ಯಂತರ ರಕ್ಷಣೆಯನ್ನು ನೀಡಿತ್ತು.

ನ್ಯಾಯಮೂರ್ತಿಗಳಾದ ಸಾರಂಗ್ ಕೊತ್ವಾಲ್ ಮತ್ತು ಎಸ್.ಎಂ. ಮೊಡಕ್ ಅವರನ್ನು ಒಳಗೊಂಡ ನ್ಯಾಯಪೀಠವು, ವಾಕ್ ಸ್ವಾತಂತ್ರ್ಯದ ಮೇಲಿನ ನಿರ್ಬಂಧಗಳಿಗೆ ಸಂಬಂಧಿಸಿದ ವಿಶಾಲ ಮತ್ತು ಗಂಭೀರ ಸಮಸ್ಯೆಗಳನ್ನು ಪರಿಶೀಲಿಸಬೇಕಾಗಿದೆ. ಹಾಗಾಗಿ, ಈ ಅರ್ಜಿಯನ್ನು ವಿಸ್ತೃತವಾಗಿ ಆಲಿಸಲಾಗುವುದು. ಆದರೆ, ಈ ಪ್ರಕರಣದ ತನಿಖೆಗೆ ಸಂಪೂರ್ಣ ತಡೆಯಾಜ್ಞೆ ನೀಡಲು ಆಗದು. ತನಿಖೆ ಮುಂದುವರಿಸಬಹುದು, ಆದಾಗ್ಯೂ, ಅರ್ಜಿದಾರರನ್ನು ಬಂಧಿಸುವ ಅಗತ್ಯವಿಲ್ಲ ಎಂದು ಹೇಳಿದೆ.

ದೆಹಲಿ ಮಹಾನಗರ ಪಾಲಿಕೆ ಗದ್ದುಗೆ ಬಿಜೆಪಿಗೆ

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ಬಿಜೆಪಿಯ ರಾಜಾ ಇಕ್ಬಾಲ್ ಅವರು ಶುಕ್ರವಾರ ಆಯ್ಕೆಯಾಗಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಮನ್‌ದೀಪ್ ಸಿಂಗ್ ಅವರನ್ನು ಸೋಲಿಸುವ ಮೂಲಕ ಬಿಜೆಪಿ ಎರಡು ವರ್ಷಗಳ ಬಳಿಕ ಪಾಲಿಕೆಯ ಗದ್ದುಗೆಯನ್ನು ಏರಿದೆ. ಆಮ್ ಆದ್ಮಿ ಪಕ್ಷವು (ಎಎಪಿ) ಮೇಯರ್ ಚುನಾವಣೆಯನ್ನು ಬಹಿಷ್ಕರಿಸಿತ್ತು.

ರಾಜಾ ಇಕ್ಬಾಲ್ ಅವರು ಈ ಹಿಂದೆ ಪಾಲಿಕೆಯ ವಿರೋಧ ಪಕ್ಷದ ನಾಯಕರಾಗಿ ಮತ್ತು ಉತ್ತರ ಪಾಲಿಕೆಯ ಮೇಯರ್ ಆಗಿ ಕಾರ್ಯನಿರ್ವಹಿಸಿದ್ದರು.

ಪೊಲೀಸರ ಮೂಲಕ ವಿ.ಸಿಗಳಿಗೆ ಬೆದರಿಕೆ– ರಾಜ್ಯಪಾಲ ರವಿ ಆರೋಪ

ಸಮಾವೇಶಕ್ಕೆ ಕುಲಪತಿಗಳ ಗೈರು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ಶುಕ್ರವಾರ ಕರೆದಿದ್ದ ಕುಲಪತಿಗಳ ವಾರ್ಷಿಕ ಸಮಾವೇಶಕ್ಕೆ ರಾಜ್ಯ- ಅನುದಾನಿತ ವಿಶ್ವ ವಿದ್ಯಾಲಯಗಳ ಬಹುತೇಕ ಕುಲಪತಿಗಳು ಗೈರಾಗುವ ಮೂಲಕ 'ಬಹಿಷ್ಕರಿಸಿ'ದರು.

ಈ ಸಂಬಂಧ ಆಡಳಿತಾರೂಢ ಡಿಎಂಕೆ ಕಾರ್ಯವಿಧಾನವನ್ನು ತೀವ್ರವಾಗಿ ಟೀಕಿಸಿರುವ ರಾಜ್ಯಪಾಲ ರವಿ ಅವರು, 'ಸರ್ಕಾರ ಪೊಲೀಸರನ್ನು ಬಳಸಿಕೊಂಡು ಕುಲಪತಿಗಳನ್ನು ಬೆದರಿಸಿದೆ. ಕುಲಪತಿಗಳ ಮನೆಗಳು ಮತ್ತು ಅವರು ಉಳಿದಿದ್ದ ಹೋಟೆಲ್ ಕೊಠಡಿಗಳ ಬಾಗಿಲುಗಳನ್ನು ಮಧ್ಯರಾತ್ರಿ ಬಡಿದು ಆತಂಕ ಸೃಷ್ಟಿಸಿದೆ' ಎಂದು ವಾಗ್ದಾಳಿ ನಡೆಸಿದರು.



ಆರ್‌ಎನ್ ರವಿ

18 ಆಹ್ವಾನಿತರಷ್ಟೇ ಭಾಗಿ: ಒಟ್ಟು 56 ಆಹ್ವಾನಿತರ ಪೈಕಿ 18 ಜನರು ಸಮಾವೇಶದಲ್ಲಿ ಭಾಗವಹಿಸಿದ್ದರು. ಹಾಜರಿದ್ದವರಲ್ಲಿ ಬಹುತೇಕರು ಕೇಂದ್ರ ಸರ್ಕಾರದ ಅಧೀನದಲ್ಲಿರುವ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು.

ವಿಶ್ವವಿದ್ಯಾಲಯಗಳಿಗೆ ಕುಲಪತಿಗಳನ್ನು ನೇಮಿಸುವ ಮತ್ತು ತೆಗೆದು ಹಾಕುವ ಅಧಿಕಾರವನ್ನು ರಾಜ್ಯಪಾಲರಿಂದ ವಾಪಸ್ ಪಡೆಯುವ ಮಸೂದೆಗಳು, ಸುಪ್ರೀಂ ಕೋರ್ಟ್ ತೀರ್ಪಿನ ಬಳಿಕ ಕಾಯ್ದೆಯಾಗಿ ಜಾರಿಯಾಗಿವೆ. ಇದರ ಬೆನ್ನಲ್ಲೇ ರಾಜ್ಯಪಾಲರು ಕರೆದಿದ್ದ ಸಮಾವೇಶಕ್ಕೆ ಹೆಚ್ಚಿನ ಕುಲಪತಿಗಳು ಗೈರಾಗಿದ್ದಾರೆ. ಇದು ರಾಜ್ಯಪಾಲರಿಗಾದ ದೊಡ್ಡ ಮುಖಭಂಗ ಎಂದೇ ವ್ಯಾಖ್ಯಾನಿಸಲಾಗುತ್ತಿದೆ.

ನೀಲಗಿರಿ ಜಿಲ್ಲೆಯಲ್ಲಿ ಆಯೋಜಿಸಲಾಗಿದ್ದ ನಾಲ್ಕನೇ ವರ್ಷದ ಕುಲಪತಿಗಳ ಸಮಾವೇಶವನ್ನು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಉದ್ಘಾಟಿಸಿದರು.

'ರಾಜ್ಯ ಸರ್ಕಾರಿ ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಏಪ್ರಿಲ್ 16ರಂದು ಭೇಟಿಯಾಗಿದ್ದ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು, ರಾಜ್ಯಪಾಲರು ಕರೆದಿರುವ ಸಭೆಗೆ ಹೋಗದಂತೆ ಕುಲಪತಿಗಳನ್ನು ಪೊಲೀಸರ ಮೂಲಕ ಬೆದರಿಸಿದ್ದಾರೆ' ಎಂದು ರಾಜ್ಯಪಾಲ ರವಿ ದೂರಿದರು.

'ತುರ್ತು ಪರಿಸ್ಥಿತಿ ದಿನಗಳ ನೆನಪು': 'ಇದು ತುರ್ತು ಪರಿಸ್ಥಿತಿಯ ದಿನಗಳನ್ನು ನೆನಪಿಸುತ್ತದೆ. ಕುಲಪತಿಗಳು ಸಮಾವೇಶದಲ್ಲಿ ಭಾಗವಹಿಸದಂತೆ ಮಾಡಲು ಉನ್ನತ ಶಿಕ್ಷಣ ಸಚಿವರು ದೂರವಾಣಿ ಮೂಲಕ ಬೆದರಿಸಿದ್ದು ಪ್ರಯೋಜನವಾಗಲಿಲ್ಲ ಎಂದು, ಮುಖ್ಯಮಂತ್ರಿ ಸ್ಟಾಲಿನ್ ಅವರು ಪೊಲೀಸರನ್ನು ಬಳಸಿಕೊಂಡಿದ್ದಾರೆ' ಎಂದು ಕಿಡಿಕಾರಿದರು.

ಶಿಕ್ಷಣ ಸಚಿವರ ತಿರುಗೇಟು: ರಾಜ್ಯಪಾಲರ ಆರೋಪಗಳಿಗೆ ತಿರುಗೇಟು ನೀಡಿರುವ ಉನ್ನತ ಶಿಕ್ಷಣ ಸಚಿವ ಗೋವಿ ಚೆಝಿಯಾನ್, 'ಸುಪ್ರೀಂ ಕೋರ್ಟ್ ತೀರ್ಪು ಮತ್ತು ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಅರಿವಿರುವ ಕುಲಪತಿಗಳು ರಾಜ್ಯಪಾಲರು ಕರೆದಿದ್ದ ಸಮಾವೇಶವನ್ನು ಬಹಿಷ್ಕರಿಸಿದ್ದಾರೆ. ಕಾನೂನುಗಳಿಗೆ ಕುಲಪತಿಗಳು ಗೌರವ ಕೊಡಬಾರದೇ' ಎಂದು ಪ್ರಶ್ನಿಸಿದರು.

ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳ ಬಗ್ಗೆ ಎಚ್ಚರದಿಂದಿರಲು ಸೂಚನೆ

ನವದೆಹಲಿ(ಪಿಟಿಐ): ಉಡುಗೊರೆಗಳು, ಆತಿಥ್ಯ ಮತ್ತು ಉಚಿತ ಪ್ರಚಾರ ಸೇರಿ ವಿವಿಧ ಬಗೆಯ ಆಮಿಷಗಳನ್ನು ತಿರಸ್ಕರಿಸಬೇಕು ಎಂದು ನಾಗರಿಕ ಸೇವೆಗೆ ಇತ್ತೀಚೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಸ್ಸೂರಿ ಮೂಲದ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡೆಮಿ ಶುಕ್ರವಾರ ಮಾರ್ಗಸೂಚಿ ಹೊರಡಿಸಿದೆ.

'ಸಾಮಾಜಿಕ ಮಾಧ್ಯಮಗಳಲ್ಲಿ ಮಾಡುವ ಪೋಸ್ಟ್‌ಗಳು ತಮ್ಮ ವ್ಯಕ್ತಿತ್ವ ಪ್ರತಿಬಿಂಬಿಸುತ್ತದೆ. ನಾಗರಿಕ ಸೇವಕರಾಗಿ ಆಯ್ಕೆಯಾದ ನಿಮ್ಮ ನಡವಳಿಕೆಯು ನಿರಂತರ ಸಾರ್ವಜನಿಕರ ಪರಿಶೀಲನೆಗೆ ಒಳಪಟ್ಟಿರುತ್ತದೆ. ಈ ನಿಟ್ಟಿನಲ್ಲಿ ಎಚ್ಚರ ವಹಿಸಿರಿ. ಸಾರ್ವಜನಿಕರೊಂದಿಗೆ ನಿಮ್ಮ ವೈಯಕ್ತಿಕ, ಅಧಿಕೃತ ಮತ್ತು ಸಾಮಾಜಿಕ ಸಂಪರ್ಕವು ವಿನಯಶೀಲ, ಗೌರವಾನ್ವಿತ, ಘನತೆಯಿಂದ ಕೂಡಿರಬೇಕು' ಎಂದು ತಿಳಿಸಲಾಗಿದೆ. 2024ರ ನಾಗರಿಕ ಸೇವಾ ಪರೀಕ್ಷೆಯ ಮೂಲಕ ಆಯ್ಕೆಯಾದ ಅಭ್ಯರ್ಥಿಗಳನ್ನು ಉದ್ದೇಶಿಸಿ ಈ ಮಾರ್ಗಸೂಚಿ ಪ್ರಕಟಿಸಲಾಗಿದೆ.

ಕರ್ನಾಟಕ ಗೃಹ ಮಂಡಳಿ

Karnataka Housing Board — Building Communities

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಹಾಗೂ ಪಡೆಯಲ್ಲಿಚ್ಚಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 07.05.2025 ಸಂಜೆ 4.00 ಗಂಟೆಗೆ.

ಕ್ರ.ಸಂ.	ಕಾಮಗಾರಿಯ ಹೆಸರು
1	ವಿಜಯಪುರ ಜಿಲ್ಲೆ, ಸಿಂದಗಿ ತಾಲ್ಲೂಕು, ಹಿಕ್ಕನಗುತ್ತಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿ. **Work Indent No:** Tender Reference Number: KHB/2025-26/BD/Work_Indent 560 & IFT No.13/2025-26 Date: 23.04.2025. **ಟೆಂಡರ್‌ಗಿಟ್ಟ ಮೊತ್ತ:** ರೂ.12,14,41,949/–.
2	ಬಳ್ಳಾರಿ ಜಿಲ್ಲೆ, ಕಂಪ್ಲಿ ತಾಲ್ಲೂಕು, ಅರಳಿಹಳ್ಳಿ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿ. **Work Indent No:** Tender Reference Number: KHB/2025-26/BD/Work_Indent 561 & IFT No.14/2025-26 Date: 23.04.2025. **ಟೆಂಡರ್‌ಗಿಟ್ಟ ಮೊತ್ತ:** ರೂ.12,15,79,596/–.
3	ಕೊಪ್ಪಳ ಜಿಲ್ಲೆ, ಯಲಬುರ್ಗಿ ತಾಲ್ಲೂಕು, ಮುದ್ದೋಳ್ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿ. **Work Indent No:** Tender Reference Number: KHB/2025-26/BD/Work_Indent 564 & IFT No.12/2025-26 Date: 23.04.2025. **ಟೆಂಡರ್‌ಗಿಟ್ಟ ಮೊತ್ತ:** ರೂ.12,16,08,264/–.
4	ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ದಾರೋಜಿ ಗ್ರಾಮ ತೋರಣಗಲ್ಲು ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ನಿರ್ಮಾಣ ಕಾಮಗಾರಿ. **Work Indent No:** Tender Reference Number: KHB/2025-26/BD/Work_Indent 565 & IFT No.15/2025-26 Date: 23.04.2025. **ಟೆಂಡರ್‌ಗಿಟ್ಟ ಮೊತ್ತ:** ರೂ.12,15,72,594/–.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/ 080–22100077 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/379/ಆಕಾರ್/2025–26

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ನಮ್ಮ ಮೆಟ್ರೋ namma metro

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಉದ್ಯಮ)

ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್ ನಿಲ್ದಾಣದ ಹತ್ತಿರ, ಬೈಯ್ಯಪ್ಪನಹಳ್ಳಿ, ಬೆಂಗಳೂರು–560038, ದೂ: 080–25191039

ಇಮೇಲ್: contactus@bmrc.co.in, ವೆಬ್‌ಸೈಟ್: www.bmrc.co.in

ಬಿಡ್ ಸಂಖ್ಯೆ: ಬಿಎಂಆರ್‌ಸಿಎಲ್/2025–26/ಒಡಬ್ಲ್ಯು/ವರ್ಕ್_ಇಂಡೆಂಟ್98 ದಿನಾಂಕ: 22.04.2025

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ ಇವರು **"ರೀಚ್–4ಎ ಮಾರ್ಗ–2ರ ಅಡಿಯಲ್ಲಿ ರಾಷ್ಟ್ರೀಯ ವಿದ್ಯಾಲಯ (ಆರ್‌ವಿಆರ್), ಬನಶಂಕರಿ (ಬಿಎನ್‌ಎಸ್‌ಕೆ), ಜೆ.ಪಿ.ನಗರ (ಜೆಪಿಎನ್), ಯಲಚೇನಹಳ್ಳಿ (ಪಿಯುಟಿಹೆಚ್) ಮೆಟ್ರೋ ನಿಲ್ದಾಣಗಳಲ್ಲಿ ಆರ್ಟಿಫಿಸರ್ ಕಾಮಗಾರಿಗಳಿಗಾಗಿ (ಸಣ್ಣ ದುರಸ್ತಿಗಳು) ನಿರ್ವಹಣಾ ಗುತ್ತಿಗೆ ಒದಗಿಸುವುದಕ್ಕಾಗಿ"** ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಕಾಮಗಾರಿಯ ವಿವರಗಳನ್ನು ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆಯಬಹುದಾಗಿದೆ. ಟೆಂಡರ್ ದಸ್ತಾವೇಜಿನ ಬೆಲೆ: **ರೂ. 1,890/–** (ಹಿಂದಿರುಗಿಸಲಾಗದ). ಆನ್‌ಲೈನ್‌ನಲ್ಲಿ ಟೆಂಡರ್ ದಸ್ತಾವೇಜುಗಳ ಲಭ್ಯತೆ ದಿನಾಂಕ: **22.04.2025 ರಿಂದ**. ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: **27.05.2025 (ಮಧ್ಯಾಹ್ನ 3.00 ಗಂಟೆವರೆಗೆ)**. ಟೆಂಡರ್‌ಗಳನ್ನು ತೆರೆಯುವ ದಿನಾಂಕ : **28.05.2025 ರಂದು ಮಧ್ಯಾಹ್ನ 3.30 ಗಂಟೆಗೆ**. ಹೆಚ್ಚಿನ ವಿವರಗಳಿಗಾಗಿ, ಬಿಎಂಆರ್‌ಸಿಎಲ್ ವೆಬ್‌ಸೈಟ್ **www.bmrc.co.in** ಮತ್ತು ಸಿಪಿಪಿ ಪೋರ್ಟಲ್: **https://etenders.gov.in** ನಲ್ಲಿ ಪರಿವೀಕ್ಷಿಸಬಹುದು ಅಥವಾ ಈ ಕಚೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಕಾರಿ ನಿರ್ದೇಶಕರು (ಕಾ ಮತ್ತು ನಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು – 560027

ಸಂ: KSRTC/2025-26/IND0208(ಟಿ-147) ದಿನಾಂಕ: 25.04.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

(1) ಕ.ರಾ.ರ.ಸಾ.ನಿಗಮ ಹಾಗೂ ಬೆಂ.ಮ.ಸಾ.ಸಂಸ್ಥೆಗೆ ಅವಶ್ಯವಿರುವ 10 ಟನ್ ಸಾಮರ್ಥ್ಯದ ಮೊಬೈಲ್ ರಿಕವರಿ ವಾಹನಗಳನ್ನು (ರೆಕ್ಕರ್) ಕವಚ ನಿರ್ಮಾಣ ಮಾಡಲು ಬಿ.ಎಸ್–6 ಮಾದರಿಯ 08 ಸಂಖ್ಯೆಯ ಬಿಲ್ಟ್ ಅಪ್ ಕ್ಯಾಬಿನ್ ಅಡಿಗಟ್ಟುಗಳನ್ನು ಸರಬರಾಜು ಮಾಡಲು ಕೆಪಿಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

(2) ಟೆಂಡರ್‌ನ ಅಂದಾಜು ಮೌಲ್ಯ **ರೂ: 2.12 ಕೋಟಿಗಳು**.

(3) ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ **ದಿನಾಂಕ:12.05.2025 ಸಂಜೆ 17:30 ಗಂಟೆಯವರೆಗೆ.**

ಮುಂದುವರೆದಂತೆ, ಟೆಂಡರ್ ನಿರ್ದಿಷ್ಟತೆ (ಸ್ಪೆಸಿಫಿಕೇಷನ್), ಕಾರ್ಯವ್ಯಾಪ್ತಿ, ಟೆಂಡರ್‌ನ ವೇಳಾಪಟ್ಟಿ ಹಾಗೂ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ, ಸೇರ್ಪಡೆ/ತಿದ್ದುಪಡಿಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್ಲೋಡ್ ಮಾಡಲಾಗುವುದು/ಪ್ರಕಟಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು ಕೆಪಿಪಿ ಪೋರ್ಟಲ್ ನಲ್ಲಿ ನೊಂದಣಿಯಾಗಿರಬೇಕು. ಆಸಕ್ತಿಯುಳ್ಳ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನ ವೆಬ್‌ಸೈಟ್: **https://kppp.karnataka.gov.in** ಗೆ ಲಾಗ್‌ಇನ್ ಮಾಡಿ ವಿವರಗಳನ್ನು ವೀಕ್ಷಿಸಬಹುದಾಗಿದೆ. ಆಸಕ್ತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಸೆಲ್‌ನ್ನು ಸಂಪರ್ಕಿಸಿ ಬಿಡ್ಡನ್ನು ಸಲ್ಲಿಸುವ ಬಗ್ಗೆ ತರಬೇತಿಯನ್ನು ಪಡೆಯಬಹುದಾಗಿದ್ದು, ಹೆಚ್ಚಿನ ವಿವರಗಳಿಗಾಗಿ **support@eprochelpdesk.com** – ಬಿಡ್ಡುದಾರರಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಮಾಹಿತಿ ಅಗತ್ಯವಿದ್ದಲ್ಲಿ **cmep@ksrtc.org** ಗೆ ಇ–ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ. (ಮೊಬೈಲ್ ಸಂಖ್ಯೆ: 7760988870, 7760990773, 7760990073, 7760990054).

ಸಹಿ/– ಮುಖ್ಯ ಯಾಂತ್ರಿಕ ಅಭಿಯಂತರರು,
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಜಿಎ/383/2025–26

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನಂ.45, ಕೆ.ಎಸ್.ಹೆಚ್.ಡಿ.ಸಿ. ಕಾಂಪ್ಲೆಕ್ಸ್, 3ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು - 560 001.

ಇ-ಮೇಲ್ : jddekshdc@gmail.com ವೆಬ್‌ಸೈಟ್ : http//www.cauverycrafts.com

CAUVERY ®

ಸಂಖ್ಯೆ: ಕೆ.ಎಸ್.ಹೆಚ್.ಡಿ.ಸಿ/ಬೆಂ/ಗುರುಕುಲ/ಪ್ರಕಟಣೆ/102/2025–26 ದಿನಾಂಕ: 24.04.2025

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

"ಶಿಲ್ಪಗುರುಕುಲ"

ಶಿವಮೊಗ್ಗ ಜಿಲ್ಲೆಯ ಸಾಗರದ ಶ್ರೀಗಂಧದ ಕಲಾ ಸಂಕೀರ್ಣದಲ್ಲಿ ಕಲ್ಲು ಕೆತ್ತನೆ ಮತ್ತು ಮರದ ಕೆತ್ತನೆ ತರಬೇತಿ ಕೋರ್ಸ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

10 ತಿಂಗಳ ಸರ್ಟಿಫಿಕೇಟ್ ಕೋರ್ಸ್
ಕಲ್ಲು ಕೆತ್ತನೆ ಮತ್ತು ಮರದ ಕೆತ್ತನೆ
ಜುಲೈ -2025 ರಿಂದ ಏಪ್ರಿಲ್-2026 ರವರೆಗೆ

ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಮಾಸಿಕ ರೂ.1,500 ಶಿಷ್ಯ ವೇತನ ನೀಡಲಾಗುತ್ತದೆ.

ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ: 26-05-2025

ವಿದ್ಯಾರ್ಹತೆ :	ಕನಿಷ್ಠ ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ಕರಕುಶಲ ಕೆತ್ತನೆ ಚಟುವಟಿಕೆಗಳಲ್ಲಿ ಅಭಿರುಚಿ ಮತ್ತು ಆಸಕ್ತಿ ಹೊಂದಿರಬೇಕು.
ವಯೋಮಿತಿ :	16 ರಿಂದ 35 ವರ್ಷ [ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ]
ಸೌಲಭ್ಯಗಳು :	ಊಟ, ವಸತಿ, ತರಬೇತಿ, ಸಮವಸ್ತ್ರ, ಶೈಕ್ಷಣಿಕ ಪ್ರವಾಸ, ಕೆತ್ತನೆಯ ಉಪಕರಣಗಳು ಇತ್ಯಾದಿಗಳನ್ನು ಉಚಿತವಾಗಿ ಒದಗಿಸಲಾಗುವುದು ಹಾಗೂ ಮಾಸಿಕ ರೂ.1,500/- ಶಿಷ್ಯ ವೇತನ ನೀಡಲಾಗುತ್ತದೆ.

ಮೇಲ್ಕಂಡ 10 ತಿಂಗಳ ಅವಧಿಯ ತರಬೇತಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಉಚಿತವಾಗಿ ಶ್ರೀ ಗಣೇಶ್ ಸಿಂಗ್ ಪಿ. ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಸಾಗರ/ಸೊರಬ/ ಶಿರಸಿ / ಕುಮಟ–ನಂ. 9945458941, ಶ್ರೀ ನಿಜಾಮುದೀನ್ ಯೋಜನಾಧಿಕಾರಿ, ಬಿದರಿ ಕಲಾ ಸಂಕೀರ್ಣ, ಬೀದರ್– ನಂ.9440088687, ಶ್ರೀ ಖಲೀಮುಲ್ಲಾ ಷರೀಫ್, ಯೋಜನಾಧಿಕಾರಿ, ಎಲ್.ಡಬ್ಲ್ಯೂ.ಸಿ.ಸಿ. ಚನ್ನಪಟ್ಟಣ / ರಾಮನಗರ ನಂ. 9945214618 ಶ್ರೀಮತಿ ಸೇವಂತಿ, ವ್ಯವಸ್ಥಾಪಕರು, ಎಂ.ಸಿ.ಸಿ. ಮೈಸೂರು, ನಂ. 8197728284, ಶ್ರೀ ಹರೀಶ್, ಯೋಜನಾಧಿಕಾರಿ, ಬಹು ಕಲಾ ಸಂಕೀರ್ಣ, ಬೆಂಗಳೂರು / ಶಿವಾರಪಟ್ಟಣ ನಂ. 9844271975 ಶ್ರೀ ರಮೇಶ್, ಯೋಜನಾಧಿಕಾರಿ, ನವಲಗುಂದ / ಮುಂಡಗೋಡು / ಕಿನ್ನಾಳ ನಂ. 9845689142 ಇವರಿಂದ ಹಾಗೂ ನಿಗಮದ ವೆಬ್‌ಸೈಟ್ http://www.cauverycrafts.com ಮೂಲಕ ಅರ್ಜಿಗಳನ್ನು ಪಡೆಯಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ದಾಖಲಾತಿ ಪ್ರತಿಗಳೊಂದಿಗೆ ದಿನಾಂಕ: 26–05–2025 ರೊಳಗೆ ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಕೆಳದಿ ರಸ್ತೆ, ಸಾಗರ–577 401 ಶಿವಮೊಗ್ಗ ಜಿಲ್ಲೆ ಹಾಗೂ ಪ್ರಧಾನ ವ್ಯವಸ್ಥಾಪಕರು (ಅಭಿವೃದ್ಧಿ), ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಕೇಂದ್ರ ಕಛೇರಿ, ನಂ.45, ಕೆ.ಎಸ್.ಹೆಚ್.ಡಿ.ಸಿ. ಕಾಂಪ್ಲೆಕ್ಸ್, 3ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು – 560 001. ಇವರಿಗೆ ಕಛೇರಿಯ ವೇಳೆಯಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ದಿನಾಂಕ: 26–05–2025 ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಸಾಗರ ಇವರನ್ನು ಮೊಬೈಲ್ ಸಂಖ್ಯೆ: 9945458941 ಮುಖಾಂತರ ಸಂಪರ್ಕಿಸಬಹುದಾಗಿದೆ.

ವಿಶೇಷ ಸೂಚನೆ:–ಸದರಿ ತರಬೇತಿಗೆ ಗರಿಷ್ಠ 30 ಅಭ್ಯರ್ಥಿಗಳನ್ನು ತೆಗೆದುಕೊಳ್ಳಬಹುದಾಗಿದ್ದು, ಅದರಲ್ಲಿ ಆರು (06) ಅಭ್ಯರ್ಥಿಗಳು ಪರಿಶಿಷ್ಟ ಜಾತಿ ಮತ್ತು ಎರಡು(02) ಅಭ್ಯರ್ಥಿಗಳು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಯಮಾನುಸಾರ ಮೀಸಲಿರಿಸಲಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆಕಾಇಂ/ಲೋಇವಿ/ಮಧು:ಕಿಇಂ–1/ಟೆಂಡರ್/2025–26 ದಿ: 24.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:03/2025–26
(ಕೆಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-2 , KW-3 & KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರುಗಳಿಂದ ಲೋಕೋಪಯೋಗಿ ಇಲಾಖೆ, ಮಧುಗಿರಿ ಹಾಗೂ ಶಿರಾ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137– 283336. ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.398.97 ಲಕ್ಷಗಳವರೆಗೆ, ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 09–05–2025 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 12–05–2025 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 13–05–2025 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 05–05–2025 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/33/KSMCA/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆರೆಗಳು (ಪೂರ್ವ ವಲಯ ಮತ್ತು ಕೆ.ಆರ್. ಪುರಂ ಕ್ಷೇತ್ರ) ಕೊಠಡಿ ಸಂಖ್ಯೆ.309, 3ನೇ ಮಹಡಿ, ಅನೆಕ್ಸ್–3 ಕಟ್ಟಡ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ, ಎನ್.ಆರ್. ಸ್ಕ್ವೇರ್, ಬೆಂಗಳೂರು–560002

ಟೆಂಡರ್ ನಂ.: ಕಾಅ/ಕೆರೆಗಳು//ಪೂರ್ವ&ಕೆಆರ್‌ಪಿಸಿ/ಟೆಂಡರ್–01/2025–26 ದಿನಾಂಕ : 25.04.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ)

(ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೋಂದಾಯಿತ ಗುತ್ತಿಗೆದಾರರಿಂದ ಅಥವಾ CPWD/KPWD/Railways/MES ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವವರಿಂದ ಕೆಳಗೆ ತಿಳಿಸಲಾದ ಕಾಮಗಾರಿಗಾಗಿ ಐಟಂ ದರದ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಹೂಳು ತೆಗೆಯುವ ಮೂಲಕ ಕೆರೆಯ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸುವ ಕಾಮಗಾರಿ ಮತ್ತು ಹಲಸೂರು ಕೆರೆಯ ಅಭಿವೃದ್ಧಿ ಹಾಗೂ ಕೆಸರು ತೆಗೆಯುವುದು ಮತ್ತು ಇತರ ಸಂಬಂಧಿತ ಕಾಮಗಾರಿಗಳು (ಕರೆ–2). ಕೆಲಸದ ಮೌಲ್ಯ : ರೂ.400.00 ಲಕ್ಷಗಳು, ಇಎಂಡಿ ಮೊತ್ತ ರೂ. 4,80,000.00

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್ ದಾಖಲೆಗಳು ಲಭ್ಯವಾಗುವ ದಿನಾಂಕ: **28.04.2025 ರಂದು 11:00 ಗಂಟೆಗಳ ನಂತರ** (2) ಬಿಡ್ ಪೂರ್ವ ಸಭೆ: ದಿನಾಂಕ: **03.05.2025 ರಂದು 15:00 ಗಂಟೆಗೆ,** ಬಿಡ್ ಪೂರ್ವ ಸಭೆಯನ್ನು ಮುಖ್ಯ ಎಂಜಿನಿಯರ್, ಎಫ್‌ಇಸಿಸಿ (ನಂ.308, 3ನೇ ಮಹಡಿ, ಅನೆಕ್ಸ್–2 ಕಟ್ಟಡ, ಬಿಬಿಎಂಪಿ ಪ್ರಧಾನ ಕಚೇರಿ, ಎನ್.ಆರ್. ಸ್ಕ್ವೇರ್) ರವರ ಕಚೇರಿಯಲ್ಲಿ ನಡೆಸಲಾಗುವುದು. **(3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 12.05.2025 ರಂದು 16:00 ಗಂಟೆಯವರೆಗೆ (4)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ : 13.05.2025 ರಂದು 16:30 ಕ್ಕೆ (5)** ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯ ನಂತರ.**

ಸಹಿ/– ಕಾರ್ಯಪಾಲಕ ಅಭಿಯಂತರರು, ಪೂರ್ವ ವಲಯ ಮತ್ತು ಕೆ.ಆರ್. ಪುರಂ ಕ್ಷೇತ್ರ)

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ) ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2025–26/363 ದಿನಾಂಕ:24/04/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (Call-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024–25 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ರಾಹೆ ಸುಧಾರಣೆ ಅಡಿ 1 ಕಾಮಗಾರಿ ಹಾಗೂ 3054–ಜಿಮುರ ನಿರ್ವಹಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 2 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಮೊತ್ತ ಕ್ರಮವಾಗಿ ರೂ. 784.00 ಲಕ್ಷ ಹಾಗೂ ಮೊತ್ತ ರೂ. 21.60 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:28–04–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:29–04–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:02–05–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):05–05–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-147/KSMCA/2025-26

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ

ದೂರವಾಣಿ ಸಂಖ್ಯೆ: 08182–222943 Email ID: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)
(ಕೆ.ಪಿ.ಪಿ–ಪೋರ್ಟಲ್ ಮೂಲಕ)–2ನೇ ಕರೆ

IFT No. 05/2025-26 **Date: 24.04.2025**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಭದ್ರಾವತಿ ತಾಲ್ಲೂಕಿನಲ್ಲಿ 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆ ಸುಧಾರಣೆಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಭದ್ರಾವತಿ–ಹೊಳೆಹೊನ್ನೂರು ರಸ್ತೆಯಿಂದ ಎಂ.ಎಂ. ರಸ್ತೆಗೆ ಎಮ್ಮೆಹಟ್ಟಿ, ತಿಮ್ಲಾಪುರ, ಮಾರಶೆಟ್ಟಿಹಳ್ಳಿ, ಅರಕೆರೆ,ದಾನವಾಡಿ ಮೂಲಕ ಸೇರುವ ರಸ್ತೆ ಸರಪಳಿ 9.00 ರಿಂದ 11.00 ಕಿ.ಮೀ ವರೆಗೆ ರಸ್ತೆ ಸುಧಾರಣೆ. (ಇಂಡೆಂಟ್ ನಂ.16153) ಕಾಮಗಾರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.156.82 ಲಕ್ಷಗಳು ಮತ್ತು ಇ.ಎಂ.ಡಿ. ಮೊತ್ತ ರೂ. 2.35 ಲಕ್ಷಗಳು ಸದರಿ ಕಾಮಗಾರಿಯ ಟೆಂಡರ್ ಕಾಲಾವಧಿ 11 ತಿಂಗಳು ಮಳೆಗಾಲ ಸೇರಿ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪೋರ್ಟ್‌ಲ್‌ನಲ್ಲಿ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 24–04–2025 ರಿಂದ 02–05–2025 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 02–05–2025ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: 03–05–2025 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 04–05–2025ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/–
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

DIPR/SMG/No-123-04/zenkar/2025-26

ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ.

ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಡಾ: ಎಂ.ಹೆಚ್.ಮರೀಗೌಡ ರಸ್ತೆ, ಬೆಂಗಳೂರು–560 029.

ಇ–ಮೇಲ್ ಐಡಿ: dwcd.dd@gmail.com ದೂರವಾಣಿ ಸಂ:080–29578688

ಸಂಖ್ಯೆ: ಉಪನಿ/ಬೆಂನ/ಟೆಂಡರ್/2025–26 ದಿನಾಂಕ: 21.04.2025

ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಹಾಗೂ ಜಿಲ್ಲಾ ವ್ಯಾಪ್ತಿಯಡಿ ಬರುವ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕರ ಸಮೇತ ವಾಹನ ಸೇವೆಯನ್ನು ಒಂದು ವರ್ಷದ ಅವಧಿಗೆ ಅರ್ಹ ಏಜೆನ್ಸಿಗಳಿಂದ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ಅಂತಿಮ ದಿನಾಂಕ: **23.05.2025 ಸಂಜೆ: 5.30 ಗಂಟೆಯಾಗಿದ್ದು,** ತಾಂತ್ರಿಕ ಬಿಡ್ಡನ್ನು ದಿನಾಂಕ: **26.05.2025ರ ಬೆಳಿಗ್ಗೆ 11.30 ಗಂಟೆಗೆ** ಹಾಗೂ ಆರ್ಥಿಕ ಬಿಡ್ಡನ್ನು ದಿನಾಂಕ: **31.05.2025 ಸಂಜೆ: 4.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://kppp.karnataka.gov.in ಅಥವಾ ದೂರವಾಣಿ ಸಂಖ್ಯೆ: 080–29578688 ಅನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು ನಗರ ಜಿಲ್ಲೆ.

ವಾಸಾಸಂಇ/ವಾಪ್ರ/381/ಎಂಎಎ/2025–26

ಕರ್ನಾಟಕ ಸರ್ಕಾರ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ ವಿಭಾಗ ಕೊಪ್ಪಳ

ದೂ:08539–220054. www.eemidnkst@rediffmail.com.

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/1484 ದಿ:24.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಟೆಂಡರ ಕಾಮಗಾರಿಗಾಗಿ 4702–ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 12 ಪ್ಯಾಕೆಜ್ ಕಾಮಗಾರಿಗಳ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಗಿಟ್ಟ **ಕನಿಷ್ಟ ಮೊತ್ತ ರೂ.6.96 ಲಕ್ಷಗಳಿಂದ ಗರಿಷ್ಟ ಮೊತ್ತ ರೂ.48.74 ಲಕ್ಷಗಳಿರುತ್ತದೆ.** ಟೆಂಡರಗಳನ್ನು ದಿನಾಂಕ: 28–04–2025 ರಿಂದ **ದಿನಾಂಕ: 09–05–2025 ಸಂಜೆ. 5.30** ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ **ದಿನಾಂಕ: 05–05–2025 ರಂದು ಬೆಳ್ಳಿಗ್ಗೆ 11.00 ಗಂಟೆಗೆ** ಈ ಕಛೇರಿಯಲ್ಲಿ ಜರುಗುವುದು. ತಾಂತ್ರಿಕ ಬಿಡ್ಡನ್ನು **ದಿನಾಂಕ: 12–05–2025 ರಂದು ಬೆಳ್ಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು **ದಿನಾಂಕ:14–05–2025 ರಂದು ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆ.ಪಿ.ಪಿ ಪೋರ್ಟಲ್" ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ಡಿಐಪಿಆರ್/ಕೊಪ್ಪಳ/52/ಕೆಎಸ್ಎಂಸಿಎ/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಬಿಬಿಎಂಪಿ, ಕೆ.ಆರ್. ಪುರ ವಿಭಾಗ, ಹಳೇ ಮದ್ರಾಸ್ ರಸ್ತೆ, ಕೆ.ಆರ್. ಪುರ, ಬೆಂಗಳೂರು – 560036.

ಸಂ: ಕಾನಿಅ/ಕೆ.ಆರ್.ಪುರ/ಟೆಂಡರ್/1/2025–26 ದಿನಾಂಕ:25.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಕೆ.ಆರ್. ಪುರ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ವಿವರ
1	ವಾರ್ಡ್ ಸಂಖ್ಯೆ 88, ಕಲ್ಕೆರೆಯ ಕೆ. ಚನ್ನಸಂದ್ರ ಖಾನೆ ರಸ್ತೆ, ಪೂಜಾ ಗಾರ್ಡನ್, ಕಲ್ಕೆರೆ ಗ್ರಾಮ, ಎನ್.ಆರ್.ಐ. ಬಡಾವಣೆ ಡಬಲ್ ರಸ್ತೆ ಹಾಗೂ ವಾರ್ಡ್ ಸಂಖ್ಯೆ 90 ರಾಮಮೂರ್ತಿ ನಗರದ ಶಾಂತಿ ಬಡಾವಣೆ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ರಸ್ತೆ ಮತ್ತು ಚರಂಡಿಗಳ ಸುಧಾರಣಾ ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ : ರೂ. 400.00 ಲಕ್ಷಗಳು. ಇಎಂಡಿ: ರೂ. 6,00,000/–**

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಕುರಿತ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02.05.2025ರ ಸಂಜೆ 4.00 ಗಂಟೆಯವರೆಗೆ.** 3) ಪೂರ್ವಭಾವಿ ಸಭೆ ದಿನಾಂಕ: **05.05.2025 ರ ಬೆಳಿಗ್ಗೆ 11.30 ಗಂಟೆಗೆ.** 4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09.05.2025 ರ ಸಂಜೆ 4.00 ಗಂಟೆಯವರೆಗೆ.** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **12.05.2025ರ ಸಂಜೆ 4.30 ಗಂಟೆಗೆ.** 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **14.05.2025ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.kppp. karnataka.gov.in** ನಲ್ಲಿ ಲಾಗಿನ್ ಮಾಡಿ ಅಥವಾ ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು ಕೆ.ಆರ್. ಪುರ ವಿಭಾಗ.

ಫಾರಂ–ಎ ಸಾರ್ವಜನಿಕ ಪ್ರಕಟಣೆ

[ಭಾರತೀಯ ಪಾಪರಿಕೆ ಮತ್ತು ದಿವಾಳಿತನ ಮಂಡಳಿಯ (ಕಾರ್ಪೊರೇಟ್ ವ್ಯಕ್ತಿಗಳ ದಿವಾಳಿತನ ನಿರ್ಣಯ ಪ್ರಕ್ರಿಯೆ) ನಿಬಂಧನೆಗಳು – 2016ರ ನಿಬಂಧನೆ 6ರ ಅಡಿಯಲ್ಲಿ]

ಸ್ಟರ್ನೆ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನ (STERNE INDIA PRIVATE LIMITED) ಎಲ್ಲಾ ಕ್ರೆಡಿಟಾರುಗಳ (ಸಾಲನೀಡಿದವರ) ಗಮನಕ್ಕೆ

	ಸಂಬಂಧಪಟ್ಟ ವಿವರಗಳು	
1.	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು	**ಸ್ಟರ್ನೆ ಇಂಡಿಯಾ ಪ್ರೈವೆಟ್ ಲಿಮಿಟೆಡ್**
2.	ಸಾಲಗಾರ ಸಂಸ್ಥೆಯು ರಚನೆಯಾದ ದಿನಾಂಕ	24ನೇ ಅಕ್ಟೋಬರ್ 2016
3.	ಯಾವ ಪ್ರಾಧಿಕಾರದ ಅಡಿಯಲ್ಲಿ ಸಾಲಗಾರ ಸಂಸ್ಥೆಯು ರಚನೆಯಾಗಿದೆ/ನೋಂದಾವಣಿಯಾಗಿದೆ	ROC- ಕರ್ನಾಟಕ ಕಂಪನಿ ಖಾಯ್ದೆ 2013ರ ಅಡಿಯಲ್ಲಿ ಸಂಯೋಜಿಸಲಾಗಿದೆ
4.	ಕಾರ್ಪೊರೇಟ್ ಗುರುತಿನ ಸಂಖ್ಯೆ	U74999KA2016PTC097331
5.	ಸಾಲಗಾರ ಸಂಸ್ಥೆಯ ನೋಂದಾಯಿತ ಕಛೇರಿ ಮತ್ತು ಪ್ರಧಾನ ಕಛೇರಿ (ಇದ್ದಲ್ಲಿ) ವಿಳಾಸ	5ನೇ ಮಹಡಿ, ಸಲಾರ್ಪುರಿಯಾ ಸತ್ವ ಎಮಿನೆನ್ಸ್ ಅಮಾನಿ ಬೆಳಂದೂರು ಖಾನೆ, ವರ್ತೂರು ಹೋಬಳಿ, ಬೆಳಂದೂರು, ಬೆಂಗಳೂರು – 560103
6.	ಸಾಲಗಾರ ಸಂಸ್ಥೆಯ ದಿವಾಳಿತನ ನಿರ್ಣಯ ಪ್ರಕ್ರಿಯೆ ಆರಂಭವಾದ ದಿನಾಂಕ	22ನೇ ಏಪ್ರಿಲ್ 2025
7.	ದಿವಾಳಿತನ ನಿರ್ಣಯ ಪ್ರಕ್ರಿಯೆಯ ಮುಕ್ತಾಯದ ಅಂದಾಜು ದಿನಾಂಕ	19ನೇ ಅಕ್ಟೋಬರ್ 2025
8.	ಮಧ್ಯಂತರ ಪರಿಹಾರ ವೃತ್ತಿಪರರಾಗಿ ಕಾರ್ಯ ನಿರ್ವಹಿಸುತ್ತಿರುವವರ ಹೆಸರು ಮತ್ತು ನೋಂದಣಿ ಸಂಖ್ಯೆ	ಬೆಳೆಯೂರ್ ರೆಸಲ್ಯೂಶನ್ಸ್ ಪ್ರೈವೆಟ್ ಲಿಮಿಟೆಡ್ ನೋ. ಸಂ.: IBBI/IPE- 0163/IPA-1/2023-24/50073
9.	ಮಂಡಳಿಯಲ್ಲಿ ನೋಂದಣಿಯಾದಂತೆ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸ ಮತ್ತು ಇಮೇಲ್	'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು–560 011. ದೂರವಾಣಿ: +91 80 26540193 ಇಮೇಲ್: ravi@beleyur.com
10.	ಮಧ್ಯಂತರ ಪರಿಹಾರ ವೃತ್ತಿಪರರ ಜೊತೆ ವ್ಯವಹರಿಸಲು ಬಳಸಲಾದ ವಿಳಾಸ ಮತ್ತು ಇಮೇಲ್	ಬೆಳೆಯೂರ್ ರೆಸಲ್ಯೂಶನ್ಸ್ ಪ್ರೈವೆಟ್ ಲಿಮಿಟೆಡ್, 'ಶ್ರೀವತ್ಸ', 428, 19ನೇ ಬಿ ಕ್ರಾಸ್, 3ನೇಬ್ಲಾಕ್, ಜಯನಗರ, ಬೆಂಗಳೂರು – 560 011, ದೂರವಾಣಿ: +91 80 26540193 ಇಮೇಲ್:Sterne-cirp@beleyur.com
11.	ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ	12ನೇ ಮೇ 2025
12.	ಮಧ್ಯಂತರ ಪರಿಹಾರ ವೃತ್ತಿಪರರಿಂದ ಖಚಿತಪಡಿಸಲಾದಂತೆ ಸೆಕ್ಷನ್ 21ರ ಸಬ್–ಸೆಕ್ಷನ್ (6ಎ)ಯ ಕ್ಲಾಸ್ (ಬಿ) ಅಡಿ ಏನಾದರೂ ಇದ್ದಲ್ಲಿ ಸಾಲನೀಡಿದವರ ವರ್ಗಗಳು	ಅನ್ವಯವಾಗುವುದಿಲ್ಲ
13.	ಸಾಲನೀಡಿದವರ ಅಧಿಕೃತ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲು ವೃತ್ತಿಪರರೆಂದು ಗುರುತಿಸಲಾದ ಹೆಸರುಗಳು	ಅನ್ವಯವಾಗುವುದಿಲ್ಲ
14.	(ಎ) ಸಂಬಂಧಪಟ್ಟ ಫಾರಂಗಳು ಮತ್ತು (ಬಿ) ಅಧಿಕೃತ ಪ್ರತಿನಿಧಿಗಳ ವಿವರಗಳು ಇಲ್ಲಿ ಲಭ್ಯವಿವೆ:	(ಎ) ವೆಬ್ ಲಿಂಕ್: https://www.ibbi.gov.in/home/downloads (ಬಿ) ಅನ್ವಯವಾಗುವುದಿಲ್ಲ

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿಯ ಬೆಂಗಳೂರು ಪೀಠವು (NCLT) ದಿನಾಂಕ 22ನೇ ಏಪ್ರಿಲ್ 2025 ರ ಆದೇಶದಂತೆ ಸ್ಟರ್ನೆ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನ ದಿವಾಳಿ ಪ್ರಕ್ರಿಯೆಯನ್ನು ಆರಂಭಿಸಬೇಕೆಂದು ಆದೇಶಿಸಿದೆ ಎಂದು ಈ ಮೂಲಕ ಸೂಚನೆಯನ್ನು ನೀಡಲಾಗಿದೆ.

ಸ್ಟರ್ನೆ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ಗೆ ಸಾಲನೀಡಿದವರು 12ನೇ ಮೇ 2025ರ ಅಥವಾ ಮುಂಚಿತವಾಗಿ ಸಾಕ್ಷ್ಯಾಧಾರಗಳ ಸಹಿತ ನಿಗದಿತ ನಮೂನೆಯಲ್ಲಿ ತಮ್ಮ ಕ್ಲೇಮುಗಳನ್ನು ಮೇಲೆ ಸಂಖ್ಯೆ 10ರಲ್ಲಿ ಹೇಳಿರುವ ಮಧ್ಯಂತರ ಪರಿಹಾರ ವೃತ್ತಿಪರರ ವಿಳಾಸಕ್ಕೆ ಸಲ್ಲಿಸಬೇಕಾಗಿ ಕೋರಿದೆ.

ಹಣಕಾಸು ಸಾಲದಾತರು ತಮ್ಮ ಕ್ಲೇಮುಗಳ ಪುರಾವೆಗಳನ್ನು ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬೇಕು. ಇತರ ಎಲ್ಲ ಹಕ್ಕುದಾರರು ತಮ್ಮ ಕ್ಲೇಮುಗಳ ಪುರಾವೆಯನ್ನು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದಾಗಿದೆ.


ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ಸಹಿ/– ರವೀಂದ್ರ ಬೆಳೆಯೂರ್
ಬೆಳೆಯೂರ್ ರೆಸಲ್ಯೂಶನ್ಸ್ ಪ್ರೈವೆಟ್ ಲಿಮಿಟೆಡ್(IPE)ನ ಪರವಾಗಿ
ಮಧ್ಯಂತರ ಪರಿಹಾರ ವೃತ್ತಿಪರರು
(Interim Resolution Professional)
ಸಿಐಆರ್‌ಪಿ ಅಡಿಯಲ್ಲಿ
ಸ್ಟರ್ನೆ ಇಂಡಿಯಾ ಪ್ರೈವೆಟ್ ಲಿಮಿಟೆಡ್

ದಿನಾಂಕ: 25ನೇ ಏಪ್ರಿಲ್ 2025
ಸ್ಥಳ: ಬೆಂಗಳೂರು

ಷೇರುಪೇಟೆ ವಹಿವಾಟು

588



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,246
ಇಂದಿನ ಅಂತ್ಯ	24,039
▼	207
ದಿನದ ಕನಿಷ್ಠ	23,847

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹317-582
ದ್ವಿತಳಿ (ಬಿ.ವಿ)	₹350-684

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹194
ಆರ್‌ಎಸ್‌ಎಸ್-5	₹189
ಗುಡ್ ಲಾಟ್	₹180

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,000-1,400
ಮಧ್ಯಮ	₹700-1,000
ಸಣ್ಣ	₹400-700

ಮುಂಬೈ ಧಾರಣೆ

ಶೇಂಗಾ

25-04-2025

ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ(ಹೊಸ)	7400-7500
ದಪ್ಪ ಗುಜರಾತ್(ಹೊಸ)	7700-7800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1330 (1325)
ಒಂದು ವಾರದ ಡೆಲಿವರಿ	1325 (1320)
ಪಾಮ್ ವಾರದ ಡೆಲಿವರಿ	1273 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1315)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹95,000 (95,650)
ಬೆಳ್ಳಿ ಕೆ.ಜಿ ₹97,450 (97,500)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ		ಹೊಸನಗರ	37569-42633	ಕೆಂಪುಗೋಟು	16099-22999
ಅಪಿ	50100-55500	ಶಿವಮೊಗ್ಗ		ರಾಶಿ	41269-50898
ಬೆಟ್ಟೆ	28600-29000	ಬೆಟ್ಟೆ	51009-60600	ಯಲ್ಲಾಪುರ	
ಕೆಂಪುಗೋಟು	20600-21000	ಗೊರಬಲು	20199-31999	ಬಿಳಿಗೋಟು	14499-34799
ರಾಶಿ	49600-50000	ರಾಶಿ	48099-60099	ಚಾಲಿ	35009-43811
ಕುಮಟ		ಸರಕು	56619-91240	ಕೋಕ	6899-18909
ಚಾಲಿ	38899-44098	ಶಿರಸಿ		ಕೆಂಪುಗೋಟು	15000-27699
ಚಿಪ್ಪು	27089-32599	ಬೆಟ್ಟೆ	30218-39699	ರಾಶಿ	40820-56899
ಕೋಕ	7189-18999	ಬಿಳಿಗೋಟು	17999-32799	ತಟ್ಟಿಬೆಟ್ಟೆ	28969-38899
ಫ್ಯಾಕ್ಟರಿ	6099-25629	ಚಾಲಿ	35199-43499		

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1320 (1315)
ಸೋಯಾ (ರಿಫೈನ್ಡ್)	₹1290 (1285)
ಸೂರ್ಯಕಾಂತಿ (ರಿಫೈನ್ಡ್)	₹1400 (1385)
ಪಾಮೋಲಿನ್	₹1275 (1265)

ವಿನಿಮಯ ದರ

$ ಡಾಲರ್	85.41
£ ಪೌಂಡ್	113.62
€ ಯುರೊ	96.93
¥ ಯೆನ್ (100ಕ್ಕೆ)	59



ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ರೈತರು ಭತ್ತದ ರಾಶಿ ಹಾಕಿದ್ದಾರೆ

ಆಂಧ್ರ, ತೆಲಂಗಾಣದಿಂದಲೂ ಆವಕ ಹೆಚ್ಚಳ

ಭತ್ತದ ಧಾರಣೆ ಕುಸಿತ

• ಚಾಂದ್ ಬಾಷ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ತುಂಗಭದ್ರಾ ಜಲಾಶಯ ಭರ್ತಿಯಾದ ಖುಷಿಯಲ್ಲಿ ಭತ್ತದ ಎರಡು ಬೆಳೆ ಬೆಳೆದ ರೈತರು ಈಗ ದರ ಕುಸಿತದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಹಿಂಗಾರಿನಲ್ಲಿ ಉತ್ತಮ ಇಳುವರಿ ಬಂದಿದೆ. ಇದರಿಂದ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಸಿಕ್ಕಿದರೆ ಕೈತುಂಬಾ ಲಾಭ ಸಿಗಲಿದೆ ಎಂಬ ಲೆಕ್ಕಾಚಾರದಲ್ಲಿದ್ದರು. ಆದರೆ, ದರ ಇಳಿಕೆಯು ರೈತರ ಎಲ್ಲಾ ಲೆಕ್ಕಾಚಾರವನ್ನು ತಲೆಕೆಳಗಾಗಿಸಿದೆ.

ಕಳೆದ ಬಾರಿ ಒಂದೇ ಬೆಳೆ ಬೆಳೆದಿದ್ದರೂ ಭತ್ತಕ್ಕೆ ಉತ್ತಮ ಬೆಲೆ ಸಿಕ್ಕಿತ್ತು. ಇದರಿಂದ ಅನ್ನದಾತರಿಗೆ ಹೆಚ್ಚಿನ ಲಾಭವಾಗಿತ್ತು.

ಮಾರ್ಚ್ ಆರಂಭದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಆರ್‌ಎನ್‌ಆರ್ ತಳಿಯ ಪ್ರತಿ ಕ್ವಿಂಟಲ್ ಭತ್ತಕ್ಕೆ ₹2,800 ಮತ್ತು ಸೋನಾ ಮಸೂರಿಗೆ ₹2,600 ದರ ಇತ್ತು. ಈಗ ಆರ್‌ಎನ್‌ಆರ್ ತಳಿಯ ಭತ್ತಕ್ಕೆ ಕ್ವಿಂಟಲ್‌ಗೆ ₹1,600, ಗಿಡ್ಡ ಆರ್‌ಎನ್‌ಆರ್ ₹1,550 ಹಾಗೂ ಗಂಗಾ ಕಾವೇರಿ ದರ ₹1,400ಕ್ಕೆ ಕುಸಿದಿದೆ.

'ದರ ಕುಸಿತದಿಂದ ರೈತರಿಗೆ ಭತ್ತ ಮಾರಲು ಮನಸ್ಸು ಒಪ್ಪುತ್ತಿಲ್ಲ. ಹೊಲ, ಗದ್ದೆ, ಹೆದ್ದಾರಿ ಬದಿಯಲ್ಲಿ ಎಲ್ಲಿ ನೋಡಿದರೂ ಭತ್ತದ ರಾಶಿ ಕಾಣುತ್ತವೆ. ಉತ್ತಮ ದರದ ನಿರೀಕ್ಷೆಯಲ್ಲಿ ಇದ್ದೇವೆ. ಭತ್ತ ಮಾರಲು ಆಗದೆ, ಮನೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳಲು ಆಗದೆ ಕಷ್ಟವಾಗುತ್ತಿದೆ' ಎಂದು ರೈತ ಖಾದರ್ ವಲಿ ಅಳಲು ತೋಡಿಕೊಂಡರು.

'ದರ ಕುಸಿತದ ಹಿಂದೆ ವ್ಯಾಪಾರಿಗಳ ಕೈವಾಡ ಇದೆ. ಭತ್ತ ಖರೀದಿ ಕೇಂದ್ರ ಆರಂಭಿಸಲು ರಾಜ್ಯ ಸರ್ಕಾರ ತಕ್ಷಣವೇ ಕ್ರಮ ಕೈಗೊಳ್ಳಬೇಕು' ಎಂಬುದು ತಾಲ್ಲೂಕು ರೈತ ಸಂಘದ ಅಧ್ಯಕ್ಷ ವಾ.ಹುಲುಗಪ್ಪ ಅವರ ಒತ್ತಾಯ.

ಸಂಕಷ್ಟ ತಂದ ಟ್ರಂಪ್ ಸುಂಕ ನೀತಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿ ಸುಂಕ ನೀತಿಯು ಜಾಗತಿಕ ಮಟ್ಟದಲ್ಲಿ ಅಕ್ಕಿ ರಫ್ತು ವಹಿವಾಟಿನ ಮೇಲೂ ಪರಿಣಾಮ ಬೀರಿದೆ ಎಂದು ಮಾರುಕಟ್ಟೆ ತಜ್ಞರು ಹೇಳುತ್ತಾರೆ.

ಭಾರತದ ಮೇಲೆ ಟ್ರಂಪ್ ಆಡಳಿತವು ಶೇ 26ರಷ್ಟು ಪ್ರತಿ ಸುಂಕ ಹೇರಿದ್ದು, ಸದ್ಯ ಇದಕ್ಕೆ 90 ದಿನಗಳವರೆಗೆ ವಿರಾಮ ನೀಡಲಾಗಿದೆ. ಅಮೆರಿಕ ಸೇರಿ ಹಲವು ದೇಶಗಳಿಗೆ ಭಾರತದಿಂದ ಅಕ್ಕಿ ರಫ್ತಾಗುತ್ತದೆ. ಸುಂಕ ನೀತಿಯಿಂದಾಗಿ ರಫ್ತು ವಹಿವಾಟು ಅಸ್ತವ್ಯಸ್ತಗೊಂಡಿದೆ ಎಂದು ಹೇಳುತ್ತಾರೆ.

'ತುಂಗಭದ್ರಾ ಜಲಾಶಯ ತುಂಬಿದ್ದರಿಂದ ಕರ್ನಾಟಕದಂತೆಯೇ ನೆರೆಯ ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲೂ ಭತ್ತದ ಎರಡು ಬೆಳೆ ಬೆಳೆಯಲಾಗಿದೆ. ಅಲ್ಲಿನ ಅಕ್ಕಿಯೂ ಮಾರುಕಟ್ಟೆಗೆ ಹೆಚ್ಚು ಆವಕವಾಗುತ್ತಿದೆ' ಎಂದು ನ್ಯೂ ಬಾಬಾ ರೈಸ್ ಮಿಲ್‌ನ ಪೀರ ಸಾಬ್ ತಿಳಿಸಿದರು.

'ಕಳೆದ ಬಾರಿ ದಾಸ್ತಾನು ಮಾಡಿರುವ ಅಕ್ಕಿಯೇ ಇನ್ನೂ ಮಾರಾಟವಾಗಿಲ್ಲ. ಈ ಮಧ್ಯೆ ಹೊಸದಾಗಿ ಭತ್ತ ಬಂದಿದೆ. ಈ ಎಲ್ಲ ಕಾರಣದಿಂದ ದರ ಕುಸಿತವಾಗಿದೆ' ಎಂದು ವಿವರಿಸಿದರು.


ಸುದ್ದಿ 2 ನಿಮಿಷ

ಬಡ್ಡಿದರ ಇಳಿಸಿದ ಎಲ್‌ಐಸಿ ಹೌಸಿಂಗ್, ಕೆನರಾ, ಇಂಡಿಯನ್ ಬ್ಯಾಂಕ್

ನವದೆಹಲಿ (ಪಿಟಿಐ): ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಕಂಪನಿ, ಇಂಡಿಯನ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್, ರೆಪೊ ಆಧರಿತ ಬಡ್ಡಿದರವನ್ನು ಕಡಿತಗೊಳಿಸಿವೆ.

ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರ ಕಡಿತಗೊಳಿಸಿರುವ ಬೆನ್ನಲ್ಲೇ ಈ ಕ್ರಮ ಕೈಗೊಂಡಿವೆ.

ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಕಂಪನಿಯು ಗೃಹ ಸಾಲದ ಮೇಲಿನ ಬಡ್ಡಿದರವನ್ನು ಶೇ 0.25ರಷ್ಟು ಕಡಿತಗೊಳಿಸಿದೆ. ಈ ಬಡ್ಡಿದರ ಕಡಿತದ ಪ್ರಯೋಜನವು ಹಾಲಿ ಸಾಲಗಾರರು ಮತ್ತು ಹೊಸದಾಗಿ ಸಾಲ ಪಡೆಯುವವರಿಗೂ ಅನ್ವಯಿಸಲಿದೆ. ಗೃಹ ಸಾಲದ ಮೇಲಿನ ಬಡ್ಡಿದರವು ಶೇ 8ರಿಂದ ಶುರುವಾಗಲಿದೆ. ಪರಿಷ್ಕೃತ ಆದೇಶವು ಏಪ್ರಿಲ್ 28ರಿಂದ ಜಾರಿಗೆ ಬರಲಿದೆ ಎಂದು ಕಂಪನಿಯು ತಿಳಿಸಿದೆ.



ಇಂಡಿಯನ್ ಬ್ಯಾಂಕ್: ಸರ್ಕಾರಿ ಸ್ವಾಮ್ಯದ ಇಂಡಿಯನ್ ಬ್ಯಾಂಕ್ ಗೃಹ ಮತ್ತು ವಾಹನ ಸಾಲದ ಮೇಲಿನ ಬಡ್ಡಿದರವನ್ನು ಕಡಿತ ಮಾಡಿದೆ. ಗೃಹ ಸಾಲದ ವಾರ್ಷಿಕ ಬಡ್ಡಿದರ ಶೇ 8.15 ಇತ್ತು. ಇದನ್ನು ಶೇ 7.90ಕ್ಕೆ ಪರಿಷ್ಕರಿಸಿದೆ. ವಾಹನ ಸಾಲವು ಶೇ 8.50ರಿಂದ ಶೇ 8.25ಕ್ಕೆ ಇಳಿದಿದೆ. ಸಂಸ್ಕರಣಾ ಶುಲ್ಕದಲ್ಲಿ ಬ್ಯಾಂಕ್ ರಿಯಾಯಿತಿ ನೀಡಿದೆ. ಅಲ್ಲದೆ, ದಸ್ತಾವೇಜಿನ ಶುಲ್ಕವನ್ನೂ ಶೂನ್ಯಕ್ಕೆ ಇಳಿಸಿದೆ.

ಕೆನರಾ ಬ್ಯಾಂಕ್: ಕೆನರಾ ಬ್ಯಾಂಕ್ ಗೃಹ ಸಾಲ ಶೇ 7.90 ಮತ್ತು ವಾಹನ ಸಾಲ ಶೇ 8.20ರಿಂದ ಆರಂಭವಾಗಲಿದೆ. ದರ ಪರಿಷ್ಕರಣೆಯು ಏಪ್ರಿಲ್ 12ರಿಂದಲೇ ಜಾರಿಗೆ ಬಂದಿದೆ ಎಂದು ಬ್ಯಾಂಕ್ ತಿಳಿಸಿದೆ.

ಮುಂದುವರಿದ ಕರಡಿ ಕುಣಿತ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಶುಕ್ರವಾರವೂ ದೇಶದ ಷೇರುಪೇಟೆಯಲ್ಲಿ ಕರಡಿ ಕುಣಿತ ಮುಂದುವರಿಯಿತು.

ಎಕ್ಸಿಸ್ ಬ್ಯಾಂಕ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದವು. ಮತ್ತೊಂದೆಡೆ ಪಹಲ್ಗಾಮ್ ಬಳಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿಯಿಂದಾಗಿ ಭಾರತ ಮತ್ತು ಪಾಕಿಸ್ತಾನದ ಗಡಿಭಾಗದಲ್ಲಿ ತಲೆದೋರಿರುವ ಅನಿಶ್ಚಿತ ಸ್ಥಿತಿಯು ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಎರಡು ದಿನದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹8.88 ಲಕ್ಷ ಕೋಟಿ ಕರಗಿದೆ.


ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 588 ಅಂಶ ಇಳಿಕೆ ಕಂಡು 79,212 ಅಂಶಗಳಲ್ಲಿ ಮುಕ್ತಾಯಗೊಂಡಿತು. ವಹಿವಾಟಿನ ವೇಳೆ 1,195 ಅಂಶ ಕುಸಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 207 ಅಂಶ ಇಳಿಕೆ ಕಂಡು 24,039 ಅಂಶಗಳಲ್ಲಿ ಸ್ಥಿರಗೊಂಡಿತು.

2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಎಕ್ಸಿಸ್ ಬ್ಯಾಂಕ್ ನಿವ್ವಳ ಲಾಭದಲ್ಲಿ ಇಳಿಕೆಯಾಗಿದೆ. ಇದರಿಂದ ಬ್ಯಾಂಕ್‌ನ ಷೇರಿನ ಮೌಲ್ಯ ಶೇ 3ರಷ್ಟು ಕುಸಿದಿದೆ.

ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹8,250 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಶೇ 0.50ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 66.24 ಡಾಲರ್ ಆಗಿದೆ.


ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

17ನೇ ವರ್ಷದ ಸವಿನೆನಪು



ಶ್ರೀ ಎನ್. ರಮೇಶ್
ಜನನ: 22-11-1966 ಮರಣ: 26-04-2008
ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗುಳಿದಿರುವುದು.
ಇಂತಿ ದುಃಖತಪ್ತರು: ಶ್ರೀಮತಿ ಪಾಪಮ್ಮ ಮತ್ತು ನಂಜಪ್ಪರೆಡ್ಡಿಯವರ ಕುಟುಂಬದವರು
ಮಾರತ್ತಹಳ್ಳಿ, ಬೆಂಗಳೂರು-37

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಎಂ.ಡಿ. ಗೋಪಾಲಯ್ಯನವರು
ಜ್ಯೋತಿಷಿಗಳು, ಮರಳಕುಂಟೆ.
ಇವರು ದಿ:18.4.2025ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿ: 28.04.2025ರಂದು ಬೆಳಿಗ್ಗೆ 11.30 ಗಂಟೆಗೆ ಮೃತರ ಸ್ವಗೃಹ ಮರಳಕುಂಟೆ ಗ್ರಾಮ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಏರ್ಪಡಿಸಿದ್ದು ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು
ಮೃತರ ಪತ್ನಿ ಶ್ರೀಮತಿ ಗಂಗಮ್ಮನವರು, ಮಕ್ಕಳು ಮತ್ತು ಕುಟುಂಬ ವರ್ಗದವರು ಹಾಗೂ ಗ್ರಾಮಸ್ಥರು
ಫೋನ್: 9008982277, 8660377170

ಸಂಕ್ಷಿಪ್ತ ಸುದ್ದಿ

ಚಿನ್ನದ ದರ ಶೇ 1.5ರಷ್ಟು ಇಳಿಕೆ

ಬೆಂಗಳೂರು (ರಾಯಿಟರ್ಸ್): ಜಾಗತಿಕ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆಯು ಶೇ 1.5ರಷ್ಟು ಇಳಿಕೆಯಾಗಿದೆ.

ಅಮೆರಿಕದ ಕೆಲವು ಸರಕುಗಳ ಮೇಲೆ ಚೀನಾವು ಸುಂಕ ವಿನಾಯಿತಿ ನೀಡಲು ಮುಂದಾಗಿದೆ. ಮತ್ತೊಂದೆಡೆ ಟ್ರಂಪ್ ಆಡಳಿತ ಕೂಡ ಚೀನಾದ ಮೇಲಿನ ಪ್ರತಿ ಸುಂಕವನ್ನು ಕಡಿಮೆ ಮಾಡುವ ಸುಳಿವು ನೀಡಿದೆ. ಇದರಿಂದ ಉಭಯ ದೇಶಗಳ ನಡುವಿನ ವ್ಯಾಪಾರ ಬಿಕ್ಕಟ್ಟನ್ನು ಶಮನಗೊಳ್ಳುವ ಭರವಸೆ ಮೂಡಿದೆ. ಹಾಗಾಗಿ, ಬಂಗಾರದ ದರ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮಂಗಳವಾರದ ವಹಿವಾಟಿನಲ್ಲಿ ಪ್ರತಿ ಔನ್ಸ್ (28.34 ಗ್ರಾಂ) ಚಿನ್ನದ ದರವು 3,500 ಡಾಲರ್‌ಗೆ (₹2.98 ಲಕ್ಷ) ತಲುಪಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿತ್ತು. ಶುಕ್ರವಾರದ ವಹಿವಾಟಿನಲ್ಲಿ 3,296 ಡಾಲರ್‌ಗೆ (₹2.81 ಲಕ್ಷ) ಇಳಿದಿದೆ.

ಮಾರುತಿ ಸುಜುಕಿ ಲಾಭ ಇಳಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹3,911 ಕೋಟಿ ನಿವ್ವಳ ಲಾಭ ಗಳಿಸಿದೆ.

2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹3,952 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 1ರಷ್ಟು ಇಳಿಕೆಯಾಗಿದೆ. ವೆಚ್ಚದ ಏರಿಕೆಯಿಂದಾಗಿ ಲಾಭದ ಪ್ರಮಾಣ ಕಡಿಮೆಯಾಗಿದೆ ಎಂದು ಕಂಪನಿ, ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಒಟ್ಟು ವರಮಾನ ₹38,471 ಕೋಟಿಯಾಗಿದೆ. ಒಟ್ಟು ವೆಚ್ಚದಲ್ಲಿ ಶೇ 8.5ರಷ್ಟು ಹೆಚ್ಚಳವಾಗಿದೆ. ದೇಶೀಯವಾಗಿ 5,19,546 ವಾಹನಗಳು ಮಾರಾಟವಾಗಿದ್ದರೆ, 85,089 ವಾಹನಗಳನ್ನು ರಫ್ತು ಮಾಡಲಾಗಿದೆ ಎಂದು ತಿಳಿಸಿದೆ.

ಬಿಒಎಂ ನಿವ್ವಳ ಲಾಭ ಏರಿಕೆ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) ಶೇ 23ರಷ್ಟು ನಿವ್ವಳ ಲಾಭಗಳಿಸಿದೆ.

ಈ ತ್ರೈಮಾಸಿಕದಲ್ಲಿ ಒಟ್ಟು ₹1,493 ಕೋಟಿ ಲಾಭ ಗಳಿಸಲಾಗಿದೆ. 2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹1,218 ಕೋಟಿ ಲಾಭ ಗಳಿಸಲಾಗಿತ್ತು ಎಂದು ಬ್ಯಾಂಕ್, ಶುಕ್ರವಾರ ಷೇರುಪೇಟೆಗೆ ಮಾಹಿತಿ ನೀಡಿದೆ. ಒಟ್ಟು ವರಮಾನ ₹7,711 ಕೋಟಿ ಆಗಿದೆ. ಪ್ರತಿ ಷೇರಿಗೆ ₹1.5 ಲಾಭಾಂಶ ನೀಡಲು ಆಡಳಿತ ಮಂಡಳಿಯು ಅನುಮೋದನೆ ನೀಡಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 1.88ರಿಂದ ಶೇ 1.74ಕ್ಕೆ ತಗ್ಗಿದೆ. ನಿವ್ವಳ ಎನ್‌ಪಿಎ ಶೇ 0.25ರಿಂದ ಶೇ 0.18ಕ್ಕೆ ಇಳಿಕೆಯಾಗಿದೆ ಎಂದು ವಿವರಿಸಿದೆ.

ಕಾರು ಬಾಂಬ್ ಸ್ಫೋಟ: ರಷ್ಯಾ ಸೇನಾಧಿಕಾರಿ ಸಾವು

ಮಾಸ್ಕೊ (ರಾಯಿಟರ್ಸ್): ರಷ್ಯಾ ರಾಜಧಾನಿ ಮಾಸ್ಕೊ ಪ್ರದೇಶದ ಬಾಲಶಿಖಾ ಪಟ್ಟಣದಲ್ಲಿ ಶುಕ್ರವಾರ ಕಾರು ಸ್ಫೋಟಗೊಂಡು ಹಿರಿಯ ಸೇನಾ ಅಧಿಕಾರಿಯೊಬ್ಬರು ಮೃತಪಟ್ಟಿದ್ದಾರೆ.

ರಷ್ಯಾದ ಸಶಸ್ತ್ರ ಪಡೆಗಳ ಜನರಲ್ ಸಿಬ್ಬಂದಿಯ ಮುಖ್ಯ ಕಾರ್ಯಾಚರಣೆ ನಿರ್ದೇಶನಾಲಯದ ಉಪ ಮುಖ್ಯಸ್ಥ ಯರೊಸ್ಲಾವ್ ಮೊಸ್ಕಾಲಿಕ್ ಮೃತ ಅಧಿಕಾರಿ ಎಂದು 'ಮ್ಯಾಶ್', 'ಶಾಟ್' ಸುದ್ದಿಸಂಸ್ಥೆಗಳು ವರದಿ ಮಾಡಿದೆ.

ಪಿಎಫ್ ಖಾತೆ ವರ್ಗಾವಣೆ ಸರಳ

ನವದೆಹಲಿ (ಪಿಟಿಐ): ಉದ್ಯೋಗಿಯ ಭವಿಷ್ಯ ನಿಧಿ (ಪಿಎಫ್) ಖಾತೆ ವರ್ಗಾವಣೆಗೆ ಸಂಬಂಧಿಸಿದ ನಿಯಮಗಳನ್ನು ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಸರಳೀಕರಣ ಗೊಳಿಸಿದೆ. ಇನ್ನು ಮುಂದೆ ಪಿಎಫ್ ಮೊತ್ತದ ವರ್ಗಾವಣೆಯು ಸುಲಭವಾಗಲಿದೆ.

ಉದ್ಯೋಗಿಯು ಕೆಲಸ ಬದಲಿಸಿದ ಸಂದರ್ಭದಲ್ಲಿ ಆತನ ಖಾತೆಯ ವರ್ಗಾವಣೆಗೆ ಹಲವು ಪ್ರಕ್ರಿಯೆಗಳನ್ನು ಪೂರೈಸಬೇಕಿತ್ತು. ಇದಕ್ಕೆ ಉದ್ಯೋಗಿಯು ಕೆಲಸ ಮಾಡಿದ್ದ ಸಂಸ್ಥೆ ಕೂಡ ಅನುಮೋದನೆ ನೀಡಬೇಕಿತ್ತು. ಇದರಿಂದ ಉದ್ಯೋಗಿಯು ಆ ಸಂಸ್ಥೆಗೆ ಎಡತಾಕಬೇಕಿತ್ತು. ಇಪಿಎಫ್‌ಒ ಚಂದಾದಾರರಿಗೆ ಅನುಕೂಲ ಕಲ್ಪಿಸಲು ಈ ನಿಯಮವನ್ನು ಕೈಬಿಡಲಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಶುಕ್ರವಾರ ತಿಳಿಸಿದೆ.

ಇಲ್ಲಿಯವರೆಗೆ ಭವಿಷ್ಯ ನಿಧಿ ಮೊತ್ತದ ವರ್ಗಾವಣೆ ಪ್ರಕ್ರಿಯೆಯು ನೌಕರರ ಭವಿಷ್ಯ ನಿಧಿಯ (ಇಪಿಎಫ್) ಎರಡು ಕಚೇರಿಗಳ ನಡುವೆ ನಡೆಯುತ್ತಿತ್ತು. ಅಂದರೆ ಉದ್ಯೋಗಿಯು ಕೆಲಸಕ್ಕೆ ಸೇರಿದ ವೇಳೆ ಪಿಎಫ್ ಖಾತೆ ತೆರೆದ ಮೂಲ ಕಚೇರಿ ಮತ್ತು ಅಂತಿಮವಾಗಿ ಪಿಎಫ್ ಮೊತ್ತ ಜಮೆ ಮಾಡುವ ಕಚೇರಿ ನಡುವೆ ಈ ಪ್ರಕ್ರಿಯೆ ಜರುಗುತ್ತಿತ್ತು ಎಂದು ತಿಳಿಸಿದೆ.

ಯಾವುದೇ ಉದ್ಯೋಗಿಯು ಖಾತೆ ವರ್ಗಾವಣೆಗೆ ನಮೂನೆ 13 ಅನ್ನು ಭರ್ತಿ ಮಾಡಿ ಸಲ್ಲಿಸುವುದು ಕಡ್ಡಾಯ. ಪಿಎಫ್ ಮೊತ್ತವನ್ನು ಜಮೆ ಮಾಡಬೇಕಿರುವ ಕಚೇರಿಯು ಇದಕ್ಕೆ ಅನುಮೋದನೆ ನೀಡಬೇಕಿತ್ತು. ಸದ್ಯ ಈ ಅರ್ಜಿಯನ್ನು ಪರಿಷ್ಕರಿಸಲಾಗಿದೆ. ಇನ್ನು ಮುಂದೆ ಅರ್ಜಿಗೆ ಈ ಕಚೇರಿಯು ಅನುಮೋದನೆ ನೀಡುವ ಅಗತ್ಯವಿಲ್ಲ. ಇದಕ್ಕಾಗಿ ಹೊಸ ತಂತ್ರಾಂಶವನ್ನು ಅಳವಡಿಸಲಾಗಿದೆ ಎಂದು ವಿವರಿಸಿದೆ.

ಖಾತೆ ವರ್ಗಾವಣೆಗೆ ಮೂಲ ಕಚೇರಿಯಿಂದ ಅನುಮೋದನೆ ಸಿಕ್ಕಿದ ತಕ್ಷಣವೇ ಮೂಲ ಖಾತೆಯ ಮೊತ್ತವು ಉದ್ಯೋಗಿಯ ಹಾಲಿ ಖಾತೆಗೆ ಸ್ವಯಂ ಚಾಲಿತವಾಗಿ ಜಮೆಯಾಗುತ್ತದೆ. ಇದರಿಂದ ಚಂದಾದಾರರು ಎದುರಿಸುತ್ತಿದ್ದ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂದು ಹೇಳಿದೆ.

ಈ ಸರಳೀಕರಣದಿಂದ ಪ್ರತಿ ವರ್ಷ 1.25 ಕೋಟಿ ಇಪಿಎಫ್‌ಒ ಚಂದಾದಾರರಿಗೆ ಅನುಕೂಲವಾಗಲಿದೆ. ₹90 ಸಾವಿರ ಕೋಟಿಗೂ ಹೆಚ್ಚು ಮೊತ್ತವು ತ್ವರಿತಗತಿಯಲ್ಲಿ ಅರ್ಹ ಉದ್ಯೋಗಿಗಳ ಖಾತೆಗೆ ಜಮೆಯಾಗಲಿದೆ ಎಂದಿದೆ.

ನೇರ ತೆರಿಗೆ ಸಂಗ್ರಹ ಏರಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ₹22.26 ಲಕ್ಷ ಕೋಟಿ ನಿವ್ವಳ ನೇರ ತೆರಿಗೆ ಸಂಗ್ರಹವಾಗಿದೆ. ಇದರ ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 13.57ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಫೆಬ್ರುವರಿಯಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ₹22.37 ಲಕ್ಷ ಕೋಟಿ ತೆರಿಗೆ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿತ್ತು.

2024–25ನೇ ಆರ್ಥಿಕ ವರ್ಷದ ಮಾರ್ಚ್ ಅಂತ್ಯಕ್ಕೆ ಒಟ್ಟು ₹27.02 ಲಕ್ಷ ಕೋಟಿ ಸಂಗ್ರಹವಾಗಿದೆ. ಇದರ ಹಿಂದಿನ ಆರ್ಥಿಕ ವರ್ಷದಲ್ಲಿ ₹23.37 ಲಕ್ಷ ಕೋಟಿ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ಶೇ 15.59ರಷ್ಟು ಹೆಚ್ಚಳವಾಗಿದೆ.

ಇದೇ ಮೊದಲ ಬಾರಿಗೆ ಆದಾಯ ತೆರಿಗೆ ಇಲಾಖೆಯು ಅತಿಹೆಚ್ಚು ತೆರಿಗೆ ಮರುಪಾವತಿ ಮಾಡಿದೆ. ಒಟ್ಟು ₹4.76 ಲಕ್ಷ ಕೋಟಿ ಮರುಪಾವತಿ ಮಾಡಿದೆ. ಮರುಪಾವತಿ ಬಳಿಕ ನಿವ್ವಳ ತೆರಿಗೆ ಸಂಗ್ರಹ ₹22.26 ಲಕ್ಷ ಕೋಟಿ ಆಗಿದೆ ಎಂದು ತಿಳಿಸಿದೆ.

ಭಾರತದ ವಿಮಾನಗಳಿಗೆ ಪಾಕ್ ವಾಯುಪ್ರದೇಶ ನಿರ್ಬಂಧ

ನವದೆಹಲಿ (ರಾಯಿಟರ್ಸ್): ಪಾಕಿಸ್ತಾನವು ತನ್ನ ವಾಯುಪ್ರದೇಶದಲ್ಲಿ ಭಾರತದ ವಿಮಾನಗಳ ಹಾರಾಟಕ್ಕೆ ನಿರ್ಬಂಧ ಹೇರಿದೆ. ಇದರಿಂದ ದೇಶೀಯ ವಿಮಾನಯಾನ ಕಂಪನಿಗಳಾದ ಏರ್ ಇಂಡಿಯಾ ಮತ್ತು ಇಂಡಿಗೊದ ಅಂತರರಾಷ್ಟ್ರೀಯ ವಿಮಾನ ಪ್ರಯಾಣ ದರವು ದುಬಾರಿಯಾಗುವ ಸಾಧ್ಯತೆಯಿದೆ.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿಯಿಂದಾಗಿ ಉಭಯ ರಾಷ್ಟ್ರಗಳು ಪರಸ್ಪರ ವ್ಯಾಪಾರ ಒಪ್ಪಂದಗಳಿಗೆ ನಿರ್ಬಂಧ ಹೇರಿವೆ.

ಪಾಕಿಸ್ತಾನಕ್ಕೆ ಸೇರಿದ ವಾಯುಪ್ರದೇಶದ ಮೂಲಕವೇ ಈ ಎರಡು ವಿಮಾನಯಾನ ಕಂಪನಿಗಳಿಗೆ ಸೇರಿದ ಅಂತರರಾಷ್ಟ್ರೀಯ ವಿಮಾನಗಳು ಸಂಚಾರ ನಡೆಸುತ್ತವೆ. ಸದ್ಯ ನಿರ್ಬಂಧ ಹೇರಿರುವುದರಿಂದ ಇಂಧನ ವೆಚ್ಚ ಹೆಚ್ಚಳವಾಗಲಿದೆ. ಜೊತೆಗೆ, ನಿಗದಿತ ಸ್ಥಳಗಳಿಗೆ ಹಾರಾಟವು ದೀರ್ಘ ಸಮಯ ಹಿಡಿಯಲಿದೆ ಎಂದು ಹೇಳಲಾಗಿದೆ.

ಆದರೆ, ಪಾಕಿಸ್ತಾನದ ನಿರ್ಧಾರವು ಅಂತರರಾಷ್ಟ್ರೀಯ ವಿಮಾನಯಾನ ಕಂಪನಿಗಳಿಗೆ ಯಾವುದೇ ಪರಿಣಾಮ ಬೀರುವುದಿಲ್ಲ.

ನ್ಯೂಯಾರ್ಕ್, ಅಜರ್‌ಬೈಜಾನ್ ಮತ್ತು ದುಬೈಗೆ ತೆರಳುತ್ತಿದ್ದ ಏರ್ ಇಂಡಿಯಾ ಮತ್ತು ಇಂಡಿಗೊ ಕಂಪನಿಯ ವಿಮಾನಗಳು ಪಾಕಿಸ್ತಾನದ ವಾಯುಪ್ರದೇಶದಲ್ಲಿಯೇ ಹಾರಾಟ ನಡೆಸುತ್ತಿದ್ದವು ಎಂದು ವಿಮಾನಗಳ ಕಾರ್ಯಾಚರಣೆ ಬಗ್ಗೆ ಮಾಹಿತಿ ಒದಗಿಸುವ ಫ್ಲೈಟ್‌ರೇಡಾರ್24 ಡಾಟ್ ಕಾಂ ತಿಳಿಸಿದೆ. ಪ್ರಸಕ್ತ ತಿಂಗಳಿನಲ್ಲಿ ನವದೆಹಲಿ ವಿಮಾನ ನಿಲ್ದಾಣದಿಂದ 1,200ಕ್ಕೂ ಹೆಚ್ಚು ವಿಮಾನಗಳು ಯುರೋಪ್, ಪಶ್ಚಿಮ ಏಷ್ಯಾ ಮತ್ತು ಉತ್ತರ ಅಮೆರಿಕಕ್ಕೆ ಸಂಚರಿಸಲು ಸಮಯ ನಿಗದಿಯಾಗಿದೆ. ಇವುಗಳ ಮೇಲೆ ಪಾಕಿಸ್ತಾನ ಹೇರಿರುವ ನಿರ್ಬಂಧವು ಪರಿಣಾಮ ಬೀರಲಿದೆ ಎಂದು ಹೇಳಲಾಗಿದೆ.

ಪಿಯು ಮರುಮೌಲ್ಯಮಾಪನ ಆರ್. ದೀಕ್ಷಾ, ಪ್ರತೀಕ್ಷಾ ಪ್ರಥಮ

ಒಂದನೇ ಪುಟದಿಂದ...

ಎಲ್ಲ ವಿಷಯಗಳಲ್ಲೂ 100ಕ್ಕೆ 100 ಅಂಕ ಪಡೆದಿದ್ದ ದೀಕ್ಷಾಗೆ ರಸಾಯನ ವಿಜ್ಞಾನ ವಿಷಯದಲ್ಲಿ 99 ಬಂದಿದ್ದವು. ಅದಕ್ಕಾಗಿ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದರು. ಇದೀಗ ರಸಾಯನ ವಿಜ್ಞಾನದಲ್ಲೂ 100ಕ್ಕೆ 100 ಅಂಕ ಲಭಿಸಿದ್ದು, ಒಬ್ಬರೇ ಮೊದಲ ಸ್ಥಾನ ಪಡೆದಿದ್ದಾರೆ. ಅಮೂಲ್ಯ ಕಾಮತ್‌ಗೆ ದ್ವಿತೀಯ ಸ್ಥಾನ ದೊರೆತಿದೆ.

ವಾಣಿಜ್ಯ ವಿಭಾಗದಲ್ಲಿ ಪ್ರತೀಕ್ಷಾ ಮೊದಲು: ಬೆಂಗಳೂರಿನ ರಾಜಾಜಿನಗರದ ಎಎಸ್‌ಸಿ ಕಾಲೇಜಿನ ವಿದ್ಯಾರ್ಥಿನಿ ಪಿ. ಪ್ರತೀಕ್ಷಾ 599 ಅಂಕ ಪಡೆಯುವ ಮೂಲಕ ವಾಣಿಜ್ಯ ವಿಭಾಗದಲ್ಲಿ ಮೊದಲ ಸ್ಥಾನಕ್ಕೇರಿದ್ದಾರೆ. ಅವರು ಮಂಗಳೂರು ಕೆನರಾ ಕಾಲೇಜಿನ ಎಸ್. ದೀಪಶ್ರೀ (599) ಜತೆ ಪ್ರಥಮ ಸ್ಥಾನ ಹಂಚಿಕೊಂಡಿದ್ದಾರೆ.

ಈ ಹಿಂದೆ ಪ್ರತೀಕ್ಷಾ 597 ಅಂಕ ಗಳಿಸಿ ರಾಜ್ಯಕ್ಕೆ 3ನೇ ಸ್ಥಾನ ಪಡೆದಿದ್ದರು. ಇಂಗ್ಲಿಷ್ ವಿಷಯದ ಮರು ಮೌಲ್ಯಮಾಪನದ ನಂತರ ಎರಡು ಅಂಕಗಳು ಹೆಚ್ಚುವರಿಯಾಗಿ ಲಭಿಸಿವೆ.

ಹೆಬ್ಬಾಳ ಕೆಂಪಾಪುರದ ಪ್ರೆಸಿಡೆನ್ಸಿ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಕೆ. ಅಮೃತಾ 598 ಅಂಕಗಳನ್ನು ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಇವರು ಕೆ.ಮಂಜುನಾಥ ಹೆಬ್ಬಾರ್ ಮತ್ತು ಕೆ. ವಿ. ಪೂರ್ಣಾಂಬಾ ಅವರ ಪುತ್ರಿ.

ಮರು ಮೌಲ್ಯಮಾಪನದ ನಂತರ 600 ಅಂಕ ಬಂದದ್ದು ಖುಷಿಯಾಗಿದೆ. ರಸಾಯನ ವಿಜ್ಞಾನದಲ್ಲಿ ಪ್ರಶ್ನೆಯೊಂದಕ್ಕೆ ಐದು ಅಂಕಗಳ ಬದಲು ನಾಲ್ಕು ಅಂಕ ಕೊಟ್ಟಿದ್ದರು. ಈಗ ಆ ಒಂದು ಅಂಕವೂ ಸಿಕ್ಕಿದೆ

ಆರ್. ದೀಕ್ಷಾ, ವಾಗ್ದೇವಿ ಕಾಲೇಜು ವಿದ್ಯಾರ್ಥಿನಿ

ಪರೀಕ್ಷೆ ಮುಗಿದಾಗಲೇ ಮೊದಲ ಸ್ಥಾನದ ನಿರೀಕ್ಷೆಯಲ್ಲಿದ್ದೆ. ಫಲಿತಾಂಶದಲ್ಲಿ ರಾಜ್ಯಕ್ಕೆ 3ನೇ ಸ್ಥಾನ ಬಂದಿತ್ತು. ಮರು ಮೌಲ್ಯಮಾಪನದ ನಂತರ ಪ್ರತಿಭೆಗೆ ತಕ್ಕ ಫಲ ಸಿಕ್ಕಿದೆ

ಪಿ. ಪ್ರತೀಕ್ಷಾ, ಎಎಸ್‌ಸಿ ಕಾಲೇಜು ವಿದ್ಯಾರ್ಥಿನಿ

ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿಕೆ

'ಆನೆ ಧಾಮ' ಕಾಮಗಾರಿ ಶೀಘ್ರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ, ಕೊಡಗು ಹಾಗೂ ಚಿಕ್ಕಮಗಳೂರು ಭಾಗದಲ್ಲಿ ಕಾಡಾನೆಗಳ ಹಾವಳಿ ತಡೆಗೆ ಭದ್ರಾ ಅಭಯಾರಣ್ಯದಲ್ಲಿ ನಿರ್ಮಾಣ ಮಾಡುತ್ತಿರುವ 'ಆನೆ ಧಾಮ'ದ ಕಾಮಗಾರಿ ಎರಡು ತಿಂಗಳಲ್ಲಿ ಆರಂಭವಾಗಲಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '₹53 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ಸಮಗ್ರ ಯೋಜನಾ ವರದಿ ಸಿದ್ಧವಾಗುತ್ತಿದೆ. ಈಗಾಗಲೇ ಸ್ಥಳ ಪರಿಶೀಲನಾ ಕಾರ್ಯವೂ ಮುಗಿದಿದೆ. ಬಿದಿರು, ಹಲಸು, ಹುಲ್ಲು ಸೇರಿದಂತೆ ಆನೆಗಳ ನೆಚ್ಚಿನ ಆಹಾರವನ್ನು ಆನೆ ಧಾಮದಲ್ಲಿ ಬೆಳೆಸಲಾಗುತ್ತದೆ. ಜನವಸತಿ, ಕೃಷಿ ಭೂಮಿಯತ್ತ ಸಾಗುವ ಆನೆಗಳನ್ನು ಈ ಪ್ರದೇಶದಲ್ಲಿ ಬಿಡಲಾಗುತ್ತದೆ' ಎಂದರು.

ಹಿಂದುಳಿದ ವರ್ಗಗಳ ಆಯೋಗ ನೀಡಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಅಧ್ಯಯನ ಮಾಡುತ್ತಿದ್ದೇನೆ. ಮುಂದಿನ ಸಂಪುಟ ಸಭೆಯಲ್ಲಿ ನನ್ನ ನಿಲುವು ಸ್ಪಷ್ಟಪಡಿಸುತ್ತೇನೆ

ಈಶ್ವರ ಖಂಡ್ರೆ, ಅರಣ್ಯ ಸಚಿವ

ಪ್ರತಿ ವರ್ಷ ಸರಾಸರಿ 50-60 ಜನರು ವನ್ಯಜೀವಿ- ಮಾನವ ಸಂಘರ್ಷದಿಂದ ಮೃತಪಡುತ್ತಿದ್ದಾರೆ. ಪ್ರತಿಯೊಂದು ಜೀವವೂ ಅಮೂಲ್ಯವಾಗಿದ್ದು, ಜನರ ಜೀವ ರಕ್ಷಣೆಯಲ್ಲಿ ಆನೆ ಧಾಮ ಪ್ರಮುಖ ಪಾತ್ರ ವಹಿಸಲಿದೆ. ಅರಣ್ಯದಂಚಿನಲ್ಲಿ ಬೆಳೆಸುವ ಬಿದಿರು ಜೈವಿಕ ಮತ್ತು ಸ್ವಾಭಾವಿಕ ಬ್ಯಾರಿಕೇಡ್ ಆಗುತ್ತದೆ. ಅರಣ್ಯ ಒತ್ತುವರಿಯನ್ನು ತಡೆಯುತ್ತದೆ. ಆನೆಗಳಿಗೆ ಆಹಾರವೂ ಆಗುತ್ತದೆ. ಇದರಿಂದ ಆನೆ-ಮಾನವ ಸಂಘರ್ಷ ನಿಯಂತ್ರಿಸಲು ಸಹಾಯವಾಗುತ್ತದೆ ಎಂದು ಹೇಳಿದರು.

6,225 ಎಕರೆ ಅರಣ್ಯ ಒತ್ತುವರಿ ತೆರವು: ಕಳೆದ 21 ತಿಂಗಳಲ್ಲಿ 6,225 ಎಕರೆ ಅರಣ್ಯ ಒತ್ತುವರಿ ತೆರವು ಮಾಡಲಾಗಿದೆ. 15,422 ಎಕರೆ ಜಮೀನನ್ನು ಅರಣ್ಯ ಪ್ರದೇಶವೆಂದು ಘೋಷಿಸಲಾಗಿದೆ. ಚಾರಣ ಪಥಗಳಿಗೆ ಮುಂಗಡ ಟಿಕೆಟ್ ಕಾಯ್ದಿರಿಸಲು ಆನ್‌ಲೈನ್ ವ್ಯವಸ್ಥೆ ಜಾರಿಗೆ ತರಲಾಗಿದೆ ಎಂದರು.

ಎಚ್‌ಎಂಟಿ- ಕಾನೂನು ಹೋರಾಟ: ಕೇಂದ್ರ ಸರ್ಕಾರಿ ಸ್ವಾಮ್ಯದ ಎಚ್‌ಎಂಟಿ ವಶದಲ್ಲಿರುವ ₹14,300 ಕೋಟಿ ಮೌಲ್ಯದ 443 ಎಕರೆ ಅರಣ್ಯ ಭೂಮಿಯನ್ನು ರಿಯಲ್ ಎಸ್ಟೇಟ್ ಸಂಸ್ಥೆಗಳು ಸೇರಿದಂತೆ ಹಲವು ಸಂಸ್ಥೆಗಳಿಗೆ ಮಾರಾಟ ಮಾಡುವುದನ್ನು ತಡೆಯಲಾಗಿದೆ. ಜಮೀನು ಹಿಂಪಡೆಯಲು ಕಾನೂನು ಹೋರಾಟ ಮಾಡಲಾಗುತ್ತಿದೆ. ಮುಂದಿನ ತಿಂಗಳು ಪ್ರಕರಣ ವಿಚಾರಣೆಗೆ ಬರಲಿದೆ ಎಂದು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Mysore

SALE MUDA approved sites ready for registration Rs. 3700/-. Well developed layout, Bandipalya Village, Mysore. Brokers excuse, buyers Contact- 7619606688.

ಭವಿಷ್ಯ

Astrology

★॥ನಂ.1.ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ ವಶೀಕರಣ ಸಂಭೋಗ ವಶೀಕರಣ ನೋಡುವ_ಮೂಲಕ ಹೆಸರಿನ_ಮೂಲಕ ಹನ್ನೊಂದು ಗಂಟೆಯಲ್ಲಿ ಶಾಶ್ವತ ಪರಿಹಾರ. ಪಂಡಿತ್. ಸಾಯಿಭಟ್. 9900222591

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

PUBLIC NOTICE

PUBLIC NOTICE

This is to inform the general public that my client intends to purchase the immovable property mentioned and described in the schedule here below from its owner, **Sri. A. Seetha Rama Rao**, son of Sri. Venkatappa Rao (hereafter referred to as "Owner"). The Owner represents that the Schedule Property is free from any encumbrance, mortgage, charge, lien or litigation and he has not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/ objection(s)/demand(s) to the proposed transaction.

SCHEDULE

All that piece and parcel of the below mentioned properties situated at Kethohalli Village, Kasaba Hobli, Ramanagara Taluk, Ramanagara District:

Sl. No.	Sy. No.	Extent in Acres & Guntas	Boundaries East by	West by	North by	South by
1.	123/1	00-06.4	Sy. No. 126/1	Sy. No. 123/5	Sy. No. 126/2	Sy. No. 123/4
2.	123/5	00-06.4	Sy. No. 123/1	Sy. No. 123/2	Sy. No. 126/2	Sy. No. 123/4

Place : Bengaluru
Date : 25-04-2025

Vinay K. S., Advocate,
Vinay Kademane & Associates
307, 3rd Floor, Prestige Centre Point,
No.7/49, Edward Road, Bengaluru-560001
Ph.: 080 22863885
email:vinay@vinaykademane.in

ವ್ಯಾಪಾರ

Business to Business

Shares

NEELKANT OFFERS Fixed Returns. Minimum Investment Rs.25,000/- with 8% Fixed Returns Month on Month Irrespective of the Market Status. Call 9433383338

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಸರ್ಕಾರದ ಸಿಬ್ಬಂದಿ ನೇಮಕಾತಿಯಲ್ಲಿ ಒಕ್ಕಲಿಗ ಮತ್ತು ವೀರಶೈವ ಲಿಂಗಾಯಿತ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ
ರಾಜ್ಯ ಒಕ್ಕಲಿಗ ಸಮುದಾಯದ ಮೀಸಲಾತಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ (ರಿ). ನಂ. 196, 3ನೇ ಹಂತ, 3 ನೇ ಬ್ಲಾಕ್, ನಾಗರಬಾವಿ, ಬಸವೇಶ್ವರ ನಗರ, ಬೆಂಗಳೂರು-79, ಕರ್ನಾಟಕ
ಕಟ್ಟ-ಕಡೆಯ ಒಕ್ಕಲಿಗ ಸಮುದಾಯದ ಸಹಯೋಗದೊಂದಿಗೆ
ದಿನಾಂಕ : 27-04-2025ನೇ ಭಾನುವಾರ, ಬೆಳಿಗ್ಗೆ 10:30ಕ್ಕೆ ಬೆಳ್ಳೂರು ಕ್ರಾಸ್‌ನಿಂದ ಶ್ರೀ ಆದಿಚುಂಚನಗಿರಿ ಸುಕ್ಷೇತ್ರದವರೆಗೆ
ಜನ-ಜಾಗೃತಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ
'ರಾಜ್ಯ ಒಕ್ಕಲಿಗರ ಉನ್ನತಾಧಿಕಾರ ಸಮಿತಿ' ರಚಿಸುವುದರೊಂದಿಗೆ ಈ ಕೆಳಕಂಡ ಮೂರು ವಿಷಯಗಳಲ್ಲಿ ಕಟ್ಟಕಡೆಯ ಒಕ್ಕಲಿಗ ಮತ್ತು ವೀರಶೈವ ಲಿಂಗಾಯಿತ ಸಮುದಾಯಕ್ಕೆ ಆಗಿರುವ ಅನ್ಯಾಯ /ತಾರತಮ್ಯದ ವಿರುದ್ಧ ನ್ಯಾಯ ದೊರಕಿಸಿಕೊಡುವಂತೆ ಶ್ರೀಗಳಿಗೆ ಮನವಿ ಸಲ್ಲಿಸುವುದು.
1. ನೇಮಕಾತಿ ಮತ್ತು ಬಡ್ತಿಯಲ್ಲಿ ರೋಸ್ಟರ್ ಬಿಂದು ತಾರತಮ್ಯ.
2. ರಾಜ್ಯದ ವಿಶ್ವವಿದ್ಯಾನಿಲಯಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ತಾರತಮ್ಯ.
3. ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿಯಲ್ಲಿನ ಒ.ಬಿ.ಸಿ ಮೀಸಲಾತಿಯಲ್ಲಿ ತಾರತಮ್ಯ.
ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪಾದಯಾತ್ರೆಗೆ ಭಾಗವಹಿಸಿ ಬೆಂಬಲಿಸಲು ಪ್ರಾರ್ಥಿಸುತ್ತೇನೆ



ಕೆ.ವಿ ಮುದ್ದೇಗಿರಯ್ಯ (ಗುಬ್ಬಿ S. ಕೊಡಗೀಹಳ್ಳಿ) ಅಧ್ಯಕ್ಷರು, ರಾಜ್ಯ ಒಕ್ಕಲಿಗ ಸಮುದಾಯದ ಮೀಸಲಾತಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ (ರಿ).

Hotel

ಬೆಂಗಳೂರಿನ ಕ್ಲಬ್ ಕ್ಯಾಂಟೀನ್ ಒಂದಕ್ಕೆ, ಅಡುಗೆಯವರು ನಾಟಿ ಶೈಲಿ, ದಕ್ಷಿಣ, ಉತ್ತರ ಭಾರತ ಶೈಲಿ, ಅಡುಗೆ ಸಹಾಯಕರು, ವೈಟರ್,ಕ್ಯಾಶಿಯರ್, ಹೆಲ್ಪರ್ ರುಬ್ಬುವವರು, ತರಕಾರಿ ಹೆಚ್ಚುವವರು ಬೇಕಾಗಿದ್ದಾರೆ. ಸಂಪರ್ಕಿಸಿ: 9513026683 9449112306 9036244326

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಜಿಲ್ಲಾ ತರಬೇತಿ ಸಂಸ್ಥೆ ಬೆಂಗಳೂರು ಬನಶಂಕರಿ ಇಲ್ಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಡೇಟಾ ಎಂಟ್ರಿ ಆಪರೇಟರ್ (B.com Tally Nudi) ಹಾಗು ಡಿ ಗ್ರೂಪ್ (SSLC) ಬೇಕಾಗಿದ್ದಾರೆ. ಸಂಪರ್ಕಿಸಿ: 9481232316, 914898352.

WANTED: ಬೆಂಗಳೂರಿನ ಸೌತ್ ಎಂಡ್ ಸರ್ಕಲ್ ನಲ್ಲಿ ಆಫೀಸ್ ಅಸಿಸ್ಟೆಂಟ್ (Gents) ಮತ್ತು ಆಫೀಸ್ ಕ್ಲೀನಿಂಗ್ ಕೆಲಸಕ್ಕೆ (ಸ್ತ್ರೀ) 30-35 ವರ್ಷ ಒಳಗಿರುವವರು, ಸಂಬಳ ಇಬ್ಬರಿಗೂ ಸೇರಿ 20,000 ಹಾಗೂ (ವಸತಿಗಾಗಿ 5,000, ಪ್ರತ್ಯೇಕ) ಸಂಪರ್ಕಿಸಿ: 9900839393 / 9844889394

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560

ನಾಳೆ ವಿಶ್ವ 10ಕೆ ಓಟ: ಸಿಲಿಕಾನ್ ಸಿಟಿಯಲ್ಲಿ ಅಂತರರಾಷ್ಟ್ರೀಯ ತಾರೆಯರು

ಚೆಪ್ಟೆಗಿ ಮೇಲೆ ಹೆಚ್ಚಿನ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: '2014ರಲ್ಲಿ ಬೆಳ್ಳಿ ಪದಕದೊಂದಿಗೆ ಬೆಂಗಳೂರಿನಲ್ಲೇ ಅಂತರರಾಷ್ಟ್ರೀಯ ಪಯಣ ಆರಂಭಿಸಿದ್ದೆ. 11 ವರ್ಷಗಳಲ್ಲಿ ಒಲಿಂಪಿಕ್ಸ್ ಪದಕಗಳು ಸೇರಿದಂತೆ ಹಲವು ಪ್ರಶಸ್ತಿ ಗೆದ್ದಿದ್ದೇನೆ. ಇದೀಗ ಟಿಸಿಎಸ್ ವಿಶ್ವ 10ಕೆ ಓಟದಲ್ಲಿ ಚಿನ್ನದ ಗುರಿಯೊಂದಿಗೆ ಕಣಕ್ಕೆ ಇಳಿಯಲು ಸಜ್ಜಾಗಿದ್ದೇನೆ' ಎಂದು ಯುಗಾಂಡಾದ ದೂರ ಅಂತರದ ಓಟಗಾರ ಜೋಷುವಾ ಚೆಪ್ಟೆಗಿ ಹೇಳಿದರು.

ಭಾನುವಾರ ಮುಂಜಾನೆ ನಡೆಯಲಿರುವ 10ಕೆ ಓಟಕ್ಕೆ ಸಿಲಿಕಾನ್ ಸಿಟಿ ಸಜ್ಜಾಗಿದೆ ಸ್ಪರ್ಧೆಗೆ ಕಾವು ಹೆಚ್ಚಿಸುವಂತೆ ಯುಗಾಂಡಾ, ಕೆನ್ಯಾ, ನಾರ್ವೆ, ಇಥಿಯೋಪಿಯಾ, ತಾಂಜಾನಿಯಾ ಸೇರಿದಂತೆ ಹಲವು ರಾಷ್ಟ್ರಗಳ ಖ್ಯಾತನಾಮ ಅಥ್ಲೀಟ್‌ಗಳು ಬಂದಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 10 ಸಾವಿರ ಮೀ. ಓಟದಲ್ಲಿ ಚಿನ್ನ, 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ 5 ಸಾವಿರ ಮೀಟರ್‌ನಲ್ಲಿ ಚಿನ್ನ ಮತ್ತು 10 ಸಾವಿರ ಮೀ. ಓಟದಲ್ಲಿ ಬೆಳ್ಳಿ ಪದಕ ಗೆದ್ದಿರುವ 28 ವರ್ಷ ವಯಸ್ಸಿನ ಚೆಪ್ಟೆಗಿ ಇಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದಾರೆ.

ಪುರುಷರ ವಿಭಾಗದ ಕೂಟ ದಾಖಲೆ ಕೆನ್ಯಾದ ನಿಕೋಲಸ್ ಕಿಮೆಲಿ ಹೆಸರಿನಲ್ಲಿದೆ. 2022ರಲ್ಲಿ ಅವರು 27 ನಿಮಿಷ 38 ಸೆಕೆಂಡುಗಳಲ್ಲಿ ಗುರಿ ತಲುಪಿದ್ದರು. ಚೆಪ್ಟೆಗಿ ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯು 26 ನಿಮಿಷ 11 ಸೆಕೆಂಡ್ ಇದ್ದು, ಕೂಟ ದಾಖಲೆ ಮುರಿಯುವ ಸಾಧ್ಯತೆ ಹೆಚ್ಚಿದೆ.



ದೂರ ಅಂತರದ ಓಟಗಾರರಾದ ಯುಗಾಂಡಾದ ಜೋಷುವಾ ಚೆಪ್ಟೆಗಿ, ಕೆನ್ಯಾದ ಸಿಂಥಿಯಾ ಚೆಪ್ಗನೊ ಮತ್ತು ತಾಂಜಾನಿಯಾದ ಜೆರಾಲ್ಡ್ ಗೇ ಶುಕ್ರವಾರ ಮಾಧ್ಯಮ ಸಂವಾದದಲ್ಲಿ ಪಾಲ್ಗೊಂಡರು ಪ್ರಜಾವಾಣಿ ಚಿತ್ರ

ವಿಶ್ವ 10ಕೆ ಓಟ ಆರಂಭದ ಸಮಯ	
ಓಟದ ವಿಭಾಗ	ಆರಂಭ (ಬೆಳಿಗ್ಗೆ)
ವಿಶ್ವ 10ಕೆ ಮಹಿಳೆಯರು	5.30
ವಿಶ್ವ 10ಕೆ ಪುರುಷರು	6.08
ಓಪನ್ 10ಕೆ	6.10
ಚಾಂಪಿಯನ್ಸ್, ಅಂಗವಿಕಲರು (3 ಕಿ.ಮೀ)	8.00
ಹಿರಿಯ ನಾಗರಿಕರು (3 ಕಿ.ಮೀ)	8.10
ಮಜಾ ರನ್ (4.2 ಕಿ.ಮೀ)	8.30

ಶುಕ್ರವಾರ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, 'ಗೆಲುವಿನೊಡನೆ ಬೆಂಗಳೂರಿಂದ ನಿರ್ಗಮಿಸುವುದು ನನ್ನ ಆದ್ಯತೆ. ದಾಖಲೆ ನಿರ್ಮಿಸುವ ಬಗ್ಗೆ ಈಗಲೇ ಖಚಿತವಾಗಿ ಹೇಳಲಾರೆ. ಪ್ರಸ್ತುತ ಮ್ಯಾರಥಾನ್‌ಗಳಿಗೆ ಹೆಚ್ಚು ತಯಾರಿ ನಡೆಸಿದ್ದು, ಹೀಗಾಗಿ 10ಕೆ ಓಟದಲ್ಲಿ ವೇಗವಾಗಿ ಗುರಿ ಮುಟ್ಟುವುದು ಸ್ವಲ್ಪ ಕಷ್ಟವಾಗಬಹುದು' ಎಂದು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೂರು ಬಾರಿ ಚಿನ್ನ ಗೆದ್ದಿರುವ ಚೆಪ್ಟೆಗಿ ತಿಳಿಸಿದರು.

ಕೆನ್ಯಾದ ವಿನ್ಸೆಂಟ್ ಲ್ಯಾಂಗಟ್, ಯುಗಾಂಡಾದ ಸ್ಟೀಫನ್ ಕಿಸ್ಸಾ, ನಾರ್ವೆಯ ಅವೆಟ್ ನಫ್ತಾಲೆಮ್ ಕಿಬ್ರಾಬ್, ಇಥಿಯೋಪಿಯಾದ ಜೆನ್ಬೆರು ಸಿಸೆ, ತಾಂಜಾನಿಯಾದ ಜೆರಾಲ್ಡ್ ಗೇ ಅವರು ಪುರುಷರ ವಿಭಾಗದ ಪ್ರಶಸ್ತಿಗಾಗಿ ಚೆಪ್ಟೆಗಿ ಅವರಿಗೆ ಸವಾಲೊಡ್ಡುವ ನಿರೀಕ್ಷೆಯಿದೆ.

ಮಹಿಳೆಯರ ವಿಭಾಗದಲ್ಲೂ ಅಂತರರಾಷ್ಟ್ರೀಯ ಅಥ್ಲೀಟ್‌ಗಳು ಸ್ಪರ್ಧೆಯಲ್ಲಿದ್ದಾರೆ. ಕೆನ್ಯಾದ ದೂರ ಅಂತರದ ಓಟಗಾರ್ತಿ ಸಿಂಥಿಯಾ ಚೆಪ್ಗನೊ ಮೇಲೆ ಹೆಚ್ಚಿನ ನಿರೀಕ್ಷೆಯಿದೆ. 2022ರಲ್ಲಿ ಅವರದೇ ದೇಶದ ಐರಿನ್ ಚೆಪ್ಟೈ (30ನಿ.35ಸೆ) ಸ್ಥಾಪಿಸಿದ್ದ ಕೂಟ ದಾಖಲೆಗಿಂತ (30ನಿ.08) ಅತ್ಯುತ್ತಮ ವೈಯಕ್ತಿಕ ಸಾಧನೆ ಹೊಂದಿರುವ ಸಿಂಥಿಯಾ ಓಟದ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ.

'ಸಹ ಸ್ಪರ್ಧಿಗಳೊಂದಿಗೆ ಉತ್ತಮ ರೇಸ್‌ಗೆ ಉತ್ಸುಕಳಾಗಿದ್ದೇನೆ. ಪೋಡಿಯಂ ಫಿನಿಷ್ ಮಾಡುವತ್ತ ಚಿತ್ತ ಹರಿಸಿದ್ದೇನೆ' ಎಂದು 24 ವರ್ಷ ವಯಸ್ಸಿನ ಸಿಂಥಿಯಾ ತಿಳಿಸಿದರು.

ಏಷ್ಯನ್ ಅಥ್ಲೆಟಿಕ್ಸ್: 59 ಸದಸ್ಯರ ಭಾರತ ತಂಡದ ಆಯ್ಕೆ

ನವದೆಹಲಿ (ಪಿಟಿಐ): ದಕ್ಷಿಣ ಕೊರಿಯಾದ ಗುಮಿ ನಗರದಲ್ಲಿ ಮೇ 27 ರಿಂದ ನಡೆಯಲಿರುವ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ 59 ಸದಸ್ಯರ ಭಾರತ ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದೆ. ನಿರೀಕ್ಷೆಯಂತೆ ನೀರಜ್ ಚೋಪ್ರಾ ಈ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುತ್ತಿಲ್ಲ.

ಕೊಚ್ಚಿಯಲ್ಲಿ ಗುರುವಾರ ಮುಕ್ತಾಯಗೊಂಡ ನಾಲ್ಕು ದಿನಗಳ ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನಲ್ಲಿ ಉತ್ತಮ ಸಾಧನೆ ತೋರಿದವರು ನಿರೀಕ್ಷೆಯಂತೆ ಈ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಈ ವರ್ಷ ಡೈಮಂಡ್ ಲೀಗ್ ಕೂಟಗಳಲ್ಲಿ ಭಾಗಹಿಸುವುದಕ್ಕೆ ಮತ್ತು ಜಪಾನ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಹೆಚ್ಚಿನ ಗಮನ ನೀಡುತ್ತಿರುವ ಕಾರಣ ನೀರಜ್ ಚೋಪ್ರಾ ಏಷ್ಯನ್ ಕೂಟ ತಪ್ಪಿಸಿಕೊಳ್ಳುವುದು ನಿರೀಕ್ಷಿತವೇ ಆಗಿತ್ತು. ಜೊತೆಗೆ ಅವರು ಬೆಂಗಳೂರಿನಲ್ಲಿ ಮೇ 24ರಂದು ನಡೆಯಲಿರುವ ಎನ್‌ಸಿ ಕ್ಲಾಸಿಕ್ ಜಾವೆಲಿನ್ ಸ್ಪರ್ಧೆಗೆ ತಯಾರಿಯಲ್ಲೂ ತೊಡಗಿದ್ದಾರೆ.

ಷಾಟ್‌ಪಟ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ತಜಿಂದರ್ ಪಾಲ್ ತೂರ್ ಅವರು ಫೆಡರೇಷನ್ ಕಪ್ ಕೂಟದಲ್ಲಿ ಎರಡನೇ ಸ್ಥಾನ ಪಡೆದ ಕಾರಣ ಕೈಬಿಡಲಾಗಿದೆ. ಫೆಡರೇಷನ್ ಕಪ್‌ನಲ್ಲಿ ಗೈರು ಹಾಜರಾಗಿದ್ದರೂ, ಅವಿನಾಶ್ ಸಾಬ್ಳೆ (3000 ಮೀ. ಸ್ಟೀಪಲ್‌ಚೇಸ್), ಪಾರುಲ್ ಚೌಧರಿ (ಮಹಿಳೆಯರ 3000 ಮೀ. ಸ್ಟೀಪಲ್‌ಚೇಸ್) ಮತ್ತು ಗುಲ್ವೀರ್ ಸಿಂಗ್ (5000 ಮತ್ತು 10000 ಮೀ. ಓಟ) ಅವರು ತಂಡದಲ್ಲಿ ಅವಕಾಶ ಪಡೆದಿದ್ದಾರೆ. ಎಎಫ್‌ಐ ಅನುಮತಿ ಪಡೆದು ಅವರು ಹೊರದೇಶಗಳಲ್ಲಿ ತರಬೇತಿ, ಸ್ಪರ್ಧೆಗಳಲ್ಲಿ ತೊಡಗಿದ್ದಾರೆ.

ತಂಡದಲ್ಲಿ ಕರ್ನಾಟಕದ ನಾಲ್ವರು: ಕರ್ನಾಟಕದ ಮಣಿಕಂಠ ಹೋಬಳಿದಾರ್ 4x100 ಮೀ. ರಿಲೇ ತಂಡದಲ್ಲಿ ಓಡಲಿದ್ದಾರೆ. ಮಹಿಳಾ ತಂಡದಲ್ಲಿ ಎಸ್. ಎಸ್.ಸ್ನೇಹಾ, ದಾನೇಶ್ವರಿ ಎ.ಟಿ., ಮತ್ತು ವಿ.ಸುಧೀಕ್ಷಾ ಸ್ಥಾನ ಪಡೆದಿದ್ದಾರೆ.

ಡಾಜ್‌ಬಾಲ್: ಉಡುಪಿ, ಮಂಡ್ಯ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮಂಗಳೂರು: ಉಡುಪಿ ಮತ್ತು ಮಂಡ್ಯ ಜಿಲ್ಲಾ ತಂಡದವರು ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಮಾಣಿ ಬಾಲ ವಿಕಾಸ ವಸತಿ ಶಾಲೆ ಆವರಣದಲ್ಲಿ ನಡೆದ ರಾಜ್ಯ ಡಾಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಭಾರತ ಡಾಜ್‌ಬಾಲ್ ಫೆಡರೇಷನ್ ಮತ್ತು ರಾಜ್ಯ ಡಾಜ್‌ಬಾಲ್ ಸಂಸ್ಥೆಯ ಸಹಯೋಗದಲ್ಲಿ ಜಿಲ್ಲಾ ಡಾಜ್‌ಬಾಲ್ ಸಂಸ್ಥೆ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಫೈನಲ್‌ನಲ್ಲಿ ಉಡುಪಿ ಜಿಲ್ಲಾ ತಂಡ ನಯನ್ ಜೋಗಿ ಮತ್ತು ಸಂದೀಪ ಅವರ ಅಮೋಘ ಆಟದ ಬಲದಿಂದ ಬೆಂಗಳೂರಿನ ಗರುಡ ಸ್ಪೋರ್ಟ್ಸ್ ಕ್ಲಬ್ ವಿರುದ್ಧ 3–2 ಸೆಟ್‌ಗಳಿಂದ ಜಯ ಗಳಿಸಿತು. ಬೆಂಗಳೂರು ನಗರ ಮತ್ತು ಮಂಡ್ಯ ಜಿಲ್ಲೆಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದವು.

ಪೂರ್ವಿ ಅಶೋಕ್ ಅಂಗಡಿ, ಪೂರ್ವಿತಾ ಮತ್ತು ಲಿಖಿತಾ ಅವರ ಅಮೋಘ ಆಟದ ನೆರವಿನಿಂದ ಮಹಿಳೆ ಯರ ಫೈನಲ್‌ನಲ್ಲಿ ಮಂಡ್ಯ ತಂಡ ಬೆಂಗಳೂರು ನಗರ ಜಿಲ್ಲಾ ತಂಡವನ್ನು 2–1 ಸೆಟ್‌ಗಳಿಂದ ಮಣಿಸಿತು. ಹಾಸನ ಮೂರನೇ ಮತ್ತು ಗರುಡ ಸ್ಪೋರ್ಟ್ಸ್ ಕ್ಲಬ್ ನಾಲ್ಕನೇ ಸ್ಥಾನ ಗಳಿಸಿತು.



ರಾಜ್ಯ ಡಾಜ್‌ಬಾಲ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಪ್ರಶಸ್ತಿ ಗೆದ್ದ ಉಡುಪಿ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಪುರುಷರ ಸೆಮಿಫೈನಲ್‌ನಲ್ಲಿ ಬೆಂಗಳೂರು ನಗರ ಜಿಲ್ಲೆ ವಿರುದ್ಧ ಉಡುಪಿ 3–0ಯಿಂದ ಮತ್ತು ಮಂಡ್ಯ ಜಿಲ್ಲೆ ವಿರುದ್ಧ ಗರುಡ ಸ್ಪೋರ್ಟ್ಸ್ ಕ್ಲಬ್ 4–1ರಿಂದ ಗೆದ್ದಿತ್ತು. ಮಹಿಳಾ ವಿಭಾಗದ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಮಂಡ್ಯ ಜಿಲ್ಲೆ 2–0ಯಿಂದ ಹಾಸನವನ್ನು ಹಾಗೂ ಬೆಂಗಳೂರು ನಗರ ಜಿಲ್ಲೆ 2–1ರಿಂದ ಗರುಡ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಸೋಲಿಸಿತು.

ಜಾಲತಾಣಗಳಲ್ಲಿ ನಿಂದನೆ: ನೀರಜ್ ಬೇಸರ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ಮೇ 24ರಂದು ನಡೆಯಲಿರುವ ಎನ್‌ಸಿ ಕ್ಲಾಸಿಕ್ ಜಾವೆಲಿನ್ ಕೂಟಕ್ಕೆ ಪಾಕಿಸ್ತಾನದ ಅಥ್ಲೀಟ್ ಅರ್ಷದ್ ನದೀಮ್ ಅವರನ್ನು ಆಹ್ವಾನಿಸಿದ್ದರಿಂದ ಸಾಮಾಜಿಕ ಜಾಲತಾಣದಲ್ಲಿ ತಾವು ದ್ವೇಷದ ಮತ್ತು ನಿಂದನೆಯ ಸುರಿಮಳೆ ಎದುರಿಸುವಂತಾಗಿದೆ ಎಂದು ಭಾರತದ ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ಶುಕ್ರವಾರ ಅಳಲು ತೋಡಿಕೊಂಡಿದ್ದಾರೆ.

ಆದರೆ, ಇತ್ತೀಚೆಗೆ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯ ನಂತರ ಪಾಕ್‌ನ ಅಥ್ಲೀಟ್ ಭಾಗವಹಿಸುವ ಪ್ರಮೇಯವೇ ಬರುವುದಿಲ್ಲ ಎಂದೂ ನೀರಜ್ ಸ್ಪಷ್ಟಪಡಿಸಿದ್ದಾರೆ. ನದೀಮ್ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ವರ್ಣ ಗೆದ್ದುಕೊಂಡಿದ್ದರು.

ತಮ್ಮ ಮತ್ತು ತಮ್ಮ ಕುಟುಂಬದ ಚಾರಿತ್ರ್ಯ ಪ್ರಶ್ನಿಸಿ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟ್‌ಗಳನ್ನು ಹಾಕಲಾಗುತ್ತಿರುವುದರಿಂದ ತಮಗೆ ನೋವಾಗಿದೆ ಎಂದೂ ಚೋಪ್ರಾ ಹೇಳಿದ್ದಾರೆ. ಬೆಂಗಳೂರಿನ ಕೂಟಕ್ಕೆ ನದೀಮ್ ಅವರನ್ನು ಆಹ್ವಾನಿಸಿರುವುದಾಗಿ ಚೋಪ್ರಾ ಇತ್ತೀಚೆಗೆ ಆನ್‌ಲೈನ್ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದರು.



'ಕಳೆದ 48 ಗಂಟೆಗಳಲ್ಲಿ ಎಲ್ಲವೂ ನಡೆದು ಹೋದ ನಂತರ, ಎನ್‌ಸಿ ಕ್ಲಾಸಿಕ್‌ನಲ್ಲಿ ಅರ್ಷದ್ ಉಪಸ್ಥಿತಿಯ ಪ್ರಶ್ನೆಯೇ ಬರುವುದಿಲ್ಲ. ನನಗೆ ನನ್ನ ದೇಶ ಮತ್ತು ಅದರ ಹಿತಾಸಕ್ತಿಯೇ ಮೊದಲು' ಎಂದು ಭಾರತೀಯ ಸೇನೆಯಲ್ಲಿ ಸುಬೇದಾರ್ ಮೇಜರ್ ಆಗಿರುವ ಚೋಪ್ರಾ ಎಕ್ಸ್‌ನಲ್ಲಿ ಹಾಕಿರುವ ದೀರ್ಘ ಸಂದೇಶದಲ್ಲಿ ಸ್ಪಷ್ಟನೆ ನೀಡಿದ್ದಾರೆ.

'ಈ ದುಷ್ಕೃತದಿಂದ ಪ್ರಾಣ ಕಳೆದುಕೊಂಡವರ ಬಗ್ಗೆ ಸಹಾನುಭೂತಿಯಿದೆ. ದೇಶದ ಜೊತೆಗೆ ನನಗೂ ನೋವಾಗಿದೆ. ಈ ಕೃತ್ಯಕ್ಕೆ ನನಗೂ ಆಕ್ರೋಶವಿದೆ' ಎಂದು 27 ವರ್ಷ ವಯಸ್ಸಿನ ಅಥ್ಲೀಟ್ ಹೇಳಿದ್ದಾರೆ.

ಮೇ 27 ರಿಂದ ದಕ್ಷಿಣ ಕೊರಿಯಾದಲ್ಲಿ ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ ನಡೆಯಲಿದ್ದು ಅದಕ್ಕೆ ಸಿದ್ಧತೆ ನಡೆಸಬೇಕಾದ ಕಾರಣ ಈ ಕೂಟದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ ಎಂದು ನದೀಮ್ ಎರಡು ದಿನಗಳ ಹಿಂದೆಯೇ ತಿಳಿಸಿದ್ದರು.

ಸಂಕ್ಷಿಪ್ತ ಸುದ್ದಿ

ಓಪನ್ ರೇಟೆಡ್ ಚೆಸ್ ಮೇ 2ರಿಂದ

ಮಂಗಳೂರು: ದಕ್ಷಿಣ ಕನ್ನಡ ಚೆಸ್ ಅಸೋಸಿಯೇಷನ್ ನೇತೃತ್ವದಲ್ಲಿ ರಾಷ್ಟ್ರೀಯ ಓಪನ್ ರೇಟೆಡ್ (ಕ್ಲಾಸಿಕಲ್) ಚೆಸ್ ಟೂರ್ನಿಯನ್ನು ನಗರದ ಪುರಭವನದಲ್ಲಿ ಮೇ 2ರಿಂದ 6ರವರೆಗೆ ಹಮ್ಮಿಕೊಳ್ಳಲಾಗಿದೆ.

ರಾಜ್ಯ, ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮಟ್ಟದ 400ಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದ್ದು, ಈಗಾಗಲೇ 275 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಒಟ್ಟು ₹6 ಲಕ್ಷ ನಗದು ಬಹುಮಾನ, ವಿವಿಧ ವಿಭಾಗಗಳಲ್ಲಿ ಟ್ರೋಫಿ ಜೊತೆಗೆ 200ರಷ್ಟು ಬಹುಮಾನಗಳು ಇರಲಿವೆ ಎಂದು ದಕ್ಷಿಣ ಕನ್ನಡ ಚೆಸ್ ಅಸೋಸಿಯೇಷನ್ ಅಧ್ಯಕ್ಷ ರಮೇಶ್ ಕೋಟೆ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿ ಯಲ್ಲಿ ತಿಳಿಸಿದರು.

ಬಾಕ್ಸಿಂಗ್: ಎಂಟರ ಘಟ್ಟಕ್ಕೆ ಖುಷಿ, ಟೀಕಮ್ ಸಿಂಗ್

ಅಮ್ಮಾನ್ (ಪಿಟಿಐ): ಭಾರತದ ಖುಷಿ ಚಾಂದ್ ಮತ್ತು ಟೀಕಮ್ ಸಿಂಗ್ ಅವರು ಏಷ್ಯನ್ 17 ವರ್ಷದೊಳಗಿನವರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಸೆಮಿಫೈನಲ್ ತಲುಪಿದರು.

ಕಳೆದ ವರ್ಷ ಏಷ್ಯನ್ ಸ್ಕೂಲ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಖುಷಿ ಚಾಂದ್ ಬಾಲಕಿಯರ 46 ಕೆ.ಜಿ. ವಿಭಾಗದಲ್ಲಿ ಕ್ವಾರ್ಟರ್‌ಫೈನಲ್‌ನಲ್ಲಿ ವಿಯೆಟ್ನಾಮಿನ ನೂಯೆನ್ ಥಿ ಹಾಂಗ್ ಯೆನ್ ಅವರನ್ನು ಸೋಲಿಸಿದರು. ಬಾಲಕರ 52 ಕೆ.ಜಿ. ವಿಭಾಗದಲ್ಲಿ ಟೀಕಮ್, ಪ್ಯಾಲೆಸ್ತೀನ್‌ನ ಓಥ್ಮನ್ ದಿಯಾನ್ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದರು. ಅಂಬೇಡ್ಕರ್ ಮೀಥಿ (48 ಕೆ.ಜಿ), ಉಧಾಮ್ ಸಿಂಗ್ (54 ಕೆ.ಜಿ) ಮತ್ತು ರಾಹುಲ್ ಗರಿಯಾ (57 ಕೆ.ಜಿ) ಅವರು 5–0 ಸರ್ವಾನುಮತದ ತೀರ್ಪಿನಲ್ಲಿ ಎದುರಾಳಿಗಳ ಜಯ ಗಳಿಸಿದರು. ಅಮನ್ ದೇವ್ (50 ಕೆ.ಜಿ) ಜೋರ್ಡಾನ್‌ನ ಒಸಾಮಾ ಅಲ್‌-ಖಾಲ್ದಿ ವಿರುದ್ಧ 3–2ರಲ್ಲಿ ಜಯ ಪಡೆದರು.

44 ರಿಂದ 46 ಕೆ.ಜಿ. ವಿಭಾಗದಲ್ಲಿ ಧ್ರುವ್ ಖಾರ್ಬ್ 0–5 ರಿಂದ ಉಕ್ರೇನಿನ ಮಿಖೈಲೊ ಸಿಡೊರೆಂಕೊ ಎದುರು ಸೋತರು.





ಇಶಾನ್, ಮೆಂಡಿಸ್ ಮಿಂಚು ● ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದ ಚೆನ್ನೈ

ಹರ್ಷಲ್ ದಾಳಿ: ಸನ್‌ಗೆ ಜಯ

ಚೆನ್ನೈ (ಪಿಟಿಐ): ವೇಗಿಗಳಾದ ಹರ್ಷಲ್ ಪಟೇಲ್ (28ಕ್ಕೆ 4) ಮತ್ತು ನಾಯಕ ಪ್ಯಾಟ್ ಕಮಿನ್ಸ್ (21ಕ್ಕೆ 2) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಶುಕ್ರವಾರ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿತು.

ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 155 ಗುರಿಯನ್ನು ಬೆನ್ನಟ್ಟಿದ ಹೈದರಾಬಾದ್ ತಂಡವು ಇನ್ನೂ 14 ಎಸೆತ ಇರುವಂತೆ ಐದು ವಿಕೆಟ್‌ಗೆ ಗುರಿ ತಲುಪಿ ಸಂಭ್ರಮಿಸಿತು. ಇದು ಸನ್‌ರೈಸರ್ಸ್‌ಗೆ ಚೆನ್ನೈನಲ್ಲಿ ದಕ್ಕಿದ ಮೊದಲ ಗೆಲುವಾಗಿದೆ. ಈ ಜಯದೊಂದಿಗೆ ಹೈದರಾಬಾದ್ ತಂಡವು ಪ್ಲೇ ಆಫ್ ಕನಸನ್ನು ಜೀವಂತವಾಗಿರಿಸಿಕೊಂಡಿತು. ಮತ್ತೊಂದೆಡೆ ಚೆನ್ನೈ ತಂಡದ ಪ್ಲೇ ಆಫ್ ಆಸೆ ಬಹುತೇಕ ಕಮರಿತು.


ಹೈದರಾಬಾದ್ ತಂಡವು 54 ರನ್ ಗಳಿಸುವಷ್ಟರಲ್ಲಿ ಅಗ್ರ ಬ್ಯಾಟರ್‌ಗಳಾದ ಅಭಿಷೇಕ್ ಶರ್ಮಾ (0), ಟ್ರಾವಿಸ್ ಹೆಡ್ 19) ಮತ್ತು ಹೆನ್ರಿಚ್ ಕ್ಲಾಸೆನ್ (7) ಪೆವಿಲಿಯನ್ ಸೇರಿದ್ದರು. ಇಶಾನ್ ಕಿಶನ್ (44; 34ಎ) ಮತ್ತು ಅನಿಕೇತ್ ವರ್ಮಾ (19) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 36 (23ಎ) ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡಿದರು.

ನಂತರದಲ್ಲಿ ಕಮಿಂದು ಮೆಂಡಿಸ್ (ಔಟಾಗದೇ 32; 22ಎ) ಮತ್ತು ನಿತೀಶ್ ಕುಮಾರ್ ರೆಡ್ಡಿ (ಔಟಾಗದೇ 19; 13ಎ) ಅವರು ಮುರಿಯದ ಆರನೇ ವಿಕೆಟ್‌ಗೆ 49 (31ಎ) ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಚೆನ್ನೈ ಪರ ನೂರ್ ಅಹಮ್ಮದ್ ಎರಡು ವಿಕೆಟ್ ಪಡೆದರು.

ಡಿವಾಲ್ಡ್ ಆಸರೆ: ಸನ್‌ರೈಸರ್ಸ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕನ ಆಯ್ಕೆಯನ್ನು ಸಮರ್ಥಿಸುವಂತೆ ಹರ್ಷಲ್ ಪಟೇಲ್ ಅವರು ಚೆನ್ನೈ ತಂಡದ ಮಧ್ಯಮ ಕ್ರಮಾಂಕಕ್ಕೆ ಬಲವಾದ ಪೆಟ್ಟು ಕೊಟ್ಟರು. ಅವರಿಗೆ ಕಮಿನ್ಸ್ ಕೂಡ ಸಾಥ್ ನೀಡಿದರು.

ಮಧ್ಯಮ ಕ್ರಮಾಂಕದಲ್ಲಿ ದಕ್ಷಿಣ ಆಫ್ರಿಕಾದ 21 ವರ್ಷ ವಯಸ್ಸಿನ ಡಿವಾಲ್ಡ್

ಐಪಿಎಲ್



ಬೌಲಿಂಗ್‌ನಲ್ಲಿ ಮಿಂಚಿದ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಹರ್ಷಲ್ ಪಟೇಲ್

ಬ್ರೆವಿಸ್ (42;25ಎ, 4x1, 6x4) ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಲ್ಲಿದ್ದ ಚೆನ್ನೈ ತಂಡವನ್ನು ಪಾರು ಮಾಡಿದರು. ಹೀಗಾಗಿ 19.5 ಓವರ್‌ಗಳಲ್ಲಿ 154 ರನ್ ಗಳಿಸಿತು.

ವೇಗಿ ಮೊಹಮ್ಮದ್ ಶಮಿ ತಮ್ಮ ಮೊದಲ ಎಸೆತದಲ್ಲಿಯೇ ಆರಂಭಿಕ ಬ್ಯಾಟರ್ ಶೇಖ್ ರಶೀದ್ ಅವರ ವಿಕೆಟ್ ಗಳಿಸಿದರು. ಅಭಿಷೇಕ್ ಶರ್ಮಾ ಪಡೆದ ಚುರುಕಾದ ಕ್ಯಾಚ್‌ಗೆ ರಶೀದ್ ನಿರ್ಗಮಿಸಿದರು.

ಯುವ ಆಟಗಾರ ಆಯುಷ್ ಮ್ಹಾತ್ರೆ (30; 19ಎ) ತಂಡಕ್ಕೆ ಬಲ ತುಂಬುವ ಪ್ರಯತ್ನ ಮಾಡಿದರು. ಆಯುಷ್ ವಿಕೆಟ್ ಗಳಿಸಿದ ಪ್ಯಾಟ್ ಕಮಿನ್ಸ್ ಸಂಭ್ರಮಿಸಿದರು. ಚೆನ್ನೈ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ (6; 10ಎ) ಹಾಗೂ ನೂರ್ ಅಹಮದ್ ಅವರ ವಿಕೆಟ್‌ಗಳನ್ನೂ ಹರ್ಷಲ್ ತಮ್ಮದಾಗಿಸಿಕೊಂಡರು. ಧೋನಿ ಅವರಿಗೆ ಇದು ಒಟ್ಟಾರೆ 400ನೇ ಟಿ20 ಪಂದ್ಯವಾಗಿತ್ತು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 19.5 ಓವರ್‌ಗಳಲ್ಲಿ 154 (ಆಯುಷ್ ಮ್ಹಾತ್ರೆ 30, ರವೀಂದ್ರ ಜಡೇಜ 21, ಡಿವಾಲ್ಡ್ ಬ್ರೆವಿಸ್ 42, ದೀಪಕ್ ಹೂಡಾ 22, ಪ್ಯಾಟ್ ಕಮಿನ್ಸ್ 21ಕ್ಕೆ2, ಜಯದೇವ್ ಉನದ್ಕತ್ 21ಕ್ಕೆ2, ಹರ್ಷಲ್ ಪಟೇಲ್ 28ಕ್ಕೆ4). **ಸನ್‌ರೈಸರ್ಸ್ ಹೈದರಾಬಾದ್:** 18.4 ಓವರ್‌ಗಳಲ್ಲಿ 5ಕ್ಕೆ 155 (ಇಶಾನ್ ಕಿಶನ್ 44, ಕಮಿಂದು ಮೆಂಡಿಸ್ ಔಟಾಗದೇ 32, ನಿತೀಶ್ ಕುಮಾರ್ ರೆಡ್ಡಿ ಔಟಾಗದೇ 19; ನೂರ್ ಅಹಮ್ಮದ್ 42ಕ್ಕೆ 2). **ಪಂದ್ಯದ ಆಟಗಾರ:** ಹರ್ಷಲ್ ಪಟೇಲ್

ಈಡನ್‌ನಲ್ಲಿ ‘ಕಿಂಗ್’ ಆಗುವರೇ ಶ್ರೇಯಸ್?

ಕೋಲ್ಕತ್ತ (ಪಿಟಿಐ): ಶ್ರೇಯಸ್ ಅಯ್ಯರ್ ಅವರು ಈಡನ್ ಗಾರ್ಡನ್ ಕ್ರೀಡಾಂಗಣಕ್ಕೆ ಮರಳಿದ್ದಾರೆ. ಅವರಿಗೆ ಇಲ್ಲಿ ಚೆಂದದ ನೆನಪುಗಳಿವೆ. ಹೋದ ವರ್ಷ ಅವರ ನಾಯಕತ್ವದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಐಪಿಎಲ್ ಪ್ರಶಸ್ತಿ ಗೆದ್ದಿತ್ತು. ಇದೀಗ ಅವರು ಅದೇ ಕೋಲ್ಕತ್ತ ತಂಡದ ಎದುರು ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ.

ಶ್ರೇಯಸ್ ನಾಯಕತ್ವದ ಪಂಜಾಬ್ ಕಿಂಗ್ಸ್ ಶನಿವಾರ ಆತಿಥೇಯ ಕೋಲ್ಕತ್ತ ತಂಡವನ್ನು ಎದುರಿಸಲಿದೆ.

ಅಜಿಂಕ್ಯ ರಹಾನೆ ನಾಯಕತ್ವದ ಕೆಕೆಆರ್ ತಂಡಕ್ಕೆ ಪ್ಲೇಆಫ್ ಪ್ರವೇಶದ ಹಾದಿ ಸುಗಮವಾಗಿಲ್ಲ. ಏಕೆಂದರೆ ಇಲ್ಲಿಯವರೆಗೆ ಆಡಿರುವ 8 ಪಂದ್ಯಗಳಲ್ಲಿ ಮೂರರಲ್ಲಿ ಮಾತ್ರ ಜಯಿಸಿದೆ. ಉಳಿದ ಪಂದ್ಯಗಳಲ್ಲಿ ಸೋತಿದೆ. ಮುಂದಿನ ಪಂದ್ಯಗಳ ಪೈಕಿ ಒಂದರಲ್ಲಿ ಸೋತರೂ ಪ್ಲೇ ಆಫ್ ಪ್ರವೇಶದ ಬಾಗಿಲು ಮುಚ್ಚುವ ಸಾಧ್ಯತೆ ಇದೆ.

ತಂಡದ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ಅಸ್ಥಿರತೆ, ಮಧ್ಯಮ ಕ್ರಮಾಂಕದಲ್ಲಿರುವ ಆ್ಯಂಡ್ರೆ ರಸೆಲ್,



ಶ್ರೇಯಸ್



ರಹಾನೆ

ರಿಂಕು ಸಿಂಗ್ ಮತ್ತು ರಮಣದೀಪ್ ಸಿಂಗ್ ಅವರ ಫಾರ್ಮ್ ಕೊರತೆ ತಂಡವನ್ನು ಕಾಡುತ್ತಿದೆ. ಅಂಗಕ್ರಿಷ್ ರಘುವಂಶಿ ಒಬ್ಬರೇ ರನ್‌ಗಳ ಕಾಣಿಕೆ ನೀಡುತ್ತಿದ್ದಾರೆ. ಕೋಲ್ಕತ್ತ ಬ್ಯಾಟರ್‌ಗಳಿಗೆ ಕಿಂಗ್ಸ್ ತಂಡದ ವೇಗಿ ಅರ್ಷದೀಪ್ ಸಿಂಗ್ (11 ವಿಕೆಟ್) ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರನ್ನುಎದುರಿಸುವ ಸವಾಲು ಇದೆ.

ಹೋದ ವಾರ ಮುಲ್ಲನಪುರದಲ್ಲಿ ನಡೆದಿದ್ದ ಪಂದ್ಯದಲ್ಲಿ ಚಾಹಲ್ ಸ್ಪಿನ್ ಮೋಡಿಗೆ ಕೋಲ್ಕತ್ತ ಕೇವಲ 95 ರನ್‌ಗಳಿಗೆ ಆಲೌಟ್ ಆಗಿತ್ತು. ಅವರಿಗೆ ಎಡಗೈ ವೇಗಿ ಮಾರ್ಕೊ ಯಾನ್ಸೆನ್ ಕೂಡ ಉತ್ತಮ ಜೊತೆ ನೀಡಿದ್ದರು. ಅದರಿಂದಾಗಿ ಕೋಲ್ಕತ್ತ ಪರಾಭವಗೊಂಡಿತ್ತು.

ಕಿಂಗ್ಸ್ ತಂಡದ ನೆಹಲ್ ವಧೇರಾ ಫಿನಿಷರ್ ಹೊಣೆಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ತಂಡದ ಆರಂಭಿಕ ಬ್ಯಾಟರ್ ಪ್ರಿಯಾಂಶ್ ಆರ್ಯ ಟೂರ್ನಿಯಲ್ಲಿ ಒಂದು ಅಬ್ಬರದ ಶತಕವನ್ನೂ ದಾಖಲಿಸಿದ್ದಾರೆ. ಶ್ರೇಯಸ್, ಪ್ರಭಸಿಮ್ರನ್ ಸಿಂಗ್, ಜೋಷ್ ಇಂಗ್ಲಿಸ್ ಹಾಗೂ ಮಾರ್ಕಸ್ ಸ್ಟೋಯಿನಿಸ್ ಅವರನ್ನು ಕಟ್ಟಿಹಾಕುವ ಸವಾಲು ಆತಿಥೇಯ ತಂಡದ ಸ್ಪಿನ್ ಜೋಡಿ ವರುಣ್ ಚಕ್ರವರ್ತಿ–ಸುನಿಲ್ ನಾರಾಯಣ್, ಹರ್ಷಿತ್ ರಾಣಾ ಅವರ ಮುಂದಿದೆ. ಕಿಂಗ್ಸ್ ಎಂಟು ಪಂದ್ಯಗಳಲ್ಲಿ 5ರಲ್ಲಿ ಜಯಿಸಿದೆ. ಮೂರರಲ್ಲಿ ಸೋತಿದೆ. ಪ್ಲೇ ಆಫ್ ಹಾದಿಯನ್ನು ಸುಗಮಗೊಳಿಸುವತ್ತ ಚಿತ್ತ ನೆಟ್ಟಿದೆ.

ಪಂದ್ಯ ಆರಂಭ: 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	8	6	2	12	1.104
ಡೆಲ್ಲಿ ಕ್ಯಾಪಿಟಲ್ಸ್	8	6	2	12	0.657
ರಾಯಲ್ ಚಾಲೆಂಜರ್ಸ್ ಬೆಂಗಳೂರು	9	6	3	12	0.482
ಮುಂಬೈ ಇಂಡಿಯನ್ಸ್	9	5	4	10	0.673
ಪಂಜಾಬ್ ಕಿಂಗ್ಸ್	8	5	3	10	0.177
ಲಖನೌ ಸೂಪರ್ ಜೈಂಟ್ಸ್	9	5	4	10	-0.054
ಕೋಲ್ಕತ್ತ ನೈಟ್ ರೈಡರ್ಸ್	8	3	5	6	0.212
ಸನ್‌ರೈಸರ್ಸ್ ಹೈದರಾಬಾದ್	9	3	6	6	-1.103
ರಾಜಸ್ಥಾನ ರಾಯಲ್ಸ್	9	2	7	4	-0.625
ಚೆನ್ನೈ ಸೂಪರ್ ಕಿಂಗ್ಸ್	9	2	7	4	-1.302





ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331









ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

86X116 FEET PLOT in GREEN BANKS Gated Community 5th Block ANJANAPURA Bangalore, BDA Katha, for SALE. Call: 98440-62860

ANJANAPURA BDA Sites For Sale, 1st Block, 20x30, W/F, Price 63 Lakhs Negotioble: 9740150364 /8884707773

Banashankari

BANASHANKARI 6TH-STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

SITE FOR SALE Banashankari 6th Stage 3rd Block 30x40 N/F, Owner Meeting Call: 9740148870/ 9880606768.

BSK 6TH Stage 11th_Block BDA 20X30 North facing allottee site, excellent vastu for sale -9986085122

'BANASHANKARI' 6TH Stage, 6th Block 20x30, W/F, BCC Layout, 50x80, North/East, Corner: 9632822225/9448618094

Intl Airport Road

30x40 Converted Plots @ 2,50,000/-
208/- per sq.ft, 90 minutes Journey from Yelahanka
Clear Documents | Ready for Registration
9343510635 | 9010559539

BTM Layout

SITE FOR sale 30x40,40x60 & 30x40 House,45x80 JP Nagar 9th Phase Industrial & BTM 2nd Stage Commercial, Residential Contact: 9945377119/9844099557

Basaweshwaranagar

BASVESHWARNAGAR 40×60, Rajajinagar 1230 Sft, Malleshwaram 50×75, Residential, Race Course Road 80×100 Commercial Sale 8660075308

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Jakkur

PRIME RESIDENTIAL Corner Plot for Sale, 4400sqft North/ West, at Jakkur, Telecom Layout. Call: 9019144869.

MORE Classifieds IN MAIN ISSUE

ತಾರಕನ್ಸ್
ಕಾರ್ಮೆಲ್ ಮಂತ್ರ
ಅಭಿವೃದ್ಧಿ ಮಾಡಿದ ಪ್ರೀಮಿಯಂ ಪ್ಲಾಟ್ಸ್
16.8
ಲಕ್ಷಗಳಿಂದ ಪ್ರಾರಂಭ
1200 ಚದರ ಅಡಿಗಳು
ಎಂಪಿಎ ಅನುಮೋದಿಸಿದ
ಬ್ಯಾಂಕಿನಿಂದ ಸಾಲಗಳು ದೊರೆಯುತ್ತವೆ.
ಮಾಲೂರು, ಮಾಸ್ತಿ ರಸ್ತೆ
ಸರ್ಜಾಪುರ & ವೈಟ್‌ಫೀಲ್ಡ್ ಹತ್ತಿರ
ಎಸ್.ಟಿ.ಆರ್.ಆರ್. ಸಮೀಪ, ಬೆಂಗಳೂರು ಮತ್ತು ಚೆನ್ನೈ ರಾಷ್ಟ್ರೀಯ ಹೆದ್ದಾರಿ ಹತ್ತಿರ



Call Us Now
9035 589 596

FOR SALE

Commercial property currently fetching 3.25 lakhs monthly rental, located on the first Floor 4775 sq super built up area + 1000 sq of car parking area UDS 1150, OC CC Building situated at 80ft Road, JP Nagar 3rd Phase, Bangalore. Expecting 6.75 Cr (negotiable).
INTERESTED MAY CONTACT
98459 22769 / 98450 28065

Kempegowda Layout

SITE FOR SALE Site no. 4732, J sector 6th block, site no. 2965 H sector 5th block 50*80. site no 5908/F, I sector 5th block 40*60 Kempegowda layout Mob: 6362874644.

NADAPRABHU KEMPEGOWDA LAYOUT 8th Block 40X60 East Facing, Arkavati Layout alternate site sale. Contact: 9686469799

NADAPRABHU KEMPEGOWDA layout, Sir M.Vishweshwaraiah. Sites for sale. 20x30,30x40, 40x60, 50x80. Manjunatha 9742568746, 9900701637.

50X80 KEMPEGOWDA layout, 7th J sector, 80ft Road, Near NPS School, North, 8200/- Negotiable. 9731151366.

Nagarabhavi

40X60 WEST Facing Railway Layout Near RTO Office, 40x40 New Duplex House For Sale: 9980409820

Ramamurthy Nagar

EAST OF NGEF: BDA 20x30 west facing Site for Sale 16,000/ Psft Negotiable. Contact: 9945033366

Sahakarnagar

SAHAKAR NAGAR 60ft Main Road Commercial 40x60 Site For Sale Broker's Excuse Call: 9845623970/ 9739400838

Vijayanagar

FOR SALE: 50X90 (4500 Sft) South facing site with old building at 1-A Main Road, Govindarajanagar (M.C.Layout) Near Hotel Swathi Green Land (Jaimunirao Circle) Bengaluru. Broker's excuse. Contact: 9845289660/ 9845066056

SITE FOR SALE 30x45 North Facing @ Vijayanagar Marenahalli @ Good Location Price 19000/- Sqft Negotiable 7676900174 9945569909

Vishweshwariah Layout

AVAILABLE COMMERCIAL BDA SITE 40x60 VISHWESHWARAIA LAYOUT, 30X40 North Facing Genuine Buyers. Contact: 9035470616

AVAILABLE/ WANTED BDA Sites Vishweshwariah Layout 50x80, 40X60, 30X40, 20X30 Genuine Buyers And Sellers 9743381719

30X40 BDA Vishveshwaraiah Layout 4th Block Builder Location 9000/- & 30x40 Site Sale 3rd Block 12200/- 9945584713

DIRECT OWNER #1340 S/F BDA Site Sale Vishveswaraiah Layout 2nd Block,Ready for Construction ₹10750/- 9742671666

SIR M Vishweshwaraiah Layout 5th Block 434, East 40x60, Near 60Ft Road. Owner Meeting: 9844938566

"VISHVESHWARAIAH LAYOUT 3rd Block 40x60 West Face Near Nammura Thindi & Vidyanikethan School.Contact: 9353016009"

30X40 BDA West facing 7th Block Near Nirman School, Vishweshwariah layout, 12500/- Owner Meeting. 9731151366.

Mysore

SALE MUDA approved sites ready for registration Rs. 3700/-. Well developed layout, Bandipalya Village, Mysore. Brokers excuse, buyers contact- 7619606688.

Devanahalli

DODDABALAPURA TO Devanhali Main Road Commercial DC-Converted Up Todate Tax Paid E Khatha Property Sale 280x5 Rs. 5500/- Psft: 9342552428

BUILDING FOR SALE

Location - Aditya Homes-2, Yamare, surjupura, Bengaluru. Adjoining to Prestige city and upcoming FORUM Mall and Metro Station.
BMRDA APPROVED
Plot area - 1500 sft, Facing - EAST, Dimensions - 30' X 50', Super Builtup area- 5000 sft, G Floor:-1 studio room and Parking 3 Cars + Bikes Sump Tank - 20000 L Lift provided
1st Floor and 2nd :- Luxury Duplex House with 4 Bed Room
Total Cost :- ₹2.75 cr



Contact no.
9206206915

Sites for SALE near YALAHANKA International Airport Road

SAI PRAKRUTI NIVASAA
DC CONVERSION TMC INDIVIDUAL E KHATA



99000 15805, 90083 38098

Rajarajeshwari Nagar

50X60 NORTH East Corner Site FOR SALE, Ideal Homes, Genuine Buyers Contact: 7624809123, BROKERS EXCUSE

House

Basavanagudi

SALE: INDEPENDENT house, West facing, 44'x60' Clear title. 4th Main Road, N R Colony, Basavanagudi, Bangalore-19. G N Properties 9845044179

Indiranagar

8000 SQ ft property for sale in defence colony Indiranagar.DUPLEX with 3 BHK/FLMOB: 9448056996

Jayanagar

JAYANAGAR FOURTH 'T_Block North_40x52 Excellent Location Livable Architect Three BHK Duplex Vasthu House, Gupta- 9845232711

Kumaraswamy Layout

***DUPLEX HOUSE for SaleKumaraswamy LayoutPrime location.Near Vasavi HospitalBDA20x30 ft with 1100 sqft. Built up area.Genuine buyersContact owner 9845012529Brokers excuse.**

Flat

Chandra Layout

FLATE FOR SALE @ CHANDRA LAYOUT VIJAYNAGAR 3 BHK NEW FLATE BDA PROPERTY GOOD LOCATION CONTACT: 98455-55666

Marathahalli

FOR SALE: 2 BHK Apartment in Kadubeesanahalli, Marathahalli. Spacious 1012 sq.ft. ground- floor apartment with car parking, located opposite JP Morgan office. Prime location with high demand, surrounded by leading Indian and international companies- Perfect for investment or self- use. For price and details, contact: 9901944111/ 9415107089

Commerical

Koramangala

SALE: KORAMANGALA 5th Block COMMERCIAL 11000 Sft. Rental Income 7 Lacs, Sale 15 Crores, Call: 98450-23695/ 98451-63280

BTM Layout

BTM LAYOUT Corner 40x60 Prime Location Commercial Site Sale, J.P.Nagar, Jayanagar HSR 40x60, 50x80 Sites Call:9845069739 9380613718

General

Multiple Locations

RENTAL/ BUYING/ selling all types residential/ commercial/ agricultural/ industrial properties & Rental income, Resale invest on small properties and earn good returns. Contact victory properties 8618576685/ 7411692219, www.victorypropertie s.in Mail: info@victorypropertie s.in

Commercial Building

Chickpet

FOR SALE Commercial property BBMP East Facing 2175 Sqft.Ground+2 Floors Cottonpete Main Road,Just 1Km Away from Majestic Metro Station, Chickpet, K.R.Market.Contact: 9844011980, 9008011237

FOR SALE Commercial property BBMP East Facing 2175 Sqft.Ground+2 Floors Cottonpete Main Road,Just 1Km Away from Majestic Metro Station, Chickpet, K.R.Market.Contact: 9844011980, 9008011237

BUILDERS ESSENTIAL


Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

SOUNDARYA COLLEGE OF LAW

SOUNDARYA EDUCATIONAL TRUST
Affiliated to KSLU & Approved by BCI, New Delhi. Soundaryanagara, Sidedahalli, Nagasandra Post, Bengaluru – 560073.

Law Is Power, Learn To Master It



LAW PROGRAMS
B.Com. LL.B (5 YEARS)
B.A. LL.B (5 YEARS)
LL.B (3 YEARS)

30+ Years Of Legacy
Moot Court & Practical Training
09+ Acre Campus
Legal Aid & Awareness Program

ADMISSIONS OPEN

+91 62690 00092, 62690 00093
www.soundaryalaw.edu.in
admissions@soundaryainstitutions.in
Location
Website

ಅಕ್ಷಯ ಸ್ಪ್ರಿಂಗ್ಸ್
AKSHAYA SPRINGS

PREMIUM RESIDENTIAL PLOTS attached to HIGHWAY & KANAKAPURA TOWN

SITES FOR SALE

A - Katha
Approved by BMRDA / KPA
Bank Loan Available

BOOK NOW

8147873745
8277020298

ಪಬ್ಲಿಕ್ TV ಪ್ರಸ್ತುತ ಪಡಿಸುವ

PUBLIC TV

ವಿದ್ಯಾ A ಪೀಠ

8ನೇ ಆವೃತ್ತಿ

ಇಂದಿನ ಕಲಿಕೆ । ನಾಳಿನ ದಾರಿ ದೀಪ

in Association with AD6 advertising A Unit of Sri Sairam Enterprises

ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ

120+ ಪ್ರಮುಖ ಶೈಕ್ಷಣಿಕ ಸಂಸ್ಥೆಗಳು ಒಂದೇ ಸೂರಿನಡಿಯಲ್ಲಿ

ಇಂದು ಮತ್ತು ನಾಳೆ ಮಾತ್ರ

26th April 2025, ಶನಿವಾರ
27th April 2025, ಭಾನುವಾರ

ಬೆಳಿಗ್ಗೆ 9.00 ರಿಂದ ಸಂಜೆ 6.00

ಗಾಯತ್ರಿ ವಿಹಾರ, ಪ್ಯಾಲೇಸ್ ಗ್ರೌಂಡ್ಸ್, ಬೆಂಗಳೂರು

ON-SPOT ADMISSIONS SCHOLARSHIPS

ಗೇಟ್ ನಂ. 4

120+ TOP EDUCATIONAL INSTITUTIONS UNDER ONE ROOF

PLATINUM SPONSORS

GARDEN CITY UNIVERSITY EMPHASIS ON LIFE · CMR UNIVERSITY · RAMAIAH UNIVERSITY OF APPLIED SCIENCES · CAMBRIDGE INSTITUTE OF TECHNOLOGY An Autonomous Institution · SAPTHAGIRI NPS UNIVERSITY · REVA UNIVERSITY Bengaluru, India

GOLD SPONSORS

EAST POINT GROUP OF INSTITUTIONS · SJB INSTITUTE OF TECHNOLOGY BGS HEALTH AND EDUCATION CITY An Autonomous Institution under VTU · THE Oxford EDUCATIONAL INSTITUTIONS · R R INSTITUTIONS BENGALURU · NAGARJUNA College of Engineering & Technology · AMC INSTITUTIONS · EAST WEST GROUP OF INSTITUTIONS BENGALURU

CREATIVE STALL PARTNERS

RAMAIAH Institute of Technology · SRI VENKATESHWARA COLLEGE OF ENGINEERING · PRESIDENCY UNIVERSITY · NEW HORIZON COLLEGE OF ENGINEERING · Parul University NAAC GRADE A++ · KLE Technological University Creating Value Leveraging Knowledge · ICFAI UNIVERSITY · PlanEdu Since 2008 · Future Medico

SILVER SPONSORS

CHANAKYA UNIVERSITY · PES UNIVERSITY · DAYANANDA SAGAR UNIVERSITY · ACHARYA · BRINDAVAN GROUP OF INSTITUTIONS · GM UNIVERSITY Innovating Minds · AIMS INSTITUTES Peenya, Bangalore · ABBS AUTONOMOUS Affiliated to Bangalore University · KRUPANIDHI GROUP OF INSTITUTIONS · S.E.A GROUP OF INSTITUTIONS · CITY COLLEGE

BANKING PARTNER

SBI The banker to every Indian

BEVERAGE PARTNERS

ಬಾಯರ್ಸ್ ಕಾಫೀ BAYAR'S COFFEE The Warmth of Goodness! · Springs

GIFT SPONSORS

Jeeni Slim WEIGHT LOSS & ENERGY BOOSTER · SAPTHAGIRI NPS UNIVERSITY

HEALTHCARE PARTNER

RAMAIAH Memorial Hospital | In affiliation with Mount Sinai Hospital-New York

ವಿದ್ಯಾರ್ಥಿಗಳಿಗೆ ಬಂಪರ್ ಬಹುಮಾನಗಳು

LAPTOPS · BICYCLES · SURPRISE GIFTS

ಸ್ಥಳದಲ್ಲೇ ಪ್ರವೇಶಾತಿ ಸೌಲಭ್ಯ

ಅರ್ಹ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನ

Register between 9am to 10.30am and win on spot 1 laptop on 26th April through lucky dip

Win bicycle every 1 hour on 26th and 27th April through lucky dip

OPEN MIC Exhibit your talent in 30 seconds, participate and win attractive prizes

If you have secured more than 90% marks in 2nd PUC bring photo copy and win attractive prizes

Participate in Slow cycle race and win attractive prizes

ಪ್ರತಿ ಒಂದು ಗಂಟೆಗೆ ಅಚ್ಚರಿಯ ಉಡುಗೊರೆಗಳು.

ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಆಹ್ವಾನ

* Terms & Conditions Apply

For expo details, contact 99000 60808 / 99000 60815 / 99000 60211

PUBLIC music · PUBLIC events · PUBLIC MOVIES · PUBLIC DIGITAL

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

AUMBRE STORY INDIRANAGAR

HOMES BY KOSEN
@homes_bykosen

YOUR ONE STOP SHOP FOR ALL YOUR INTERIOR NEEDS
ALSO OFFERING TURN KEY PROJECTS FOR YOUR EASE



limited time OFFERS
FLAT 10%
DISCOUNT ON MRP
On all Products in - STORE.



Curtains | Upholstery | Wallpapers | Carpets & Rugs
Premium Bedsheets & Bedcovers | Pillows | Cushions
Mattresses | Towels | All Types of Blinds | Flooring

ELEVATE YOUR INTERIORS
Homes by Kosen offers premium interior solutions, including luxury furnishings, modular kitchens, wardrobes & home accents. With a focus on quality and elegance, we provide bespoke and turnkey solutions to transform your space effortlessly.

WHY CHOOSE US
Premium Quality - Curated luxury interior products & furnishings
Customization - Tailored designs for your unique preferences
Expert Guidance - Professional assistance in design & selection
Turnkey Solutions - From concept to completion

indiranagar@aumbrestory.com
kosenventurespvtltd@gmail.com
@homes_bykosen

VISIT OUR SHOWROOM
Timings - 10.30 am - 7.30 pm | Open from Monday to Saturday
Address: Aumbre Story, #57, 1st Floor, 100 Feet Road, Indiranagar, (above Airtel showroom), Bangalore, 560038.

+ 91 72040 99706 | 93419 28423 | 99864 52168

ATTENTION !! CLASS 10th, 11th & 12th STUDENTS

CLAT
(COMMON LAW ADMISSION TEST)
5 YEARS LAW
FROM NATIONAL LAW UNIVERSITIES



1 AIR CLAT 2024
JAI KUMAR
LPT CLASS ROOM STUDENT (ID: 30574762)

LAW PREP Tutorial
CLAT Prep at it's Best!

OUR BENGALURU CENTERS
JAYANAGAR | VIJAYANAGAR
MALLESHWARAM

PREPARE FOR
CLAT 2026-27
ADMISSIONS OPEN
FOUNDATION BATCH
2 Years Program For 10th Pass Students
TARGET BATCH
1 Year Program For 11th Pass Students
DROPPER'S BATCH
1 Year Program For 12th Pass Students

Ph.: +91 97423 76459

JODHPUR | JAIPUR | PATNA | BHOPAL | LUCKNOW | PRAYAGRAJ | DEHRADUN
MUZAFFARPUR | RANCHI | BENGALURU | DELHI | JABALPUR | KANPUR | GURGAON

AISHWARYA'S
AISHWARYA TEA INDUSTRIES since 1996

100% NATURAL

ಚಹಾ ಜೊತೆಗೆ ಜೀವನ
ಇನ್ನೂ ರುಚಿಕರವಾಗುತ್ತದೆ

ಒಂದು ಗುಟುಕು ಸ್ವಲ್ಪ ನಗು!





Kt Special Tea
Available in amazon
SHALIMAR GOLD TEA

"ಕರ್ನಾಟಕದ ಅತ್ಯಂತ"
ರುಚಿಕರವಾದ ಚಹಾ
ಅದ್ಭುತ ರುಚಿ • ಮಿತವಾದ ಬೆಲೆ • ಉತ್ಕೃಷ್ಟಗುಣಮಟ್ಟ

TRADE ENQUIRIES
Bangalore
Prasanna Kumar ASM
+91 9980 157884
Rest of Karnataka
Satish RSM
+91 97313 03541

www.aishwaryateaindustries.com
aishwaryatea@gmail.com